ಕರ್ಣಾಟಕ ಕಾವ್ಯಕಲಾನಿಧಿ, ಕೋಶಸಂಖ್ಯೆ—೪೪

ಮಹಾಕವಿ, ಕವಿರಾಜ ಕುಂಜರಾಭಿದ

ಚತುರ್ಭಾಷಾಚಕ್ರವರ್ತಿ

# ನೇಮಿಚಂದ್ರ

ವಿರಚಿತಮಪ್ಪ

# ನೇಮಿನಾಥ ಪುರಾಣಂ

(ಅರ್ಧನೇಮಿಪುರಾಣಂ)

ಎಂ. ಎ. ರಾಮಾನುಜಯ್ಯಂಗಾರ್

ಆಕ್ಟಿಂಗ್ ಕನ್ನಡ ಟ್ರಾನ್ಸ್ಲೇಟರ್

ಮೈಸೂರು ಎಡ್ಯುಕೇಷನ್ ಇಲಾಖೆ, ಬೆಂಗಳೂರು:—

ಇವರಿಂದ ಪರಿಶೋಧಿಸಲ್ಪಟ್ಟು

ಮೈಸೂರು

ಜಿ ಟಿ ಎ ಮತ್ತು ಶ್ರೀನಿವಾಸ ಮುದ್ರಾಕ್ಷರ ಶಾಲೆಗಳಲ್ಲಿ

ಮುದ್ರಿತವಾಯಿತು.

1914

ಕ್ರಯ ರೂ. 1—6—0]

UNIVERSAL LIBRARY
OU_200697
UNIVERSAL LIBRARY

Osmania University Library

Call No. K81 N44N

Accession No. 116

Author

Title నీలాసుందరీపరిణయము.

This book should be returned on or before the date last marked below.

All Rights Reserved by the Editor

Registered according to Act. XXV of 1867.

# ಉಪೋದ್ಘಾತ

ಮೂರು ಪ್ರತಿಗಳ ಸಹಾಯದಿಂದ ಈ ಗ್ರಂಥವನ್ನು ಮುದ್ರಿಸಿದ್ದೇವೆ. ಪ್ರತಿಗಳಲ್ಲಿ—

1. ಮೈಸೂರು ಸರ್ಕಾರದ ಆರ್ಕಿಯಲಾಜಿಕಲ್ (ಶಾಸನದ) ಇಲಾಖೆಯ ಡಿತರಾದ ಮ|| ರಾ|| ಪದ್ಮರಾಜ ಪಂಡಿತರವರು ಕಳುಹಿಸಿಕೊಟ್ಟ ತಾಳೆಯ ಲೆಯ ಪ್ರತಿಯೊಂದು. ಈ ಪ್ರತಿಯ ಅಂತ್ಯದಲ್ಲಿ:—

ಬರೆ ಶಾಲೀವಾಹನಂ ಬೇಗಡೆ ಶಕವರುಷಂ ಸಾರೆ ಸಂವತ್ಸರಂ ಸಾ |
ಸಿರದಾರ್ನೂರಾಱು ಸಂದೊಪ್ಪುವ ಕಲಿಯುಗರಕ್ತಾಕ್ಷಿಯಾಮಾಘಮಾಸಾ ||
ಪರಪಕ್ಷಂ ಸಚ್ಚತುರ್ದಶ್ಯಹಿಮಕಿರಣವಾರಂ ಬರಲ್ ಪದ್ಮರಾಜಂ |
ಬರೆದತ್ಯಂತಕ್ಕಱಿಂದತ್ಯಧಿಕ ಬಕುತಿಯಿಂ ನೇಮಿಸತ್ಕಾವ್ಯಮಂ ತಾಂ ||೧||

ಅರಿಕುಠಾರದ ಸೂರಿಪಂಡಿತರಾತ್ಮಜಂ ಚಿಕತಮ್ಮನಾ |
ವರಸುಪುತ್ರನು ಪದ್ಮರಾಜನು ನೇಮಿನಾಥಪುರಾಣಮಂ ||
ಬರೆದನಿಂತಿದನೋದೆ ಕೇಳ್ದೊಡೆ ಮೋಕ್ಷಮಾರ್ಗದ ಸಂಪದಂ |
ಭರದೆ ಸೇರ್ವುದು ಮಾನಸರ್ಗದಱತ್ತಣಿಂದವೆ ಲಕ್ಷಿಪಂ ||೨||

ಬರೆದೆಂ ನೇಮಿಪುರಾಣಮಂ ವಿಬುಧರತ್ಯಾನಂದದಿಂದೋದೆ ಕೇ |
ಳ್ದರೆ ಪುಣ್ಯಂ ಮುದದಿಂದೆ ಸೇರುವುದು ಮತ್ತಿಲ್ಲಿರ್ದ ದೋಷಂಗಳಂ ||
ಭರದಿಂ ತಿರ್ದಿದಪೀಗಳರ್ಕಶಶಿತಾರಾಃಮೊತ್ತಮುಳ್ಳನ್ನ ಸು |
ಸ್ಥಿರದಿಂದೊಪ್ಪಲಿ ಧಾತ್ರಿಯಲ್ಲಿ ನಿಜದಿಂ ಭದ್ರಂ ಶುಭಂ ಮಂಗಳಂ ||೩||

ಸಂಸ್ಕೃತ|| ಭಗ್ನಪೃಷ್ಠಕಟಿಗ್ರೀವಾಬದ್ಧದೃಷ್ಟಿರಧೋಮುಖಂ |
ಕಷ್ಟೇನ ಲಿಖಿತಂ ಶಾಸ್ತ್ರಂ ಯತ್ನೇನ ಪರಿಪಾಲಿತಂ ||

ಬಿ ದುದುರ್ಲಿಪಿ ವಿಸರ್ಗವೀಧಿಕಾ |
ಶೃಂಗಪಙ್ಕ್ತಿಪದಭೇದದೂಷಣಂ ||
ಹಸ್ತವೇಗಜವಬುದ್ಧಿಪೂರ್ವಕಂ |
ಕ್ಷಂತುಮರ್ಹತಿ ಪುಮಾಕ್ಷ್ಟಿ ಸಜ್ಜನಾಃ ||
ಶ್ರೀವೀತರಾಗಾಯನಮಃ |
ಶ್ರೀಮತ್ಪಂಚಗುರುಭ್ಯೋ ನಮಃ |
ನೇಮಿನಾಥಾಯ ನಮಃ ||

ಎಂದು ಈರೀತಿಯಲ್ಲಿ ಬರೆದಿದೆ. ಇದರಿಂದ ಈ ಮಾತೃಕೆಯು ಶಕ 1606 ನೆಯ (ಕ್ರಿ.ಶ. 1684) ರಕ್ತಾಕ್ಷಿ ಸಂವತ್ಸರದ ಮಾಘಮಾಸದ ಕೃಷ್ಣಪಕ್ಷದ ಚತುರ್ದಶೀ ಸೋಮವಾರದಲ್ಲಿ ಪದ್ಮರಾಜಪಂಡಿತನೆಂಬವನಿಂದ ಬರೆಯಲ್ಪಟ್ಟಿತೆಂದು

ಗೊತ್ತಾಗುತ್ತದೆ. ೨೩೦ ವರ್ಷಗಳ ಹಿಂದೆ ಬರೆದ ಪ್ರತಿಯಾಗಿದ್ದರೂ ಇದರಲ್ಲಿ ಬಹಳ ಅಶುದ್ಧಗಳು ಬಿದ್ದಿರುವುದನ್ನು ನೋಡಿದರೆ, ಆ ಕಾಲದಲ್ಲಿಯೂ ಕೂಡ ಈ ಗ್ರಂಥವು ಸಾಮಾನ್ಯ ಪಂಡಿತರುಗಳಿಗೆ ದುರವಗಾಹವಾಗಿದ್ದಿತೆಂದು ಹೇಳಬೇಕು. ಈ ಪ್ರತಿಯ ಆಧಾರದ ಮೇಲೆಯೇ ಈ ಗ್ರಂಥವು ಮುದ್ರಿತವಾಯಿತೆಂದು ಹೇಳಬೇಕು.

೨. ಮತ್ತೊಂದು ಪ್ರತಿಯು ಮೈಸೂರು ಸರ್ಕಾರದ ಓರಿಯಂಟಲ್ ಲೈಬ್ರೇರಿಯ ಕಾಗದದ ಪ್ರತಿಯು. ಇದು ಅಷ್ಟು ಶುದ್ಧವಾದ ಪ್ರತಿಯಲ್ಲ. ಯಾವ ಓಲೆಯ ಮಾತೃಕೆಯ ಮೇಲೆ ಇದು ಬರೆಯಲ್ಪಟ್ಟಿತೋ ಅದು ಎಷ್ಟು ಶ್ರಮಪಟ್ಟರೂ ಸಿಕ್ಕದೆ ಹೋಯಿತು.

೩ ಮೂರನೆಯ ಪ್ರತಿಯು ನಮ್ಮ ಭಂಡಾರದ ಅಲ್ಲಲ್ಲೇ ಗ್ರಂಥಪಾತವಾದ ಕಾಗದದ ಪ್ರತಿ.

ಈ ಮೂರು ಪ್ರತಿಗಳಿದ್ದರೂ ಗ್ರಂಥವು ಸಮರ್ಪಕವಾಗುವಂತೆ ಶುದ್ಧವಾಗಿ ಮುದ್ರಿಸಲು ಆಗಲಿಲ್ಲ. ಅನೇಕ ಕಡೆ ಪದ್ಯಗಳಿಗೂ ಗದ್ಯಗಳಿಗೂ ಸರಿಯಾಗಿ ಅರ್ಥವಾಗುವುದಿಲ್ಲ; ಬಹಳ ತಪ್ಪುಗಳು ಬಿದ್ದಿವೆ. ಅರ್ಥವಾಗುವ ಕಡೆ ಬಹಳ ರಮಣೀಯವಾಗಿದೆ; ಅರ್ಥವಾಗದ ಕಡೆ ಶುದ್ಧ ಪ್ರತಿ ಸಿಕ್ಕಲಿಲ್ಲವೆಂಬ ಶೋಕ ಹುಟ್ಟುತ್ತದೆ. ಶುದ್ಧ ಮಾತೃಕೆಯೂ ಎಲ್ಲಿಯಾದರೂ ಸಿಕ್ಕಬಹುದೆಂಬ ಭರವಸೆಯಿಂದ ಬಹುಕಾಲ ಅಚ್ಚುಮಾಡದೆ ಇದ್ದೆವು. ಇದು ಭಾವಗಾಂಭೀರ್ಯಕ್ಕೆ ಬಹಳ ಪ್ರಸಿದ್ಧಿ ಹೊಂದಿದ ಗ್ರಂಥವಾಗಿದ್ದರೂ ಸಾಮಾನ್ಯವಾಗಿ ಜನಗಳಿಗೆ ತಿಳಿಯಲು ಅಸಾಧ್ಯವಾಗಿದ್ದುದರಿಂದ, ಪರ್ಯಂತರಗಳನ್ನಾದರೂ ಮಾಡಿ ಇದನ್ನು ಕಾಪಾಡಬೇಕೆಂಬ ಉತ್ಸಾಹವು ಸಾಮಾನ್ಯವಾಗಿ ಜನಗಳಲ್ಲಿ ಹುಟ್ಟಲಾರದೆಂದು ತೋರಿತು. ಎಲ್ಲೆಲ್ಲಿ ಹುಡುಕಿದರೂ ಶುದ್ಧವಾದ ಪರ್ಯಂತರವು ಸಿಕ್ಕದೆ ಹೋಯಿತು. "ಸ್ಥಿತಸ್ಯ ಗತಿಃ ಕಲ್ಪನೀಯಾ" ಎಂಬ ನ್ಯಾಯವನ್ನನುಸರಿಸಿ ಈ ಪ್ರಸಿದ್ಧ ಗ್ರಂಥವನ್ನು ಸಾಧ್ಯವಾದ ಮಟ್ಟಿಗೆ ಶೋಧಿಸಿ, ಅರ್ಥವಾಗದ ಕಡೆ ಇದ್ದದ್ದನ್ನು ಇದ್ದಹಾಗೆಯೇ ಇಟ್ಟು ಮುದ್ರಿಸಿರುತ್ತೇವೆ. ಇದರಲ್ಲಿ ತೋರೆಯುವ ಪ್ರಮಾದಗಳಿಗಾಗಿ ವಿದ್ವಾಂಸರ ಕ್ಷಮೆಯನ್ನು ಬೇಡುತ್ತೇವೆ.

**ಮ|| ರಾ|| ಪದ್ಮರಾಜ ಪಂಡಿತರ ಉಪಕಾರವು ಚಿರಸ್ಮರಣೀಯವಾಗಿದೆ.**

**ಗ್ರಂಥಶೋಧನಕಾರ್ಯದಲ್ಲಿ ಬಹಳವಾಗಿ ಸಹಾಯಮಾಡಿದ ಮ|| ರಾ|| ಎಸ್. ಜೆ. ಗೋವಿಂದರಾಜಯ್ಯಂಗಾರ್ಯರಿಗೆ ಕೃತಜ್ಞನಾಗಿರುವೆನು.**

# ಕವಿಚರಿತ್ರೆ.

ಈ ಗ್ರಂಥಕರ್ತನು ನೇಮಿಚಂದ್ರನು. ಈತನು ತಾನು ಬರೆದ ಲೀಲಾವತೀ ಗ್ರಂಥದ ಕೊನೆಯಲ್ಲಿ ಲಕ್ಷ್ಮಣದೇವನು ರಾಜನೆಂದೂ, ನೇಮಿಚಂದ್ರನೆ ಕವೀಶ್ವರನೆಂದೂ ಹೇಳಿಕೊಂಡಿದ್ದಾನೆ ಇದರಿಂದ ಕವಿಯು ಲಕ್ಷ್ಮಣದೇವನ ಆಶ್ರಿತನಾಗಿದ್ದಿರಬಹುದು. ಈ ಗ್ರಂಥದ ಆಶ್ವಾಸಾಂತ್ಯ ಗದ್ಯಗಳಲ್ಲಿ—

ವೀರಬಲ್ಲಾಳದೇವಪ್ರಸಾದಾಸಾಧಿತ ಮಹಾಪ್ರಧಾನಪದವೀರಾಜಿತ ಸೆಜ್ಜೆವಳ್ಳ ಪದ್ಮನಾಭದೇವಕಾರಿತಂ" ಎಂದು ಹೇಳಿಕೊಂಡಿದ್ದಾನೆ.

ವೀರಬಲ್ಲಾಳನು ಕ್ರಿ. ಶ. 1172–1219 ರವರೆಗೆ ಆಳಿದಂತೆ ತಿಳಿಯಬರುತ್ತದೆ. ಆದುದರಿಂದ ಈ ಕವಿಯು ಸುಮಾರು ಈ ಕಾಲದಲ್ಲಿಯೇ ಎಂದರೆ 12 ನೆಯ ಶತಮಾನದ ಅಂತ್ಯಭಾಗದಲ್ಲಿ ಇದ್ದಿರಬೇಕು.

ಸೆಜ್ಜೆವಳ್ಳಪದ್ಮನಾಭನ ಸಹಾಯದಿಂದ ಈತನು ಆಸ್ಥಾನಪಂಡಿತನಾಗಿರಬಹುದೆಂದು ತೋರುತ್ತದೆ.

ಈತನು ತಾನು ಚತುರ್ಭಾಷಾಚಕ್ರವರ್ತಿ ಯೆಂದೂ ಹೇಳಿಕೊಂಡಿದ್ದಾನೆ. ಇದೂ ಅಲ್ಲದೆ ತನ್ನ ಕವಿತಾಸಾಮರ್ಥ್ಯದ ವಿಷಯವಾಗಿ—ಕವಿರಾಜಮಲ್ಲನೆನಿಸಿದ ತನ್ನ "ನವ್ಯಕಾವ್ಯಕಮಲಾಕರದೊಳ್ ಸರಸ್ವತಿ ಸುಖೀಮುದದಿಂ ಜಲಕೇಳಿಯಾಡುವಳ್" ಎಂದೂ,

ಯುವತಿ ಸರಸ್ವತಿ ಪುರಾತನ |
ಕವಿವಿರಹಮನಱಿದಳಿಲ್ಲ ನಿರ್ಮಳದಶನ ||
ಚ್ಛವಿಕುಸುಮಿತರಸನಾಪ |
ಲ್ಲವತಲ್ಪದೊಳಿರ್ದು ಸುಕರಕವಿಶೇಖರನಾ ||" ಎಂದೂ,

ಮತ್ತು,

ಸುಕರಕವಿಶೇಖರಂ ತಾ |
ರ್ಕಿಕತಿಲಕಂ ಮಾನಮೇರು ಜಿನಶಾಸನದೀ ||
ಪಕನಕಳಂಕಚರಿತ್ರಂ ಭಾವುಕ |
ಮುಕುರಂ ಕವಿರಾಜಮಲ್ಲನಪ್ರತಿಮಲ್ಲಂ ||

ಎಂದೂ ಹೇಳಿಕೊಂಡಿದ್ದಾನೆ. ಇದಕ್ಕೆ ಸರಿಯಾಗಿ ಪ್ರಸಿದ್ಧರಾದ ಪಾರ್ಶ್ವಪಂಡಿತ, ಜನ್ನ, ಮಂಗರಸರೇ ಮೊದಲಾದ ಮಹಾಕವಿಗಳು ಇವನನ್ನು ಕೊಂಡಾಡಿದ್ದಾರೆ. ಆದ್ದರಿಂದ ಈ ಕವಿಯು ಮಧುರಕವಿಯು ಹೇಳುವಂತೆ ಕರ್ಣಾಟಕಕೃತಿಗೆ ಸೀಮಾಪುರುಷನಾಗಿದ್ದಾನೆ.

# ಗ್ರಂಥವಿಚಾರ.

---

ಇದು ಒಂದು ಪ್ರಸಿದ್ಧವಾದ ಚಂಪೂಗ್ರಂಥ. ಇದಕ್ಕೆ ಅರ್ಧನೇಮಿಪುರಾಣವೆಂದು ವಾಡಿಕೆಯಾದ ಹೆಸರು. ಇದು ೨೨ ನೆಯ ತೀರ್ಥಂಕರನಾದ ನೇಮಿನಾಥನ ಚರಿತ್ರೆಯಾಗಿದೆ. ಇದನ್ನು ವೀರಬಲ್ಲಾಳನ ಪ್ರಧಾನನಾದ ಸೆಜ್ಜೆವಳ್ಳ ಪದ್ಮನಾಭನು ಹೇಳಿದಮೇರೆಗೆ ತಾನು ಬರೆದುದಾಗಿ ಕವಿಯು ಹೇಳಿಕೊಂಡಿದ್ದಾನೆ. ಈ ಗ್ರಂಥದ ಪ್ರಥಮಾಶ್ವಾಸದ ೪ನೆಯ ಪದ್ಯದಲ್ಲಿ—

"ಜಿನಕಥೆಯೊಳ್ ಸಂಧಿಸಿ ವಸುದೇವಾಚ್ಯುತ ಕಂದರ್ಪರ ಕಥೆಗಳನಿತುಮಂ ವಿರಚಿಸುವೆಂ"

ಎಂದು ಹೇಳಿದಂತೆ ಜಿನಕಥೆಯನ್ನು ಮೊದಲು ಬರೆದು, ೬ ನೆಯ ಆಶ್ವಾಸದ ಮುಂದಕ್ಕೆ ವಸುದೇವನ ಪ್ರತಾಪವರ್ಣನೆಯನ್ನು ಮೊದಲು ಮಾಡಿ ೮ ನೆಯ ಆಶ್ವಾಸದಲ್ಲಿ ಕಂಸವಧೆಯಪರ್ಯಂತ ಕಥೆಯನ್ನು ಹೇಳಿರುತ್ತಾನೆ. ಅಲ್ಲಿಂದ ಮುಂದೆ ಗ್ರಂಥವು ದೊರೆತಿಲ್ಲ—ಹೀಗಿರುವುದರಿಂದಲೂ, ಗ್ರಂಥಕ್ಕೆ ಅರ್ಧನೇಮಿ ಪುರಾಣವೆಂದು ವಾಡಿಕೆಯಾದ ಹೆಸರಿರುವುದರಿಂದಲೂ ಕವಿಯು ಗ್ರಂಥವನ್ನು ಪೂರ್ತಿಮಾಡದೆ ಕಾಲಾಧೀನನಾಗಿರಬಹುದೆಂದು ಊಹಿಸುವುದಕ್ಕೆ ಅವಕಾಶವಿದೆ.

ಈ ಗ್ರಂಥದಲ್ಲಿ ವರ್ಣನಾಭಾಗಗಳು ಬಹಳ ಹೃದಯಂಗಮವಾಗಿವೆ. ಕನ್ನಡ ಭಾಷೆಯ ಕವಿಗಳಲ್ಲಿರುವ ಅಸ್ವಾದೃಶಸಾಮರ್ಥ್ಯವನ್ನು ದೃಷ್ಟಾಂತಿಸುವುದಕ್ಕೆ ಇದು ಒಳ್ಳೆಯ ಗ್ರಂಥವಾಗಿದೆ. ಇದನ್ನು ಕಂಡೇ ವಾದಿವಿದ್ಯಾನಂದನು ಕಾವ್ಯಸಾರವೆಂಬ ಗ್ರಂಥದಲ್ಲಿ ಈ ಗ್ರಂಥದಿಂದಲೂ ಲೀಲಾವತಿಯಿಂದಲೂ ವಿಶೇಷವಾಗಿ ಪದ್ಯಗಳನ್ನು ಆರಿಸಿಕೊಂಡಿರುತ್ತಾನೆ.

ಬೆಂಗಳೂರು,
25—7—1914.

ಎಂ. ಎ. ರಾಮಾನುಜಯ್ಯಂಗಾರ್
ಕ. ಕಾವ್ಯಕಲಾನಿಧಿ ಪ್ರಸಾರಕ

# ನೇಮಿನಾಥಪುರಾಣಂ

---

## ಆಶ್ವಾಸಸೂಚಿ.


| | | |
|---|---|---|
| | | ಪುಟಸಂಖ್ಯೆ. |
| ಪ್ರಥಮಾಶ್ವಾಸಂ | ... ... | ೧—೨೩ |
| ದ್ವಿತೀಯಾಶ್ವಾಸಂ | ... ... | ೨೩—೪೨ |
| ತೃತೀಯಾಶ್ವಾಸಂ | ... ... | ೪೩—೬೮ |
| ಚತುರ್ಥಾಶ್ವಾಸಂ—ವಸುದೇವಪ್ರತಾಪವರ್ಣನಂ | ... | ೬೯—೧೦೨ |
| ಪಂಚಮಾಶ್ವಾಸಂ—ವಸುದೇವ ವನಪ್ರವೇಶವರ್ಣನಂ | ... | ೧೦೩—೧೩೧ |
| ಷಷ್ಠಾಶ್ವಾಸಂ—ದೇವಕೀದೇವಿವಿವಾಹೋತ್ಸವ ವರ್ಣನಂ | | ೧೩೨—೧೫೫ |
| ಸಪ್ತಮಾಶ್ವಾಸಂ—ಹರಿಬಾಲಕ್ರೀಡಾವರ್ಣನಂ | ... | ೧೫೬—೧೮೦ |
| ಅಷ್ಟಮಾಶ್ವಾಸಂ—ಶ್ರೀ ವೀರನಾರಾಯಣ ಪ್ರತಾಪವರ್ಣನಂ | | ೧೮೧—೨೧೩ |

ಶ್ರೀರಸ್ತು

# ನೇಮಿನಾಥಪುರಾಣಂ

ಶ್ರೀವೀತರಾಗಾಯ ನಮಃ,—ಶ್ರೀಮತ್ಪಂಚಗುರುಭ್ಯೋ ನಮಃ.

ಶ್ಲೋ॥ ಶ್ರೀಮತೇ ನೇಮಿನಾಥಾಯ ನಮಸ್ಸ್ಯಾದ್ವಾದಸಿಂಧವೇ।
ಯಸ್ಮಿನ್ನುದಿತ[1]ಬೋಧೇಂದೌ[1] ತ್ರೈಲೋಕ್ಯಂ ಲಕ್ಷಣಾಯತೇ ॥

ಶ್ರೀಯುಂ ಶ್ವೇತಾತಪತ್ರಂ ಪ್ರಥಿತವಿಭವಮುಂ ಚಾಮರಂ ಬೋಧಮುಂ ವಾ।
ಕ್ಪೀಯೂಷಂ ಪೆರ್ಮೆಯುಂ ಭಾಸುರತರಪಟಹಂ ಶಕ್ತಿಯುಂ ಸಿಂಹಪೀಠಂ ॥
ಸ್ವಾಯತ್ತಂಮಾಳ್ಪಿನಂ ಭಾವಳಯವಿಳಸಿತಾಶೋಕಮಂದಾರವರ್ಷ।
ಚ್ಛಾಯಚ್ಛನ್ನಾಂಗನಾದಂ ತ್ರಿಭುವನವಿನುತಂ ನೇಮಿ ರಕ್ಷಿಕ್ಕೆ ನಮ್ಮಂ ॥೧॥

ಲೀಳಾಗಾತ್ರೈಕಮಲ್ಲೀಮುಕುಳಮೆನಿಸೆ ನಾಸಾಗ್ರದೊಳ್ ಪಾಂಚಜನ್ಯಂ।
ವ್ಯಾಳಂ ಶಯ್ಯಾತಳಂ ಪೂಗಣೆ ಯ[2]ನೊಣೆದ್ಧೃತಂ[2] ಪುರ್ವಿಲ್ಲಾಗೆ ಶಾರ್ಙ್ಗಂ॥
ಹೇಳಾಕೃಷ್ಟಂ ಸಪುಷ್ಟಂ ಹರಿಮುದಹರನಪ್ಪಂತೆ ಕಂದರ್ಪದರ್ಪ।
ವ್ಯಾಳೋಳಕ್ರೀಡೆಗಾದಂ ಕುಡುಗೆಮಗೆ ಮಹೋತ್ಸಾಹಮಂ ನೇಮಿನಾಥಂ ॥

ವಿಮಳಜ್ಞಾನಾಳನಾಳಂ ಸುಖಮಯಮಕರಂದಾಕರಂ ಮುಕ್ತಪಾಪ।
ಭ್ರಮರಂಸಂಸಕ್ತಸೂಕ್ಷ್ಮೋಜ್ವಲಗುಣಮವಗಾಹಾವಹಂಭದ್ರಮುನ್ನಿ॥
ದ್ರಮುಪಾರಂ ಪಾವನಪ್ರಸ್ತುತಗತಿ ಭುವನಾಗ್ರಸ್ಥಿತಂ ತೋರ್ಕೆ ನಿಚ್ಚಂ।
[3]ನಮಗಿಂತ[3]ತ್ಯಂತಲಕ್ಷ್ಮೀಲಲಿತಲಪನಮಂ ಸಿದ್ಧನೀರೇಜಷಂಡಂ ॥೩॥

ಆಚಾರಂ ನಿಸದಾಗಿ ಸದ್ಗುಣಗಣಂ ಮುಂತಾಗಿ ಮಂತ್ರಕ್ರಿಯಾ।
ಳೋಚಂ ನಿರ್ವ್ಯಭಿಚಾರಮಾಗೆ ಜಿನರಾಜಪ್ರಾಜ್ಯಸಾಮ್ರಾಜ್ಯದೊಳ್ ॥
ಶೌಚವ್ಯೋಚಿತಭಾಗ್ಯಲಕ್ಷ್ಮಿ ತಮಗೇಕಚ್ಛತ್ರಮಾಯ್ತೆಂದುಮಂ।
ಬಾಚಾರ್ಯರ್ ನಮಗೀವರಕ್ಕೆ ನಯನಿಕ್ಷೇಪಪ್ರಮಾಣಂಗಳಂ ॥೪॥

---

ಪಾ—1. ಗ, ಬೋಧೇಂದುಸ್ತ್ರೈ. 2. ಕ. ಸೊಣೆದ್ಧೃತಂ. 3. ಕ, ನಮಗೀಗ.

ಪುಸಿಯುಂ ಪೊರ್ದದಿರಾರ್ತಮುಂ ಬಿಸುಡು ಸಂಸಾರಕ್ಕೆ ಪೇಸೊಳ್ಪನ ॥
ರ್ಚಿಸು ನೀಂ ದರ್ಶನಶುದ್ಧನಾಗು ದುರಘವ್ಯೂಹಕ್ಕೆ ಬೋಧಾಸಿಯುಂ ॥
ಮಸೆ ಲೇಸಾಗಿ ದಯಾತರಂಗಿಣಿಯೊಳೋಲಾಡೆಂದುಪಾಧ್ಯಾಯರೋ ।
ದಿಸಿ ಕೈಗನ್ನಡಿಯಂದದಿಂ ಬೆಳಗುಗಂದಂದಿಂಗೆ ಮಚ್ಚಿತ್ತಮುಂ ॥೫॥

ಶ್ರೋತ್ರಂಗಳ್ ಪರಮಾಗಮಕ್ಕೆ ಮತಿ ಸಮ್ಯಗ್ದರ್ಶನಜ್ಞಾನಚಾ ।
ರಿತ್ರಂಗಳ್ಗೆ ದಯಾವಲೋಕನೆಗೆ ಕಣ್ಗಳ್ ಮಾಱುವೋದಂತೆ ಚೆ ॥
ನ್ಮಾತ್ರಕ್ಕಂ ಪರಭಾವದೊಳ್ಪೊಱಿಯದಿರ್ಪೇಕಾಂತಶಾಂತಂ ಕ್ಷಮಾ ॥
ಪಾತ್ರಂ ಸಾಧುಸುಧಾಂಶುವಂಶಮೆಮಗೀಗತ್ಯಂತಸಂಶುದ್ಧಿಯುಂ ॥೬॥

ಆಯತಿಯುಂ ಸಿಮಿರ್ಚುವರುಹಂತರ ಕೇವಲಬುದ್ಧಿಸಿದ್ಧರಾ ।
ದಾಯತಬೋಧಸಿದ್ಧಿವರಸೂರಿಗಳುತ್ತಮವೃತ್ತಿ ಸಂದುಪಾ ॥
ಧ್ಯಾಯರ ಪಾವನಪ್ರತಿಭೆ ಸಾಧುಗಳರ್ದ ವಿಶುದ್ಧದರ್ಶನಾ ।
ಮ್ನಾಯಮತಿಪ್ರಕರ್ಷಮೆಮಗೀಗೆ ಸಮಸ್ತಮತಿಪ್ರಕಾಶಮಂ ॥೭॥

ಜವದಿಂ ಪಾಪದ ಪಿಂಡಿನಂತಳಕುಳಂ ಬಿಟ್ಟೋಡೆ ಕೊಟ್ಟಗ್ರಪ ।
ಲ್ಲವಘಾತಕ್ಕೆ ಸಮಸ್ತಯುಕ್ತತಿಳಕಂ ಸರ್ವಾರ್ಹ್ಣನಾದೇಱ್ ತೋ ॥
ಱುವುದುಂ ಗಂಧಗಜೋತ್ತಮಂ ತುಱಿದು ಕಿೞ್ತೀಡಾಡುಗಾನಂದಚಂ ।
ದ್ರವಿರುದ್ಧಸ್ಥಿತಿಯುಂ ವಿಶುದ್ಧಜಿನಧರ್ಮದ್ರೋಹಪಂಕೇಜಮಂ ॥೮॥

ಬಲುನಗೆಯುಂ ಶುಭಂಕರನೊಳಲ್ಲಗುತುಂ ಪಡೆಗಣ್ಣೊಳತ್ತ ಜ ।
ಕ್ಕುಲಿಸುತುಮಾಪ್ರಭಾಕರನನೆಯ್ದೆ ಕೊನರ್ತು ತಳರ್ತು ಪೂತು ಕಾ ॥
ಯ್ತುಲಸದೆ ಕಲ್ಪಪಾದಪದ ತಣ್ಣೆೞಲಲ್ಲಿ ವಸಂತಲಕ್ಷ್ಮಿವೋಲ್ ॥
ನೆಲಸಿದ ಯಕ್ಷಿಯೆಮಗೀಗೊಲವಿಂದೆ ದಯಾವಲೋಕಮಂ ॥೯॥

ಸ್ಫುಟವಾದಂ ಪವಣಾಗೆ ಜಾತ್ಯಭಿನಯಂ ಚೆಲ್ವಾಗೆ ಸದ್ದರ್ಶನಂ ।
ದಿಟಮಾಗುತ್ತಿರೆ ಕೂಡೆ ಕೋಮಳಪದೋಪನ್ಯಾಸಮುದ್ದಂಡವಾ ॥
ಕ್ಪಟುಗಳ್ ಸೋಲೆ ವಿಭೂಷಣಂ ತೊಳಗೆ ತತ್ಸ್ಯಾದ್ವಾದವಿದ್ಯಾನಟ್ಟು ।(ವೆ
ಲ್ಲಟಹಂ ರಂಜಿಸುತಿರ್ಕೆ ತಾರ್ಕಿಕಮುಖಾಂಭೋಜಾತರಂಗಾಗ್ರದೊಳ್ ॥

ಸಕಲಾಘೌಘಪತಂಗವಧ್ಯಶಿಖೆಯೊಳ್ ತತ್ಕೇವಲಜ್ಞಾನದೀ ।
ಪಿಕೆಯೊಳ್ ಮಂಗಳಕಾರಣಪ್ರಭೆಯೊಳಂತದ್ಧ್ವಾಂತವಿಚ್ಛಿತ್ತಿಗು ॥

ತ್ಸ್ನಕನೇಂ ಶುದ್ಧಮನಾತ್ಮಪಾತ್ರಗತಮಂ ಸುಸ್ನಿಗ್ಧಮಂ ಚಿತ್ತವ |
ರ್ತಿಕೆಯಂ ಪತ್ತಿಸಿ [1]ರಾಗದಿಂ[1] ಬೆಳಗುವೆಂ ಬೋಧಾಮಳಜ್ಯೋತಿಯಂ ||

ಜೀವನವಮಂ ಜಲನಿಧಿಯೊಳ್ |
ತೀವಿದ ಮುಗಿಲಂತೆ ಜಿನವಚೋಮೃತಮಂ ಭ ||
ವ್ಯಾವಳಿಗೆ ಕಱೆವ ಗಣಧರ |
ದೇವರ್ ದಯೆಗೆಯ್ಗೆ ನಮಗೆ ಸಕಲಶ್ರುತಮಂ ||೧೦||

ಇದು ಚೋದ್ಯಂ ಜಿನಸಮಯದ |
ಮೊದಲಿಗರೆನಿಸಿರ್ದ ಗೃಧ್ರಪಿಂಛಾಚಾರ್ಯರ್ ||
ಮುದಮೊದವೆ ಬರೆದ ತತ್ವಾ |
ರ್ಥದ ಸೂತ್ರದ ವೃತ್ತಿಯಾಪುದಱವರ್ಗೆಲ್ಲಂ ||೧೧||

ಧೈರ್ಯಸಿದ್ಧಿ ಕೊಂಡಕುಂದಾ |
ಚಾರ್ಯರ ಚರಣಂಗಳೊಳೆದು ನೆಲಮುಟ್ಟದ ತಾ ||
ತ್ಪರ್ಯಮನಱದೆಂ ನಿಜಸೌ |
ಕರ್ಯಮದೆಂದಿರ್ಪುವೆನ್ನ ಮನದೊಳ್ ಸತತಂ ||೧೨||

ಜಿನರ ಪುರಾಣಂಗಳೊಳೊಂ |
ದನೆ ಬರೆವೊಡೆ ಬರೆದೆವೆಂಬರೀಭುವನಂ ಜೀ ||
ಯೆನೆ ಬರೆದಿರಿಸಿದರಿರ್ |
ತ್ತನಾಲ್ಕುಮಂ ಪೊಗೞ ಸುಕವಿಸರಮೇಶ್ವರರಂ ||೧೩||

ಸುಕವಿಪರಮೇಷ್ಠಿಗಳ ನಾ |
ಟಕವೆನಿಸಿದ ಭುವನವಂದ್ಯವರವಿದ್ಯಾತೀ ||
ರ್ಥಕರತ್ವಪುಣ್ಯಲಕ್ಷ್ಮಿಗೆ |
ಸಕಳಶ್ರುತದೇವಿ ಯಕ್ಷಿ ಯಕ್ಷಂ ಬೊಮ್ಮಂ ||೧೪||

ಕುಂದದಿವರ್ ಪೇೞ್ದೋದಿಂ |
ಗೊಂದು ಮೊಗಂ ನೆರೆಯದೆಂದು ಬಹುಮುಖನಾದಂ ||
ಸಂದ ಪಿತಾಮಹನೆನೆ ಸಲೆ |
ಸಂದರ್ ಜಿನಸೇನವೀರಸೇನಾಚಾರ್ಯರ್ ||೧೫||

---

ಪಾ—1. ಕ, ರಾಗಮಂ.

ನೆಱೆಯಲ್ ಮಹಾಪುರಾಣಮ |
ನಱುವೞವಡೆ ಪೇೞ್ದ ವದನಮಿರೆ ತಮಗೊಲ್ದು ||
ನೆಱಗೆ ಗುಣಭದ್ರದೇವರ |
ಮಿಱುಪಂಘ್ರಿಗಳತ್ತುವೆನಗೆ ಕವಿತೆಯನಣ್ಕಂ ||೧೮||

ಕಲಿಕಾಲದ ಜಿನರಂ [1]ನ |
ಮ್ರ ಲೆಂಕರಂ[1] ಪುಷ್ಪದಂತಮಲಧಾರಿಗಳಂ ||
ಬಲಗೊಂಡು ಪಾಡಿ ಮಾಡುವೆ |
ನಲಘುಗುಣಸ್ತವನಪುಣ್ಯಪುಷ್ಪಾಂಜಲಿಯಂ ||೧೯||

ಲಪನಂ ಕಾರುಣ್ಯಮಂ ಕನ್ನಡಿಸೆ ಸಹಜಸಂಶುದ್ಧಿಯಂ ಮಾನಸಂ [2]ತಾ |
ನುಪದೇಶಂಗೆಯ್ಯೆ, ಸತ್ತ್ವಾವಳಿಗಭಯಸುಧಾಸಾರಮಂ ಸೂಸೆ ನೋಟಂ ||
[3]ತಪಮಾ[3]ವೈಧವ್ಯದೀಕ್ಷಾವಿಧಿಯನೆ ರತಿಗಾರ್ತೀಯೆ ಸಂದಿರ್ದ ಯೋಗೀಂ|
ದ್ರಪದಾಂಭೋಜಂಗಳೊಳ್ ರಂಜಿಸುಗೆ ಮಧುರಮದ್ವಾಕ್ಯಪುಷ್ಪೋಪಹಾರಂ||

ಬಳಗಾದಳ್ ಶ್ರುತದೇವಿ ನೇಮಿಗೆ ಗುಣಶ್ರೀಮದ್ಗುಣಸ್ತೋತ್ರಮಂ |
ಗಳಮಂತ್ರಂಗಳನಾಕೆ ನೀಂ ಜಿನಕಥಾನಾಂದೀಮುಖಂ ಮುಖ್ಯಮಂ ||
ಗಳಮರ್ಹತ್ಪತಿ ಮಂಗಳಂ ಸಕಳಸಿದ್ಧರ್ ಮಂಗಳಂ ಸಾಧುಮಂ |
ಗಳಮರ್ಹನ್ಮುಖಚಂದ್ರಚಂಚದಮೃತಂ ಧರ್ಮಂ ಮಹಾಮಂಗಳಂ ||೨೦||

ಪರಮತಮತ್ತಹೈಹಯಮುಖಚ್ಯುತೆ ವಿಶ್ರುತಜೈನಶಾಸನಾ|
ಮರಭುವನ[4]ಪ್ರತಿಷ್ಠಿತೆ ರಸಾ[4]ನುಭವೋಚಿತೆ ವತ್ಸಲತ್ವದಿಂ||
ತೊರೆದ ಕುಚಂಬೊಲೊಪ್ಪುವ ಚತುರ್ವಿಧಭಾಷೆಯೊಳಂ ಸರಸ್ವತೀ ||
ಸುರಭಿ ನಿರಂತರಂ ಕಱೆಗೆ ಕಾಮಿತಮಂ ಕವಿರಾಜಮಲ್ಲನಾ ||೨೧||

ಸಮನಿಸೆ ಪಡೆದುವು ಜಿನಮುಖ |
ಕಮಲಂಗಳ್ [5]ಪರ[5]ಸರಸ್ವತೀಸೌರಭಮಂ ||
ತಮಗೆಱಪ ನೇಮಿಚಂದ್ರ |
ಭ್ರಮರಂಗಳಱಿದಂತಿರದನವೇಗೈದಪುದೋ ||೨೨||

---

ಪಾ—1. ಗ. ನಮ್ರಲೋಕರಂ. 2. ಗ, ಕಣ್ಗ. 3. ಗ, ಕಪಮಂ.
4. ಕ, ಪ್ರತಿಷ್ಠಿತ ತೀವ್ರರಸಾ; ಗ, ಪ್ರತಿಷ್ಠಿತಿವೃಷಾ. 5. ವರ.

ನೇಮಿಗೆ ಸಮಂತಭದ್ರ ।
ಸ್ವಾಮಿಯ ಸಮವಿಷಮಕವಿತೆಯಕಲಂಕನ ವಿ ॥
ದ್ಯಾಮಹಿಮೆ ಪೂಜ್ಯಪಾದ ।
ಸ್ವಾಮಿಯ ವಾಣೀವಿಲಾಸವಿಭಾಗಭಿಮತಮಂ ॥೨೪॥

ಕವಿಕುಲಪತಿ ನೇಮಿಗೆ ತ ।
ನ್ನ ವಾಣಿಯಂ ಕುಡುಗೆ ನೇಮಿನಾಥಂ ತನಗೊ ॥
ಪ್ಪುವ ತೊಡವಂ ಮಾಡಿಸಿದಂ ।
ಸುವರ್ಣಕಾಱಂಗೆ ಪೊನ್ನನಿಕ್ಕುವ ತೆಱದಿಂ ॥೨೫॥

ರುಚಿರಕಲಾಧರನಿಂ ನೇ ।
ಮಿಚಂದ್ರನಿಂ ಸತ್ಕವೀಶಚೂಡಾಮಣಿಯಿಂ ॥
ಶುಚಿಪದಶಶಿಕಾಂತೋಪಲ ।
ನಿಚಯಂ ರಸಮೊಸರುತಿರ್ಪುದೇನಚ್ಚರಿಯೋ ॥೨೬॥

ಈಕೇವಣಿಸನೆ ಜೈನಕ ।
ಥಾಕಾರಪರಾರ್ಧ್ಯರತ್ನಮಂ ನೇಮಿವಚಃ ॥
ಶ್ರೀಕಟಕಂ ರತ್ನತ್ರಯ ।
ನೈಕಟಕಂ ಕಾಂತಶಬ್ದರುಚಿಕಾಂಚನದೊಳ್ ॥೨೭॥

ರಸಮೊ ರಸಾಯನಮೋ [2]ಶ್ರುತಿ[2] ।
ವಸಂತಮೋ ಕಿವಿಗಳಮೃತಮೋ ನೇಮಿಯವಾಕ್ ॥
ಪ್ರಸರಮುದದೆಸಕದಿಂ ನಿ ।
ಪ್ಪೊಸತಾದುದು ಜಗಕ್ಕೆ ನೇಮಿನಾಥಪುರಾಣಂ ॥೨೮॥

ಪರಿಭಾವಿಸೆ ಪೂರ್ವಾಪರ ।
ವಿರೋಧಮಿಲ್ಲದುದೆ ತಾಂ ಪುರಾಣಮದಂ ಮಾಂ ॥
ಕರಿಸುವೊಡೇನಿಟಿಗಾಱರ ।
ಪರಪಿದ ಮಾತುಂ ಪುರಾಣಮಕ್ಕೆಮಗೇನೋ ॥೨೯॥

ಪ್ರಣುತಜಿನಚರಿತಮಂ ಲ ।
ಕ್ಷಣಮಿಲ್ಲದೆ ಕುಕವಿ ಕಬ್ಬದೊಳ್ ಕಟ್ಟೆ ಮಹಾ ॥

ಮಣಿಯುಂ ಕರ್ಬೊನ್ನೊಳೆ ಕೇ |
ವಣಿಸಿದ ತೆಱನಕ್ಕುಮಲ್ಲದಪ್ಪುದೆ ಶುಭದಂ ||೩೦||

ಕಡುಕಂಪಂ ಪಿಡಿಕೆಯ್ಸ[1]ಲಕ್ಕುಮೆ[1] ಬಱಿದ್ದೈತಂದ ತಂಗಾಳಿಯಂ |
ಪಿಡಿಯಲ್ ಬರ್ಕುಮೆ ತೃಷ್ಣೆಗೊರ್ಕುಡಿತೆಯಿಂ ಕೊಂಡಚ್ಚವೆಳ್ದಿಂಗಳಂ ||
ಕುಡಿಯಲ್ ಬರ್ಕುಮೆ ಕೊರ್ವಿತೆಂದು ತರುಣೀಸಂಭೋಗಸೌಖ್ಯಂಗಳಂ |
ನುಡಿಯಲ್ ಬರ್ಕುಮೆ ಬಾರದಿಂತುಟೆ ವಲಂ ಕಾವ್ಯಾಮೃತಾಸ್ವಾದನಂ ||

ಕಮಳಕ್ಕಾವಗಮುಲ್ತು ಲಕ್ಷ್ಮಿಯಿರವಾಸ್ಯಾಬ್ಜಕ್ಕಮುಂಟಗ್ಗದಿಂ |
ಪ*ಮರ್ದಿಂಗೊಚ್ಚತಮುಲ್ತು ಮುಕ್ತಿವರ ವಾಕ್ಪೀಯೂಷಪೂರಕ್ಕಮುಂ ||
ಟ*ಮರರ್ಗರ್ಪಿತಮುಲ್ತು ಸೌಖ್ಯಮಿವರಿಂ ಸಂಸೇವ್ಯಕಾವ್ಯಂಗಳಂ |
ಸಮಸಂದಾಲಿಸುವರ್ಗಮುಂಟೆಸಿಪರೀಗೊಳ್ಪಂ ಕವೀಂದ್ರೋತ್ತಮರ್ ||೩೧||

ಕುವಳಯದಲರಂ ಕೌಮುದಿ |
ಯು ವಿಭವಮಂ ಕಂಡು ಕೊಂಡು ಕೊನೆವಂ ಕವಿಯೋ ||
ರವಿಯೋ "ರವಿ ಕಾಣದುದಂ |
ಕವಿ ಕಾಣ್ಬ"ನೆನಿಪ್ಪ ವಚನಮೇಂ ತಪ್ಪುಗುಮೇ ||೩೩||

ಶ್ರೀಯನೊಲಿಸುವೊಡೆ ತಾಂ ಕವಿ |
ನಾಯಕನೆನಿಸುವೊಡೆ ತನ್ನ ಕೃತಿ ಕಲ್ಪಾಂತ ||
ಸ್ಥಾಯಿಯೆನಿಸುವೊಡೆ ಬಲ್ಲರ |
ಬಾಯುಂ ಪೊರ್ಕ್ಕೋದಿ ಕಲ್ಗೆ ಕವಿ ಸಕಲಮುಮಂ ||೩೪||

ಬಗೆಗೊಂಡೋದದೆ ಕೇಳದೆಲ್ಲ ಕಳೆಯುಂ ಕಾವ್ಯಜ್ಞರಿಂ ಕಲ್ಲದ |
ಜ್ಚಗದಿಂ ಕಟ್ಟಿದ ಕೆಟ್ಟ ಕನ್ನಡದ ಕಾೞ್ಗಬ್ಬಂಗಳಂ [2]ಬಂಟ[2]ಸಾ ||
ಮಿಗಳಂ ಕೇಳಿಸಿ ತಾವೆ ತಮ್ಮ ಮನದೊಳ್ ಸರ್ವಜ್ಞರೆಂದಿರ್ಪ ಕ |
ಬ್ಬಿಗರುಂ ಕಬ್ಬಿಗರೆಂಬ ಲೆಕ್ಕದೊಳಗೇಂ ಭೂಭೃತ್ಸಭಾಭೂಷಣಂ ||೩೫||

ನವರಸಪೂರ್ಣದೊಳ್ ಲಲಿತಬಿಂಬಿತಸರ್ವಪದಾರ್ಥದೊಳ್ ಮಹಾ |
ಕವಿಕುಲಸೇವ್ಯದೊಳ್ ಲಸದಳಂಕೃತಿಕಂಜನಿವಾಸದೊಳ್ ಜನೋ ||

---

ಪಾ—1. ಗ, ಬಕ್ಕುಮೆ. 2. ಗ, ಬಟ್ಟ.

ತ್ನವಕರದೊಳ್ ಸರಸ್ವತಿ ಮನೋಮುದದಿಂ ಜಲಕೇಳಿಯಾಡುವಳ್ |
ಪ್ರವಿಮಳನವ್ಯಕಾವ್ಯಕಮಳಾಕರದೊಳ್ ಕವಿರಾಜಮಲ್ಲನಾ ||೩೬||

ಧರೆ ಲೇಸೆಂಬಾಸೆಗಾಱಂ ಪರಪುರುಷಗುಣಾನ್ವೇಷದೊಳ್ ಸ್ವೈಪುಗಾಱಂ |
ಸಿರಿಯೊಳ್ ಕಟ್ಟಣ್ಮುಕಾಱಂ ವಿತತವಿತರಣೋತ್ಸಾಹದೊಳ್ ಗೆಲ್ಲಕಾಱಂ ||
ಪರವಾದಿವ್ರಾತದೊಳ್ ಬಿತ್ತರಿಪ ತುರಿಪಕಾಱಂ ಮಹಾಧರ್ಮದೊಳ್ ಮ |
ಚ್ಚರಕಾಱಂ ಭಾವಕೋತ್ಪಾದಕರಸಿಕಕವಿಸ್ತೋಮದೊಳ್ ನೇಮಿಚಂದ್ರಂ ||

ಜಗಕೆ ಜಿನೇಂದ್ರರುಕ್ತಿಯೆ ಸರಸ್ವತಿಯಾಕೆಗೆ ರಮ್ಯರೂಪಚಿ |
ತ್ತಗುಣವಿಳಾಸವಿಲ್ಲೆನಲವೇಡಿವನುತ್ತಮಕಾವ್ಯದೊಳ್ ಮೊಗಂ ||
ನಗೆಮೊಗವಿಲ್ಲಳಂಕೃತಿಯಳಂಕೃತಿ ಭಾವಗತಂ ರಸಂ ರಸಂ ||
ಬಗೆ ಬಗೆ ಮಾತು ಮಾತು ಸತಿ ಭಾರತಿ ಕೆಳ್ಗೆ ವಿದೇಶಿಕಾಱನೊಳ್ ||

ಚರಿತಪುರಾಣದೊಳ್ಮಣಿಗಳಂ ಸರವೇಱಿಪ [1]ತೋಳ್[1] ಭವಾವಳೀ |
ಸ್ಮರಣಕಥಾಭವಂಗಳನದಾರ್ ಬರೆವರ್ ಸರವೇಱಿಪಂದದಿಂ ||
ಸಿರಿಗಳನೀಮಹಾಕಥೆಗಳಂ ಪ್ರಥಿತಂಗಳನೊಂದೆ ಕಾವ್ಯದೊಳ್ |
ಬರೆದನಿದೇಂ ಸಮಗ್ರನೊ ಕವೀಶ್ವರರೊಳ್ ಕವಿರಾಜಕುಂಜರಂ ||೩೯||

ಎಂದೆಂದು ಪರಸೆ ಗುರುಜನ |
ಮಂದೊಂದನೆ ಪೊಗೞೆ[3] ಬುಧಜನಂ ಜಿನಕಥೆಯೊಳ್ ||
ಸಂದಿಸಿ ವಸುದೇವಾಚ್ಯುತ |
ಕಂದರ್ಪರ ಕಥೆಗಳನಿತುಮಂ ವಿರಚಿಸುವೆಂ ||೪೦||

ಈರಸವತ್ಕೃತಿಯೊಳಹಂ |
ಕಾರಜರಾಸಂಧ ಕಾಮನೇಮಿ[2]ಕುಮಾರರ್ ||
ಶ್ರೀರಮಣರ್ ಧೀರರ್ ಧೃತ[2] |
ವೀರಲಲಿತವೀರಶಾಂತಧೀರೋದಾತ್ತರ್ ||೪೧||

ಒಡವುಟ್ಟಿದ ಕೌಸ್ತುಭಮಣಿ |
ಯೊಡನಿರಲಾಗೆಂದು ಬಿಟ್ಟು ವಿಷ್ಣುವಿನುರಮಂ ||
ಬಿಡುವಿಸರ್ಗೆ ಪದ್ಮನಾಭನ |
ಬೆಡಂಗಿನುರದಲ್ಲಿ ಲಕ್ಷ್ಮಿ ಸಲೆ ನೆಲಸಿರ್ಪಳ್ ||೪೨||

---

ಪಾ — ಗ, ಪೊೞ್. 2. ಕುಮಾರಶ್ರೀರಮಣರ್ ಧೀರೋದ್ಧೃತ.

ವದನಂ ಚಂದ್ರಪ್ರಭಂ ವಿಕ್ರಮಭುಜಮಜಿತಂ ಪಾಣಿ ಪದ್ಮಪ್ರಭಂ ಸಂ।
ಪದಮೊಂದುಂ ವರ್ಧಮಾನಂ ಗುಣತತಿ ವಿಮಳಂ ತನ್ನ ಪೆಂಪೊಂದನಂತಂ ॥
ಹೃದಯಂ ಸ್ವಾಧೀನಧರ್ಮಂ ಮತಿ ಪುರುಚರಿತಂ ಶೀತಲಂ ಸುವ್ರತಂ ತಾ ।
ನದಱಿಂ ಪ್ರತ್ಯಕ್ಷ ತೀರ್ಥೇಶ್ವರನೆನೆ ನೆಗೞ್ದಂ ಪದ್ಮನಾಭಪ್ರಧಾನಂ ॥೪೩॥

ಆಪದ್ಮನಾಭದೇವಂ ।
ಶ್ರೀಪತಿಪುಣ್ಯಪ್ರಭಾವದಿಂ ನೇಮಿಯ ವಿ ॥
ದ್ಯಾಪೃಥುಲಜಲಧಿಭವಕೃತಿ ।
ರೂಪದ ಕೌಸ್ತುಭಕೆ ಸುಭಗವಲ್ಲಭನಾದಂ ॥೪೪॥

ಬೆಲೆಯಿಂದಕ್ಕುಮೆ ಕೃತಿ ಗಾ ।
ವಿಲ ಭುವನದ ಭಾಗ್ಯದಿಂದಮಕ್ಕುಂ ನೋೞ್ಪಂ ॥
ಬೆಲೆಗೊಟ್ಟು ತಾರ ಮಧುವಂ ।
ಮಲಯಾನಿಲನಂ ಮನೋಜನಂ ಕೌಮುದಿಯಂ ॥೪೫॥

ಕವಿ ಕಾಂಚನಕಣಿಕೆಗೆ ಮಾ ।
ಱುವನೇಕೆಯೊ ಮರುಳನಳೆಗೆ ಮಾಣಿಕವಂ ಮಾ ॥
ಱುವ ತೆಱದಿನೀಚತುರ್ದಶ ।
ಭುವನಮೆ ಬೆಲೆಯೆನಿಪ ಕೃತಿಯುಮಮಳಾಕೃತಿಯುಂ ॥೪೬॥

ಎಣಿಸದೆ ಗುಣಮಂ [1]ಗಾಜಿನ[1] ।
ಮಣಿಯಂ ಮಾಱುವವೊಲಹಹ ! ನಿಗಗಂ ತನಗಂ ॥
ಪಣಕೆ ಕೃತಿಯೆಂಬ ಚಿಂತಾ ।
ಮಣಿಯಂ ಮಾಱುವನ ಬುದ್ಧಿಗಾಂ ಬೆಱಗಾದೆಂ ॥೪೭॥

ಒಡವೆ ತನಗಪ್ಪೊಡೆಂತಾ ।
ದೊಡಮಾದಪುದಿನ್ನು[2]ದಿರ್ಕೆ[2] ಕಬ್ಬಂಬೇೞ್ದಂ ॥
ಜಡಮತಿಗಳ ಕರ್ಚದ ಕಾ ।
ಲ್ವಿಡಿಯಲ್ವೇೞ್ಕುಮೆ ಬುಧಂಗೆ ವಿದ್ವತ್ಸಭೆಯೊಳ್ ॥೪೮॥

ನಿಧಿ ದೊರೆಕೊಂಡೊಡಂ ಬಗವಿಗಂಜುವರೇ ಮಿಗೆ ಮುಗ್ಧರುಂ ಸುಧಾಂ।
ಬುಧಿ ದೊರೆಕೊಂಡೊಡೇನೊಱವುದೋಡುವರೇ ಸಕಲಾರ್ಥಸಂಭವಾ ॥

---

ಪಾ —1. ಗ, ಕಾಚಿನ. 2. ಗೆ, ದಕ್ಕೆ.

ವಧಿ ಜಿನರಾಜರಾಜಿತಕಥಾಕಥನಂ ದೊರಕೊಂಡೊಡಂ ಪಣ |
ಕ್ಕಧಮರನಣ್ಣ ಬಣ್ಣಿಪರೆ ಚಾರುವಿಚಾರಪರರ್ ಕವೀಶ್ವರರ್ ||೪೯||

ಇದನಱಿದು ನೇಮಿಚಂದ್ರಂ |
ವಿದಗ್ಧವಿದ್ಯಾಧರೇಂದ್ರನಖಿಲಕಲಾಕೋ ||
ವಿದನುಚಿತಸಬುಧವಿದ್ಯಾ |
ಸದನಂ ಕವಿಚಕ್ರವರ್ತಿ ಭುವನಾಭರಣಂ ||೫೦||

ಸುಕರಕವಿಶೇಖರಂ ತಾ |
ರ್ಕಿಕತಿಲಕಂ ಮಾನಮೇರು ಜಿನಶಾಸನದೀ ||
ಪಕನಕಳಂಕಂ [1]ಭಾವುಕ[1] |
ಮುಕುರಂ ಕವಿರಾಜಮಲ್ಲನಪ್ರತಿಮಲ್ಲಂ ||೫೧||

ಪರಮಾರ್ಥಂ ನೇಮಿನಾಮಗ್ರಹಣಮೆ ಪರಮೈಶ್ವರ್ಯದಂ ತತ್ತ್ರೈಲೋಕೀ | ಗುರುಪುಣ್ಯಶ್ಲೋಕಸಂಕೀರ್ತನಮೆ ತನಗೆನಿಪ್ಪಾತನೈಶ್ವರ್ಯಮಿನ್ನೇ| ವಿರಿದೋ ಪೇೞೆಂದು ಪಾಪಕ್ಷಯಮನಯಲತಾಕಂದಮಂ ಭಕ್ತಿಯಿಂದಂ | ಹರಿವಂಶಕ್ಷತ್ರಚೂಡಾಮಣಿಯ ಚರಿತಮಂ ಪೇೞಲುದ್ಯುಕ್ತನಾದಂ||

ಅದೆಂತೆಂದೊಡೆ ;

ನಿಯುತಪ್ರಾಲೇಯದೀಪ್ತಿದ್ಯುಮಣಿಭಗಣದೀಪೋಜ್ವಳಾಕೃತ್ರಿಮಾತ್ಮೋ |
ದಯಮಪ್ಪಾಕಾಶಮೊಂಬಾಗಸವಳಕನನಂತೈಕಸಂಶುದ್ಧಸಿದ್ಧಾ ||
ಲಯದೊಳ್ ಸಾಮರ್ಥ್ಯದಿಂ ಮುಟ್ಟದೆ ನತಭುವನರ್ ಸಿದ್ಧರೇಱಿರ್ದಪೀಠ|
ತ್ರಯಮೆಂಬಂತಿರ್ಪುದವ್ಯಾಹತಜಿನಪತಿಬೋಧಾವಲೋಕಂ ತ್ರಿಲೋಕಂ ||

ಅಂತೆನಿಸಿರ್ಪುದಧೋಲೋ |
ಕಂ ತಿರ್ಯಗ್ಲೋಕಮೂರ್ಧ್ವಲೋಕಮದದಱೊಳ್ ||
ಕಾಂತ[2]ಮೆಸೆದಪ್ಪುದು[2] ನರಲೋ |
ಕಂ ತನುಭೃತ್ಪುಣ್ಯಪಾಪಸಸ್ಯಕ್ಷೇತ್ರಂ ||೫೪||

ವ|| ಆಮಧ್ಯಮಲೋಕದ ಮಧ್ಯಪ್ರದೇಶದೊಳ್—

*

ಅಂಬುಧಿಯೊ[3]ಳುದಿರ್ದ[3] ತೇಂಕುವ |
ದುಂಬರಜಂಬುವಿನ ದೋರೆವಣ್ಣೊಲೆಸೆಗುಂ ||

---

ಪಾ—1. ಗ, ಭಾವಕ. 2. ಗ, ಮೆನಿಸುವುದು. 3. ಗ, ಳಿರ್ದ.

ಜಂಬೂದ್ವೀಪಂ ಮಂದರ |
ಮಂ ಬಲವರ್ಪರುಣಕಿರಣದಿಂ ಕಟ್ಟಿಲೆಯಿಂ ||೫೫||

ವ|| ಅಶರಧಿಸರೋವರಕ್ಕಳಂಕಾರವಾದ ಜಂಬೂದ್ವೀಪಮೆಂಬ ಕಮಲದ ಕರ್ಣಿಕೆಯಂತೆ,

ಎನಗುರ್ವೀಧರವೈರಿ ಬಂಧು, ಜಯಮರ್ ದೇವರ್ಕಳೆನ್ನಲ್ಲಿ ಕಲ್ |
ಕನಕಂ, ಪಾಱುವ ಪಕ್ಕಿ ಭಾನು, ಮರನೆಲ್ಲಂ ಬಂದ ಮಂದಾರಮಾ ||
ವ ನಗಂ ಮತ್ತಮದೆಂದು ಬೀಗಿ ಬಳೆದಂತಿರ್ಕುಂ ಜಿನಸ್ನಾನಪಾ |
ವನವಾರ್ನಿರ್ಝರನಿರ್ಝರೋಜ್ವಲಮಣಿಶ್ರೀಕಂದರಂ ಮಂದರಂ ||೫೬||

ಅದಱಯೆ ಪೂರ್ವಾಪರದೊಳ್ |
ವಿದೇಹಮೆರಡಿರ್ಪುವವಱೊಳೊಂದೊಂದಱೊಳಂ ||
ಪದಿನಾಱು ನಾಡು ಚಂದ್ರನ |
ಪದಿನಾಱುಂ ಕಳೆವೊಲಖಿಳನಿರ್ಜರಸೇವ್ಯಂ ||೫೭||

ಪರಭೃತಭೃಂಗಕೀರಕಳಹಂಸೆಗಳಲ್ಲದೆ ಕಾಕಘೂಕಭೀ |
ಕರಖಗಮಿಲ್ಲ ಮೇಲ್ಮರಗಳಲ್ಲದೆ ಕೀಲ್ಮರನಿಲ್ಲ ಹಸ್ತಿಕ ||
ತ್ತುರಿಮಿಗಮಲ್ಲದುಗ್ರಮೃಗ[3]ಮಿಲ್ಲಱನಮಲ್ಲದೆ ಪಾಪಮಿಲ್ಲ ಭಾ |
ಸುರಜಿನಧರ್ಮಮಲ್ಲದೆ ಕುಧರ್ಮದ ವಾರ್ತೆಯುಮಿಲ್ಲ ದೇಶದೊಳ್ ||೫೮||

ಋತಮೆಸೆದಿರ್ಪ ನಿಸ್ಪೃಹತೆಯಿರ್ಪ ದಯಾಗುಣಮಿರ್ಪ ಶೋಭಮಿ |
ರ್ಪತಿಶಯತೋಷಮಿರ್ಪ ಮತಮಿರ್ಪೆಡೆಯೊಳ್ ಪುಸಿಯಿರ್ಪ ಚೌರ್ಯಮಿ ||
ರ್ಪ ಶಿವಧೆಯಿರ್ಪ ಪಾರದರಮಿರ್ಪ ಪರಿಗ್ರಹಕಾಂಕ್ಷೆಯಿರ್ಪ ಕು |
ತ್ಸಿತಮತಮಿರ್ಪುದಲ್ತು ಬೆಳಗಿರ್ಪೆಡೆಯೊಳ್ ತಮಮೆಂದುಮಿರ್ಪುದೇ ||೫೯

ಅಸದಳಮಾಗಿ ಸಂದ ಜಿನಶಾಸನವರ್ತನೆಯಿಂ ಜಿನಾಗಮಂ |
ಬೆಸಸಿದ ಭಂಗಿಯಿಂ ನೆಗೞ್ದ ಶಾಂತಿಕದಿಂ ಸಿರಿ ತುಳ್ಕೆ ಸಂತಸಂ ||
ಪಸರಿಸೆ ಕಯ್ಯೊಳಂ ಕಳದೊಳಂ ಬಗೆದೊಟ್ಟು ವದಾನ್ಯವರ್ಗದಿಂ |
ಪುಸಿ ಪುಸಿಯಾೞ್ದಿಯಾೞ್ದಿಗೆ ಬೞಂ ಬೞಕಾದುದು ತನ್ಮಹೀತಳಂ ||೬೦||

ವ|| ಅವಿದೇಹಂಗಳೊಳಪರವಿದೇಹಮೆ ದೇಹಮಾಗೆ;

---

ಪಾ—೩. ಕ, ಮಿಲ್ಲಯಮಿ.

ಮೇದಿನಿ ಬೆಂಗೆಬಿಟ್ಟ ಮುಡಿಯಂತೆಸೆದಿರ್ಪುದು. ಪುಷ್ಪಿತಂ ತಟೀ |
ಪಾದಪವೀಥಿ, ಪಂತಿಗುರುಳಂತಿರೆ ಸಂಚಳವಿಮಾನಸಂಚಯಂ. ||
ಪೂದುಱುಗಲ್ ತಡಂ ತೊಡರ್ದುತೋರ್ಪವೊಲೊಪ್ಪಿರೆ. ಕೊಂಕುವೆತ್ತ ಶೀ|
ತೋದೆ ಸಡಿಲ್ದು ನೀಳ್ದು ಸಿರದಿಂ ನಿಱಿಗೊಂಡು ಬಱಲ್ದ ಭಂಗಿಯಿಂ ||೬೧||

ತೆರೆ ಪಲ್ಲನೆ ಪಲ್ಲವತರು |
ಪರಿವೃತದರಿಯುಧರವೆನೆ ಪರಾಗದ ಕಂಪಂ ||
ಪರಪುವೆಲರ್ ನಱುಸುಯ್ಯನೆ |
ಧರಣಿಯ ಬಾಯ್ದೆಱೆಯ ತೆಱದಿನಾತೊಱೆ ಚೆಲ್ವಿಂ ||೬೨||

ವ|| ಆತೊಱೆಯ ಬೆಡಂಗುವಡೆದ ಬಡಗಣ ತೆಂಕಣ ತಡಿಯೊಳ್ ಬಾಂದೊಱೆಯ ತಡಿಯ ಪದಿನಾಱುಂ ಸಗ್ಗಂಗಳಂತಿರ್ಪ ಪದಿನಾಱುಂ ನಾಟ್ಕಳೊಳಗೆ ಬಡಗಣ ತಡಿಯ ವಪ್ರೆ ಸುವಪ್ರೆ ಮಹಾವಪ್ರೆ ವತ್ಸಕಾವತಿ ಗಂಧೆ ಸುಗಂಧೆ ಗಂಧಿಳೆ ಗಂಧಮಾಳನಿಯೆಂಬ ನಾಟ್ಕಳೊಳಗೆ ;

ತಿಳಗೊಳನಬ್ಜಗಂಧಿಯುದಱಾರಮೆ ಚಂಪಕಗಂಧಿ. ಕಾನನಂ |
ಮಳಯಜಗಂಧಿ. ಕೇಳನಗಸಾನು ಮೃಗೋದ್ಭವಗಂಧಿ. ಕಯ್ವೊಲಂ ||
ಕಳಮಕದಂಬಗಂಧಿಯೆನೆ. ಸಾರಸುಖಾಮಳಗೇಹಗಂಧಿ. ಗಂ |
ಧಿಳವಿಷಯಂ ಸಮಸ್ತವಿಷಯಂಗಳ ವಲ್ಲಭನಪ್ಪುಗೊಪ್ಪದೇ ||೬೩||

ಮದನಂಗುಪ್ಪರವಟ್ಟಮಾಗದ ತಳಿರ್ ಕಾಮಂಗೆ ಕೋದಂಡಮಾ |
ಗದ ಕರ್ವಂಗಭವಂಗೆ ಭಂಗುರಧನುರ್ಜ್ಯಾಲೇಖೆ ತಾನಾಗದು ||
ನ್ಮದಭೃಂಗಾವಳಿ ಚಿತ್ತಜಂಗೆ ಜಗಮಂ ಗೆಲ್ದೀವ ಬಾಣಂಗಳಾ |
ಗದ ಪೂಗಳ್ ಮಱಿದಾಗವೆಂಬ ವಿವಿಧೋದ್ಯಾನಂಗಳಾದೇಶದೊಳ್ ||೬೪||

ಎಳಸುತ್ತಿರ್ಪಂ ಪಿಕಾ[1]ಳಾಪೆಯರೆ[1] ಕಳಕೆಗೌತ್ಸುಕ್ಯದಿಂದಂ ಶುಕವ್ಯಾ|
ಮಳೆಯರ್ ಮಾಂಗಾಯ್ಗೆ. ಭೃಂಗಾಳಿಕೆಯರರಲ್ಗೆ. ಚಂಚಚ್ಚಕೋರಾಕ್ಷಿಯ
ರ್ ತಾ || ಮೆಳ್[2]ನೀರ್ಬೆ[2]ಳ್ದಂಗಳೊಳ್ ಬೆಂಚೆಗೆ. ಸಮದಮರಾಳಾಂಗನಾ
ಯಾನೆಯರ್ ಪೂ | ಗೊಳಕುದ್ಯಾನಂಗಳೊಳ್ ಬರ್ಹಿಣಿಕಚಭರೆಯರ್ ಕೇಳಿ
ಮೋಳಕ್ಕೆ ನಿಚ್ಚಂ ||೬೫||

---

ಪಾ—1. ಗ, ಪ್ರತತಿ. 2. ಗ, ಸೀರ್ವೆ.

ಎಳನೀರಂ ಜಿನಮಜ್ಜನಕ್ಕೆ ಜಿನಪಾದಾಜ್ಜಕ್ಕೆ ಪೂವಂ ಫಳಾ |
ವಳಿಯುಂ ಪೂಜೆಗೆ ತೋರಣಕ್ಕೆ ತಳಿರಂ ತಾವಿತ್ತು ಪುಣ್ಯಪ್ರಭಾ ||
ಫಳವುಂ ಪೇೞ್ದ[1] ನಾದ[1] ನಂದನವನಂ ಸಗ್ಗಕ್ಕೆ ಪೋದಂತೆ ಕ |
ಣ್ಗೊಳಿಕುಂ ನಂದನವಲ್ಲದಂದು ಬನಕಂ ಸಗ್ಗಕ್ಕಮೇಂ ಸಂಮದಂ ||೬೬||

ವ|| ಎನೆ ಸೊಗಯಿಸುವ ಸುಗಂಧಿಳವಿಷಯಕ್ಕೆ ಭೂಷಣವಾಗಿ—

ಮುತ್ತಿನ ತೋರಣಂ ಗಜದ ನೆತ್ತಿಯ ಮುತ್ತುಗಳೆಲ್ಲ ಪಲ್ಗಳೊಳ್ |
ಪತ್ತಿದ ಪೋಲ್ವೆಯಂ ಪಡೆವ ಗೋಪುರಪಂಚಕಮಾಸ್ಯಮಾಗಿ ಮೆ ||
ಯ್ವೆತ್ತಿರೆ ಪಾಯ್ದು ಕುಂಭಿನಿಯ ಮೇಲೆ ಸುಧಾಧವಳಂ ಪ್ರತಾಪಮುಂ |
ಪೊತ್ತದದೊಂದು ಸಿಂಹಪುರಮೆಂಬ ಪುರಂ ಜನಘೋಷಗರ್ಜಿತಂ ||೬೭||

ಸುರತದ ಸುಗ್ಗಿ ಕಾಮನ ಸರಲ್ಗಳ ಪೂವಿನ ಪೊಟ್ಟು ಮುತ್ತಿನಾ |
ಭರಣದ ಜೊನ್ನಮುಪ್ಪಳಿಪ ನೀಲದ ಕಾಳದ ಮುರ್ಬು ಬೆಟ್ಟದೊಂ ||
ದುರಿಗಳ ಬೆಟ್ಟಬೇಸಗೆ ಸುರಾಗರಸಂಗಳ ಕಾರ ಮುಂಬು ತ |
ತ್ಪುರವರದಲ್ಲಿ ಸಾತ್ವಿಕದ ಮೆಯ್ಮಡುಕಂಗಳ ಮಾಗಿಯಾಗಳುಂ ||೬೮||

ವ|| ಆಪುರದ ಪರಮೇಶ್ವರನ ಪರಮಪುರುಷೋತ್ತಮಾವತಾರನ ವಾರಪಾರಗಂಭೀರನಪಾರಪುರುಷಾರ್ಥಪ್ರಸೂತಶೀತಳನಭಸ್ತಳತಿಳಕತುಷಾರಕರಶಿಶಿರಶರದಭ್ರವಿಭ್ರಮದಶದಿಶಾಮುಖಮಂಡಲಮಂಡನೀಭೂತವಿಶದಯಶಃಪ್ರಹಾಸನನರ್ಹದ್ದಾಸನೆಂಬೊಂ—

ಮದನಂ ರೂಪಿಂಗೆ ದಾಸಂ ಮನೆಗೆ ನೃಪನ ಪುಣ್ಯೋದಯಂ ದಾಸನರ್ಕಂ |
ಮದವತ್ತೇಜಂಗೆ ದಾಸಂ ವಿಧು ವದನಯಶಶ್ರೀಗೆ ದಾಸಂ ಕೃತಾಂತಂ ||
ಕದನಕ್ರೋಧಕ್ಕೆ ದಾಸಂ ಗುರುಭುಜಕೆ ಜಯಂ ದಾಸನೆಂದಂದದಿನ್ನಾ |
ರ್ಪುದಿದರ್ಹದ್ದಾಸಭೂಪಂಗರಸರೆಸಕದಿಂದಾಸೆಯಿಂ ದಾಸರಾದರ್ ||೬೯||

ಪೂಸಲ್ ಮೆಯ್ಗರ್ಹದಂಘ್ರಿದ್ವಯಪರಿಚಯಪೂತೋತ್ತಮಂ ದಿವ್ಯಗಂಧಂ |
ಸೇಸಿಕ್ಕಲ್ ಗಂಧಶಾಲ್ಯಕ್ಷತಶತಮನಿಶಂ ಪುಷ್ಪದಾಮಂ ತುಱುಂಬಲ್ ||
ಸೀಸಕ್ಕೆಂಬಾದುದೆಂಬಂದೆಲೆ ಕುಲವೞಿಯಿಂ ಬಂದ ದಾಸತ್ವಮರ್ಹ |
ದ್ದಾಸಂಗೇನಣ್ಣ ನಾಟ್ವರ್ತನಮೆ ಸಕಲಪೃಥ್ವೀಪತಿಪ್ರಾರ್ಥನೀಯಂ ||೭೦||

---

ಪಾ—1. ಗ, ನಾಡ.

ಜಿನಪತಿಯು ಪೆರ್ಮೆಗವನೊ |
ರ್ವನೆ ದಾಸನೆ ದಾಸನಲ್ಲದವರಾರ್ ಜಗದೊಳ್ ||
ಜಿನನುಂಡೊಲ್ಲದೆ ಬಿಸುಟಂ |
ದ್ರನರೇಂದ್ರಾದ್ಯಖಿಳರಾಜ್ಯಮುಖಮುಣ್ಬವರೊಳ್ ||೨೧||

ನಿರಹಾಸಂ ಕುಚಕಂಜಕುಟ್ಮಲಯುಗಂ ಮುಗ್ಧಾನಸಂ ವರ್ಜಿತಾಂ |
ತರಹಾಸಂ ಕುಸುಮಚ್ಯುತಂ ಕಚಭರಂ ಕರ್ಣಂ ಕನತ್ಕರ್ಣಿಕಾ ||
ಭರುಹಂ ಭ್ರಷ್ಟಮೆನಲ್ಕೆ ಶೋಕತಮಮಂ ನಿಷ್ಕೇಶನಿರ್ಗ್ರಂಥಮಿ |
ರ್ದರುಹದ್ಧಾಸನ ಖಡ್ಗಮೀವುದು ರಿಪುಸ್ತ್ರೀಯರ್ಗೆ ಕಾರುಣ್ಯದೊಳ್ ||

ಜಿನದತ್ತೆಯೆಂಬಳಾಭೂ |
ಪನ ಕುಲವಧು ತನ್ನ ದಾಸನೆಂದೊಸೆದು ಕರಂ ||
ಜಿನನಿತ್ತ ಪುಣ್ಯಲಕ್ಷ್ಮಿಯ |
ನನುಕರಿಸುವಳೆಸೆಯೆ ಸಿರಿಯೊಳಂ ರೂಪಿನೊಳಂ ||೨೩||

ಮೊಲೆವಿಣ್ಪಿಂ ಮುಱಿದಪುದೀ |
ಲಲನೆಯ ಬಡನಡುವಿದೊಂದು ಕುಸುಮಶರಂ ಕೈ ||
ವಲದಾಂಕೆಗೊಟ್ಟ ಸೀಲದ |
ಸಲಿಗೆಯಿದೆನೆ ರೋಮರಾಜಿ ರಾಜಿಸಿ ತೋರ್ಕುಂ ||೨೪||

ಅಲರಾಗಿ ಸಿರೀಕ್ಷಿಸಿ ಕಾ |
ದಲನಂ ಮುಗುಳಾಗಿ ಸೋಂಕಿದೆಡೆಯೊಳ್ ಕಾಮಂ ||
ಗಲಸದೆ ಸರಳಾಗಿ ಪೞಂ |
ಚಲೆವುದು ತೊಳಪವಳಪಾಂಗಮಲರ್*ಗಳ ಪಾಂಗಂ ||೨೫||

ಪೋ! ವ್ರತಮಾವ ಪೆಂಡಿರೊಳಮಿರ್ದೊಡಮೇನೊ ವಿಳಾಸಮಾಂತ ನಿ |
ತ್ಯವ್ರತಮಾಕೆಯೊಳ್ ಸೊಬಗುವೆತ್ತ ಗುಣವ್ರತಮಂ ಜಗಂ ವಿಳಾ ||
ಸವ್ರತಿ ಕೊಂಡದೇ ಸವಿ ರತಿವ್ರತಮಾನ್ಯಪನೆತ್ತಿದೇಕಪ |
ತ್ನೀವ್ರತಮೆಯ್ದೆ ಸೂಚಿಸವೆ ಕಾಂತೆಯ ರೂಪಿನ ಪೆಂಪಿನೊಳ್ಮೆಯಂ ||೨೬||

ಮಂದಾರವೊಂದು ಪುಟ್ಟುವ |
ಮಂದರಮುಂ ವಾರ್ಧಿವೇಲೆಯುಂ ಮಾಣಿಕಮೊ ||

ಲ್ದೊಂದೊಗೆವ ರೋಹಣಾದ್ರಿಯು |
ಮುಂ ಧರೆಯುಂ ದೊರೆಗೆ ವಂದ ಪತಿಯುಂ ಸತಿಯುಂ ॥೨೮॥

ವ॥ ಅಂತಿಷ್ಟವಿಷಯಕಾಮಭೋಗಂಗಳನನುಭವಿಸಿರ್ಪನವೊಂದುದಿವಸಂ ಮುನಿಚರ್ಯಾಕಾಲ[1]ಮಿಧಾರ್ಮಿಕಜನಗುಣಮಂ[1] ಪುಣ್ಯಮೆಯ್ತರ್ಪಕಾಲಂ| ಜಿನದತ್ತಾದೇವಿ ದಾನಂಗುಡುವ ಬೆವಸೆಯೊಳ್ಗಲಮಿಾಕಾಲ[2]ಮಾ[2]ರುಂ॥ ಮನೆಯೊಳ್ ಸೂನಂಗಳಂ ಸಂಧಿಸಿ [3]ಡೆ[3]ತಿಮಿರೆಮಾಚಾಗದಿಂದೆಂದು ಪೃಥ್ವೀ| ಜನಕೆಲ್ಲಂ ಸಾಱುವಂತೇನೊಗೆದುದೊ ಮಿಗೆ ಮಧ್ಯಾಹ್ನಶಂಖಪ್ರಣಾದಂ ॥

ಸದಮಳಪಾತ್ರಕ್ಷೇತ್ರದೊ |
ಳದು ಬಿತ್ತುವ ಪದದ ಪೊೞ್ತು ಗೃಹಮೇಧಿಗದೇ ॥
ವುದೊ ಮಧ್ಯಾಹ್ನದ ಪೊೞ್ತು |
ಲ್ಲದ ಪೊೞ್ತಾಬಂಜೆವೊೞ್ತು ತಾನದು ಪೊೞ್ತೇ ॥೨೯॥

ವ॥ ಅದಂ ಕೇಳ್ದು ಕಾರ ಮೊಳಗಂ ಕೇಳ್ದ ನವಿಲಂತೆ ನಲಿದು ಯತಿಗಳ ಪಾವನಪದಪದ್ಮಗಳಂ ಗಣಮಂ ಮೆಟ್ಟಿ ಪವಿತ್ರಂಮಾಳ್ಪ ಪೊೞ್ತಾದುದೆಂದು ಬೇಗಮುಬ್ಬೆಗಳಂ ಬಂದಿಸಿ ಬಸದಿಯುಂ ಪೊಱಮಟ್ಟರಮನೆಯ ಬಾಗಿಲ್ವಾಡದೊಳ್ ವಿಭವಂಬೆರಸು ಬಂದಿರ್ದಳನ್ನೆಗಂ—

ಹರಿಯುಂ ಕರಿಯುಂ ಪುಲಿಯುಂ |
ಕರಿಣಿಯುಮೊಂದಾಗಿ ಮಚ್ಚಿ ಬೆಚ್ಚದೆ ಬೆನ್ನೊಳ್ ॥
ಬರೆ ಗಡಣದೊಳಾನಗರ |
ಕ್ಕರಣ್ಯದಿಂ ಚರಿಗೆಗೊಟ್ಟನಂಗಜಮಲ್ಲಂ ॥೩೦॥

ಪೆಗಲೊಳ್ ದಕ್ಷಿಣಹಸ್ತಮೊಪ್ಪೆ ಸಸಿನಂ ವಾಮಂ ಕರಂ ತಾಂಗೆ ಗುಂ |
ಡಿಗೆಯುಂ ದೃಷ್ಟಿಯುಗಪ್ರಮಾಣಪರದೊಳ್ ಮತ್ತತ್ತಲುಂ ಸೂಸದೊ ॥
ಳ್ಪುಗೆ ನಿಷ್ಪಂದಮೆನಲ್ಕೆ ಪೂರ್ವತಮ[4]ಖಂಣಂ[4] ಮುಟ್ಟುವಂತೊಯ್ಯಗೊ |
ಯ್ಯಗೆ ಕಾಲ್ಗಳ್ನೆಲಮುಟ್ಟೆ ಚಂದ್ರಗತಿಯಿಂ ಬಂದಂ ಮುನೀಂದ್ರೋತ್ತಮಂ॥

ಬಂದುಂ [5]ಪ್ರಾಣಿಗೆ[5] ಭಯಮುಂ |
ದಂದುಗಮುಂ ನೋವುಮೆಯ್ದೆ ಬಾರದ ತೆಱದಿಂ ॥

---

ಪಾ—1. ಗ, ಮಿಧಾರ್ಮಿಕ ಜನಗೃಹಮಂ. 2. ಗ, ಮಾ. 3, ಕ, ದಿ. 4. ಗ, ಕಂಣಂ. 5. ಕ, ಪಾಣ್ತಿಗೆ.

ಬಂದಂ ಚರಿಗೆಗೆ ಬಸದಿಂ ।
ಮಂದಾನಿಲನಂತೆ ಕುಕ್ಕುಟಾಸನದೇವಂ ||೮೨||
ಬೞಿಸಂದು ಮುಂದೆ ಕಂಪಿಂ ।
ಗೆೞಲೆ ಮನಂ ಮೇಲೆ ನೆಗೆದ ಮಲಧಾರಿಗೆ ಮೆಯ್ ||
ನೆೞಲಾದಳಿತತಿ ಪೀಲಿಯು ।
ಕಳ[1]ಯಂ ಭರ[1]ದಲ್ಲಿ ಬರ್ಪ ತೆಱನಾಯ್ತಾಗಳ್ ||೮೩||
ಅಡಿಗೆಱಪ ಜನಕ್ಕಾಗಳೆ ।
ಕುಡಲೆ ಸಹಸ್ರಾಕ್ಷಪದವಿಯುಂ ಮುನಿ ಕೆಯ್ಯೊಳ್ ||
ಪಿಡಿದಿರ್ಪಂತೆವೊಲೆಸೆದ ।
ತಿ ಡಿದೊಪ್ಪುವ ಪಲವು ಕಣ್ಣ ಪೀಲಿಯ ಕುಂಚಂ ||೮೪||
ಕಾಣಲ್ಬಾರದ ಸೂಕ್ಷ್ಮ ।
ಪ್ರಾಣಿಗಳಂ ನೋಡಿ ನಡೆಯಲೆಂದಾಜೀವ ||
ತ್ರಾಣಸ [2]ಕಾಲಂ[2] ಕಣ್ಗಳೆ ।
ಮಾಣಿಕದಂತಾದುವೆನಿಸಿ ತೊಳಗಿದುವುಗುರ್*ಗಳ್ ||೮೫||
ಮುನಿಪತಿಯ ತೋರ್ಪ ಬೞಿಯೆ ।
ಲ್ವಿನ ಪುದುವಿಂ ಬೂದಿವಾೞುತಿ[3]ರ್ಪಿರವಿಂ[3] ಕಾ ||
ಮನ ಸುಟ್ಟ [4]ಕಾಡಿಗೆನೆ[4] ಕ ।
ರ್ಗನೆ ಕನಿತುದು ಮಲದ ಮಸಿಯು [5]ಮಣಕ[5]ದಿನಂಗಂ ||೮೬||
ಉಲಿವ ದಯಾತರಂಗಿಣಿಯು ಪಾವಸೆ ಕರ್ಬುರಕಾಯದೀಪಕ ।
ಜ್ಜ್ವಲಮಮರ್*ದಪ್ಪಿಕೊಂಡಸಮಲಕ್ಷ್ಮಿಯ ಮೆಯ್ಯಮೃಗೋದ್ಭವಂ ತಪೋ ||
ನಲನವಧೂಮಲೇಖೆ ಧೃತಿಪರ್ವತಲಗ್ನಘನಾಳಿ ಪಾೞಿ ಪೋ ।
ಗಲೆ ಪೊಱಮಟ್ಟ ಪಾಪಮೆನಿಸಿತ್ತು ಮಲಂ ಮಲಧಾರಿದೇವನಾ ||೮೭||

†ವ|| ಅಂತು ತನ್ನ ಪುಣ್ಯಮೆ ಬರ್ಪಂತೆ ಬರ್ಪ ಪರಮರ್ಷಿಯುರಂ ಕಂಡೆೞ್ತರ್ಪ ನಿಧಾನಮುಂ ಕಂಡಂತೆ ಕೃತಾರ್ಥೆಯಾಗಿ,

---

ಪಾ—1. ಗ, ಯೆಂಬರ. 2. ಗ, ಕಾಲ್ಗಂ. 3. ಗ, ರ್ಪರಲಿಂ. 4. ಗ, ಕಾಡಿದೆಸೆ. 5. ಗ, ಮಳಕ.

†ನಡೆಮುಡಿ ಗಂಧವಕ್ಷತೆ ಫಲಾವಳಿ ಪೂವಿನ ಮಾಲೆ ಮುತ್ತು ಕ |
ನ್ನಡಿ ಕಳಸಂ ವಿಲಾಸಿನಿಯರರ್ಚನೆ ಮಂಗಳಗೀತ ಭೇರಿ ಬೆ ||
ಳ್ಗೊಡೆ ಗುಡಿ ತೋರಣಂ ತೊಡಿಗೆ ಸೀಗುರಿ ಚಾಮರಮೆಂಬಿವೊಪ್ಪಮಂ |
ಕುಡೆ ಜಿನದತ್ತೆಯೇಂ ನಡೆದಳೋ ನಿಲಿಸಲ್ ಮಲಧಾರಿದೇವನಂ ||೪೮||

ಮಱೆದುಮದೊರ್ಮೆ ಲೌಕಿಕದ ವಾರ್ತೆಯನಾಡದ ಕೆತ್ತ ಬಾಗಿಲಂ |
ತೆಱೆಯದ ಭಾನುವಸ್ತಮಿತನಾದೊಡೆ ಪೋಗದೆ ಮೆಯ್ಯನೊರ್ಮೆಯುಂ ||
ತುಱಿಸದೆ ಕುಕ್ಕುಟಾಸನಕೆ ಸೋಲದ ಗಂಡವಿಮುಕ್ತವೃತ್ತಿಯುಂ |
ಮೆಱೆಯದ ಘೋರದುರ್ಧರತಪಶ್ಚರಣಂ ಮಲಧಾರಿದೇವನಾ† ||೪೯||

ಮುನಿಪಂ ಚರ್ಯೆಗೆ ಪೋಗುತಿರ್ಪ ಪದದೊಳ್ಮೆಯ್ಯಲ್ಲಿ [1]ಪತ್ತಿರ್ದ[1] ಪು|
ತ್ತಿನ [2]ಪೋದಿಂ[2] ಪೊಱಮಟ್ಟು ಪೋದ ಮಧುಪಂ ತನ್ನಿಂದೆ ತಾನಾಗಿ ಬ ||
ರ್ಪಿನಮೇೞೆಂಟು ದಿನಂಬರಂ ಕರುಣದಿಂ ಕೆಯ್ಯಿಕ್ಕಿ ಕೊಂಡಿ[3]ರ್ದ[3] ಯೋ|
ಗನಿಯೋಗಂ ಮಲಧಾರಿದೇವಮುನಿಸಂಗಕ್ಕಂ ಪೆಱರ್ಗಕ್ಕುಮೇ ||೫೦||

ವ|| ಎಂದೋದುವ ಮಂಗಳಪಾಠಕರ್ಗೆ ಮಂಗಳಭೂಷಣಂಗಳಂ ಮುಚ್ಚುಗೊಟ್ಟು ತಚ್ಚರಣಕಮಲಂಗಳಂ ವಿಮಲವಿಲೋಚನಮರೀಚಿಚ್ಛಟಾ ಚಂದನಚರ್ಚೆಗಳನರ್ಚಿಸುತ್ತುಮಿದಿರ್ವಂದು,

ಅಱಿಯದೆ ಗೆಯ್ದನೆನ್ನನಿಯನಾತನ ಮಾಡಿದ ದುರ್ವಿನೀತಿಯುಂ |
ಮಱೆಮೆನಗಟ್ಟುಱಿಂ ಪುರುಷಭೈಕ್ಷಮನಿಕ್ಕು ದಯಾಪರತ್ವಮಂ ||
ಮೆಱೆ ಮಱುಮಾತು ಬೇಡ ಗಡಮೆಂದು ಮನೋಜನ ಕಾಂತೆ ಬೆಚ್ಚಿ ಬಂ|
ದೆಱಗುವ ಪಾಂಗಿನಿಂದೆಱಗಿದಳ್ ಮಲಧಾರಿಯ ಪಾದಪದ್ಮದೊಳ್ ||೫೧||

ವ|| ಅಂತು ನಿಧಾನಕ್ಕೆಱಗುವ ದೀಪವರ್ತಿಯಂತೆಱಗಿ ತುಱುಗಿದರ್ಚನೆಗಳಿಂದರ್ಚಿಸಿ ಗುರುಭಕ್ತಿಪೂರ್ವಕಂ ಬಂದಿಸಿ ನಿರ್ಮಲಮಪ್ಪ ನಿಮ್ಮಡಿಗಳಡಿಗಳೆಂಬರುಣಾಂಬುಜಗಳೆನ್ನ ಸದನಸರೋವರದೊಳೊಂದು ಸಿರಿಯುಂ ನಿಲಿಸಲ್ವೇೞ್ಕುಮೆಂದು ದರಹಸಿತವದನಾರವಿಂದೆಯಾಗಿ,

ನಿಲಿಸುವೊಡೆ ನಿನ್ನ ಪುರುಷಂ |
ನಿಲಿಸುಗೆ ಮೇಣ್ನಿನ್ನ ಪುತ್ರರುಳ್ಳೊಡವರ್ ಮೇಣ್ ||

---

ಪಾ—†. ೪೭ ಗದ್ಯ, ೪೮, ೪೯ ಪದ್ಯಗಳು ಗ. ಪ್ರತಿಯಲ್ಲಿಲ್ಲ.
1. ಗ, ಪುತ್ತಿರ್ದ. 2. ಗ, ಪೋರಿಂ. 3. ಕ, ದುರ್ದ.

ಸಿಲಿಸುಗೆ ಪೆಂಡಿರ ಕೆಯ್ಯೊಳ್ |
ಸಿಲಲಱಿವರೆ ಪೇೞಿಮಬ್ಬ ಗಂಡವಿಮುಕ್ತರ್ ||೯೨||

ವ|| ಎಂದು ಪರಮರ್ಷಿಯರ್ ಪರಸಿ ಪೋಪುದುಮಾ ಮಹಾಭಾಗ್ಯೆಗೆ ಭೋಗಾಂತರಾಯಂ ಮಾಡಿದ ನೋವುಂ ಮಕ್ಕಳ್ವಡೆಯದ ನೋವುಂ ಅೞಲನೊದವಿಸೆ ಮನಮಿಕ್ಕಿ ಮನ್ನಮಿಕ್ಕಿ ಮುಗುಳ್ದ ಬರ್ಪಗಳ್-ವೊಗಂಮುರಿದು, ಪೊಲೆಯುಡಲಡ್ಡಸಾರ್ಚಿದ ಪುಲ್ಲೆಯಿರ್ದಂತೆ, ಪರಿಚಯಕ್ಕೆ ಪರಿತಂದು ಕಡೆವಾಯ ಪಾಲಂ ತೊಡೆಯೊಳ್ ತನೆಗಾಲಿಸ್ಪುತಿವ, ಕೆಣಕಿಸುವ ಕೊಣಸುಗಳಂ ಪಿಡಿದು ಮುದ್ದಾಡಿಸುತ್ತುಂ, ತಾಯ ಬಾಯ ಕುತುಕಂ ಕೊಂಡು ನೇವುರದನುಱಕ್ಕೆ [1]ಮರಳ್ದು[1] ಮರಾಳಬಾಳಕಂಗಳ ವೊಗಪೊಳ್ ಮುಗುಳ್ನಗೆವಾಲಂ ಚೆಲ್ಲಿ ಚೆಲ್ಲ ವಾಡುತ್ತುಂ, ಸವಿಲ್ವಾಣತಿಯ ಬೆನ್ನನೇಱಿ ಮಂಡೆಯ ಚಂಡಿಕೆಯಂ ಕಱಿ ಸೆಳೆವ ಸೋಗೆಯ ಮಱಿಯ ಮುದ್ದುತನವುಂ ಮುದ್ದುಗುಣಂಗಳ ಬೆಳಗೆಂಬೆಳವಿಂಚಿನ ಗೊಂಚಲಿಂ ಮುಂಪಾಡುತ್ತುಂ, [2]ಮುನಿಯಾಡಿದ[2] ಮಾತಿಂ ಪೊಳೆತುಪೆಸಿಸ ಪುತ್ರಪದೋಪಳದಿಂ ಸಮಸಿಸಿದುದ್ದೀಪನಭಾರವೆಂಬಮರ್ದಿನ ಮಱಿಯಿಂ ಮಡಲ್ತು ನನೆಕೊನೆವೋಗೆ ರಾಜಾಂಗಣದ ಕೆಲದ ಕುಲಚೈತ್ಯಾಲಯಮಂ ಬಳಸಿದ ಬಸದೊಳಗಣ ಮಲ್ಲಿಕಾಮಂಡಪದ ಮುಂದಣ [3]ತಮಂಗದ[3] ಶೋವೆಯ ಮುತ್ತಿನ ಮತ್ತವಾರಣದೊಳ್ ಕುಳ್ಳಿರ್ದು ಕಳಾಧರೆಯೆಂಬ ಕೆಳದಿಗಿಂತೆಂದಳ್ :—

ಇವೆ ಬಾಯ್ದಱಿ[4]ಯಿಂ ಮುತ್ತುಂ |
ಪವಳಮುಮೀಯಸಿಯ ನುಡಿಯೆ ಸುರಿದಪುವೆಂಬಂ ||
ತೆವ್ರೊಲಬಳೆ ನುಡಿಯೆ ಪಲ್ಗಳ |
ಚವಿ[5]ಯಂ[5] ತುಟಿದಳಿರ [6]ಕೆಂಪದೇಂ[6] ಕೆದಱಿದುದೋ ||೯೩||

ಬಡನೆಯ ಚಕ್ರವಾಕಿ ಪೊಸವಾಣತಿ ಕೋಗಿಲೆಯಿಂಱಲಿಂದು ಕೇ |
ಳ್ಗಡ ಗಿಳಿವೆಣ್ಗೆ ಪೂತ್ತಿಸೊಳಗೆಯ್ದ ನವಿಲ್ ಮನೆದೀವಿ ಮಕ್ಕಳಂ |
ಪಡೆದುದು ನೋಡ ಶಾರಿಕೆಯ ಚೊಚ್ಚಲ ಬಾಲಕವೋದಿದಪ್ಪುದೀ |
ನಡೆದುದೆ ತಾಯ ಬೆನ್ನೊಳೆ ತಳರ್ನಡೆಯಿಂ ಕಳಹಂಸಪೋತಕಂ ||೯೪||

---

ಪಾ—1. ಕ, ಮರಳ್ವ. 2. ಕ, ಮುಗಿಯುದ. 3. ಗ, ತದಂಗದ.
4. ಗ, ಯಿಂ. 5. ಗ, ಯುಂ. 6. ಗ, ಕೆಂಪುಮೇಂ.

ಎನ್ನೋರಗೆಯಂಗನೆಯರ್ ।
ಕನ್ನಡಿಯುಂ ನೋಡುವಂದದಿಂ ನೋಡಿದಪರ್ ॥
ಪೊನ್ನ ಸಸಿಯಂತೆ ಮಿಸುಗುವ ।
ರನ್ನದ ಮೊಳೆಯಂತೆ ತೊಳಪ ಮಕ್ಕಳ ಮೊಗಮಂ ॥೯೫॥

ಮರ್ವಿನ ಭಾಗ್ಯದಿಂ ಹಿಮಕರಾಭ್ಯುದಯಂ ತಡವಾದ ಕೇಡಿನಾ ।
ಶಾರ್ವರಿ ಲೋಕಮಂ ಪೊರೆವ ಸಸ್ಯಸಮುದ್ಭವ[1]ದೊಳ್[1] ವಿಳಂಬವಾ ॥
ದುರ್ವರೆ ಮಿಕ್ಕ ಮೌಕ್ತಿಕಭವಂ ವ್ಯವಧಾನಮನಾಳ್ದ [2]ಶುಕ್ತಿಯು ।
ನ್ನೊರ್ವಳೆ[2] ಕಾಲದೊಳ್ ಫಲಕೆ ಬಾರದ ವಲ್ಲರಿಯಾದೆನೇಕೆಯೋ ॥೯೬॥

ಪರಿಕಿಪೊಡಿದೆನ್ನ ತನುವ ।
ಲ್ಲರಿ ವಲ್ಲರಿಯಂತೆ ಪುಷ್ಪವತಿಯಾಗಿಯುಮೊ ॥
ಪ್ಪಿರೆ ಫಲಕೆ ಬಾರದಂತಿದು ।
ಸುರಗಿಯೊ ಸಂಪಗೆಯೊ ಮೊಲ್ಲೆಯೋ ಮಲ್ಲಿಗೆಯೋ ॥೯೭॥

ಕಾಳಗನಾಗನಂತೆ ಮುಡಿ ಬಂದುದು ತುಂಗಕಟೀತಟಂಬರಂ ।
ಬಾಳೆಗಳಂತೆ ಕಣ್ಪರಿದು ಬಂದುದು ಕೆನ್ನೆವರಂ ತೊಳಪ್ಪಿನಂ ॥
ತೋಳ ಮೊದಲ್ವರಂ ಮಸಕದಿಂ ಮೊಲೆ ಬಂದುವಿದೆನ್ನ ಬೆಂಬರಂ ।
ಬಾಳಕಗರ್ಭಮಪ್ಪ ಬಸಿಱಿಕೆಯೊ ಬಾರದು ವಾರಿಜಾನನೇ ॥೯೮॥

ಪನಿತ ಮೊಲೆವಾಲ ಬಂಬ ।
ಲ್ವನಿಗಳೊ ಸಸುನಗೆಯೊ ಮೊಳೆಗಳೋ ಪೊಳೆದಪ್ಪುವೆಂ ॥
ಬಿಸಮೊಗೆದ ಪಲ್ಲಿನೊಪ್ಪುವ ।
ತನಯನ ನಗೆಮೊಗಮನೆಂದು ಪೇೞ್ ಕಂಡಪೆನೋ ! ॥೯೯॥

ನಿಱಿಯ ಸೆಱಂಗನೋಸರಿಸಿ ಕೆಂದಳದಿಂದಮೆ ಕರ್ಚಿಕೊಂಡು ತೂ ।
ಪಿಱಿದೊಗೆದಲ್ಕುಱಿಂದೊಗೆದ ಪೆರ್ಮೊಲೆಯಂ ಬೆರಲಿಂದಮುಂಕಿ ಬಾ ॥
ಯ್ದೆಱಿಗಿದಿರೇಱೆ ಪಾಲ್ಸೊರೆದ ನುಣ್ಬರಲಂ ಮೊಲೆಗಿತ್ತು ಪೀರ್ದ ಕ ।
ಣ್ದೆಱೆಯುವ ಕಂದನೆಂದೆನಗೆ [3]ಕಣ್ದೆಱೆ[3]ಯಿಪ್ಪನೊ ಮಂದಹಾಸಮಂ ॥೧೦೦॥

ಬಱಿದಿರ್ದ ಮೊಲೆಯನೊಲ್ಲದೆ ।
ಸೆಱೆವಿಡಿ[5]ದೆ[5]ನ್ನೊಂದು ಮೊಲೆಯ[4]ಮೇಲೆ ನೆಱೆದ[4] ॥

---

ಪಾ—1. ಕ, ಮಂ. 2. ಗ, ಸೂಕ್ತಿಯಾನೊರ್ವಳೆ. 3. ಗ, ಕಣ್ಗೆಱೆ.
4. ಮೇಲ್ನೆರೆದಿರ್ದ. 5. ಗ, ದಿ.

ನ್ನೞಿಯನ ಕರಕಿಸಲಯಮಂ |
ಕಿಱುಮಗನೆಂ[1]ದೆತ್ತಿ[1] ನೂಂಕಿ ಮೊಲೆಯುಂಡಪನೋ ! ||೧೦೧||
ಜಕ್ಕುಲಿಸಿ ನೂಂಕಿ ನಗುತೆ ಕೆ |
ಲಕ್ಕಾರಮನುಣುತೆ ಮೊಲೆಯನುಣುತೆನ್ನ ಕೂಸು ||
ಗ್ರಕ್ಕೆ ತಳತಳಿಸಿ ತೊಳಗುವ |
ಮಕ್ಕಳ ಮಾಣಿಕಮದೆಂದು ತೊಡವಾದಪುದೋ ! ||೧೦೨||
ಇದಿರ್ವ*ರೆ ಗೆಜ್ಜೆಗಳುಲಿಗೊವ |
ವಿದ ಕಂಕಣದುಲಿ[2]ಗಳೆ[2]ಸೆಯೆ ಬರ್ಪಾತ್ಮಜನಂ ||
ಮವಧಿಸನೆನ್ನಂ ತಕ್ಕೈ |
ಸಿದ ತೋಳಂ ತೆಗೆವನೆಂದು ತೞ್ಗೃಸುಗುನೋ ! ||೧೦೩||
ನಮಗೋದಲಿಟ್ಟ ದಿವಸಮೆ |
ಕುಮರಂ ತೋರ್ಪಂತೆ ತನ್ನ ಮತಿಯಂ ಸಿದ್ಧಂ ||
ನಮ ಸಿದ್ಧಂನಮ ಸಿದ್ಧಂ |
ನಮ ಎಂದೆಂದೆನ್ನ ಮುಂದೆ ಬರೆದೋದುಗುಮೋ ! ||೧೦೪||
ಪೊಲೆವೆಣ್ಣೆ ನಿಪೆನ[3]ಗೆಂದುಂ[3] |
ನಿಲಲೊಲ್ಲದೆ ತೊಲಗಿ ಪೋಪ ಗಂಡವಿಮುಕ್ತರ್ ||
ಮಲಧಾರಿಸ್ವಾಮಿಗಳಂ |
ನಿಲಿಸುವ ಸತ್ಪುತ್ರನೆನಗದೆಂದಾಪನೋ ! ||೧೦೫||

ವ|| ಗರ್ಭದ ಬಯಕೆಯಂತಿರ್ಕೆ : ಗರ್ಭವನೆ ಬಯಸುವಂತಾದುದೆಂದ ಜಿನದತ್ತೆಗೆ ಕಳಾಧರೆಯಿಂತೆಂದಳ್ :—

ನಂದನರೆನ್ನಯ [4]ಪರ[4]ಯದ |
ಸೌಂದರಿಯಗರ್ದರಾಗರೆನಗೆನ್ನದಿರಿ ||
ನ್ನೊಂದಿರುಳೊಳ್ ತಡೆದುದಯಿಪ |
ನೊಂದಿರುಳೊಳ್ ತಡೆಯದುದಯಿಸಂ ತುಹಿನಕರಂ ||೧೦೬||

ವ|| ಇದನಾಚಾರ್ಯರಂ ಬೆಸಗೊಳ್ವಂ, ಬಿಜಯಂಗೆಯ್ಯೆಮೆನೆ ಬಸದಿಗೆ

---

ಪಾ—1. ಕ, ದಬ್ದಿ. 2. ಗ, ಗಳ್ದಿ. 3. ಕ, ಗೊಂದುಂ.
4. ಗ, ಪರಿ.

ಪೋಗಿ ದೇವರುಮನಾಚಾರ್ಯರುಮಂ ಬಂದಿಸಿ ಬೞಿಯಂ ನಿಮಿತ್ತಜ್ಞೋತ್ತಿಗಳ್ಗೆ ಕೆಯ್ಗಳಂ ಮುಗಿದು—

ಎಮ್ಮ ಕುಲಕ್ಕೆ ವೀರವೃಜಿನಂ ಜಿನರಾಜನೆ ದೈವಮಾಗಿಯುಂ |
ನಿಮ್ಮಡಿಯನ್ನರುಂ ಗುರುಗಳಾಗಿಯುಮುತ್ತಮಪಾತ್ರದಾನದೊಳ್ ||
ಸಮ್ಮದಶೀಲನಪ್ಪ ಜಿನಶಾಸನದೀಪಕನಪ್ಪ ಲಕ್ಷ್ಮಿಯೊಳ್ |
ಸಮ್ಮತನಪ್ಪ ಪುತ್ರನೆನಗಾಗದ ಕಾರಣಮೇಂ ಮುನೀಶ್ವರಾ ||೧೦೭||

ವ|| ಎಂದ ಜಿನದತ್ತಂಗೆ ಮುಗುಳ್ನಗೆನಗುತ್ತುಮವರಿಂತೆಂದರ್ :—

ತಪದಿಂ ಗುಣದಿಂ ಪುಣ್ಯಮ |
ನುಪಾರ್ಜಿಪರ್ ಪಲಬರಾದರವರ್ಗೆಂದೀಭೂ* ||
ಮಿಪದಿವಿಜಭವನಮವರ |
ಲ್ಲಿ ಪುಟ್ಟಿದಿನ್ನೆಲ್ಲಿ ಪುಟ್ಟುಗುಂ ಪುತ್ರವತೀ ||೧೦೮||

ಇನಿತೇಕೆ ನಿಮ್ಮ ಮಱುಕಂ |
ತನಯಂ ನಿನಗಾಗಲೆಂದು ತಪಮಂ ಮಾೞ್ಪಾ ||
ತನ ಮಱುಕಮೆ ಸಾಲದೆ ಪೇೞ |
ಇನನಂ ಪೂರ್ವಾಶೆ ಪಡೆಯಲೇಂ ಮಱುಗುಗುಮೇ ||೧೦೯||

ವ|| ಇದನೀಗ[1]ಳಂತೆ[1] ನಿಸ್ಸಂಸನರುಹದ್ದಾಸ[2]ನುಂ[2] ಬೆಸಗೊಂಡೊಡೆ ಪೇೞಿದ್ವು, ಪೋಗಿ ಬೆಸಗೊಳ್ಳೆಂಬುದುಂ | ಮಹಾಪ್ರಸಾದಮೆಂದು ಪೊಡೆಮಟ್ಟು ಪೋಗುತ್ತುಮೆ ಕಳಾಧರೆಯುಂ ದೇವನನೊಡಗೊಂಡು ಬಾ ಎಂದು ಕಳಿಪಿ, ತಾನಂತವುರಮಂ ಪೊಕ್ಕು. ವಿಳಾಸನಿಳಯದೊಳಗಣ ಮಣಿಮಂಚದ ಕೆಲದ ಕಾಂಚನವಿಷ್ಟರದೊಳ್ ಪರಿವಿಷ್ಟೆಯಾಗಿರ್ದಳನ್ನೆಗಂ :

ಪ್ರಿಯನ ಬರ[3]ವುಂತೆ[3] ಚಿತ್ತ |
ಪ್ರಿಯನಾತನೆ ಬಂದಪಂ ಮನಸ್ತಾಪಮನತಿ ||
ಶಯದಿಂ ಬಂದಾಱಿಪವೊಲ್ |
ನಯವೇಱಿ ಬೆಮ[4]ರ್ತ[4]ಮೊಯ್ಗ ದಕ್ಷಿಣಪವನಂ ||೧೧೦||

ವ|| ಎಂಬಿನಮಿನಿಯಳ ಮೊಗನುತ್ತಲೆ ಕಣ್ಣಾಗಿ ಬರುತ್ತುಮರಸಂ ತನ್ನೊಳಂತೆಂದಂ :—

ಪಾ—1. ಗ, ಳಂತೆ. 2. ಗ, ನಂ. 3. ಗ, ವಂತೆ. 4. ಗ, ತುರ್.

ಕಿಱಿದನುರಾಗಮುಂ ಕಿಱಿದು ದುಮ್ಮಾನಮುಂ ಕಿಱಿದೊಂದು ಹಾಸಮುಂ |
ಕಿಱಿಯುೞಿಯುೞಿಕ್ಕೆಯುಂ ಕಿಱಿದು ಸಂತಸಮುಂ ಕಿಱಿದೊಂದು ಖೇದಮುಂ ||
ನೆಱೆವಿಡಿದೆನ್ನವಲ್ಲಭೆಯ ಮುದ್ದುಮೊಗಂ ವ್ಯಭಿಚಾರವಿಭ್ರಮಂ |
ಮೆಱೆದಪುದೋ ದಿನಾಗಮದ ರಾತ್ರಿವಿರಾಮದ ಪದ್ಮದಂದದಿಂ ||೧೧೧||

ವ|| ಎಂದು ಬಗೆಯುತ್ತುಂ ಬಂದರಸಂ ಸಿರಿಮಂಚಮನಳಂಕರಿಸಿ ಕುಳ್ಳಿರ್ದು, ಕಳಾಧರೆ ಮಣಿಮಯಮಾದ ಪೀಠಂ ಬೆಟ್ಟಿತ್ತುಂಬಂತಿರಲೆ ನೂಂಕಿ ಮೆಲ್ಲಿದುವಪ್ಪ ತನ್ನ ನುಣ್ದೊಡೆಗಳನರಸನ ಪಾದಪಲ್ಲವಕ್ಕೆ ಸಾರ್ಚೆ ಪಾಣಿಪಲ್ಲವಂಗಳಿಂ ಪಿಡಿಕೈಸುತ್ತುಮಿರ್ಪುದುಮರಸನಿಂತೆಂದಂ :—

ಅರಸನ ನುಡಿ ಮುನ್ನಮೆ ಕ |
ರ್ಣರಸಾಯನಮದಱ ಮೇಲೆ ಸುತಲಾಭಕಥಾಂ ||
ತ[1]ರಮೆನೆ ಸರಸಿಜಾ[1]ಸ್ಯೆಗೆ |
ಮರುಗಂ ಪೂತತ್ತು ಕರ್ಪೂರ ಪಣ್ತುದು ಪೇೞತೇಂ! ||೧೧೨||

ಅರಸಿಯ ವಕ್ತ್ರಪದ್ಮಮಿಸಿತೇಕೆಯೊ ಮಾಗಿಯ ಪದ್ಮದಂದದಿಂ |
ಕೊರಗಿದುದಿಂತಿದೇಕೆ ಮಧುವಂ ನೆಱೆ ಕಾಱಿದ ನೈದಿಲಂದದಿಂ ||
ನೆರೆದುವು ನೀಳ್ದ ಕಣ್ಬೊ*ಣರ್ಗಳೊಲ್ಲದೆ ತಂಬುಲಮಂ ಪ್ರವಾಳದಂ |
ತಿರೆ ಪೊಳೆ[2]ದಪ್ಪುದೊ[2]ಪ್ಪುವರುಣಾಧರಮೇಕೆಯೊ ಪೇೞ ಕಳಾಧರೇ ||

ಬಾಡಿದ ದೇವಿಯ ತನುಲತೆ |
ಬಾಡಿಸಿದುದು ನೋಡಿ ಬಾಡುಮೆನ್ನಯ ಮೊಗಮಂ ||
ಬಾಡಿ ಬಸವೞಿದು ಸಸಿಯುಂ |
ಬಾಡಿಸಿದುತ್ಪಳನಿಯುಂತೆ ಮುನ್ನೇಸಱನೊಳ್ ||೧೧೩||

ನೀರ್ವರಡಸಿ ಪಿಡಿದ ಕರಿ[3]ಯೊಳ |
ನೀರ್ಪೂವುಂ[3] ಚುಂಬಿಸುತ್ತೆ ನಾರಿಯ ನಾಣಿಂ ||
ಸಾರ್ವ ಮೊಗಂ ಕಟ್ಟೆಲೆಯುಂ |
ಪೀರ್ವಮೃತಕರಂಬೊಲೊಪ್ಪನಂ ನುಡಿಯಲೊಡಂ ||೧೧೪||

ವ|| ಎಂದರಸಂಗೆ ಕಳಾಧರೆಯಿಂತೆಂದಳ್ :—

ಪಾ— 1. ಗ, ರಸಮನೆಸರಸಿಜಾ. 2. ಕ, ದೊಪ್ಪುವೊ. 3. ಕ, ಯೊಳೆನೀರ್ಪೂವುಂ.

ಮಲಧಾರಿಸ್ವಾಮಿಗಳಂ ।
ನಿಲಿಸಲ್ಪೋದಲ್ಲಿ ದೇವಿಗವರಿಂತೆಂದರ್ ॥
ನಿಲಿಸುಗೆ ನಿನ್ನಯ ಪುರುಷಂ ।
ನಿಲಿಸುಗೆ ಮೋಕ್ಷ್ ನಿನಗೆ ಪುತ್ರರುಳ್ಳೊಡೆ ಸಾಲ್ವಂ ॥೧೧೬॥

ವ॥ ಎಂದಾಮುನಿವೃಂದಾರಕನ ವಚನದಿನಾದ ಪುತ್ರದೋಹಳದಾಹಂ ದೇಹಮುಂ ಕರಗಿಸೆ ಕರಮುಬಿಲ್ದುಬುತ್ತುಂ ಕೆರೆಯುತ್ತುಮುಣ್ಣದೆ ಕುಡಿಯದಾರ್ ಸಂತೈಸಿದೊಡಂ ಸಂತವಿರವಿರ್ದಪಳದೇಕೆನೆ—

ಮುನಿಭಾಸ್ಕರನಿಂದಮೆ ಬ ।
ರ್ದಿನಿಯುಮನಸೂರ್ಯಕಾಂತದೊಳ್ ಪುಟ್ಟಿದ ನಂ ॥
ದನದೋಹಳದಹನಂ ದೇ ।
ವನ ವಾಕ್ಚಂದ್ರಿಕೆಯಿನಲ್ಲದೇನಾಱುಗುಮೋ ॥೧೧೭॥

ವ॥ ಎಂಬುದುಮರಸನರಸಿಗಿಂತೆಂದಂ :—

ಎನ್ನ ವಿಷಾದವಲ್ಲದೆ ವಿಚಾರಿಸೆ ನಿನ್ನ ವಿಷಾದವಲ್ಲದೇ ।
ಕೆನ್ನತಿಭಿನ್ನವಾಯ್ತು ಮಹಿಭಾರದಿನೆನ್ನ ಭುಜಂ ತನೂಜನೋ ॥
ರ್ವನ್ನಿನಗಾದೊಡಾಪ್ಪೊಱೆಯನೆತ್ತಿ ಸುತಾದ್ರಿಗೆ ಬರ್ದನೆಂದು ತೊ ।
ಳನ್ನಿಮಿರ್ದಪ್ಪೆನುಬ್ಬೆಗಮಿದೆನ್ನದೊ ನಿನ್ನದೊ ಪೇಳ್ ಮನಃಪ್ರಿಯೇ ॥೧೧೮॥

ಅರ್ಣವವೃತಭೂಭರಮುಂ ।
ನಿರ್ಣಯಿಸುವ ಪುತ್ರನಲ್ಲಿ ಗತಿವಡೆಯದೆ ಪೋ ॥
ಪರ್ ನರಪ "ರಪುತ್ರಸ್ಯ ಗ ।
ತಿರ್ನಾಸ್ತಿ" ಯೆನಿಪ್ಪ ವಾಕ್ಯವಾ[1]ಯ್ತು[1]ದುದಱಿಂ ॥೧೧೯॥

ವ॥ ಸದ್ಧರ್ಮಲಾಭಮುಂ ಸತ್ಪುತ್ರಲಾಭಮುಮುಭಯಭವಹಿತಕರಮನೆರಡುಮಂ ಪಡೆಯದಾನೆರಡಱಿಂ ಕೆಟ್ಟೆನೆಂದೆರಡಿಲ್ಲದಾನುಮಿದನೆ ಚಿಂತಿಸಿ ಸೊಡರಿರ್ದಂತೆ ಕಟ್ಟಿಲೆಯುಂ ತೊಡುವುದು ಮೂರ್ಖಂಗವೊಳಗಾಗಿಲೆಂದು [2]ಪೋಗಿ[2] ನಮ್ಮ ಕುಲಗುರುಗಳಪ್ಪ ನಿಮಿತ್ಯಜ್ಯೋತಿಗಳ ಚರಣನಖಜ್ಯೋತಿಗಳ್ಗೆ ಕಟ್ಟಿಲೆಯುಂ ಕಳೆಯೆಂದೆಱಗುವಂತೆಱಗಿ ಬೆಸಸಿಮೆಂದು ಬೆಸಗೊಂಡೊಡೆ ದತ್ತಾವಧಾನರಾಗಿ ನವೋಸ್ತುಗಳ್ ನಿಮಿತ್ತಮುಂ [3]ನಿಟ್ಟಯಿಸಿ[3] ನೋಡಿ,

ಪಾ—1. ಕ, ಯ್ತೋ. 2. ಕ, ಪೇಲು. 3. ಗ, ನಿಶ್ಚಯಿಸಿ.

ಹರಿವಂಶೋದಿತವಿಕ್ರಮಂ ವಿವಿಧವಿದ್ಯಾತೀರ್ಥಹಂಸಂ ಸುಧಾ |
ಕರಶೀಲಂ ವಸುದೇವಕೇಳನಿಳಯಂ ನಾನಾನಯೋಪಾಯಭಾ ||
ಸುರಭಾಗ್ಯೋದಯಪದ್ಮನಾಭನಿಭರಾವರಾಕಾರವಂತ್ರಂ [1]ನಿಜಾ |
ಚರಿತೋಚ್ಚಾಲಿತ[1] ನೇಮಿನಾಥಚರಿತಂ ಸೌಜನ್ಯಜನ್ಮವ್ರತಂ ||೧೨೦||

|| ಗದ್ಯ ||

ಇದು ಮೃದುಪದಬಂಧುರ ಸರಸ್ವತೀಸೌಭಾಗ್ಯವ್ಯಂಗ್ಯಭಂಗಿನಿಧಾನ ದೀಪವರ್ತಿ
ಚತುರ್ಭಾಷಾ ಕವಿಚಕ್ರವರ್ತಿ ನೇ ಮಿ ಚಂ ದ್ರ ಕೃತಮುಂ,
ಶ್ರೀಮತ್ಪ್ರತಾಪಚಕ್ರವರ್ತಿ ವೀ ರ ಬ ಲ್ಲಾ ಳ ದೇ ವ ಪ್ರಸಾದಾಸಾದಿತ
ಮಹಾಪ್ರಧಾನ ಸೆಜ್ಜೆವಳ್ಳ ಪ ದ್ಮ ನಾ ಭ ದೇ ವ ಕಾರಿತಮುಪ್ಪ

## ನೇಮಿನಾಥ ಪುರಾಣದೊಳ್

ಪ್ರ ಥ ಮಾ ಶ್ವಾ ಸಂ

## ಎರಡನೆಯ ಆಶ್ವಾಸಂ

ಶ್ರೀರಮಣೀಪ್ರಿಯ[2]ನತಿ[2]ಗಂ |
ಧೀರಂ ಭುವನೈಕದಾನಿ ಧರೋದಾತ್ತಂ ||
ಸಾರಸ್ವತಪಾರಂ ಶ್ರ್ಯಂ |
ಗಾರಾಮೃತಸೇತು ಸುಕವಿಕಂಠಾಭರಣಂ ||೧||

ವಿನಯನಿಧಿ ಭಾಗ್ಯವಂತಂ |
ಜಿನಶಾಸನದೀಪಕಂ ಪ್ರತಾಪಿ ಸುವಿಜ್ಞಾ ||
ತನಯನುದಾತ್ತಂ ತಡೆಯದೆ |
ನಿನಗಾದಪನೆಂದು ಬೆಸಸಿದರ್ವನಜಮುಖೀ ||೨||

ಕರತಳದಮುತ್ತನಱಿವಂ |
ತಿರೆ ಮುನಿಪಂ ಚಿಹ್ನಲಕ್ಷಣಾಂಗದ ಕಲೆ ಸು ||
ಸ್ವರಭಾವಮುವ್ಯಂಜನಮಂ |
ತರಿಕ್ಷಮೆಂಬೀನಿಮಿತ್ತಮೆಂಟುಮನಱಿವರ್ ||೩||

ಪಾ—1. ಗ, ನಿಜೋಚ್ಚರಿತೋಚ್ಚಾರಿತ. 2, ಕ, ರತಿ.

ವ॥ ಮತ್ತಮದರ್ಕೊಂದು ಕೂಸವುಂ ಪೇೞ್ದರ್ :—ನಿನ್ನ ಮೊಲೆಗೆಲದೊಳ್ ಚೆನ್ನದಗಲದ ಪೊನ್ನ ಬಣ್ಣದ ಮುತ್ತಿನ ಮತ್ತೆನಿಸದೆ ಮೂಡಿದುದು ಗಡ ತೋಱಿಂದು ನೋಡುವಾಗಳ್

ಉತ್ತುಂಗಕುಚಾದ್ರಿಯು ಪೊ |
ಮ್ಮತ್ತಿಯ ಮೊಳೆ ಪೊಳೆತ ಜಠರಗಿಸಂತಿರೆ ಕಾಣ್ ॥
ಪೆತ್ತ ಸತಿಗಾಯ್ತು ಸುತನಂ |
ಪೆತ್ತಂತಪ್ಪ್ರಮದ ಸಂತಸಂ ತತ್‌ಕ್ಷಣದೊಳ್ ॥೩॥

ಪಡೆಯಲರಿಪೆಸಿಸುಪಜನಂ |
ಪಡೆದಂ ಜಿನನೆಂಬ ಭವ್ಯಚಿಂತಾಮಣಿಯಂ ॥
ಪಡೆದಂ [1] ಮಗನೇನಜನಂ |
ಪಡೆಯದುದಿನ್ನೊಂದು [1] ಮುಂಟೆ ನಮಗೆ ಮೃಗಾಕ್ಷೀ ॥೪॥

ವ॥ ನೆಲನಂ ಪೊಯ್ದು ಕೆಯ್‌ತಪ್ಪುಗುಮಾಚಾರ್ಯರ ವಚನಂ ತಪ್ಪದು ಧರ್ಮಪರೆಯಾಗಿರೆಂದರಸನಪ್ಪಾಶ್ಮಿಕಮನೆತ್ತಿಕೊಂಡಿತ್ತು ಮಹೇಂದ್ರನುಂ ಮಾಡಲಾಱದ ಮಹಾಮಹಿಮೆಯಂ ಮಾಡುತ್ತುಮಿರ್ದನತ್ತಲ್

ಗುಡಿಯಿಂ ತೋರಣದಿಂ ಕ |
ನ್ನಡಿಯಿಂ ಕಳಶದಿನನೇಕಚಾಮರದಿಂ ಬೆ ॥
ಳ್ಗೊಡೆಯಿಂ ಮಡಿಯಿಂ ಮುತ್ತಿನ |
ಕಡೆಯಿಂದರ್ಚಿಸಿದಳರಸಿ ಚಂದ್ರಪ್ರಭನಂ ॥೬॥

ಮಳಯಜದಿಂ ಮಲ್ಲಿಗೆಯಿಂ |
ದೆಳಮುತ್ತಿಂ ಮಗಮಗಿಪ್ಪ ಕಪ್ಪುರದಿಂದು ॥
ತ್ಪಳಲೋಚನೆಯರ್ಚಿಸಿದಳ್ |
ತೊಳತೊಳತೊಳಗುತ್ತುಮಿರ್ಪ ಚಂದ್ರಪ್ರಭನಂ ॥೭॥

ಕಳಹಂಸೆಯು ಕರ್ಪೂರದ
ಮಳಯರುಹದ ಬೆಳ್ಪನಿಟ್ಟಪ ಜಿನರಾಜನ ಮೆ ॥
ಯ್ಯೊಳಗಿನ ಸುರಭಿಯ ಪಾಲಿಂ |
ಪುಳಕಿತತನು ಪುತ್ರಕಾಮ್ಯದಿಂದಂ ಮಿಂದಳ್ ॥೮॥

---

ಪಾ—1. ಕ, ಮಗನೆನಗಹನಂಪಡೆದುದಿನ್ನೊಂದು;...ದಿಂಬೊಂದು.

ವ|| ಬೞಿಯುಮಾಬಳವಿರೋಧಿಪೂಜಿತನ ಪದಪಯೋಜಂಗ[1]ಳ್ಗೆಱ[1]
ಪೆಱನೊಸಲನೆಱಗಿಸಿ

ಸಲಿಯಿಸು ಬಿನ್ನಪಮಂ ಮ |
ತ್ಕುಲಪಾಲಕ ಚಂದ್ರನಾಥ ನಿನ್ನ ಸುಧಾಸಿ ||
ರ್ಮಲಮೆನಿಸಿದ ದೇಹದ್ಯುತಿ |
ಮೊಲೆವಾಲಕ್ಕೆನ್ನ ಸುತಚಕೋರಂಗೆ ಜಿನಾ ||೯||

ವ|| ಅಂತು ಜಿನಪೂಜಾಮಹೋತ್ಸಾಹಂಗಳಂ ಪುತ್ರೋತ್ಸವನಿಮಿತ್ತಮಾ ಜಿನದತ್ತೆ ಮಾಡುತ್ತುಮಿರ್ಪಿನಮೊಂದುದಿವಸಂ

ಪಾಯ್ಸು ಕುಚಂಗಳಂ ಮಿಡಿದು ನೋಡಿ ಕಪುಂಕಱನೆತ್ತಿ ಕಂಪನಾ |
ರಯ್ವುದುಮೊತ್ತುತುಂ ಮೊಡವಿಯುಂ ಮೊಗಮುಂ ಮೃಗನೇತ್ರೆ ದರ್ಪಣ ||
ಕ್ಕಯ್ವುದುಮೆಲ್ಲವಂ ಕಳೆದು ಮಾಣಿಕಮುಂ ಕನಕಂಗಳಿಂದೆ ಕೈ |
ಗೆಯ್ವುದುಮೆಂದು ಕೆಯ್ಗೆ ಸೆಳೆಯುಂ ಸಖಿ ಕೊಟ್ಟಳದೇಂ ಪ್ರಗಲ್ಭೆಯೋ ||

ತೊಳಗುವ ಮೆಯ್ಗಳೊಳ್ ತಿಮಿರ್ದು* ಕುಂಕುಮದಿಂ [2]ತೆಗೆದುಟ್ಟಮುತ್ತಿನಿಂ[2] |
ದಳೆವಡೆ ತೊಟ್ಟು ಪೊಂದುಡಿಗೆ[3]ಯಿಂ[3] ಚಳಕೋಮಳಹಸ್ತಶಾಖೆಯೊಳ್ ||
ಸೆಳೆ ಸೆಳೆಗೊಂಬಿನಂತೆ ಪೊಳೆವೊಂದು ವಿಳಾಸದಿನಗ್ಗಳಂ ತಳ |
ರ್ತೆಳಲತೆಯಂತೆ ತೋಱುವರುಣಾಧರೆ ಪುಷ್ಪಿತೆಯುಪ್ಪುದೊಪ್ಪದೇ ||೧೧||

ಚಿಕುರಂ ಪ್ರಜ್ವಲಿಪಿಂದ್ರನೀಲನಿಕರಂ ಬಾಯ್ವಿದ್ರುಮಂ ಛಾಯೆ ಮಾ |
ರಕತಚ್ಛಾಯೆ ನಖಾಳಿ ವಜ್ರಮುಮಳಂ ದಂತೋತ್ಕರಂ ವ್ಯಕ್ತಮಾ ||
ಕ್ತಿಕಮಾಗಲ್ಕೆ ಪರಾರ್ಥ್ಯಮಾಗೆ ನೆಗೞ್ದ* ಪೇರ್ಮಾಣಿಕಂ ಮಾಣ ಮಾ |
ಣಿಕ[4]ಗೆಂಟೆಂ[4]ದೊಡೆಮಾಣ್ಡನಂದರಸನಾಸ್ತ್ರೀಮಾಯೆಯುಂಮೀರ್ವರಾರ್ ||

ಅಸಿಯುಸೆಳೆ ತಳದೊಳತಿರಂ |
ಜಿಸೆ ಪೂರ್ವಪ್ಪಳಸೆ ಪತ್ತೆಸಾರ್ವಮರಂ [5]ತ ||

---

ಪಾ—1. ಕ, ಳ್ಗೆಬ್ಬೇಱಿ. 2. ಕ, ದಮುದ್ದುಟ್ಟ ಮುಳ್ಳಿನಂ. 3. ಕ, ಯುಂ.
4. ಕ, ಗೆಟ್ಟಂ. 5. ಕ, ಕರ್ಚಿಸಿ.

ರ್ಜಿಸಿ[1] ಕಾಮನ ಪಡಿಯಱಿತಿರ್ಪೊ |
ಲೆಸೆದಳ್ ಪೊಸದೇಸೆಕಾರ್ತಿ ಪೊಸಕಿ[5]ಲ್ದ[5]ಳದೊಳ್ ||೧೩||

ವ|| ಅಂತು ರಜಸ್ವಲೆಯಾಗಿ ಚತುರ್ಥದಿನದೊಳ್ ಬಿಸಿಲಂ ಕಳೆದು ಬೆಳದಿಂಗಳಂ ತುಡುಕುವ ಗಗನಲಕ್ಷ್ಮಿಯಂತೆ ಕೆಂಪಿನ ಪಸದನಮಂ ಕಳೆದು ತಲೆನೀರ್ಮಿಂದು ಬೆಳ್ಪಸದನಂಗೆಯ್ದು

ನನೆಗಣೆಯಂ ಸ್ಮರಂ ಪಡೆದ [2]ಪೊನ್ಗೊಳ[2]ದಂತೆವೊಲಿರ್ದುದಚ್ಚ ಮಿಂ |
ಚಿನ ಸುಳಿಪಲ್ಗಳಚ್ಚ ಬಿಳಿದೆಂಬಿನಮುಟ್ಟ ದುಕೂಲಮಚ್ಚ ಗಂ ||
ಪಿನ ಸಿರಿಕಂಡದಂಪು ತೊಳಪಚ್ಚ ಬೆಳಂತಿಗೆಯೋಲೆಯಚ್ಚ ಮು |
ತ್ತಿನ ತೊಡವಚ್ಚ ಮಲ್ಲಿಗೆಯ ಸೋರ್ಮುಡಿ ಸೋಮಸಮಾನವಕ್ತ್ರೆಯಾ ||

ಸುದತಿಯ ದಿವ್ಯಗಂಧತನುಚಂದನಶಾಖೆಯೊಳಂಗಜಾಹಿಯಿ |
ಕ್ಕಿದ ಪೆರೆಯಂತಿರುಟ್ಟ ದುಗುಲಂ ಕುಚಕೋಕಯುಗಂಗಳತ್ತ ಗ ||
ರ್ಜಿದ ಬಿಸದಂತೆ ಹಾರಲತೆ ಕಣ್ಗೆ ಕರಂ ಸುಳಿಪಲ್ಲ ಪಙ್ತ್ತಿಯೊ |
ಪ್ಪಿದುದು ಸುಧಾಂಶುಬಿಂಬ[3]ಮೊ[3]ಳ್ಮುತ್ತನೆ ಮುಕ್ಕುಳಿಸಿರ್ದುದೆಂಬಿನಂ||೧೫||

ಮಿಗೆ ವಿರಹಿಕರಿಗಳಂ ಪೊ |
ಯ್ದುಗಿದಂಗಜನಸಿ[4]ಯೊಳಡರೆ[4] ಪತ್ತಿದ ಪೊಸಮು ||
ತ್ತುಗಳೆನೆ ಸೋರ್ಮುಡಿಯೊಳ್ ಮ |
ಲ್ಲಿಗೆಯ ಸರಂ ಕಣ್ಗೆ ವಂದುದಾಕಾಮಿನಿಯಾ ||೧೬||

ವ|| ಎಂಬಿನಂ ಕೈಗೆಯ್ದು ಕಾಂತನ ಸೂೞ್ಗೆವರೆ ಸಮರತಸಮನಂತರ ಸಮಯದೊಳ್

ಅತಿಶಯಸಮಾಧಿಪಾದಕ |
ಯತಿಜನಘನನಿನದ[5]ಮೊದವೆ[5] ಬಂದುದು ಚಿಂತಾ ||
ಗತಿಜಿನಹಂಸಂ ತನ್ನೃಪ |
ಸತಿಯಮಳಿನಗರ್ಭಮಾನಸಕ್ಕತಿಜವದಿಂ ||೧೭||

ವ|| ಆಪ್ರಸ್ತಾವದೊಳ್ ಕಾಮಕೇಳೀವಿನೋದದಿಂ ಶ್ರಮಂಬೆತ್ತು ಸುಖಸುಪ್ತೆಯಾಗಿ,

---

ಪಾ—1. ಗ, ಟ್ಟ. 2. ಕ, ಪೊಗೊರ್ಳ. ಗ, ಪೆಣ್ಗಳ. 3. ಗ. ದೆ.
4. ಕ, ದೊಳಡಸಿ. 5. ಕ. ಪೊಡನೆ.

ಭಾನುವನಿಂಗಡಲಂ ಮದ |
ದಾನೆಯುನದಟಲೆವದೊಂದು ಕೇಸರಿಯುಂ ಸಂ ||
ತಾನದ ಪೂವಿನ ಸರವಂ |
ಸ್ನಾನಂಗೆಯ್ಯುತ್ತುಮಿರ್ಪ ಸಿರಿಯುಂ ಕಂಡಳ್ ||೧೮||

ವ|| ಕಂಡು ತನ್ನ ನಿದ್ರೆಯೊಡನೆ [1]ಕಟ್ಟಲೆ ಪರೆಯುತ್ತುಂ ಕಣ್ಮಲರಲೊಡನೆ[1] ಕಮಲದಳವಲರೆ ತನ್ನ ಪಿಂಡುಗಂಕಣದೊಡನೆ ಕೋಳರ್ವಕ್ಕಿಗಳುಲಿಯೆ ತನ್ನ ಮನೋರಥದೊಡನೆ ರವಿರಥೋದಯವಾಗೆ ಮಂಗಳಗೇಯಸ್ತುತಿಯುಂ ತಾಗೆ ಸೆಜ್ಜೆಯನುಜ್ಜುಗದಿನೆರ್ದು ಶೃಂಗಾರಗೇಹದೊಳ್ ಶೃಂಗಾರಂಗೆಯ್ಯುತ್ತುಮಿರ್ದಳನ್ನೆಗಂ

|| ಹರಿಣಿ ||

ಎಡದ ಕರದೊಳ್ಗಂಧಂ ಪೂವಾಲೆ ಸಿರ್ಪಿನ ಸೇಸೆ ಪೊಂ |
ಬಲಗೆಯೊ[2]ಳೊಂದಂದಂ[2] ಚೆಲ್ವಾಗೆ ಗಂಧಹಳಂಗಳಂ ||
ಪಿಡಿದ ಕಳಸಂ ಕೆಯ್ಯೊಳ್ಮತ್ತೊಂದಱೊಳ್ಮಗೆ ಶೋಭೆಯುಂ |
ಪಡೆಯೆ ಪದಪಿಂದೊರ್ವಂ ಬಂದಂ ಪ್ರಗಲ್ಭಪುರೋಹಿತಂ ||೧೯||

ವ|| ಬಂದು ದೇವರ ಬರವಂ ಕಾಣ್ಬಂತೆ ತನ್ನ ಬರವಂ ಕಂಡಿದಿರೆರ್ದು ಕೆಯ್ಗಳಂ ಮುಗಿದ ರಾಜವಲ್ಲಭೆಯ ಮುಂದೆ ನಿಂದು

|| ಆಶೀರ್ವಾದ ಸಂಸ್ಕೃತ ||

ಲಕ್ಷ್ಮ್ಯಶ್ಚ ತವ ಪ್ರಥಮಪುಣ್ಯಫಲಂ ಪ್ರಸೂತಂ|
ಶೀತಾಂಶುಲಾಂಛನವತಾಂ ವಿತತಿರ್ನಖಾನಾಂ ||
ರುಗ್ಮಂಜರೀ ಚರಣಪಲ್ಲವಫುಲ್ಲಕಾನಾಂ |
ಶೋಭಾ[3] ಜನಿ[3] ಜೀವಪತೇಃ ಫಲಿವಶ್ಚ ನಿತ್ಯಂ ||

ವ|| ಎಂದೋದಿ ಗಂಧೋದಕಮುಮಂ ಸಿದ್ಧಶೇಷೆಯುಂ ಕುಡೆ ಕೊಂಡು ಕುಳ್ಳಿರಿಸಲ್ಕುಡಿಸಿ ತನ್ನ ಕಂಡ ಕನಸುಗಳನನುಕ್ರಮದಿಂ ಪೇೞೆ[3] ಕೇಳ್ದು

ಭಾನುವಿನಂತೆ ತೇಜದೊಡೆಯಂ ಕಡಲಂತೆ ಗಭೀರನಾನೆಯುಂ |
ತಾನತಲೋಕದಾಸಪತಿ ಕೇಸರಿಯಂತೆ ಪರಾಕ್ರಮಾರ್ಥಿ ಸಂ ||
ತಾನದ ಪೂವಿನಂತೆ ಲಲಿತಂ ಸಿರಿಯಂತೆ ಸಮಗ್ರಭಾಗ್ಯನು |
ತ್ತಾನಯಶೋತ್ತಮಂ ನಿನಗೆ ಪುಟ್ಟದಸಂ ಕುಲರತ್ನಭೂಷಣಂ ||೨೦||

---

ಪಾ—1. ಗ, ಪುಸ್ತಕದಲ್ಲಿಲ್ಲ. 2. ಗ, ಳೊಂದೊಂದಂ ; ಕ, ಳಂದೊಂದಂ.
3. ಕ, ಜನಂ......ಫಲಿನಸ್ಯ.

ವ‖ ಎಂದು ಸ್ವಪ್ನಫಲಮಂ ಪೇಳ್ದು ಪುರೋಹಿತನಂ ಮಣಿಕುಂಡಲಾದಿಗಳನರ್ಚಿಸಿ ಪಂಚಪರಮೇಶ್ವರರ ಪೂಜಾಪ್ರಭಾವತತ್ಪರೆಯಾಗಿರೆ ಕೆಲವಾನುಂ ದಿವಸದಿಂ

ಸೆಳೆನಡುವನುಡಿವ ಭರದಿಂ |
ಬಳೆವಂತಿರೆ ಬಳೆಯೆ ಮೊಲೆಗಳವಱಿಯೆ ಚಲದಿಂ ‖
ಬಳೆವಂತೆ ಬಳೆಯೆ ನಡುವು |
ಮ್ಮಳಿಸಿದವೊಲ್ ಕರ್ಗಿಕೊಂಡುವವಱ ಮೊಗಂಗಳ್ ‖೧೨‖

ನೆಗೆದ ಪಯೋಧರದ್ವಯದೊಳಾಕೆಯ ಗರ್ಭದ ರಾಜಪುತ್ರನಾ |
ರೊಗಿಸುವ ಪಾಲ್ಗಳಂ [1]ಮಡಗಿ[1] ಮುದ್ರಿಸಿದಂತೆ ವಿಧಾತ್ರನೊಯ್ಯನೊ ‖
ಯ್ಯಗೆ ಕುಚಚೂಚುಕಂಗಳೊಳೆ ಕಣ್ಗೊಳಂಗನೆಯೊಚ್ಚೆ ಕೊಳ್ವ ಕಾ |
ಡಿಗೆಯುದಿರ್ದಂತೆ ಕರ್ಪು [2]ಕವ[2]ದಿಂದಡಿಯಿಟ್ಟುದು ಭೃಂಗಭಾಸುರಂ‖೧೩‖

ವ‖ ಅಂತುಮಲ್ಲದೆ,

ಬಿದಿ ಪಚ್ಚೆಯ ಕಾವಿನ ಸೀ |
ಲದ ಕಳಸದ ಸವಡಿಗೊಡೆಯನಾವಸಿತೆಯ ಗ ‖
ರ್ಭದ ಬಾಳಂಗೆತ್ತಿದನೆನಿ |
ಸಿದುದು ಸರೋವಮಾಳಿ ಕುಚಯುಗಂ ಕೃಷ್ಣಮುಖಂ ‖೧೪‖

ಕಾಲ್ಪುರವೇಟ [3]ಪಾಲಮುಯಮುಂ [3]ಜಸ[3]ಮುಂ ಜಿನಮಜ್ಜನಂಗಳಂ |
ಮಾಳ್ಪ ಜಿನೇಂದ್ರಪೂಜೆಯನೆ ಮಾಳ್ಪ ಜಿನಾಲಯಸಂಕುಲಂಗಳಂ ‖
ಮಾಳ್ಪ ಜಿನಪ್ರತಿಷ್ಠೆಯನೆ ಮಾಳ್ಪ ಚತುರ್ವಿಧಮಪ್ಪ ದಾನಮಂ |
ಮಾಳ್ಪ ಬಯಂಕೆಯಾಯ್ತು ಜಿನದತ್ತೆಗೆ ಭವ್ಯನವೇರುಗರ್ಭದೊಳ್‖೧೫‖

ಜಿನತೀರ್ಥಾತಿಶಯಮುಮಂ |
ಜಿನಜನನೀಗರ್ಭದೋಹಳಾತಿಶಯಮುಮಂ ‖
ಜಿನಧರ್ಮಾತಿಶಯಮುಮಂ |
ಜಿನದತ್ತಾದೇವಿ ಕೇಳಲಟ್ಟಿಗೆಯಾದಳ್ ‖೧೬‖

ವ‖ ಅಂತು ಬಯಸಲ್ತಕ್ಕ ಬಯಂಕೆಗಳಂ ನವಮಾಸಂ ತೀವೆ,

---

2. ಟೀಕು—ಕವ=ದ . ಕ್ರಮ.
ಪಾ—1. ಕ, ಗ, ಮಡದಿ. 3. ಕ, ನಿಜ.

ಮಣಿಮಯಪುತ್ರಿಕೆ ಚಿಂತಾ |
ಮಣಿಯುಂ ಲತೆ ಪಾರಿಜಾತಮುಂ ಕನ್ನಡಿ ಪೂ ||
ರ್ಣಶಶಿಯುಂ ದೀಪಿಕೆ ದಿನ |
ಮಣಿಯುಂ ಪಡೆವಂತೆ ಪಡೆದಳಾಸತಿ ಸುತನಂ ||೧೭||

ಅಜಯಪತಿ ಪುಟ್ಟಲೊಡಂ |
ತೇಜಮನಿಂಬಿಟ್ಟು ಬಂದು ಪೊಡೆವಟ್ಟಸುಹೃ ||
ದ್ರಾಜಕಮಗಿದಾತಂಗಪ |
ರಾಜಿತನೆಂದಿಟ್ಟರಮರ್ದನೊಸರಂ ಪೆಸರಂ ||೧೮||

ಮುಂಪಸಿನೊಳ್ ಮಾಣಿಕಮಿ |
ರ್ಪಂದದಿನತಿಶಯಮುರಾಳಮಾಳೋದರದೊಳ್ ||
ಮುಂದಾರದ [1]ಸಸಿ[1] ಯೊಸೆದ |
ರ್ಪಂದದಿನಭಿಮಾನಮೇರು ತೊಟ್ಟಿಲೊಳೆಸೆದಂ ||೧೯||

ತೂಗುವ ತೊಟ್ಟಿಲೊಳಾಡಿದ |
ನಾಗುಣನಿಧಿ ಪೊಳೆದು ಪಾಱ ಪೆಱಗಾದೆಂ ಚಿಂ ||
ತಾಗತಿಖಚರನೆ[2]ನೆಂ[2]ದು ನ |
ಭೋಗತಿಯುಂ ನಭದೊಳಾಡಿ ತೋಱುವ ತೆಱದಿಂ ||೨೦||

ನಡೆಗಲ್ವಂತೆ ತಳರ್ವತೆ |
ನಡೆಯಿಸಿದಂ ಸ್ವಪಕುಮಾರನಗೆಯುಂ ಬಿಣ್ಪಿಂ ||
ನುಡಿಗಲ್ವಂದೆ ತೊದಳ್ನುಡಿ |
[3]ನುಡಿಯಿಸಿದಂ[3] ತನಗೆ ಪೋಲ್ತ ವಾಕ್ಕನ್ನಿಕೆಯುಂ ||೨೧||

ಗರ್ವಾರಿಗೆ ಷಟ್ಪ್ರತ್ಯಯ |
ನಿರ್ವಾಹಂ ಛಂದದೊಳ್ ಸ್ವರಜ್ಞಾನಂ ಗಾಂ ||
ಧರ್ವದೊಳನುಭವಚರಮಾ |
ಯುರ್ವೇದದೊಳಾದುದಿನ್ನರಾರ್ ನೃಪತನಯರ್ ||೨೨||

ವೀರಶ್ರೀಯುಂ ನಿಡುದೋಳ್ |
ಕೂರಿಸಿದುದು ಕೈದುಗಲ್ತು ಜಸವೆಣ್ಣುಂ ದಿ ||

---

ಪಾ—1. ಪ, ಶಶಿ. 2. ಗ, ಯೆಂ. 3. ಕ, ಗ, ನಡೆಯೊಸೆದಂ.

ಗ್ಯಾರಣಮನೇಱ[1]ಸಿತ್ತು[1] ಗ |
ಜಾರೂಢಪ್ರೌಢಿ ರಾಜರಾಜಾತ್ಮಜನಾ ||೩೩||

ಆಕುವರಂಗೆ ಭಾಜನೆ ಲಿಪಿವ್ರಜದೊಳ್ ಪದಸಿದ್ಧಿಪಾಟವಂ |
ವ್ಯಾಕರಣಂಗಳೊಳ್ ಮತಿಯುಳಂಕೃತಿಯೊಳ್ ಪರಪಕ್ಷದೂಷಣಾ ||
ಲೋಕನದುರ್ಕು ತರ್ಕದೊಳಭಿಜ್ಞತೆಯಾಗಮದೊಳ್ ಪ್ರಸನ್ನಲೀ |
ಲಾಕವಿತಾಗುಣಂ ಸಕಲಭಾಷೆಯೊಳಾದುದು ತದ್ಜ್ಞರಂಜನಂ ||೩೪||

ವ|| ಅಂತು ಸಕಳಶಾಸ್ತ್ರ ಶಸ್ತ್ರಾಭ್ಯಾಸಸತ್ರಾಣ ಶ್ರೇಣೀಕರ್ಷಣ ನಿರತಿಶಯನಿಶಿತಪ್ರಗಲ್ಭಪರಾಕ್ರಮನುಂ ಚಿರಾರೂಢಯೌವನನುಮಪ್ಪ ಮಗನಂ ಕಂಡು, ತದೀಯಪಾಣಿಪಲ್ಲವಮನನುರೂಪಕನ್ಯಾಕರಕಿಸಲಯದೊಳ್ ತೊಡರ್ಚಲ್ ಬಗೆದು, ಭಗವದರ್ಹತ್ಪೂಜಾಪೂರ್ವಕಮರ್ಹದ್ದಾಸನಪೂರ್ವನಿವಾಸನಂ ಪೂರ್ವಭವಪ್ರೇಮಪ್ರೇರಿತಮತಿಯಪ್ಪ ಪ್ರೀತಿಮತಿಯೆಂಬ ರಾಜಕುಮಾರಿಯೊಡನೆ ಮಹೋತ್ಸವದಿಂ ಮದುವೆಮಾಡಿ,

ಅಂಗಜಮಂತ್ರಸಿದ್ಧಿವಡೆದಂತಿರೆ ಮೀಂಬೊಣರಾಗಿ ಬಾಳಜಾ |
ಳಂಗಳ ಸಿಲ್ಕುಗಂಡುವು|ಕುಮಾರಿಯ ಕಣ್ಮಱಿದುಂಬಿಯಾಗಿ ಸೊ ||
ರ್ಕಿಂಗೆ ಸರೋಜದೊಂದು ಸವಿಗಂಡುವು|ಬಾಳಚಕೋರಮಾಗಿ ಬೆ |
ಳ್ದಂಗಳ ಸುಗ್ಗಿಗಂಡುವು|ಕುಮಾರನ ಕಾಂತಿಮದೀಕ್ಷಣಂಗಳೊಳ್ ||೩೫||

ತುಱುಗೆವೆನಿಂದು ನೋಡೆ ಕಡೆಗಣ್ಣದಿ*ರ್ಗೊಳ್ವಳಪಾಡೆ ಪೊಕ್ಕುಸ್ಯೆ |
ಪೆಱಗಿದಿ*ರ್ಗೊಳ್ವ ಸೋಂಕು ನಳತೋಳದಿ*ರ್ಗೊಳ್ವತೊಡಂಕಿನಪ್ಪ ಬಾ ||
ಯ್ದಱಿಯಿದಿ*ರ್ಗೊಳ್ವಚುಂಬನಮಲಂಪಿದಿ*ರ್ಗೊಳ್ವಳ್ವದುವಿರೆ(?)ದಪ್ಪಿಕಾ|
ಳ್ತ್ರಱಿಯಿದಿ*ರ್ಗೊಳ್ವಲಲ್ಲೆಯಿದಿ*ರ್ಗೊಂಡುದುಕೂಟದಕಾಯ್ಪುವೋಪರಾ||

ವ|| ಅದಲ್ಲದೆಯುಂ,

ಅರಮಗನಿರ್ಪನೋಲಗದೊಳೋಲಗಕಾರ್ತಿಯುರಟ್ಟಿಗಿಟ್ಟ ಕ |
ಪ್ಪುರದ ಪರಲ್ಗೆ ಬಿರ್ದರಲ್ಗೆ* ಸೂಸಿದ ಕುಂಕುಮರೇಣುಗೊಕ್ಕ ಕ ||
ತ್ತೂರಿಯ ರಜಕ್ಕೆ ಪಾಯಲೆಡೆಯಿಲ್ಲದ ಕರ್ಪುರ ಕೆರಳ್ದು ದರ್ಪಕಂ |
ತಿರಿಪುವ ಚಕ್ರದಂತೆ ತಿರಿಯುತ್ತಿರೆ ಮೇಲೆ ಮದಾಳಿಮಾಳೆಗಳ್ ||೩೭||

ಪಾ—1. ಕ, ಗ, ಸುತ್ತೆ.

ಕನಕಾಂಗಚ್ಛವಿ ಪದ್ಮರಾಗಚರಣಂ ನೀಳಾಳಕಂ ಜಾತಿವ |
ಜ್ರನಖಂ ಮೌಕ್ತಿಕಕಾಂತಿದಂತನಿಕರಂ ಬಾಳಪ್ರವಾಳಾಧರಂ ||
ವನಿತಾಸಂಕುಳಮೊಪ್ಪೆ ಕಣ್ಣ ಬೆಳಗಿಂ [1]ಕಣ್ಗೊಪ್ಪುಗುಂ ಕಾಮದೇ |
ವನ ಭಂಡಾರದ ಬಾಗಿಲಂ ತೆಱೆದವೋಲ್ ಭೂಪಾಲಕೇಳೀಗೃಹಂ ||೩೮||

ವ|| ಅದಂ ಕಂಡರ್ಹದ್ದಾಸದೇವಂ ಕಾಮದೇವಂಗೆ ಪಟ್ಟಂಗಟ್ಟಿ ಕೊಟ್ಟ ರಾಗರಾಜ್ಯಕ್ಕೆ ತೆಲ್ಲಂಟಿಯಾಗಿ,

ಮುದದೆಸೆದಿರ್ಪ ಬದ್ಧವಣಮುದ್ಧವಣಂ ರಿಜೆ ಪಾಟವಾಟಮೆ |
ತ್ತಿದ ಗುಡಿ ತೋರಣಂ ಸಸಿ ಮೊಸರ್ ಪಸೆ ಸೇಸೆ ವಿಳಾಸಿನೀಜನಂ ||
ಚದುಕಮಿದೊಡ್ಡುಗಟ್ಟೆ ಮದವುಂ ರಿಪುವಾರಣನೆತ್ತಿ ಕಟ್ಟಿ ಕ |
ಟ್ಟಿದನಪರಾಜಿತಂಗೆ ಪರಮೋತ್ಸವದಿಂ ಯುವರಾಜಪಟ್ಟಮಂ ||೩೯||

ಬಂದಡಿಯಿಟ್ಟುದು ಸಿರಿ ನೃಪ |
ಸಿಂದಪರಾಜಿತನೊಳೆಸೆವ ಪೊಸಜವ್ವನದೊಳ್ ||
ಬಂದ ಬಸಂತದೊಳಡಿಯಿಡು |
ವಂದದಿನುತ್ಸವದೊಳಿರ್ದ ಸಿರಿ ಸರಸಿಜದೊಳ್ ||೪೦||

ವ|| ಅಂತು ಸುತವಿಭಕ್ತರಾಜ್ಯಭಾರನುಂ ಕಾಲವಿಭಕ್ತವಯೋಭಾರನುಮಾಗಿ ಪಂಜರದಿಂದರೆನುಸುಳ್ವ ಶಕುಂತನಂತೆ ಭೂಕಾಂತನಿರ್ಪಿನಮೊಂದುದಿವಸಂ,

ತಂದೆಳಗಱನೆಂಬಮುರ್ದಿನ* |
ತಂದಲನುಗುಱುತ್ತುಮೊಂದು ಜಳಧರಪಟಳಂ ||
ಬಂದುದೆನೆ ಸಮವಸರಣಂ |
ಬಂದುದು ಭೋರೆಂದು ವಿಮಲವಾಹನಜಿನನಾ ||೪೧||

ನೀಲದ ನೆಲಗಟ್ಟಿಂ ಮಣಿ |
ಧೂಳೀಸಾಳಂ ಪ್ರಲಂಬಪಲ್ಲವಮೊಸೆಗುಂ ||
ಭೂಲಲನೆಗೆ ಬಿದಿಯೆತ್ತಿದ |
ಪೀಲಿಯ ಕೊಡೆಯಂತೆ ಸಮವಸೃತಿ ಜಿನಪತಿಯಾ ||೪೨||

---

ಪಾ—1. ಗ, ಕಾ.

ವ|| ಆಸಮವಸರಣಕ್ಕರ್ಹದ್ದಾಸನುಂ ವಂದನಾಭಕ್ತಿನಿಮಿತ್ತಂ ಪುತ್ರಮಿತ್ರಸಮೇತನಾಗಿ ಪೋಗಿ ವಿಮಲವಾಹನಜಿನಪತಿಯುಂ ಪ್ರದಕ್ಷಿಣಂಗೆಯ್ದು ಪೂಜಿಸಿ ಪೊಡೆಮಟ್ಟು ದಮ್ಮಮುಂ ಕೇಳ್ದು ಸಂಸಾರಶರೀರನಿರ್ವೇಗದಿಂ ಬೇಗಮಪರಾಜಿತಂಗೆ ರಾಜ್ಯಮುಂ ಕೊಟ್ಟಯ್ನೂರ್ವರರಸುಮಕ್ಕಳ್ವೆರಸು ತಪೋಂಗನಾಲಿಂಗಿತನಾದಂ. ಅದರ್ಕೆ ಪುರುಡಿಸಿದಂತೆ ಜಿನದತ್ತೆಯುಂ ಸಂಯಮದತ್ತೆಯುಂ. ಅಪರಾಜಿತನುಂ ಸಮ್ಯಗ್ದರ್ಶನಾದಿ ಶ್ರಾವಕವ್ರತಂಗಳಿನಳಂಕೃತನಾಗಿ ಪೋೞಲ್ಗೆ ವಂದು ಪರಿಜನದ ಮನಕ್ಕೆ ವಂದು ತಂತ್ರಾವಾಪದೊಳ್ ಬರಂಗೆಯ್ದು ಪೃಥ್ವೀಪಾಲನಮನಪ್ಪುಕೆಯ್ಯೆ,

ತೀಡುವ ಗಾಳಿಯುಂ ಸೆಱೆಯುಣ್ಮದು [1]ಮೋಲುದನಂಜೆ ಪಣ್ಗಳಂ |
ಕೋಡಗಮಿಕ್ಕಿದಲ್ಲದೆ ಕದುರ್ಂಕದು ಪೆಂಡಿರ ಪೊಸ ಮಾಲೆಯುಂ ||
ಸೂಡಿಯೆ [2]ಬಟ್ಟೆ [3]ವೋಪಳಗವಸ್ಯರಥಾಂಗಿಕೆಯೊಳ್ ರಥಾಂಗಮುಂ |
ಕೂಡದೆನಿಪ್ಪುದಾಜ್ಞೆಯಪರಾಜಿತಭೂಪನ ರಾಜ್ಯಲಕ್ಷ್ಮಿಯಾ ||೪೩||

ನರಪತಿಯಾಜ್ಞೆಗೆ ಬಿಸಿಲೋ |
ಸರಿಸಿರ್ದುದು ಕೊಲ್ಲದಂಧಕಾರಮನೆನೆ ಕೆಂ ||
ಬರಲ ರುಚಿ ನೀಲರುಚಿಯೊಳ್ |
ಬೆರಸಿರ್ಪುದು ದೇಶದೊಳಗೆ ತನ್ನೃಪಸುತನಾ ||೪೪||

ತಲ್ಲಣಿಸಿ ನೆಗೞ್ವ ಪಾಣ್ಬರ |
ಮಲ್ಲನ ತೇಜಕ್ಕೆ ತನ್ನ ಕರಮಂ ವಸುಧಾ ||
ವಲ್ಲಭನ ದೇಶದೊಳ್ ದಿನ |
ವಲ್ಲಭನಿಡಲಣ್ಮನನುದಿನಂ ಕುಮುದಿನಿಯೊಳ್ ||೪೫||

ವ|| ಎನಿಪಗ್ಗಳಪೊಗೞ್ತೆಗೆ ನೆಲೆಯಾಗಿ ಪೃಥ್ವೀಮತಿ ಪ್ರೇಮಪರವಶಾಪಾಂಗನಪರಾಜಿತಂ ರಾಜ್ಯಲಕ್ಷ್ಮೀವಿರಾಜಿತನಾಗಿರ್ಪನ್ನೆಗಂ ವಿಮಲವಾಹನನುಮರ್ಹದ್ದಾಸನುಂ ನಿರ್ಮೂಲಿತಕರ್ಮರಾಗಿ,

---

ಪಾ—1. ಗ, ಮೆಲ್ಪುದ. 2. ಗ, ಬಟ್ಟ. 3. ಗ, ಯಿ.

ಎರಡೞಿಯಕ್ಕೆಯ ಪೂವಿನೊ |
ೞರಲೊಲ್ಲದೆ ಬಿಟ್ಟು ಪಾಱಿ ಪಿರಿದೆನಿಸಿದ ಪಾ ||
ದರಿಯ ತುದಿಗೊಂಬಿನಿಂಬಿನ |
ಬಿರಿಮುಗುಳೊಡನೆಱಗುವಂತೆ ಮುಕ್ತಿಗೆ ಸಂದರ್ ||೪೭||

ಅವರಿರ್ವರುಮೊರ್ವಳ್ ಮು |
ಕ್ತಿವಧುಗೆ ಕಡುಗೂರ್ತರ್ ಕೂಡಿ ಪೋದೊ[1]ಡ[1]ಮದನೆಂ ||
ದವರಾರೆಱಗಿದುದವ*ಗೀರ್ |
ಭುವನಜನಂ ಸಮೆದುದರ್ಕೆ ಶಾಸ್ತ್ರಮುಮುಂಟೇ ||೪೮||

ವ|| ಆಪ್ರಸ್ತಾವದೊಳ್

ಜನಸಂ ತದ್ವ್ಯಜನಕ್ಕೆ ಪೋಸ ಸುರಭೇರೀನಾದಮುಂ ಕೇಳ್ದಗೇ |
ನೆನೆ ಪೋದಂ ಗಡ! ಮುಕ್ತಿಗರ್ನೊಡನರ್ದ್ದುಸನುಂ ಕೇಳಮೆಂ ||
ದೆನೆ ಮಾತಿಂನಮೆ ಮುನ್ನಮುನ್ನತಗುರುಶ್ರೀಪಾದಮಂ ಮರ್ಚ್ ಬೆ |
ನ್ನನೆ ಪೋದಂತಿರೆ ಮೂರ್ಛೆ ಪೋಗನರಸಂ ವ್ಯಾಮೋಹಮೇಗೆಯ್ಯದೋ ||೪೯||

ವ|| ಇನಿಸಾನುಂ ಬೇಗಕ್ಕೆ ಮೂರ್ಛೆದಿಳಿದುಂ ಮೋಹಮೂರ್ಛೆ ತಿಳಿಯುದಿರೆ ತಳವೆಳಗಾಗಿ ತನ್ನೊಳ್ತಾನೆ ಬಗೆದು

ನೆಲೆಮಾಡಂಗಳನೇಱಿ ನೋೞ್ಪ ತೆಱದಿಂ ನಿಶ್ರೇಣಿಯುಂ ಕಾಂಚನಾ |
ಚಲದಿಂ ನಾಕಮನೇಱಿ ನೋೞ್ಪಿನತರ್ಪಂ ಗ್ರೈವೇಯಕಕ್ಕೆಯ್ದುವೆಂ ||
ಲಲಿತಾನುತ್ತರೆಗಳ್ಗೆ ಪೋಪೆನದಱಿಂ ಸರ್ವಾರ್ಥಸಂಸಿದ್ಧಿಗಂ |
ಬಲಗೊಳ್ವೆಂ ಬೞಿಕೆನ್ನ ಸದ್ಗುರುಗಳಂ ಸನ್ಮೋಕ್ಷದೊಳ್ ಮೋಕ್ಷದೊಳ್

ವ|| ಇದು ನಿನಗಿನ್ನೇೞಿನೆಯ ಭವಕ್ಕಾದಪುದೆಂದಾಕಾಶವಚನಮನ ವಕರ್ಣಿಸಿ ಮತ್ತಮಿಂತೆಂದಂ :—

ವಿಧುವೊಂದು ಪೊೞ್ತು ವರವಾ |
ರಿಧಿಯುಲ್ಲಿಗೆ ಪೋಪುದಾಗಿ ಸುಖಮಿರ್ಕೆ ರವಾ ||
ರಿಧಿ ಮುಕ್ತಿಗೆ ಪೋದೊಡೆ ಪೇೞ್ |
ವಿಧು ಪೆಱಗೆಂತಿರ್ಕುಮೆಂತು ಸೈರಿಸಲಾರ್ಕುಂ ||೫೦||

---

ಪಾ—1. ಗ, ಡೆ.

ತಂದೆ ತಪಕ್ಕೆ ಪೋದೊಡೊಳಗಂ ಪೊಱಗಂ ಸುಡುತಿರ್ಪ ತಾಪಮುಂ |
ನಂದಿಸುತಿರ್ದುದಿನ್ನೆವರಮೆನ್ನ ಮನಂಗೊಳುತಿರ್ಪ ತದ್ವಚ ||
ಶ್ಚಂದನದಣ್ಪುಮೆನ್ನ ತನುವಾರ್ದಿನಮಿಕ್ಕುಮ ! ತತ್ಪದಾರ್ಚನಾ |
ಚಂದನದಣ್ಪುಮಿನ್ನೆನಗೆ ಸಾಱುದೆ ಸೈರಿಸುವಾಸೆಯಾವುದೋ ||೫೧||

ಪೂಜ್ಯರುಮೇಕೆ ಪೇೞ್ವುಸುಗೆದಪ್ಪುವರಾಪುರುಷಾರ್ಥಸಂಗ್ರಹಂ |
ಪ್ರಾಜ್ಯಮಿದೆನ್ನದಾಂ ಪಿರಿದುಮೊಲ್ಲದೊಡಂಬಡೆ ಬೇಡಿಕೊಂಡು ಸಾ ||
ಮ್ರಾಜ್ಯಮನಿತ್ತ ಪೋಲೆನಗೆ ತನ್ನ ಜಗತ್ತ್ರಯಪೂಜ್ಯಮಂ ತಪೋ |
ರಾಜ್ಯಮನೊಲ್ದುದಂ ಕುಡದೆ ಪೋಪುದು ಮಜ್ಜನಕಂಗೆ ಮಾರ್ಗಮೇ ||೫೨||

ಬರವೇೞ್ಪುತ್ತಿಯನೆಯ್ದೆ ಪೂಡಿ ತರವೇೞ್ತೇರೆಲ್ಲಮಂ ಪಣ್ಣವೇೞ್ |
ಕರಿಯಂ ಘೋಂಕೆನೆ ಕಟ್ಟವೇೞ್ಕುದುರೆಯಂ ಸೂಳ್ಯ[1]ಸ[1]ವೇೞ್ಭೇರಿಯಂ ||
ಭರದಿಂದಂ ನಡೆದಿಂದೆ ಧಾತ್ರಿಬಿಡುವಂತೀಸ್ಥೈರ್ಯಮಂ ಶೌರ್ಯಮಂ |
ಸುರರಾಜಂ ಬಿಡುವಂತು ಬೀಡುವಿಡುವೆಂ ದೇವಾಚಳಪ್ರಸ್ಥದೊಳ್ ||೫೩||

ವ|| ಎಂದಾಸ್ಥಾನದಿನೆರ್ದುಯೆನ್ನ ಪೆತ್ತ ತಂದೆಯುಮಂ[2]ಜಾಣಂ[2]ಪೆತ್ತ ತಂದೆಯುಮಂ ಕಂಡು [3]ಪರಕೆಗೊಂಡ[3]ಲ್ಲದಾಹಾರಂಗೊಳ್ಳೆನೆಂದಪರಾಜಿತನ ಮರಗಿರಿಗೆತ್ತಿ ನಡೆಯೆ ಪಡೆಯು ಪದಘಟ್ಟಣೆಯಿಂ ಪೊಡವಿಯಿಂ ನೆಗೆದ ಕುಂಕುಮದ ಪುಡಿಯಂತಪ್ಪ ಪುಡಿ ಕಣ್ಣಂ ಪುಗೆ, ಪುರಂದರಂ ಪರಿಸಿವಿಸಾಲಿತ ನಯನನಾಗಿ ಬೆರ್ಚಿ ಬೆಗಡುಗೊಂಡಿದೇನೆಂದು ಬಗೆದು ನೋಡಿ ನಗುನಕ್ಕು ಕುಬೇರನಂ [4]ಕರಸಿ[4] ಬೆಸಸೆ

ನಂಬಿಸಲೆಂದು ಮಾಗಿಯೊಳೆ ಮಾಟದ ಮಲ್ಲಿಗೆಪೂಗಳಂ ಮರು |
ಳ್ದುಂಬಿಗೆ ತೋರ್ಪ ಪೋಲ್ವಿಕಳನಾದಪರಾಜಿತರಾಜಶೇಖರಂ ||
ಗಂಬರದೊಳ್ ಸಭಾಸಹಿತಮಾಜಿನರಾಜಮಹರ್ಷಿರಾಜರಂ |
ಶಂಬರನಂತೆ ಮಾಯೆಯೊಳೆ ತೋಱಿದನಾಧನದೈಂದ್ರಜಾಲಿಕಂ ||೫೪||

ವ|| ಅಪರಾಜಿತಂ ಕಂಡು ಕೃತಾರ್ಥನಾದೆನೆಂದು ಬಂದಿಸಿ ಬಂದು ಪರಿಣಾಮದಿಂ [5]ಪಾಡಿಸಿ[5] ತನ್ನ ಗುರುಗಳ ರೂಪನೆ ಕರುವಿಡಿಸುವ ಕಡೆಯಿಸುವ ಕಂಡರಿಸುವ ಬೆಸನೆ [6]ಬಸ[6]ಮಾಗಿ

---

ಪಾ—1. ಗ, ಪ. 2. ಕ, ಚಾಣಂ. 3. ಕ, ಪದಕ್ಕೆ ಕೊಂಡ. 4. ಕ, ಕರಿಸಿ. 5. ಕ, ಪಾಲಿಸಿ. 6. ಕ, ಬಸನ.

ಜಿನನ ಮತವೆನ್ನ ಮನವದು ।
ಜಿನನಾಕೃತಿಯೆನ್ನ ನಯನವದು ಪರಮಾರ್ಥಂ ॥
ಜಿನನ ನುಡಿಯೆನ್ನ ಕಿವಿಯದು ।
ಜಿನನಡಿಗಳವೆನ್ನ ನೊಸಲದೇಂ ವಿಸ್ಮಯಮೋ ॥೫೫॥

ವ॥ ಎಂದು ತನ್ನಯ ತನ್ಮನೋರೂಪನಾಗಿ ಸುಖದಿನಿರೆ,

ನನೆ[1]ಯಿಂ ಷಟ್ಪದ[1] ಧೂಸರಧೂಮಲತೆಯುಂ ಚೂತಂ, ಫಲವ್ರಾತಮುಂ ।
ಪನಸಂ, ಕುಟ್ಮಲದೀಪಿಕಾಪ್ರಕರಮಂ ಚಾಂಪೇಯಮುಂ ಪೊತ್ತು [2]ತ[2] ॥
ಣ್ಬಸಿಯುಂ ಚಂದನಗಂಧಮಂ ಮಲೆಯೆರಲ್ತಂದೀಯೆ ಬಂದತ್ತು ಫಾ ।
ಲ್ಗುನನಂದೀಶ್ವರಮರ್ಹದೀಶ್ವರನ ಪೂಜೋತ್ಸಾಹದಿಂ ಬರ್ಪವೋಲ್ ॥೫೬॥

ಪಿಡಿಗಿಕ್ಕಿತ್ತು ಮೃಣಾಳಮಂ ವನಗಜಂ, ಪೊಕ್ಕತ್ತು ತುಂಡಾಗ್ರದಿಂ ।
ದೊಡೆದಂಭೋಜದ ಮೊಗ್ಗೆಯಂ ಮಧುಕರಂ, ಘ್ರಾಣಾಗ್ರಹಕ್ಕಾಗಿ ಸ ॥
ಯ್ತುಡಿಯೆತ್ತಿತ್ತು ನವಿಲ್, ಮರಾಳ ಪರಿಕಾಲೊಳ್ ಕಾಲನಿಟ್ಟತ್ತು, ಸೀ ।
ರ್ಗುಡಿಯಲ್ಬೇಡಿದುದಂದು ಪಂಜರಶುಕಂ ಶುಷ್ಕೀಭವತ್ತಾಲುಕಂ ॥೫೭॥

ವ॥ ಆಪರ್ವತಕ್ಕಪೂರ್ವಪುರಂದರನತಿಪ್ರೀತಿಮತಿಪ್ರಮುಖಾಂತಃಪುರ
ಪರೀತನಾಗಿ ಪೋಗಿ ಮನೋಹರೋದ್ಯಾನದೊಳಗೆ ನಿಜಜನಕಂ ಮಾಡಿಸಿದ
ತ್ರಿಭುವನತಿಳಕಮೆಂಬ [3]ಪೊನ್ನ[3] ಬಸದಿಯುಂ ಬಳವಿರೋಧಿ ಪೊಂಬೆಟ್ಟ
ಮುಂ ಬಲಗೊಳ್ವಂತೆ ಬಲಗೊಳುತ್ತುಮಿರ್ಪಾಗಳ್

ಇದು ಬಾನಿಂ ಬರ್ಪ ಪೊವಿಮ್ಮಿಂಬೊಣರ ತೆಱನಿದಲ್ಲೊಂದು ಮೇಣ್ಮಿಂಚು
ಮಿಂಚೆ । ಲ್ಲದಿವರ್ಚಂದ್ರಾರ್ಕರೇನೀಯುಗಳಮಿಱಿವ ಚಂದ್ರಾರ್ಕರೇ ಖೇ
ಚರದ್ವಂ ॥ ದ್ವದ ಕೆಯ್ತಂ ಖೇಚರದ್ವಂದ್ವಮೆ ಪುಸಿ ಪೊಸತೀಚಾರಣದ್ವಂದ್ವ
ಮೆಂದು । ವಿದಲಂಪಿಂ ನೋಡೆ ಭೂಪಂ ಗಗನದಿನಿೞಿದರ್ಚಾರಣರ್ಚಾರು
ರೂಪರ್ ॥೫೮॥

ದೊರೆಗೆಡೆ ತಮ್ಮ ವಿಯೋಗದೊ ।
ಳರಸಂಗಾದಜಲನಾಱಿಸಲ್ಮುಕ್ತಿಯುನಾ ॥
ಗುರುಯುಗಳಮಿೞಿದು ಬಂದಂ ।
ತಿರೆ ನಭದಿಂದಿೞಿದು ಬರ್ಪ ಚಾರಣಯುಗಳಂ ॥೫೯॥

ಪಾ—1. ಕ, ಯಂ ಪುಷ್ಪ. 2. ಕ, ಗ, ಕ. 3. ಕ, ನಿಜ.

ವ॥ ವಿನಮಿತಮೌಳಿಮರೀಚಿಮಂಜರೀನೀರಾಜನಸರಾಜಿತಸಿದಿಗೊಂಡು ಮನೋಮಣಿಪೀಠದೊಳುಮೋಕ್ಷಾಂಕಮಣಿಪೀಠದೊಳುಂ ಮೋಹನವ್ಯಕ್ತಭಕ್ತಿಯಿಂ ಕುಳ್ಳಿರೆ ಕುಳ್ಳಿರಿಸಿದಾಗಳ್,

ಎಲೆಯೊಳ್ಸತ್ತಿದ ಮಲ್ಲಿಗೆ |
ಯಲರಂ ಕಂಪಿಂದಮಳಿಯು ಮೂಗಱಿವವ್ರೊಲಾ ॥
ಲಲಿತಮನವಱಿಯದುದು ಕ |
ಣ್ಮಲರಱಿಯದೆ ಮೋಹವಶದಿನಾಚಾರಣರಂ ॥೬೦॥

ವ॥ ಅಂತು ಕಱ್ತಲೆಯೊಳ್ ಕಣ್ಣಱಿಯದೆ ಸ್ಪೋಂದೊಡಮಿನಿಯರಂ ಮನಕ್ಕೆ ಸೋಂಕಱಿಪ್ಪನಂತೆ ಮೋಹಮುಱಿಪಿದ ಮನದ ಬೆಚ್ಚ ಬಱಿಯುಱಿವು ಬಱಿಯ ಬೆಱಗನೆ ನೋಟಗೊಳ್ ನಾಟಿಸಿ ಕಿಱಿದುಭೋಗಂ ಬೆಱಗಾಗಿ ದುರ್ಮಿರಲಾಱದೆ ಭಾವಕಮುಕುರಂ ಮುಕುಳಿತಕರಕಮಳನಾಗಿ ನಿಮ್ಮಡಿಗಳಂ ಕಾಣಲೊಡನೆ ಎನ್ನ ಮನಮನಾಳ್ದುಱಲಂಪುಮುಱ್ಕಱುಂ ನಿಂತುವೆಲ್ಲಿಯಾನುಂ ಕಂಡಱಿವಂತಾದಪ್ಪನೆಲ್ಲಿ ಕಂಡೆಂ ಬೆಸಸಿಮೆನೆ ಮನಂಗೊಂಡಾಮುನಿಗಳೊಳಗೆ ಮುಖ್ಯರಪ್ಪ ಮುನಿಗಳ್ ಕೆಯ್ಗಳೊಳಗೆ ಬಲಗೆಯ್ ಬೆಸಕ್ಕೆವರ್ಪಂತೆ ಬೆಸಸಲ್ತಗುಳ್ದರವೆಂತೆನೆ:–

ಸೊಡರವೊ[1]ಲ[1]ಕ್ಕುಂ ಕಾಡಿಗೆ |
ಗುಡಿಯೆನೆ ಮುಗಿಲೆಳಸಿ ಬಳಸಿ ಬೀೞ್ತ ಪತಂಗಂ ॥
ಕಡುಬೆಳಗಿ ಪುಷ್ಕರಾರ್ಧದ |
ಪಡುವಣ ದೆಸೆ ಮುಂದುಗೊಂಡ ಮಂದರಶೈಲಂ ॥೬೧॥

ಮಂದರಶೈಲದ ಪಡುವಲ್ |
ನಂದನವಳಕಾಳಿ ಕೊಳನೆ ಪೊಕರ್ಱೞ್ ಕರ್ಣಂ ॥
ಕುಂದಂ ಕುಚಮೆನೆ ವಸುಧಾ |
ಸುಂದರಿಯ ಸುದೇಹಮೆಸಿಪ್ಪಪರವಿದೇಹಂ ॥೬೨॥

ಅಪರವಿದೇಹೋದ್ಭವ ಸೀ |
ಳಪರ್ವತಂ ಘನಗುಹೋದರಾಸ್ಯಂ ನೆಱೆಗೆ ॥

ಪಾ—1. ಕ, ಲಿ.

ಯ್ವೆ ಪಯೋನಿಧಿಯುಂ ಪುಯ್ವ |
ಲ್ಲಿ ಪೊಯ್ದು ಸೀತೋದೆ ಸೀತೆಯುಂತೆವೊಲೆಸೆಗುಂ ||೬೨||

ಭಯದಾಯಿ ವಜ್ರಿಯೋಂ ವ |
ಜ್ರಿಯುಮುತ್ತನುಮಕ್ಕೆ ಬಕ್ಕೆ ಕಾದಪೆನೆಂದ ||
ದ್ರಿಯ ತಲೆಯೊಳಿಟ್ಟ ವಾರಾ |
ಸಿಯ ಕೆಯ್ಯನೆ ರಯ್ಯವಾದುದಾನದಿ ನೀಳ್ಪಿಂ ||೬೩||

ಆತೊಱೆಯ ಬಡಗದಡಿಯೊಳ್ |
ಪೂತೊಱಗಿದ ಗಿಡುಗಳಿಂದೆ ಕಾಯ್ತೊಱಗಿದ ಭೂ ||
ಜಾತವೊದವಿಂದೆ ಸಿರಿ ಕರ |
ವೋತೆಱಗಿದ ವಿಷಯಮುಂಟು ಗಂಧಿಲವಿಷಯಂ ||೬೪||

ಕೆಳೆಗೊಂಡಿರ್ಪುವು ಕೇಳಿವನಾವಿಷಯದೊಳ್ ಕಾವಗ್ನಿಯುಂ ನಂದನಾ |
ವಳಿಯುಂ ಕಾಮುಕರೇಣುವುಂ ಕಮಳವುಂ ಕಾವಾಂಧಕಾರಂಗಳುಂ ||
ತೊಳಗುತ್ತಿರ್ಪ ಸುಧಾಂಶುಬಿಂಬರುಚಿಯುಂ ಕಾಮಾಹಿಯುಂ ಶೀ |
ತಳಾನಿಳನುಂ ಕಾಮುಕಾನುರಾಗರಸಮುಂ ತೃಷ್ಣಾಗ್ನಿಯುಂ ಸ್ರೇಕಮುಂ ||

ನುಡಿವಂತಿರ್ಪುವು ಕೀರಕೋಕಿಲಕಲಧ್ವಾನಂಗಳಿಂ ಕಣ್ಗಳಿಂ |
ಬಿಡುವಂತಿರ್ಪುವರಲ್ವರಲ್ದೊಱಗಲಿಂದಳ್ಳೆಕ್ಕ ಪೂವಿಂದೆ ಕಾ ||
ಲಿಡಲಿಂಬಿಲ್ಲದೆ ಮೆಟ್ಟಲಾಗದಿವನೆಂಬಂತಂಘ್ರಿಸಮಾಪ್ತಮುಂ |
ನಡೆಯುಂ ನೀಗಿಯುಮಿಂದುವೇಂ ಪ್ರಚುರಮೋ ಜೈನವ್ರತಂ ದೇಶದೊಳ್ ||

ಎನಿಸಿದ ನಾಡ ನಟ್ಟನಡುವಿರ್ಪುದು ಪುಣ್ಯದ ಪುಂಜದಂತೆ ಪೂ |
ವಿನ ಕೊಳನೊಂದು ನಟ್ಟನಡುವಿರ್ಪಸಿತಸ್ಮಿತಪದ್ಮದಂತೆ ಬೆಳ್ಳ ||
ನೆ ನಭದೊಂದು ನಟ್ಟನಡುವಿರ್ಪ ಸುಧಾಕರಬಿಂಬದಂತೆ ಸಂ |
ಜನಿತಸಮಸ್ತಪರ್ವತಯಶೋವಿಜಯಂ ವಿಜಯಾರ್ಧಪರ್ವತಂ ||೬೮||

ಅರವಿಂದಾಕರರೇಣುಪಿಂಜರತೆಯಿಂ ಪೆಣ್ಣಂಚೆಗಳ್ ಬೇಗದೊಳ್ |
ಪೊರೆದಂಭೋಜದ ಕಪ್ಪನುದ್ಗತನಖಾನೀಕಂ ಚರತ್ಖೇಚರೀ ||
ಚರಣಾಲಕ್ತಕರಾಗಮಂ ತೊಡೆಯಲೆಮ್ಮಿಳ್ ಪೊಯ್ದುವೋ ತಾರಕಾಂ |
ಕುರತಾರಾಧಿಪತಾರಳಪ್ರಭೆಗಳಿಂ ತಾರಾಚಳಪ್ರಸ್ಥದೊಳ್ ||೬೯||

ಗಂಗೆ ಬಱಿಲ್ದಪ್ಪೋಲ್ನೆಲಕೆ ಬೆಳ್ಳಿಯ ಬೆಟ್ಟದ ಬಳ್ಳಿವೆಳ್ಪು ಬೆ |
ಳ್ಳಂಗೆಡೆದೊಪ್ಪೆ ತಪ್ಪಲ ಘಲಾಗುಣದರ್ಧತಟಾಕಸಂಕುಳಂ ||
ತಿಂಗಳ ತೋಂಟದಂತೆ ಬಳೆದೊಪ್ಪುವ ನೀರೆಯ ಕೆಯ್ಗಳಚ್ಚವೆ |
ಳ್ದಂಗಳ ಕೆಯ್ಗಳಂತೆ ನಡೆನೋಳ್ಪರ ಕಣ್ಗೆ ಕರಂ ಮನೋಹರಂ ||೨೦||

ಪನಸಾಮ್ರಾತಕಮಾತುಳುಂಗಕದಳೀಖರ್ಜೂರನಾರಂಗಪೀ |
ತನಜಂಬೂಸಹಕಾರದಾಡಿಮಫಲವ್ರಾತಂಗಳಿಂದಾಗಳುಂ ||
ತನಿಗಂಪಂ ಮೊಗೆತ್ತು [1]ತೀಡುವೆಲರೊಂದಿಂಪಿಂಗೆ[1] ಪೊಂಗೂರ್ತು ಮು |
ಲ್ಲನೆ ಬಾಯುಂ ಪೊಳಕುತ್ತು ನೋಳ್ಪರಮರರ್ ತಾರಾಚಳೋದ್ಯಾನದೊಳ್ |

ಎರಲಿಂದೆ ಪಾಱಿ[2]ದಾವನ |
ತರುನಿಕರದ ಕುಸುಮ[2]ರೇಣುಪರಮಾಣುಗಳಂ ||
ಸುರಲೋಕದವನವಾಯ್ತುಂ |
ದರಗಿಳಿಯೋದುವುವು ನಗದ ವನವರ್ಣನಮಂ ||೨೧||

ಸಲ್ಗೆಯೊಳಲ್ಲಿಯ ಕೋಡುಂ |
ಗಲ್ಗಳ್ ಖೇಚರತೆವಡೆದು ಪಾಱುವ ತೆಱದಿಂ ||
ಮೇಲ್ಗಾಳ[3]ಯ[3]ಲೆಯೆ ಬಿಳಿಯ ಮು |
ಗಿಲ್ಗಳ್ ಪಾಱುವುವು ಖಚರಗಿರಿವನತಟದೊಳ್ ||೨೨||

ನಡೆವುವು ನಭಕ್ಕೆ ಮಿಂಚುವ |
ನಿಡುಮುಗಿಲಮರಿಯರ ಕಣ್ಗೆ ಕುಡಲೆ[4]ದಗದೊಳ್[4] ||
ಬಿಡದೋದುವ ಖೇಚರಿಯರ |
ಕಡೆಗಣ್ಗಳ ಬೆಳಗನೇಱ್ [5]ತೋಱಿದ[5] ತೆಱದಿಂ ||೨೪||

ಕಡುನೆರೆದ ಖಚರಿಯರ್ ನೀ |
ರಡಿಸಲೊಡಂ ಕರಿಯ ಕಿಱಿಯ ಮುಗಿಲಂ ಖಚರರ್ ||
ಪಿಡಿದು ಪೊರೆಯೆತ್ತಿ ಮಿಂಚಿನ |
ಪುಡಿಕೆಗಳಂ ತೆಱೆದ ತೆಱದಿ ತೋರ್ಪುವು ನಗದೊಳ್ ||೨೫||

---

ಪಾ—1. ಗ. ತೀಡುವೆಲರಿಂದಾಪಂಗೆ. 2. ಕ, ಪೋಗಿದಾನವತರುಕಮಳನಿಕರವ.
3. ಗ, ಯೊ. 4. ಗ, ದಾಗಳ್. 5. ಕ, ತೋರಣದ; ಗ, ಪೇಱಿದ.

ಜಿನಬಾಳಕನೆನೆ ಮಧ್ಯಂ ।
ದಿನದಿನನವ್ಯಕ್ತಭಗಣನಯನಸಹಸ್ರಂ ॥
ಜಿನನ ಸವನಕ್ಕೆ ಗಗನೇಂ ।
ದ್ರನೇಱಿದೈರಾವತಂಬೊಲಿರ್ದುದಗೇಂದ್ರಂ ॥೭೬॥

ಜಿನರಾಜಂ ಕಾಮನಂ ಮರ್ದಿಸಿದ ಬಿರುದಿನೊಳ್ ವಿಕ್ರಮುಂದಪ್ಪದಿಂಪುಂ ।
ದನಿಯುಂ ಕೈಕೊಳ್ವನಂ ಬೀಣೆಯ ಕಳರವಮುಂ ತತ್ಕಥಾನಾಟಕಾಲೋ ॥
ಕನ[1]ಸುಪ್ರ[1]ಸ್ಥಾನದೊಳ್ ಪಾಡುವ ಖಚರಿಯ ರಂಗಸ್ಥಿತಂ ಕೇಳ್ದುಕೇಳ್ದು ।
ಯ್ಯನೆ ಲಜ್ಜಾಭಾರದಿಂ ಕುತ್ತಿದ [2]ತಲೆಯನಣಂ[2] ಕುತ್ತುವಂತೆತ್ತಲಾರಂ ॥೭೭॥

ಸ್ಮರರಾಗಾಮೃತಮಂ ತುೞುಂಕಿ ಖಚರೀನೇತ್ರತ್ರಿಭಾಗೇಕ್ಷಣಂ ।
ಪರಮಾನಂದಮನೆಂದುಮೀಯೆ ಜಿನಪೂಜಾಲೋಕನಂ ಪುಣ್ಯದಿಂ ॥
ದೆರಡುಂ ನಾಕದ ಮೋಕ್ಷದೇವಸುಖಮೊಂದಾದಂತೆ ತಾರಾದ್ರಿಗಾ ।
ದೆರಡುಂ ಪಕ್ಕದೊಳೊಪ್ಪಿತೋರ್ಪುವೆರಡುಂ ವಿದ್ಯಾಧರಶ್ರೇಣಿಗಳ್ ॥೭೮॥

ವ। ಆವಱೊಳುತ್ತರಶ್ರೇಣಿಗಳಲಂಕಾರಮಾಗಿ,

ದೀಪ್ರಸುವರ್ಣವಪ್ರವಿಮಳಪ್ರಭೆಗಳ್ ಬಳೆದುಂಟುಮಾಡೆ ಸೂ ।
ರ್ಯಪ್ರಭೆಯುಕ್ಕಿದುಕ್ಕನಿರುಳುಂ ಪಗಲುಂ ಶರದಭ್ರಶುಭ್ರಸೌಧ ॥
ಪ್ರಭೆಗಳ್ ಶಶಿಪ್ರಭೆಯ ಮಾಡಿದ ಮಾಟಮನುಂಟುಮಾಡೆ ಸೂ ।
ರ್ಯಪ್ರಭವೆಂಬುದೊಂದು ಪೊೞಲುಂಟು ಪೊೞಲ್ ಕೃತಕೌತುಕಂಗಳಂ ॥

ಗಿರಿಶಿಖರದೊಳಾಡುವ ಖೇ ।
ಚರಿಯರ್ ಪುರವರದ ಪೊನ್ನಕೋಂಟೆಯನಿರದ ।
ಚ್ಚರಿವಟ್ಟು ಸೂರ್ಯಬಿಂಬದ ।
ಪರಿವೇಷಮೆಗೆತ್ತು ನೋಡುವರ್ ನಡುವಗಲೊಳ್ ॥೮೦॥

ಬಿಳಿಯ ಮನೆಯೆನಿಸಿ ತಮ್ಮಯ ।
ಬೆಳಗಿಂ ಪೊೞಲುೞ್ದ ಮನೆ ಸಮುಜ್ಜ್ವಳರಜತಾ ॥
ಚಳಮಿಕ್ಕಿದ ತತ್ತಿಗಳೆನೆ ।
ತೊಳತೊಳತೊಳಗುವುವು ಸೌಧಸದನಾವಳಿಗಳ್ ॥೮೧॥

---

ಪಾ—1. ಕ, ಪುತ್ರ. 2. ಕ, ತಲೆಯೊನಗೊಂ.

ಅದನಾಳ್ವಂ ಸದನಂ ಜಸಕ್ಕೆ ಮದನಂ ಕಾಂತಾಜನಕ್ಕುಲ್ಲಸ |
ದ್ವದನಂ ನೀತಿವಿಲೋಚನಕ್ಕೆ ಮದಮುದ್ಯದ್ವಿಕ್ರಮೋಭಕ್ಕಿರಂ ||
ಮದಮುಗ್ರಾರಿಗೆ ಸಂಮುದಂ ಸಿರಿಗೆ ಸಂಸ್ತುತ್ಯೋದಯಂ ವಾಗ್ವಧೂ |
ಹೃದಯಂ ಜಾತದಮಾತಗಾದ್ರಿಶರಭಂ ಸೂರ್ಯಪ್ರಭಂ ಸುಪ್ರಭಂ ||೮೧||

ಜಗಳಂಬೊಕ್ಕವರೊಳ್ ಕೆಲರ್ ಪೆಣವರಾಗಿರ್ದರ್ ಜವಂಗೆಟ್ಟು ಪಾ |
ಱುಗಳನ್ನಾದ್ರಿಗೆ ಪಾಱಿ ಪೋಗಿ ಕೆಲಬರ್ ಬೆಳ್ವಂಗಳಂ ಪೀರ್ವ ಪಕ್ಕಿಗಳಂ ||
ತಿರ್ದರಳ್ಕೆಗೆಟ್ಟು ಕೆಲಬರ್ ಸೂರ್ಯಪ್ರಭಂಗಳ್ಕೆ ಗೂ |
ಗೆಗಳಂತಿರ್ದರದಭ್ರಗಹ್ವರತಮೋವಾಗರ್ ಖಗಾಧೀಶ್ವರರ್ ||೮೨||

ಅಪ್ರತಿರಥತೇಜಕ್ಕೆ ಖ |
ಗಪ್ರಭುಗಳ್ ಕಣ್ಗಳೆಂದುಮೋಸರಿಸುತ್ತುಮಿ ಸೂ ||
ರ್ಯಪ್ರಭನ ತೊಳಗುವ ಕರವಾ |
ಳ್ ಪ್ರಭೆಗಳ್ಕ್ವುವು ಕಣ್ಗಳಂ ಖಗಕರಣಂ ||೮೩||

ಅಗಗನಸಚರನ ಜಗನೊಳ್
ಮೋಗಿಲ್ಲದೆ ವಿಕ್ರಮಕ್ಕೆ ರಿಪುಖಗಪತಿಗಳ್ ||
ಕೂಗಡಗಿ ಬೀತ ಮಾವಿನ |
ಕೋಗಿಲೆಯೊಳ್ ಕೊಂಬುಗೊಂಡು ಕುಂಬುತಿರ್ದರ್ ||೮೪||

ವ|| ಆಮಹಾರಾಜನೆಂಬ ಮಹಾವರಾಪನ ಗೋದಂಡವೆಂಬ ದಾತೆ
ಯುಂ ನೆಮ್ಮಿ

ಕುಂತಳಪಱ್ತು ಬಂದ ಬನದಂತಿರೆ ಪೆರ್ಮೊಲೆ ಪರ್ವತಂಗಳಂ |
ಬಂತಿರೆ ವಕ್ತ್ರಮಬ್ಜವನದಂತಿರೆ ತಸ್ನುಡೆ ವಾರ್ಧಿ ಸುತ್ತಿಕೊಂ ||
ಡಂತಿರೆ ಕಾಮನಾಳ್ವರಸನಂತಿರೆ ಮೆಯ್ವೆಳಗಾತನೊಂದು ತೇ |
ಜಂ ತೊಳಪಂತರೀಕ್ಷಣಕೆ ಧಾರಿಣಿ ಧಾರಿಣಿಯಂತಿರೊಪ್ಪುಗುಂ ||೮೫

ತಲ್ಲಲನೆಯ ಲುಳಿತಾಳಕ |
ಮೆಲ್ಲಂ ನಿಜಕಾಂತಿಯಿಂದಮುದಟಲೆಯೆ ಕರಂ ||
ತಲ್ಲಣಿಸಿ ಸೋಲ್ತು ನೀಲಂ |
ಪುಲ್ಲಂ ಕರ್ಚಿದುದು ಭೀತಿ ಬಾಱಿಸದಾರಂ ||೮೬||

---

ಟೀಕು—೮೨. ಇರಂಮದ = ಮಿಂಚು.

ಅಂತೆನಿಸಿದ ಸೂರ್ಯಪ್ರಭ |
ಕಾಂತಂಗಂ ನೆಗಳ್ದ* ಧಾರಿಣೀಕಾಂತೆಗವಾ ||
ದಂ ತನಯನಚಿಂತ್ಯಗುಣಂ |
ಚಿಂತಾಗತಿಯೆಂಬೊನಖಿಳವಿದ್ಯಾಳಂಬಂ ||೮೮||

ಅಮೃತಾಂಶುಗೆ ಕಳೆ ಸಿರ್ಪಿಂ |
ಗೆ ಮೌಕ್ತಿಕಂ ಪುಟ್ಟಿತೆನಿಸದೆಸೆದಿರೆ ಪುಟ್ಟಿ ||
ತ್ತಮೃತಾರ್ಣವಕ್ಕೆ ಕಲ್ಪ |
ದ್ರುಮವೆನಿಸಿದರಾಖಗೇಂದ್ರನುಂ ತತ್ಸುತನುಂ ||೮೯||

ಮೇಗೆನಿಸಿ ಜಗನ್ಮಂಗಳ |
ನಾಗಲೊಡಂ ಧಾರಿಣೀಸುತಂ ನೆಗಳ್ದಚಿಂ ||
ತಾಗತಿಗೆ ತೇಜದಿಂ ಮುಂ |
ತಾಗಿರಲಾದಿತ್ಯಸೋಮರನುಚರರಾದರ್ ||೯೦||

ಅಭಿನವಜಲಧರತತಿಗಳ್ |
ನಭಕ್ಕೆ ಸಗೆವುವು ಖಗಾದ್ರಿಯೆಸೆಯಿಂ ಸೂರ್ಯ ||
ಪ್ರಭತನಯನತುಳಭುಜಬಲ |
ವಿಭವಂ ಪೊಡೆಸೆಂಡುವೊಯ್ದ ಬೆಟ್ಟಂಗಳವೋಲ್ ||೯೧||

ಕರುಣಿಸುವುದೆನ್ನ ತೇಜ |
ಸ್ಫುರಣೆಗೆ ನೀನೆಂದು ಬೆರ್ಚಿ ಬೆಸಕೆಯ್ವವೋಲೇಂ ||
ಕರುವಾಡಕ್ಕೋಲಗಿಸನೊ |
ಖರಕರನಾಖಚರಚಕ್ರವರ್ತಿಯ ಸುತನಾ ||೯೨||

ಸಂತಸಮುಂ ಕೀರ್ತಿಯು ಬೆಳ |
ಗಿಂ ತೃಪ್ತಿಯನಮರಫಣಿನರಾಳಿಗೆ ಕುಡುವೀ ||
ಚಿಂತಾಗತಿಯ ಜಗತ್ರಯ |
ಚಿಂತಾಮಣಿಯೆನ್ನದೆಂಬಸಿನ್ನೇನೆಂಬಂ ||೯೩||

ಘನಕೇಶಂ ದರಹಾಸವರ್ಷವದನಂ ತಾಮ್ರಾಧರಂ ಲೋಳಲೋ |
ಚನಸಾಜಾನುವಿಳಂಬಿ ಬಾಹು ಸುವಿಶಾಳೋರಸ್ಸ್ಥಳಂ ತಪ್ತಕಾಂ ||

ಚನವರ್ಣಂ ತನುಮಧ್ಯನಾತನತನುಪ್ರಾಯಂ ನವಾರೂಢಯೌ |
ವನವೆಂ ನೋಡಿಸಿದತ್ತೊ ಮುಗ್ಧಖಚರೀನೇತ್ರತ್ರಿಭಾಗಂಗಳಂ ||೯೪||

ಮಿಂಚಿನ ತಟ್ಟಿಯೊಳಂ ಬಳಸಿದಂತಿರೆ ಕಣ್ಗಳ ಮಿಂಚು ಮೇಗೆ ಪೊ |
ಗೊಂಚಲ ಪಂದರಂ ಪಡೆಯೆ ಪೆಂಡಿರ ವಕ್ತ್ರಸಹಸ್ರಕಾಂತಿ ಚ ||
ಲ್ಲಂ ಚಳಯಂಗಡುತ್ತುಮಿರೆ ರಾಗರಸಾಮೃತದಿಂ ವಿನೋದಮಂ |
ವಂಚಿಸದೋಲಗಂಗುಡುವನಂಬರದೊಳ್ ಖಚರೇಂದ್ರನಂದನಂ ||೯೫||

ರಸಮಂ ಸೂಸೆ ಮುಖೇಂದು ಕೈ ಮದನನಂ ಕೈವೀಸೆ ಬೆಳ್ದಿಂಗಳಂ |
ಪೊಸತಂ ಪುಟ್ಟಿಸೆ ದೃಷ್ಟಿ ಮೆಯ್ ಪೊಳೆವ ಮಿಂಚಂ ಪೋಲೆ ಚೆಲ್ವಾಗೆ ಬ ||
ಣ್ಣಸರಂ ಕಾಲ್ಪುರವೇೞೆ ಕಾಕಳಿ ನಭೋರಂಗಾಗ್ರದೊಳ್ವಚ್ಚಲಾ |
ಡಿಸುವಂ ಪಾಡಿಸುವಂ ವಿಯಚ್ಚರಿಯರಂ ಮಾಗ್ಗಯ್ಯೆ ವಿದ್ಯಾಧರಂ ||೯೬||

ಇವನೆಮ್ಮಾಳ್ದನಸಿಕ್ಕ ಸಾಧುವಿನಪೋಲ್ ತಾನಲ್ಲದಂತಿಲ್ಲಿ ಪೋ |
ಕವಿದಿರ್ಪಂ ಜಿನನೆಂದು ಪೊಂಬಸದಿಯಂ [1] ಪುಷ್ಪಾಸ್ತ್ರನಾಳೀಯ ಮು ||
ತ್ತುಮಪೋಲ್ ಪೆಂಡಿರ ತಂಡವೊಪ್ಪೆ [1] ಬಲಗೊಂಡಷ್ಟಾಹ್ನಿಕಾಚಾರ್ಚಾಮಹೋ |
ತ್ಸವಮಂ ಮಾಡುವನಿಂದ್ರನಾಗಿ ಮುದದಿಂ ವಿದ್ಯಾಧರವಲ್ಲಭಂ ||೯೭||

— ಗದ್ಯ —

ಇದು ಮೃದುಪದಬಂಧಸಿಂಧುರ ಸರಸ್ವತೀಸೌಭಾಗ್ಯವ್ಯಂಗ್ಯಭಂಗಿನಿಧಾನ ದೀಪವರ್ತಿ ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರ ಕೃತಮುಂ,

ಶ್ರೀಮತ್ಪ್ರತಾಪಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ ಸೆಜ್ಜೆವಳ್ಳ ಪದ್ಮನಾಭದೇವ ಕಾರಿತಮುಪ್ಪ

## ನೇಮಿನಾಥ ಪುರಾಣದೊಳ್

### ದ್ವಿತೀಯಾಶ್ವಾಸಂ ಸಮಾಪ್ತಂ

ಪಾ—1. ಪುಷ್ಪಾಸ್ತ್ರನಾಳಿಯಮುತ್ತುಮಪೋಲ್ ಪೆಂಡಿರತಂಡವೊಪ್ಪಿ.

# ಮೂಱನೆಯ ಆಶ್ವಾಸಂ

---

ಶ್ರೀಯೆನಗಮುರದ ಮುತ್ತನೆ |
ಕೇಯೂರಂ ಬೀರಸಿರಿಯ ಕಣ್ಬೆಳಗೆನೆ ಕೆಂ ‖
ಬಾಯುಮಜನ ಸತಿಯೆಂದೆನೆ |
ಜೇಯೆನಿಸಿದನಮಳಮೂರ್ತಿ ಕೀರ್ತಿಪತಾಕಂ ‖೧‖

ಸಲೆ ಚಿಂತಾಗತಿ ತನ್ನಚಿಂತ್ಯಮಹಿಮಾವಷ್ಟಂಭವಿದ್ಯಾಸಮು |
ಜ್ಜ್ವಲತೇಜಃಪ್ರಭೆಯಿಂದೆ ತನ್ನ ರುಚಿಮತ್ತಾರಾದ್ರಿಯಂ ಕಾಂಚನಾ ‖
ಚಲಮಂ ಮಾಡಿಯೆ ಕಾಂಚನಾಚಲಮುಮಂ ತಾರಾದ್ರಿಯಂ ಮಾಡಿದಂ |
ನೆಲೆಗೊಂಡುಪ್ಪುವ ಕೀರ್ತಿಕೌಮುದಿಯಿನಿನ್ನೇನೆಂಬ ಸಾಮರ್ಥ್ಯಮೋ ! ‖೨

ರಾಗಕೊಡವುಟ್ಟುವವೋಲ್ |
ಭೋಗಮುಮುಪಭೋಗಮುಂ ಶುಭೋದಯದಿಂ ಚೆಂ ‖
ತಾಗತಿಗಾದರ್ಕೆಳೆಮ |
ನೋಗತಿಯುಂ ಚಪಳಗತಿಯುಮೆಂಬನುಜಾತರ್ ‖೩‖

ವ‖ ಅಪ್ಪುದುಮಾಸುರಮಪ್ಪ ಸಿರಿಯನೊರ್ವನೆ ಸಿರ್ವಂದದಿನಂತವಂ ತಮೆಯುಣಲಾಱದೆ ಬಹುರೂಪಿಣಿವಿದ್ಯೆಯಿಂ ಮತ್ತೆರಡು ರೂಪಾದಂತೆ ತಮ್ಮಂದಿರಿರ್ವರ್ವೆರಸು ಚಿಂತಾಗತಿ ಖೇಚರರಾಜ್ಯಮನನುಭವಿಸುತ್ತುಮಿರ್ಪಿನಮಾ ಶ್ರೇಢಿಯರಿಂದಮಪುರಮನಾಳ್ವರಿಂಜಯಖಚರಪತಿಗಳ್ಗಮಾತನ ಸತಿಯಜಿತಸೇನಾದೇವಿಗಂ ವಿಳಾಸವತಿಯೆಂಬ ಮಗಳಾಗಿ—

ರತಿಯಂ ರೂಪಿಂಗೆ ಮೆಚ್ಚಳ್ ಸಿರಿಗೆ ಸಿರಿಯುಮಂ ಪುಲ್ಗೆಕೈಕೊಳ್ಳಳಾಭಾ |
ರತಿಯಂ ವಿದ್ಯಾಗುಣಕ್ಕೊಂದಡಕೆಗಮೆಣಿಸಳ್ ಕೇಳಮಾತ್ಸ್ರೀಕಮಂ ಪಾ ‖
ರ್ವತಿಯುಂ ತನ್ನೊಂದು ಪೆಂಪಿಂಗರೆಗವಡಿಕೆಯುಂ ಕೊಳ್ಳಳೇವೇಱ್ವಿಸುದ್ಧ್ರ |
ದ್ಧತೆಯುಂ ಸೌಭಾಗ್ಯಸಂಪತ್ತಿಗೆ ಖಗನ ಮಗಳ್ ರಂಭೆಯುಂ ಸಿಂಬೆಯೆಂಬಳ್ ‖

ತೊಡದಿರ್ಗಗಾಣದ ಗೂಳಿಯಂತೆ ತಿರಿಯುತ್ತಿಂತಿರ್ಪರೇ ಮೆಚ್ಚಿದೊಂ |
ದೆಡೆಯುಂ ಮೆಟ್ಟೆ ತರಸ್ವಿಗಳ್ ಬಡಗಣಿಂ ತೆಂಕಣ್ಗೆ ಮೇಣ್ತೆಂಕಣಿಂ ‖

ಬಡಗಣ್ಗಾಯೆಱಡಿರ್ಕೆ ಮೇಣ್ಪಡುವಣಿಂ ಮೂಡಣ್ಗೆ ತಾಂ ಪಾಱಲಾ |
ಪೊರ್ಡೆ ಬಂದೆನ್ನೊಡವಾಱುಗೆಂದು ನುಡಿವಳ್ಮತ್ತಾಕೆ ಮಾರ್ತಂಡನಂ ||೫||

ಗಂಡರ ಕೇಡಂ ಪೆಂಡಿರ |
ತಂಡಂ [1]ಮಾಡುತಿರಿರ್ಕೆಮ ಖಚರರವಳ್ಗೀ[1] ||
ಭಂಡಂ ಬಾಂಬರೆಯೊಳ್ ಮಾ |
ರ್ತಂಡನುಮಂ ಪುಲ್ಲ ಕಡ್ಡಿಗಂ ಕೈಕೊಳ್ಳಳ್ ||೬||

ವೇಗಿಲ್ಲಿನ್ನೀಕೆಗಾರುಂ ಗಗನಗತಿಯೊಳೆಂಬೊಂದೆ ಹೃದ್ಗರ್ವಮೋ ವಿ |
ದ್ಯಾಗರ್ವಂ ಪ್ರಾಯಗರ್ವಂ ಕುಲದ ಚಲದ ಗರ್ವಂ ಕಳಾಪ್ರೌಢಿಗರ್ವಂ ||
ಶ್ರೀಗರ್ವಂ ರೂಪಗರ್ವಂ ಪ್ರಬಳಸಹಜಸೌಭಾಗ್ಯಗರ್ವಂ ಜಯಕ್ರೀ |
ಡಾಗರ್ವಂ ಕೂಡೆ ವಿದ್ಯಾಧರಿಗೆ ಪಡೆದುವೇೞೆಂಟು ಸೊರ್ಕಿಂಗೆ ಸೊರ್ಕಂ ||

ಗಾಡಿಗೆ ಮಱಳ್ದು ತನ್ನಂ |
ಬೇಡಲೆ ಸಲೆ ಬಂದ ಖಚರರಂ ಗತಿಯೊಳ್ ಕಿಂ ||
ಜ್ಮಡಿ ಕೊಱಚಾಡಿ ಕಿವಿಗಳ |
ನಾಡಿಸಿ ಬಿಡುವಳ್ ವಿನೋದಮಿದು ಖೇಚರಿಯಾ ||೮||

ಅಮರಗಿರಿಶಿಖರದಿಂ ಪು |
ಷ್ಪಮಾಲೆಯುಂ ಬಿಟ್ಟು ಮೂಮೆ ಬಲಗೊಂಡಾಶೈ ||
ಲಮನವಳಳೆ ಮುಟ್ಟದ ಮು |
ನ್ನಮೆ ಮಾಲೆಯನೆಯ್ದೆ ಪಿಡಿವಳೆನ್ನದು ವೇಗಂ ||೯||

ಬಾಳಕರುಮಂತೆ ಪಾಱುಂ |
ಬಾಳಂ ಮಸೆವಂತೆ ಪಾಱುತನಮಿಂತಾಯ್ತಾ ||
ಕೇಳನ್ನೇನುಮನೇನಂ |
ಗಾಳಗೆ ಗಱಿಮೂಡಿದಂತೆ ಮೋನಂ[2]ಗೊಳ್ವಂ[2] ||೧೦||

ವ|| ಅಂತು ಖಚರಲೋಕದೆ ಕೋಳಾಹಳಮಾದ ತನ್ನ ಮಗಳ ಗಗನ ಗಮನವೇಗಾತಿಶಯಮುಮನಭಿನವಯೌವನಾತಿಶಯಮುಮನೆಂತಪ್ಪರುಮಂ ಮೆಚ್ಚದ ರೂಪಾತಿಶಯಮುಮನರಿಂಜಯಂ ಕಂಡು, ಕೇವಣಿಸದ ಮಾಣಿಕ

ಪಾ—1. ಮಾತಂತಿರ್ಕೆನೋಡೆ ತಾಂ ಖೇಚರನವಳ್ಗೀ. 2. ಗೊಳ್ವಂ.

ವುಂ ಕುಡದ ಕೂಸುಮಿನ್ನಾಗೊರ್ಗಸುಗುಂ ಸೊರ್ಬುಗೆಯುಮಂ (?) ನಲ್ಲನುಮನೊಲ್ಲದ ಪೆಣ್ಣ ಸವಿಯುಂ ಪೆಣ್ಣ ರೂಪುಮೇಂ ಬಾಱೆತ್ತ ವಸಂತ ಮಾಳ (?) ನೆರೆಯದ ಚೂತಲತೆಯುಂ ಕಾಂತನೊಳ್ ನೆರೆಯದ ತನು ಲತೆಯುಂ ಸಹಜಸೌಂದರ್ಯಮುಳ್ಳೊಡಮೆನಿತೊಪ್ಪಲಾರ್ಪುದೆಂದಂಬರಗತಿ ಸ್ವಯಂಬರಮಂ ಮಾಡಲ್ಕಸಂದಂದು ವಿಜಯಾರ್ಧಪರ್ವತಾಗ್ರವನದೊಳಗೆ ನಳನಳಿಸುವ ಕೆಂದಳಿರ ಕಾವಣಂಗಳುಮಂ ಮಿಳಿರ್ವ ಮಲ್ಲಿಕಾಮಂಟಪಂ ಗಳುಮಂ ಬಳ್ವಳ ಬೆಳೆದ ಬಾಳಚೂತದ ಬಾೞೆಜ್ಜಂಪಂಗಳುಮಂ ಲಲಿತ ಲತಾಲತಾನಿಳಯಮುಮನೊಳಗುಮಾಡಿ ಪಲವುಂ ನೆಲೆಯ ಚೌಪಳಿಕೆಗಳನಿಕ್ಕಿಸಿ ಕಾಯ್ತ ಬಳ್ಳಿಕೌಂಗಿನ ಪಸುರ್ವಂದರುಮಂ ಪಣ್ತ ಮಧುರದ್ರಾಕ್ಷೆಯ ಬಾ ೞ್ವಂದರುಮನಿರ್ಕೆಲದೊಳಿಕ್ಕಿಸಿ ನಡೆಪೂವಿನ ಪಂದರುಮಂ ವಿವಾಹವೇದಿಕೆ ಯುಮಂ ಸಮೆಯಿಸಿ ಖಚರಕುಮಾರರೆಲ್ಲಂ ವಿಳಾಸವತಿಯುರೆಯ್ದೆಯುಂಬ ರಕ್ಕೆ ಪೂವಿನ ಮಾಲೆಯುಂ ಪಿಡಿದು ತಡೆಯದೆ ಬರ್ಪುದೆಂದುಭಯಶ್ರೇಡಿ ಯೊಳಂ ಗೋಸಣೆಯಿಡಿಸಲೊಡನೆ—

ಬಿರುದಂಕಂ ಸಂದ ವಿದ್ಯಾಧರಿಯ ಮನಮುದಂ ಸಾರಿಸಲ್ ಚಂದ್ರನೊರ್ವ್ವಂ|
ಸ್ಮರನೊರ್ವ್ವಂ ಚೈತ್ರನೊರ್ವ್ವಂ ನೆಱೆಯದೆ ನೆಱೆದೇಂ ಬಂದುದೋ ಚಂದ್ರ
[ಸೈನ್ಯಂ ||
ಸ್ಮರಸೈನ್ಯಂ ಚೈತ್ರಸೈನ್ಯಂ ಪಿರಿದುಪೊಸಿಸಿ ಬಂದತ್ತು ವಿದ್ಯಾಧರೌಘಂ |
ಸುರಭಿಶ್ರೀಖಂಡಶುಭ್ರಂ ಮೃಗಮದಮಳಿನಂ ಮಲ್ಲಿಕಾಮೋದವಾಹಂ||೧೧||

ಪಸಿಯುಂ ನುಂಗುತೆ ತುಂಬಿ ಚಾದಗೆ ಚಳದ್ಗಂಧಾನಿಳಂ ಪಾಯ್ದು ಝು |
ಲ್ಲನೆ ಜುಂಝಾನಿಳನಾಗೆ ಖೇಚರಚಮೂಹಸ್ತಾಗ್ರಮಾಳೌಘಮೇ ||
ಘುಸಿಕಾಯಂಗಳನೇಂ ಬೞಲ್ದೞಗಿತೋ ರೂಪ್ಯಾದ್ರಿಯೊಳ್ ಪುಷ್ಪನೀ |
ರನವಾಸಾರದಿಸಿಂದುಸಾನುತರುಗಳ್ತೇಂ ಕಾಡುತಿರ್ಪನ್ನೆಗಂ ||೧೨||

ವ|| ಅಲ್ಲಿಗಾಚಿಂತಾಗತಿಯುಂ ತನ್ನ ತಮ್ಮಂದಿರಿರ್ವರ್ವೆರಸು ಬಂದಿ ರ್ದನಾಗಳಾವಿದ್ಯಾಧರಿ ನೆರೆದ ವಿದ್ಯಾಧರರ್ಗೆ ಬಹುರೂಪಿಣೀವಿದ್ಯೆಯಂ ತಾಳ್ದಂತೆ

ಸಮದಾಳೋಕನದಿಂ ಸಮುನ್ನತಕುಚದ್ವಂದ್ವಂಗಳಂ ಸ್ಮೇರಚಾ |
ರುಮುಖಶ್ರೇಣಿಗಳಂ ಬೞಲ್ಮಡಿಗಳಂ ವಿದ್ಯುಸ್ಮಯಂ ಚಕ್ರಮಾ ||

ಕಮಯುಂ ಚಂದ್ರಮಯುಂ ಮಯೂರಮಯಮೆಂಬಂತಭ್ರಮೇನೆಂಬ ವಿ |
ಭ್ರಮದಿಂ ಬಂದರೊ ಸುತ್ತಿ ಮುತ್ತಿ ಸಖಿಯರ್ಸಾಸಿರ್ವರಾಕನ್ನೆಯಂ||೧೩

ಪ್ರೋದಯಿಸಿದಡ್ವ್ರಣಂಬೊಲಿರೆ ಸುತ್ತಿದ ಸತ್ತಿಗೆ ಡಿಂಡಿಮಸ್ವನಂ |
ಕೆದಱಿ ಬೆಡಂಗಿನಿಟ್ಟ ತಿಳಕಂ ತಿಮಿರೊಪ್ಪಮಸೀಯೆ ಕೂರ್ಪ ಕುಂ ||
ದದ ಕಡೆಗಣ್ಣ ಗೇಸ್ ಪ್ರೊಳೆಯೆ ಪಿಲ್ಲಿಸೆ ಕಟ್ಟ ಕಳಕ್ಕ ವರ್ಪ ದ |
ರ್ಪದ ಕುಸುಮಾಸ್ತ್ರಸಂಕಮೆನೆ ಖೇಚರಿ ಬಂದಳದೊಂದು ದೇಸೆಯಿಂ||೧೪||

ವ|| ಬಂದರ್ಚಿಸಿದ ಗತಿಯುದ್ಧಶಿಲಾಪಟ್ಟಮಂ ಮೆಟ್ಟಿ ಮಟ್ಟಮಾಗಿ ಪೂಮಾಲೆಯುಂ ಪಿಡಿದಾಲೀಢಸ್ಥಾನಮಂ ಕೈಕೊಂಡು ನಿಲ್ವುದುಮಾಕೆಯ ಕೆಳದಿ ಚಂದ್ರಲೇಖೆಯೆಂಬಳಂಬರಚರಕುಮಾರರ್ಗಿಂತೆಂದಳ್:—ಈಕುಮಾರಿಯೊಡಸೀಗಿರಿಯಿಂ ಮೇರುಗಿರಿಗೆ ಪೋಱ್ ಜಿನಪತಿಸವನಸುಧಾಸಿಂಧುಸಲಿಲಫೇನಪಿಂಡಪಾಂಡುರಮಪ್ಪ ಪಾಂಡುಕವನಮಂ ಬಲಗೊಂಡಲ್ಲಿಯ ಜಿನಪ್ರತಿಮೆಯ ಪಾದಪದ್ಮಂಗಳನೆರಡುಂ ಕೆಯ್ಯ ಬಾಸಿಗಂಗಳನರ್ಚಿಸಿ ಮುನ್ನಮರ್ಚಿಸಿರ್ದ ಮಂದಾರಮಾಲೆಯುಂ ಕಳೆದುಕೊಂಡೀಕೆಯುಂ ಮಿಕ್ಕ ಬಂದ ಮಹಾಭಾಗನೀಪೂವಿನ ಪಂದೊರೊಳೀಪಂಕಜಮುಖಿಯೊಳ್ ಮದುವೆನಿಲ್ವನೆಂಬುದುಂ ; ಎಮಗೆ ತಮಗೆಂಬ ವಿದ್ಯಾಧರರಂ ನೀಮುನ್ನಗಮಿರಿಮೆಂದು ತಾನುಮೊರ್ವ ತನ್ನ ತಮ್ಮಂದಿರಾಕೆಗೆ ಸೋಲ್ತು ಸಿಗ್ಗಾಗಿ ಬಂದ ಪರಿಭವಮುಂ ಪರಿಭಾವಿಸಿ ಚಿಂತಾಗತಿಯುಂ ಗತಿಯುದ್ಧಶಿಲಾತಳದೊಳಪ್ರತ್ಯಾಲೀಢಸ್ಥಾನಮಂ ಕಳೆದುಕೊಂಡು

ಸಿಲ್ತ ತನು ನಿಂದ ನಿಲವಂ |
ಪೋಲ್ತನ ಗಾಡಿಗಿವಳ ಕಣ್ಣುಂ ಮನಮುಂ ||
ಸೋಲ್ತುವು ಘನಪದಗತಿಯೊಳ್ |
ಸೋಲ್ತಪಳಿವಳೆಂದು ಸೂಚಿಪಂತೆವೊಲಾಗಳ್ ||೧೫||

ನೋಡಿರೆ ಕೇಳ್ದವರೆಲ್ಲಂ |
ನೋಡಲ್ಬಯಸುವ ವಿವೇಕವಿದ್ಯಾಧರನಂ ||
ನೋಡಿದ ಕಣ್ಗಳ್ ಪೆಱರಂ |
ನೋ[1]ಡವು[1] ವೀಕ್ಷಣವಿದಗ್ಧವಿದ್ಯಾಧರನಾ ||೧೬||

ಪಾ—1. ಡವೆ.

ವ॥ ಅಂತು ವಿಳಾಸವತಿಯುಂ ಕೆಳದರ್ ಗತಿಯುದ್ಧಕ್ಕೆ ಕಳನೇಱಿ ನಿಲ್ವುದುಂ ; ಉಭಯಪಕ್ಷದೊಳ್ ಸೂೞೈಸುವ ದುಂದುಭಿಗಳ್ ಪೊಡೆವ ಪಟಹ ಡಕ್ಕೆಗಳ ಬೊಬ್ಬಿಱಿವ ಖೇಚರಿಯರ ತುಮುಳರವದೊಳ್ ತೊಡರ್ದು ಪರಿವಂತೆ ಮನಪೊಳ್ತ್ರಚ್ಚರಿಸಿ ಪಾಱುವಂತೆ ನುಸುಳಂ ನೊಪ್ಪುಮನಪ್ಪುಕೆಯ್ದು

ನಸು ಮಸುಳ್ದಂಗಲೇಱಿಪೆ ಪೊಱಮಟ್ಟರೆ ಗೊಲ್ ಪೊಱವಾಱ ಮೇಲೆ ಪ |
ತ್ರಿಸಿದ ಮಡಂ ಕರದ್ವಯದೆ ಬಿದ್ದಿಸೆವೆತ್ತದ ಮಾಲೆ ಮಂಡನಂ ॥
ಕಿಸುವ ಮುಖೇಂದು ಮಾಚಲನುಗೆಯ್ದು ಕುಚಂ ಮುಱಿಕಲ್ಪಭಂಗಿ ಕ |
ಣ್ಗೆಸೆದಿರೆ ಪಾಱಿದಳ್ ಪೊಳೆದು ಖೇಚರಿ ಮಿಂಚಿನ ಬೊಂಬೆಯೆಂಬಿನಂ ॥೧೭॥

ಸಱಿಗಲ್ಲಂ ದಬ್ಬಕದಿಂ |
ದಿಱಿದೊಡೆ ಕಿಡಿ ಹಾಱುವಂತೆ ಮುಂತೊಗೆದ ಮುಗಿ ॥
ಲ್ದುಱುಗಲನೆ ಖಚರಿ ಕುಚದಿಂ |
ದಿಱಿದಳ್ ಕಿಱುಮಿಂಚು ನುಚ್ಚುನುಱಿಯಪ್ಪಿನೆಗಂ ॥೧೮॥

ವ॥ ಜಿಂತಾಗತಿಯುಂ ತನ್ನ ಪೆಸರಂ ನನ್ನಿಮಾಡಿ ತರುಣಿಗೆ ತಕ್ಕುಗೊಟ್ಟು ಪೆಱಗೆ ಪಾಱಿ ಪೋಗಿ ಮಿಡಿವಸಿತು ಬೇಗಕ್ಕೆ ಮಂದರಮನೆಯ್ದಿ ಪಾಂಡುಕಶಿಲಾತಳಮಂ ತ್ರಿಃಪ್ರದಕ್ಷಿಣಂಗೆಯ್ದಲ್ಲಿಯ ಪರಮೇಶ್ವರಪ್ರತಿಬಿಂಬದ ಪದಾಂಭೋಜಕ್ಕೆ ಕೆಯ್ಗೆ ಕುಸುಮದಾಮಮನೇಱಿಸಿ ನೊಸಲೊಳಿಟ್ಟು ಪೊಡೆವಟ್ಟು ರೂಪಸ್ತವವಸ್ತುಸ್ತವಗುಣಸ್ತವಂಗಳಿಂ ಸ್ತುತಿಯಿಸಿ ಪಂಚಗುರುಭಕ್ತಿಪೂರ್ವಕಂ ಪಿರಿದುಪೊೞ್ತು ದೇವರಂ ಕಂಡು ದೇವರ್ಕಳರ್ಹದ್ದೇವನ ದಿವ್ಯಶ್ರೀಪಾದಪದ್ಮದ ಮೇಲೆ ಮಂದವಾಗೊಟ್ಟಿದ ಮಂದಾರಮಾಲೆಯುಮಂ ಚಂದನಕರ್ದಮಮುಮಂ ಮುತ್ತಿನ ಸಲಗೆಯಂತೆ ನವಮಾಳಕೆಯ ನನೆಗಳಂತೆ ಸಿಡಿಯುವುಂ ಕಮ್ಮಿದುವುಮಪ್ಪ ಕಳಮಾಕ್ಷತಂಗಳುಮಂ ತುಱುಬಿ ತಿಳಕಮಿಕ್ಕಿ ತನ್ನ ಗೆಲವಿಂಗೆ ಸೇಸೆಗೊಳ್ವಂತೆ ಸೇಸೆಗೊಂಡು ಹರ್ಷೋತ್ಕರ್ಷಚಿತ್ತನುಂ ರೋಮಾಂಚಕಂಚುಕಿತಶರೀರನುಮಾಗಿ ಬೞಿಕಮಕೃತ್ರಿಮಚೈತ್ಯಾಲಯಂಗಳೆಲ್ಲಮಂ ಬಂದಿಸಿ ದೇವಗಿರಿಯುಂ ದೇವನಂತೆ ಮಗಮಗಿಸಿ ಮಗುೞ್ದು ಬರುತ್ತುಂ ತನ್ನೊಳಿಂತೆಂದನಮುರ್ದಂ* ಮರ್ದುವೇಟ್ದಂತೆಯುಂ ಮಲರ ಮೇಲೆ ಮದಾಳಿಗೆ ದಾೞಿವೇಟ್ದಂತೆಯುಮನ್ನೆವರ

ಮೆನ್ನ ಪುರುಳ್ಕಟ್ಟು ದುರಾಗ್ರಹಂ ದುರಿತಹರವಾದುದು, ಲತೆಯೆನಿತ್ತು ಬಳ್ಳಿತ್ತಾದೊಡಂ ಮರದಿಂ ಬಳ್ಳಿತ್ತಲ್ತು, ಪಾರ್ವೊಡೆ ಪೂವಾಳಿಗಂ ಪಾಶಕ್ಕವು ಜಗಜಾಂತರಂ, ಚಪಳಪ್ರಕೃತಿಯಪ್ಪ ಪೆಂಡಿರ್ಗೆತ್ತಾನುಮೊಂದು ಗುಣಲವಂ ಘುಣಾಕ್ಷರನ್ಯಾಯದಿನಾದುದಾಡೆದೊಡನಗುರ್ವ ಮಾಡಿಕೊಂಡು ಕೊನೆದು ಕೊಣಕಿಟ್ಟು ಕೋಣನನಿಱಿವ ಭಗವತಿಯಂತೆ ಬಿಱ್ರನೆ ಬೀಗಿಯುವನೆ ಮುಂದೇಂಗೊಂಡಿರ್ಪರೆಂದು ನಸುನಗುತ್ತುಂ ಮೆಲ್ಲಮೆಲ್ಲನೆ ಖಚರಗಿರಿಗೆ ವಂದು ಗತಿಯುದ್ಧಶಿಲಾತಳಮನೇಱಲೊಡನೆ—

ಪೂವಿನ ಮಱೆಯುಂ ಸುರಿದರ್ |
ದೇವರ್ಕಳ್ ದೇವದುಂದುಭಿಧ್ವನಿ ನಭಮಂ ||
ತೀವಿದುದು ಮೇಗಮಂ ಖಚ |
ರಾವಳಿ ಪೊಗೞ್ದುದು ವಿವೇಕವಿದ್ಯಾಧರನಾ ||೧೯||

ದೊರೆವೆತ್ತು ವ್ಯೋಮಯಾನೋನ್ನತಿವಿತರಣವಿದ್ಯಾಧರಂಗಿಂದು ತಾನೊಂ|
ದರಿದಲ್ಲೆಪೇೞ್ದ ಪುಣ್ಯಾಂಬುಧಿಯೆ ವಿಬುಧವೃಂದಸ್ತುತಂ ನೇಮಿನಾಮಾ ||
ಚರಣಂ ತಾನಾಗಿ ಶುಂಭತ್ಸಮವಸೃತಿಸಭಾಸಂಯುತಂ ಶೋಭೆವೆತ್ತಂ |
ಬರಮಾನಶ್ರೀಯ ಪೆಂಪಂ ತ್ರಿಭುವನಜನತಾಶ್ಚರ್ಯಮಪ್ಪಂತು ತೋರ್ಪಂ||

ವ|| ಎಂದೋದೆ ಕೊರಲಿಂ ವೃಂದಾರಕವೃಂದಂ ಪೊಂಗಿ ಪೊಗೞುತ್ತುಮಿರ್ಪಂತೆನಗಮಧ್ಯಮಾರ್ಗದೊಳ್ ಮಗುೞ್ದು

ಅಂತೆನೆ ಬಂದಳಾಕೆ ಮದನಾನಳನುರ್ವೆ ಕರಂ ಬಱಲ್ದ ತ |
ನ್ನಂ ತಗೆದೆತ್ತಿಕೊಂಡು ನವಿಲುಂ ಪೊಣರ್ವಕ್ಕಿಯ ಮೇಲೆ ಪಾಱ್ ಬ ||
ರ್ಪಂತೆವೊಲೊಪ್ಪೆ ಬಿಟ್ಟಮುಡಿಯುಂ ಮೊಲೆಯುಂ ವಧು ನಾಡೆಯೋಡೆ ಬೆ|
ನ್ನಂ ತಗುಳ್ದಚ್ಚ ಕಾಮನಲರಲಂಬಿನ ಬಾಯೊಳೆ ಬಂದಳೆಂಬಿನಂ ||೨೧||

ಬೆಮರಂ ವ್ಯೋಮಪ್ರಯಾಣಂ ಪಡೆದ ಬೆಮರ್ಗಳೊಳ್ ಬಾಷ್ಪಮಂ
[ಸೋಲ್ತ ಸಿಗ್ಗಿಂ |
ದಮೆ ಪೂರಂಬಾಯ್ವ ಬಾಷ್ಪಂಗಳೊಳೆ ಸಮಸರಂ ಮಾಡಿದುಚ್ಛ್ವಾಸಖಿನ್ನ ||
ಶ್ರಮಮಂ ಪ್ರೋಡ್ಡೀನಡೀನಶ್ರಮದೊಳೊಗೆದ ರೋಮಾಂಚಮಂ ಶೀತವಾತ|
ಸ್ತಿಮಿತೋಪಸ್ಪರ್ಶರೋಮಾಂಚನೊಳೆ ಬೆರಸಿದಳ್ಕನ್ನೆಗೇಕಿನ್ನಮಂ ||೨೨||

ಎಡೆಗಿಱಿದಬಲೆಯ ಮೊಲೆಯಿ |
ಟ್ಟೆಡೆಯೊಳ್ ಕೊಳಗೊಂಡು ನಿಂದುವಲ್ಲದೆ ನುಸುಳಲ್ ||
ಪಡೆಯವು ಮದನಾಸ್ತ್ರಗಳಂ |
ದೊಡೆ ಮುತ್ತಿನ ಹಾರಮೆಂತು ಪೇೞ್ನುಸುೞ್ವುದೇ ||೨೩||
ಜವದಿಂ ವಿದ್ಯಾಧರಿಯುಂ |
ವಿವೇಕವಿದ್ಯಾಧರಾಂಕನೇಂ ಗೆಲ್ದನೆ ಕೈ ||
ತವದಿಂ ಬೞಲಿಸಿ ಗೆಲಿಸಿದ |
ನಿವನೆನೆ ಕಾಮಂ ವಿಕಾರಬರಮಂ ಪಡೆದಂ ||೨೪||

ವ|| ಅಂತಾಕೆಯಾವ ಮೆಯ್ಯೊಳಂ ಸೋಲ್ತು ಚಿಂತಾಗತಿಗೆ ಜಿನಪೂಜೆಗೆಂದು ಪಿಡಿದು ಪೋದ ಪೂಮಾಲೆಯನಿದಕ್ಕೆ ಮತ್ತಾವನುಂ ಯೋಗ್ಯನಲ್ಲಂ ಭಾವಿ ಜಿನನಪ್ಪ ನೀನೇ ಯೋಗ್ಯನೆಂಬಂತೆ ಮಾಲೆಸೂಡಲೆತ್ತಿದೊಡೆ ಪಾವಂ ಕೊರಲೊಳಕ್ಕಿದಂತಗಿದು ಪಾಱ್ ಪೆಱಮೆಟ್ಟಲೊಡನೆ—

ಅವನೀಭರ್ತಾರನ ಚಿ |
ತ್ತವಜ್ರಮುಂ ತಾಗಿ ತಾಗಿ ತರಳಾಪಾಂಗಂ ||
ಸಿವುಱಿದ್ದಂತೆವೊಲೆಸೆದುವು |
ಯುವತಿಯ ನವಕರ್ಣಪೂರಕುವಲಯದಲರ್ಗಳ್ ||೨೫||

ವ|| ಆಕೆಯ ನೋಟಕ್ಕೆ ನಸುನಗುತ್ತುಮಾಗೆಲವೆನ್ನ ತಮ್ಮಂದರ ಸೋಲವಲ್ಲದೆನ್ನ ಗೆಲವಲ್ಲದಿವರೀರ್ವರೊಳಾವಂ ನಿನ್ನ ಮನಕ್ಕೆ ವಂದನವಂಗೆ ಮಾಲೆಯುಂ ಸೂಡೆನೆ ಸಿಗ್ಗಾಗಿ ವಿಳಾಸವತಿಯಿಂತೆಂದಳ್ :—

ನೀರೇಜಸಿಯೆನಿತಲರ್ದೊಡಂ |
ಸಾರದೆ ಪೋದಂ ದಿನೇಶನಂತೆನಗಂ ನೀಂ ||
ದೂರಪ್ರಿಯನಾದ್ಯೈ ಸಂ |
ಸಾರಂ ವ್ಯರ್ಥಮಾದುದೆಂದು ಬೆಱ್ಗನೆ ಸುಯ್ದಳ್ ||೨೬||
ನಿನ್ನೊಂದೆ ನೋಟಗುಣದಿಂ |
ನಿನ್ನಿಂದಮುಮುಱುವ ಮದವನೊಳ್ ಮದುವೆಯನಿಂ ||
ದಾನ್ನಿಲ್ಲದಂತು ತಪ್ಪೆಂ |
ನನ್ನಿಗೆ ಪುಸಿದಂದು ನಗಿಸದೇ ಮುತ್ಕುಲಮಂ ||೨೭||

ವ|| ¹ಉತ್ತಂಗ,¹ ನಿನಗಾಂ ಮುನಿಯಲೇಕೆ| ಪಸೆಯೊಳ್ ಪಾವು ಕೊಂಡುದೆಂಬಂತೆನಗೆ ನಿನ್ನಂತಪ್ಪ ಪುರುಷನಂ ದೊರೆಕೊಳಿಸಿ ಕಳಂಚುಮಾಡಿ ಕಳೆದ ದುರ್ವಿದಗ್ಧವಿಧಾತ್ರಂಗೆ ಮುನಿಪೆನಾಂ | ಮುನ್ನಂ ಬೇಱೆ ನೋಂತೆನಿಲ್ಲಕ್ಕುಮರ್ಹದ್ದೇವನೊಂದು ಚರಣಕ್ಕೆ ಪೂವಂ ಮಿಗೆಯೇಱಿಸಿ ಮತ್ತೊಂದು ಚರಣಕ್ಕೆಯೇಱಿಸಲ್ಕಱಿದೆನಕ್ಕುಮೆಂದಾನಿರ್ವೇಗದೊಳೆ ಬೇಗಂ ಪೋಗಿ| ಮುನ್ನಂ ತನ್ನ ಮದುವೆಗಿಕ್ಕಿದ ಪೂವಿನ ಪಂದರೊಳ್ ತಪಮೆಂಬ ಮದವನಿಗನೊಳ್ಮದುವೆನಿಲಲ್ಬಗೆದು | ಪಾಸಿದ ಪಸೆಯ ಮೇಲೆ ²ಪುಲ್ಲಂ ತಿಱಿದು² ಕುಳ್ಳರ್ದು ಕೆಯ್ಯಿಕ್ಕಿಕೊಂಡಿರ್ಪುದುಮಾವುನ್ಮೀಲಿತಲೋಚನೆ ಲೋಚನಮಾಡಲೆಂದು³ಮಾನವಾ³ರ್ಜಿಕಾಕರೇಣುಕರಕೋಮಲಾಂಗುಲಿ ಗಳಗಳಸಿಯಳ ಕುಳಮಳಸಮಪ್ಪ ಕುಂತಳಕಮಳವನದೊಳಗೆ ಪುಗುವಾಗಳ್—

ಅಳಕೆಯ ಕಂಪಿಂಗೆಱಗಿ |
ರ್ದಳಿಗಳ್ ಪಾಱಿದುವು ಕುಸುಮಕೋಮಳೆಯೇನಾ ||
ರ್ಪಳೆ ಕೀಱೆ ಸೈರಿಸಲ್ಕಂ |
ದಳಕಂಗಳ್ ತಮಗೆ ತಾಮೆ ಪಾಱುವ ತೆಱದಿಂ ||೨೮||

ಬೆದಱಿ ಕುಡುಪದದ ಕಿಚ್ಚಿ |
ರ್ದುದನೀಕ್ಷಿಸಿ ಪಿಡಿವ ರತಿಯ ಕೆಯ್ಯಂ ಮಿಗೆ ತೀ ||
ವಿದ ಮನೆ ತೀವಿರ್ದಂದದೆ |
ಮದನಂ ತದಗ್ರಸಭವನದಿಂ ಪೊಱಮಟ್ಟಂ ||೨೯||

ವ|| ಅಂತು ತನ್ನೊಡವಂದ ಸಾಸಿರ್ವರ್ಸಖಿಯರ್ವೆರಸು ತಪಂಬಟ್ಟು ಮುನ್ನೆ ತನ್ನ ಕುಚಕಚವಿಳೋಚನಾದ್ಯವಯವಂಗಳ್ಗೆಱಗಿದಾತನ ನಿಜಚರಣಕ್ಕೆಱಗಿದ ಖಚರಿಯ ಪರಿಚ್ಛೇದಕ್ಕೆ ಮೆಚ್ಚಿ

ಆಗುಣವತಿಯ ತಪಂ ನಿ |
ರ್ವೇಗಕ್ಕೆ ನಿಮಿತ್ತಮಾಗೆ ನಿಶ್ಚಿಂತಂ ಚಿಂ ||
ತಾಗತಿಯನುಜಯುತಂ ಸಂ |
ಭೋಗಮನಿಂ ಬಿಟ್ಟು ದೀಕ್ಷೆಯಂ ಕೈಕೊಂಡಂ ||೩೦||

ಪಾ—1. ಗ, ಅಂತುಂ. 2. ಗ, ಮಾಲಂತಿಗಿಱಿದು. 3. ಕ, ಗ, ರಾಮಾ

ಅಸಿಯುಳ್ ಖೇಚರನೊಲ್ಲದಿರ್ದೊಡೆ ತಪಂಬಟ್ಟಂದದಿಂದಾ ಬುಧಂ |
ಬಿಸುಟುವೀರ್ವಧು ಭೂಮಿಭೃದ್ಭುಜವನಕ್ಕೇೞ್ತಂದು ವೈರಾಗ್ಯದಿಂ ||
ದಸಿಧಾರಾವ್ರತಮಂ ನೆಗೞ್ದ ತಳೆದಳ್ತನುಂ ಕ್ಷಮಾರೂಪಮಂ |
ಮಸೆದಂ ಕಲ್ಪಿಸವೇೞ್ಪುದೇ ಪುರುಡಿನೊಳ್ ಪೆಂಡಿರ್ಗೆ ಪಾಂಡಿತ್ಯಮಂ ||೩೧||

ವ|| ಅಂತು ಮೂವರುಮೊರ್ವಳೊಳೆ ಮದುವೆನಿಂದು ನಿಜಾಯುರವಸಾನದೊಳ್ ಮಹೇಂದ್ರಕಲ್ಪದೊಳ್ ಸಾಮಾನಿಕನಿಳಿಂಪರಾದರ್.

ಅಚಿಂತಾಗತಿಯ್ಯೆ ನೀಂ |
ಭೂಚರಪತಿಮಕುಟಮಣಿಗಣಾರ್ಚಿತಪದಕಮ ||
ಖಾಚಸಳಗತಿವಿಯಚ್ಚರ |
ನೀಚಾರಣತಿಲಕನಾಂ ಮನೋಗತಿಯೆಂಬೆಂ ||೩೨||

ವ|| ಅಲ್ಲಿ ಸಪ್ತಸಾಗರಜೀವನಮಂ ಜೀವನೆಂಬಗಸ್ತ್ಯನಿಂದೆ ನೀಂ ಬಂದಪರಾಜಿತ[1]ನಾದಯಾ[1]ವೀರ್ವರುಂ ಬಂದು ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಳಾವತೀವಿಷಯದ ವಿಜಯಾರ್ಧದುತ್ತರಶ್ರೇಣಿಯ ಗಗನವಲ್ಲಭನಗರಮನಾಳ್ವ ಗಗನಚಂದ್ರಖಚರೇಂದ್ರಂಗಂ ಗಗನಸೌಂದರಿಗಮಮಿತಗತಿಯುಮಮಿತತೇಜನುಮೆಂಬ ತನುಜರೆಮಾಗಿ ಪುಂಡರೀಕಿಣಿಯೊಳ್ ಪುಂಡರೀಕತ್ರಯಾದಿವಿಭವವಿಭ್ರಾಜಿತನಾಗಿರ್ದ ಸ್ವಯಂಪ್ರಭಜಿನಪ್ರಭುವಂ ಪೂಜಿಸಲ್ಪೋಗಿ ಭವದೀಯ ಭವತ್ರಯಮಂ ಜಗತ್ರಯಪತಿಯ ಪಕ್ಕದೊಳ್ಕೇಳ್ದು ಸರ್ವಸಂಗಮುಮಂ ಬಿಸುಟ್ಟು ಸಂಯಮಮಂ ತಳೆದುಕೊಂಡು ಸದಾಚರಣದಿಂ ಗಗನಚಾರಣಬುದ್ಧಿಸಂಪನ್ನರೆಮಾಗಿ ನಿನ್ನಂ ನೋಡಲೆಂದು ಬಂದೆವಲ್ಲದೆಯುಂ ನಮ್ಮನ್ಯೋನ್ಯಪ್ರೀತಿನಿಮಿತ್ತಮಪ್ಪ ಪೂರ್ವಭವಪ್ರಪಂಚಮಂ ಪೇೞ್ವೊಡೆ—

ಬಳೆದೆಸೆವ ಮಗಧಮಂಡಳ |
ದೊಳಗೆಸೆವುದು ಕಾನನಂ ಕಳಂಕಂ ಶಶಿಮಂ ||
ಡಳದೊಳೆಸೆವಂತೆ ಮೃಗಮದ |
ಮಳನಂ ವಲ್ಮೀಕಮೃಗಮಹಾಮಹಿಮಜಯಂ ||೩೩||

ಅದು ಜಂಬೂಜಂಭರಂಭಾಕುಳಕಬಕುಳಕಂ ಪಿಲ್ಲಸತ್ಪಾರ್ಣಸಪ್ತ |
ಚ್ಛದನಾದೇಯಪ್ರಿಯಾಳಪ್ರಿಯಕಕುರವಕಾಶೋಕನಿಂಬಾಮ್ರಕುಂಭೀ ||

---

ಪಾ—1. ಕ, ಗ, ದೆವಾ

ಬದರನ್ಯಗ್ರೋಧಗುಂದ್ರಾಪಿಚುಳನಿಚುಳಕಾಶ್ಮರ್ಯಮಾಲೂರಲೋಧ್ರೈಂ ।
ಗುದಿಕಾಕ್ಷಪ್ಲಕ್ಷಪಥ್ಯಾಮಳಕತಿಳಕಭೂರ್ಜಾದಿಭೂಜಾವಕೀರ್ಣಂ ॥೩೪॥
ನವನಿರ್ಮೋಕಗ್ರಹವ್ಯಾಕುಳನಕುಳಕುಳಂ ಘೋರವಸ್ಫಾರಥಕ್ಕಾ ।
ರವವಲ್ಗದ್ವಾನರಂ ಮಾರುತಚಳತತಮಾಳಾಹಿತೋತ್ಕಂಠಕಂಠೀ ॥
ರವದಂತಿಭ್ರಾಂತಿದಾನದ್ರವಕಿಸಲಯಜಾಲಾನುಸಂಸರ್ಪಿಶೂರ್ಪ ।
ಶ್ರವಸಂಭ್ರಶ್ಯತ್ಪತಂಗಾಶಯಶಯುಗಿಳತಾಪತ್ತಿತತ್ಕೀರ್ಣಪರ್ಣಂ ॥೩೫॥

ಕದಳೀಪ್ರಿಯಕಶಿವಾರ್ಜುನ ।
ಕದಂಬಪುನ್ನಾಗತಾಳಚಮರಕಶಲ್ಯಾ ॥
ಸ್ಪದಮಾಯ್ತು ಪುದಿದ ಪಾದಪ ।
ಕದಂಬದಿಂ ಮೃಗಕದಂಬದಿಂದಾವಿಪಿನಂ ॥೩೬॥

ಅಳಗರ್ದಮಾಳುಧಾನಕ ।
ತಿಳುಪನಿರ್ಮುಕ್ತಶೇಷಶಯುವಾಸುಕಿರಾ ॥
ಜಳಜಾಳನಿಕೇತಂ ಕ ।
ಟ್ಟಳಪುದು ಫಣಿಲೋಕದಂತೆ ತತ್ಕಾಂತಾರಂ ॥೩೭॥

॥ ತಿವದಿ ॥

[1]ಮಾಮಾಳ[1]ಕಪುನ್ನಾಗಗಂತಮೆಮೊಂ ।
ದೀನತೆವಪುವೆ ತಿಮಿರದೊಳೆನಿಪುವು ।
ನಾನಾಹಿಮಸ್ತಮಣಿದೀಪಾ (?) ॥೩೮॥

ಕರಟತಟಘಟಿತಮದಸುಂ ।
ದರಸುಭಗಸಲೀಲಗತಿಗೆ ಸೋಲ್ತು ಕರಂ ಕೇ ॥
ಸರಿಣಿ ನಡೆ ನೋಡೆ ರದನಿಗೆ ।
ಪುರುಡಿಸಿ ಪಾಯ್ವಂತೆ ಪಾಯ್ದುದಲ್ಲಿ ಮೃಗೇಂದ್ರಂ ॥೩೯॥

ಭೃಂಗಮಲಿನೋಪಕಂಠಂ ।
ತುಂಗಶಿಖಾಚುಂಬಿಚಳತಚಂದ್ರಂ ಗಿರಿಜೇ ॥
ಶಂಗೆಣೆಮಂದುದು ಜಗದ ಭು ।
ಜಂಗಮವಳಯಾದಿಭಾಸಿ ಚಂದನನಿವಹಂ ॥೪೦॥

---

ಪಾ.—1. ಕ, ಕಾಮೋಳ. ಈ ಪದ್ಯದಲ್ಲಿ ವೃತ್ತವೂ ಪ್ರಾಸವೂ ತಪ್ಪಾಗಿವೆ.

ಅಡಸಿ ಫಣಿ ಸುತ್ತೆ ಚಂದನ |
[1]ಕಡೆ[1] ಮೊದಲುಮನೊರಸಿಕೊಳ್ವ ಕೊರಲುಮನೆೞಸೊ ||
ಕೆರ್ಱಡೆದು ಕಟತಟದಿನಿೞಿತರೆ |
ನಡುಪಟ್ಟಭಮಲ್ಲಿ ಕಟ್ಟುವಟ್ಟವ್ರೊಲಿಕರ್ಱಂ ||೪೧||
ಪಿಡಿದು ಕೊಲೆ ಜೀವರಾಶಿಯು |
ನಡಿಗಡಿಗರೆಯಾದೊಡಾ[2]ಯುಗಳ್[2] ಪ್ರಾಣಮನಾ ||
ಗಡೆ ಪಾಯ್ದು ಕೊಳ್ವ ತೆಱದಿಂ |
ಕುಡಿವುವು ಬಾಯ್ದೆಱೆದು ಪವನನಂ ಫಣಿತತಿಗಳ್ ||೪೨||
ಜೆಡೆಯುಂ ಬಕ್ಕಳೆಯುಮನಾ |
ೞ್ದಡವಿಯೊಳಿರ್ದಲರಸಲದೆ ಕೋಟರಮುಖದಿಂ ||
ಕುಡಿವ ವಟವಿಟಪಿಪಟಳಂ |
ತುಡುಂಕುವಂತಿರ್ಪುದಾವ ಚೋದ್ಯಮೊ ದಿವಮಂ ||೪೩||
ನೀರಡಸಿದ ಕಾಸರಪತಿ |
ಕೇರೆಯುನಗದೊಸರೆಗೆತ್ತು ನಕ್ಕುವುದಹಿಯುಂ ||
ಸೈರಿಭದ ಬಾಯ ನೊರೆಯುಂ |
ಸೈರಿಸಿ ಪಾಲೆಂದು ನಕ್ಕುವುದು ಕಾನನದೊಳ್ ||೪೪||
ತಾರಗೆಯೆನೆ ತೊನೆಗೊಟ್ಟದ |
ಮೂರಿಯ ರೋಮಂಥಫೇನಮಂಜರಿಸಿಕರಂ ||
ಕಾರಿರುಳ ತಿರುಳದೆನೆ ಮದ |
ಸೈರಿಭಮಿರ್ಪುವು ಚಳತ್ತಮಾಳದ ನೆೞಲೊಳ್ ||೪೫||
ಗಿರಿಗುರುಚಪೇಟಪಾಟಿತ |
ಕರಿಯುಂ ಹರಿ ಕೊಂಡು ಕೀಱ ಪಾಱುವುದರುಣಾ ||
ತ್ಯರುಣತನು ತರುಚರೇಂದ್ರಂ |
ಶರಧಿಗೆ ಕೈಬೆಟ್ಟವೆತ್ತಿ ಪಾಱುವ ತೆಱದಿಂ ||೪೬||
ಬಲಿದುಗುರ್ಗಳಿಲ್ಲ ಪಲ್ಗಳ |
ಬಲಮಿಲ್ಲ ಕಡಂಗಿ ಕಾದುವುವು ಕಾನನದೊಳ್ ||

ಪಾ—1. ಗ, ದಡಿ. 2. ಗ, ಯುಗ.

ತೊಲಗದೆಳವೆಳಗುಮೆಳಗ |
ಱ್ತಲೆಯುಂ ತಲೆಯೆತ್ತದಂತೆ ಹರಿಕರಿಶಿಶುಗಳ್ ||೪೭||

ತಮಮಂ ಕಾಡೊಳಕೊಂಡು ಕಾದ ಪಗೆ ತಮ್ಮಿರ್ವರ್ಗಮಂತಾದೊಡಂ|
ಸಮಮರ್ಕಂ ಸುಡುತುಂ ನಿಜಾತ್ಮಶಿಖಿಯಿಂದಾನಂದಿಪಂ ಚಂದ್ರನಿಂ ||
[1]ದುಮಣಿ[1]ಸ್ರೋತದಿನೆಂಬವೋಲ್ ವಿಪಿನದೊಳ್ಕ್ಕುದುತ್ಪಳಾನೀಕಮಂ |
ಕಮಳಾನೀಕಮನರ್ಕಗೃಹ್ಯಕುಲಮಂ ಕೊಲ್ಗುಂ ವನೇಭೋತ್ಕರಂ ||೪೮||

ಅವನದೊಳರ್ಪುದವತಮ |
ಸಾವೃತದೊಳದೊಂದು ಶಬರಶಿಬಿರಂ ಪಾವಂ ||
ತೀವಿದವೋಲಪ್ಪಾತಾಳದೊ |
ಳಾವನಮಿರ್ಪಂತೆ ದುಷ್ಟದಾನವಶಿಬಿರಂ ||೪೯||

ಪೊಡೆದತ್ತಂ ಪರಿಯುತ್ತುಮಿರ್ಪ ಪುಱುವಂ ತಿಂಗುಂ ಶಿಶುಶ್ರೇಣಿಗಳ್ |
ಪಿಡಿದುರ್ಕಿಂ ಪೊಲಗೆಟ್ಟು ಪೊಕ್ಕ ಮೃಗಶಾಬಾನೀಕಮಂ ಕೊಂಡು ಕೇ ||
ಸಡಗಂ ಸೂಡುವರಲ್ಲಿ ಬಾಲೆಯರೆನಲ್ಕರ್ಮತ್ತದಿಂ ಮತ್ತಮೊಂ |
ದೆಡೆಗೇನೀಗುಮೆ ಪೋಗಲುತ್ಕಟಮಹಾಪಾಪಕ್ಕೆ ತಾಂ ಪಕ್ಕಣಂ ||೫೦||

ಮದಗಜಕುಂಭಕೋಟಿಯ ಕಲಂಕಗಿದಂತವ[2]ಕಾ[2] ತರಕ್ಷುಚ |
ರ್ಮದ ತೆರೆಸುತ್ತು ಕೇಸರಿಯ ದಾಡೆಯ ಜೂದಿನ ದಿಂಟೆ ಪೀಲಿಯಂ ||
ಪೊದೆಸಿದ ಪಂದರಾಳಿಯಲರಾನೆಯ ಮುತ್ತಿನ ರಾಸಿ ಜೇನತು |
ಪ್ಪದ ಕೆರೆಯಲ್ಲಿ ನೆತ್ತರ ಕೊಳಂ ಚಮರೀವೃಕವಾಳತೋರಣಂ ||೫೧||

ಅಪಳ್ಳಿಗಧಿಪನಾದಂ |
ಕೋಪದೊಳರದರುಣನಾದ ಸಂಗರವಿಜಳ ||
ಚಾಪದೊಳರ್ಜುನನಾದಂ |
ರೂಪದೊಳತಿಕೃಷ್ಣನಾದ ವಿಂಧ್ಯಕನೆಂಬಂ ||೫೨||

ಪೊಸಕೋಲಂ ಗಱಿಗಟ್ಟುವಂ ಗರುಡಪಕ್ಷಚ್ಛೇದದಿಂ ತಿರ್ದುವಂ |
ಪ್ರಸರದ್ದಂತಿಯ ದಂತದೊಳ್ ಹರಿಯ ದಂಷ್ಟ್ರಾಲೇಖೆಯಂ ಕಿಱ್ತತೆ ||
ತ್ತಿಸುವಂ ಲೀಲೆಯೊಳರ್ಧಚಂದ್ರಶರಮಂ ಮಾಡ್ಪಿಱ್ತಿಯಿಂದುಣ್ಮದ |
ಳ್ಳಸೆ ಸಿಂಹೀಸುತನೇತ್ರದತ್ತಪತಿಶೋಕಾ[3]ವಂಧ್ಯಕಂ[3]ವಿಂಧ್ಯಕಂ ||೫೩||

---

ಪಾ—1. ಗ, ದ್ಯುಮಣಿ. 2. ಕ, ಕೇ. 3. ಗ, ವೃಂದಕಂ.

ಜಯವಡೆದಾಪುಳಿಂದಿಸತಿಯಾಡುವ ಬೇಂಟೆಗೆ ಬೆರ್ಚಿ ಪೋಗೆ ಚಂ |
ಡಿಯ ಮಱಿಯುಂ ಮೃಗಾರಿ ಮುರವೈರಿಯ ಮೈಮಱಿಯುಂ ಖಗೇಂದ್ರನು||
ರ್ವಿಯ ಮಱಿಯುಂ ಮಹಾಪ್ರಳಯದಾದಿವರಾಹನಿದದ್ಭುತಂ ದಿಶಾ |
ಳಿಯ ಮಱಿಯುಂ ಗಡಿನ್ನುಮವೆ ಪೊಕ್ಕುಱಿದಿ¹ದರ್ವು¹ವಷ್ಟದಂತಿಗಳ್ ||೫೪||

ಆವನಚರನ ಮನಃಪ್ರಿಯೆ |
ಪೂವಿನ ಬಿಲ್ಲಾತನವಳ ಯೌವನಸಲ್ಲ ||
ಕ್ಷ್ಮೇವನಚರನೆನೆ ದೃಕ್ ಶಫ |
ರೀವಾಗುರಿ ಪೆಸರೊಳಾಕೆ ವಾಗುರಿಯೆಂಬಳ್ ||೫೫||

ವಾಗುರಿಕೆಯ ಮೊಲೆಮೆಟ್ಟದ |
ಮೇಗಣ ಪರಿಪಕ್ವಬಿಂಬಫಲರಸಮಂ ಪೀ ||
ರ್ದಾಗಳೆರ್ದೆ* ತಣ್ಣನೆ ತಣಿ |
ದೀಗಡಸಿರಲುಱಿದ ಪಣ್ಣನೊಲ್ಲಂ ಭಿಲ್ಲಂ ||೫೬||

ಎನಿತಂ ಕತ್ತರಿಸಿದೊಡಂ |
ವನೇಚರಂ ನಡೆವನಡರೆ ಪೊಳೆದಡಗದ ಮಿಂ ||
ಚಿನ ಗೊಂಚಲಂತೆ ಮಿಂಚುವ |
ವನೇಚರಿಯ ಬಿಳಿಯ ಕಣ್ಣ ಬೆಳಗಿಂ ಬನದೊಳ್ ||೫೭||

ಧವಳವಿಲೋಚನಂ ಪೊಳೆವ ಪೂವೆನೆ ಪೀನಕುಚಂ ಪ್ರಗಲ್ಭಗು |
ತ್ಸವವೆನೆ ²ನಮ್ರ²ಬಾಹು ಸೆಳೆಗೊಂಬೆನೆ ಜಾತ್ಯರುಣಾಧರಾಂಶು ಪ ||
ಲ್ಲವಮೆನೆ ಪೋಲೆ ವಿಂಧ್ಯಕನ ಬೆಂಬಱಿಯಿಂ ವನಲಕ್ಷ್ಮಿ ಕೂರ್ತು ಬ |
ರ್ಪವೊಲಿರೆ ಬರ್ಪಳಾಶಬರಿ ಸೋರ್ಮುಡಿ ಕಱ್ತಿಸುತ್ತುಮಿರ್ಪಿನಂ ||೫೮||

ವ|| ಅಂತವರ್ ಕೃತಕಕಿರಾತಭೂಪತಿಯುಂ ವನಚರೀವೇಷವಶಗತಭವಾನಿಯುಮಿರ್ಪಂತಿರ್ಬರುಮನ್ಯೋನ್ಯಸಕ್ತರುಮವಿಯುಕ್ತರುಮಾಗಿ ರಾಗದಿಂದಮಿರೆ,

ಕಱಿದುದು ಮೊಲ್ಲೆ ಮಲ್ಲಿಗೆ ಮುಗುಳ್ತುದು ಕೊಂಚೆಯ ಪಜ್ಜೆಯಿಂಬರಂ|
ಪಱಿಮರವಾದುದುಪ್ಪವಡಸಿತ್ತು ಪಿಕಧ್ವನಿ ಪೊಂಯ್ತು ನೇಳಲಂ ||

ಪಾ—1. ಗ, ದರ್ಪು. 2. ಕ, ನಿಮ್ನ.

ಗೋಱಿಯದೆ ಮಾವು ಬಂದುದದಱಿಂ ಶಿಶಿರಾಧಮನಂ ಜಡಾತ್ಮನೆಂ |
ದುಱಿದು ಬಸಂತನಂ ಕರೆದಳಕ್ಕುಮೆ ಭೂವಧು ವೇಶ್ಯೆಯಂದದಿಂ ||೫೯||

|| ಸ್ವಾಗತ ||

ನೋಡಿ ನೋಡ ರತಿ ಮಲ್ಲಿಗೆಯಂ ಕೈ |
ನೀಡಿ ತಾಂ ತಿಱಿಯಲಾಱದೆ ಕಂಪಿಂ ||
ದೂಡುತಿರ್ಪಳನೆ ಕುಂತಳಮಂ ಸಾ |
ರ್ದಾಡುತಿರ್ದುವದಱೊಳ್ ಮಧುಪಂಗಳ್ ||೬೦||

ವ|| ಆ ವಸಂತನೊಳಾತನಮಾಳಶ್ಯಾಮಳನಪ್ಪ ವಿಂಧ್ಯಕನೊಂದುದಿವಸಂ ಶಾರ್ದೂಲಸ್ನಾಯುಸಂಜನಿತಶಿಂಜಿತಸಮಾಸ್ಫಾಳನವಾಚಾಳಚಪಳಚಾಪನುಂ ಕರತಳಕಲಿತಕಂಕಪತ್ರನುಮಾಗಿ ಮೃಗಯಾವಿನೋದದಿಂ ತೊೞಲುತಿರ್ಪಾಗಳ್ ಪೂಗಣೆಯನ ಪೆಱಗೆ ಬರ್ಪ ರತಿಯ ರಮಣೀಯಮನೊಳಗುಮಾಡಿ,

ತಳಿರುಡೆ ಫುಲ್ಲಕಂಕಣಮಶೋಕೆಯ ಬಿಲ್ ಬಿಳಿಯಂಬು ಕಾಡ ಪೂ |
ಗಳ ತಲೆಸುತ್ತು ಮಾಂದಳಿರ ಕೈಪೊಱೆ ರಂಜಿಸೆ ಬೆಂಟೆಯಾಡೆ ಚಾ ||
ಪಳಹರಿಣೀವಿಲೋಕನಮನೀಳ್ಕುಱಿಗೊಂಡಳೆನಲ್ಕೆ ಗಾಳುಗ |
ಣ್ಣೊಪ್ಪಳೆಯೆ ಪುಳಿಂದಿ ವೀರಸಿರಿಯಂತಿರೆ ಬೆನ್ನನೆ ಬಂದಳೋಪನಾ ||೬೧||

ವ|| ಅಲ್ಲಿಂ ಪೆಱಗೆ,

[1]ಸಲೆ[1] ಸೂಚೀಬಿನ್ನವಕ್ಷಂ ಕಿಟರದಲಿಖಿತಗ್ರೀವನಾಪೂತಿಶಂಕಾ |
ವಿಳ[2]ಚಿತ್ರೋದಘ್ರಾಣ[2]ನುತ್ಪ್ರಸ್ರವಣಸಮಯ[3]ಸೂತ್ಥಾಪಿತೈಕಾಂಘ್ರಿ
[ವಕ್ತ್ರಂ ||
ಚಳನಾಳಸ್ಪೃಷ್ಟನೀವೀವೃತವದನವಿನಿಃಕ್ರಾಂತಜಿಹ್ವಾಪ್ರವಾಳಂ |
ಪೊೞವೊಂದೇಂ ಬಂದುದೋ ಬೇಡನ ಬಱಿವಱಿಯಿಂ ಶ್ವಾನನೇಣಾವಸಾನಂ ||
ಬರಸುತ್ತುಂಗ್ರಾವಕೋಣಂಗಳೊಳವಯವಮಂ ಕಂಡು ಕಾಡಾನೆಯಂ ಕೇ|
ಸರಿಸುತ್ತುಂ ಕಣ್ಗಿಂ ತಾಗುವ ಬಿಸುಗದಿರಂಪೊಯ್ಯುತುಂ ಕೋಪದಿಂ ಘೂ ||
ರ್ಘುರಿಸುತ್ತುಂ ಗ್ರೀಷ್ಮದೊಳ್ಕಿಱ್ಗಸಱನಱಸುತುಂ ಪೋಗುತಿರ್ದತ್ತು
[ದಂಷ್ಟ್ರಂ |
ಕುರಪೂತವ್ಯಸ್ತಮುಸ್ತಾಕ್ಷುರಿತಸುರಭಿತಪ್ರೋವ್ರಾತರೋಹಂ ವರಾಹಂ ||

---

ಪಾ—1. ಗ, ಶಳ. 2. ಗ, ಚಿತ್ರೋದ್ಘ್ರೇಣ. 3. ಗ, ಸುತಾಪೇಕಾಗ್ರೀವ

ವನಗಜಪ್ರೋತ್ಕ[1]ಪ್ರೋಲ್ಲಸದದ[1]ಕೋಟಿಗ[3]ಸಱು[3]ೞ್ ಕೆಸಱಾಟವಾಡಿ ಸೊ|
ರ್ಕಿನ ಸೊವಡಿಂಗೆ ಮುತ್ತಿ ಮುಱಿದುಂಬಿಗಳಂಬಿಸೆ ರೋಮವಿಕ್ಕಿ ಬಿ ||
ಕ್ಕನೆ ಬಿರಿವಂತೆ ಬಂದ [2]ಭರಬೊಳ್ಪೆಳರ್ವ*ಟ್ಟು[2]ಮದಕ್ಕೆ ವಂದ ಕಂ |
ಪಿನ ಕಳಭಂಬೊಲಿರ್ದುವತಿದರ್ಪರಸಾಕರನೊಂದು ಸೂಕರಂ ||೬೫

ಆಸಂದಿಗಳನಾನಾಯೆ ಬೆಂಕೊಂಡು ಪೋಗೆ ಮುಂದೊಂದು ಮೇದಿನೀಧರದರೀದೇಶದೊಳ್

ಹರಿ ಪೀರೋದ್ರೇಕದಿಂ ಕುಂಜರಗಿರಿಶಿರದೊಳ್ಪಾಯ್ದು ಮುಂ ಪಿಂತೆ [ಮೇಗಂ |
ಬರದೊಳ್ ಮೇಘವ್ರಜಂ ಘರ್ಜಿಸೆ ಶರಭರವಾಶಂಕೆಯಿಂ ನಟ್ಟು ಕಾಲ್ನ ||
ಟ್ಟಿರೆ ಬೆನ್ನೊಳ್ಪಾಯ್ದುಗುರ್ವಾಯ್ದಿರೆ ಬಿದುತಟದೊಳ್ಕಂದದೊಳ್ಪೊಕ್ಕ [ಮೆಯ್ ಪೊ |
ಕ್ಕಿರೆ ಸೋತ್ಕಂಠಂ ಸಧೀರಂ ನಟಚಿತಸಟವೊಂದಾಯ್ತು ಸಿಂಹಾವಲೋಕಂ||

ವ|| ಆಸಿಂಹಾವಲೋಕನಮುಮಂ ಶಬರಸಿಂಹನವಜ್ಞೆಯಿನವಲೋಕಿಸುತ್ತುಂ ಸಜಳಜಳಧರಮಳಿನಧೃತಕಠಿನೋತ್ತುಂಗಕಾಯಬಳದಿಂ ವಿಂಧ್ಯಕಂ ಮೇಲಪ್ಪ ವಿಂಧ್ಯಕನಂದಿನ ಬೇಟೆಯೊಳ್ ಬೆರ್ಚಿನೋಡುವ ಪುಲ್ಲೆಗಳೊಳ್ ನಲ್ಲಳ ಕೊಲ್ಲಿನೋಟಮುಂ ಕಂಡು ಕೊಲಲೊಲ್ಲದೆಯುಂ, ಕಾಡಾನೆಯ ಕುಂಭಸ್ಥಳಂಗಳೊಳ್ ಕಾಮಿನಿಯ ಮೊಲೆಯ ಮಿಸುಪಂ ಕಂಡಿಸಲೊಲ್ಲದೆಯುಂ, ಸೋಗೆನವಿಲ್ಗಳೊಳೆ ವಾಗುರೆಯ ಸೋರ್ಮುಡಿಯ ಸಿರಿಯ ಸೊಬಗಂ ಕಂಡಿಡಲೊಲ್ಲದೆಯುಂ, ನಡೆಯನಡೆಯ ಮುಂದೊಂದೆಡೆಯೊಳೊಂದು ಮಹಾಮಹೀಧರಮಸ್ತಕದೊಳ್

ಸಮಪಾದಂ ಪೊರ್ದೆ ಬಲ್ಪಂ ಕರಣಸಮುದಯಂ ತನ್ನೊಳಕ್ಕಾಡೆ ಕಣ್ಗಳ್|
ನಿಮಿಷವ್ಯಾಸಂಗಮಂ ಬಿಟ್ಟಿರೆ ಬಳೆಯೆ ಚಿದಾಸ್ವಾದಸೌಖ್ಯಂ ನಿದಾಘ ||
ದ್ಯುಮಣಿಪ್ರೋತ್ಥಾಂಶುಗಾಸ್ವ್ಯಾಂಬುಜಮಲರೆ ಮನಂಧ್ಯಾನದೊಳ್ನಿಲ್ಕೆ ಕೆಯ್ಯ್ಯ|
ಕ್ಕಿ ಮುನೀಂದ್ರದ್ವಂದ್ವವೊಂದಿರ್ದುದು ಗಿರಿಶಿಖರದ್ವಂದ್ವಮಿರ್ಪಂದದಿಂದಂ||೬೭

ವ|| ಅಂತು ಕಲ್ಮೇಲೆ ನಿಂದ ವಿಮಳಬುದ್ಧಿಯುಮಮಳಬುದ್ಧಿಯುಮೆಂಬ/ ಮುನಿದುರಕರಂ ದೂರಾಂತರದೊಳ್ಕಂಡು ವಿಂಧ್ಯಕಂ ವಾಗುರೆಗೆಂದಂ—ಆತೋ

---

ಪಾ—1. ಕ, ಮಳ್ಳದದ. 2. ಕ, ಭರದೊಳ್ಬೆಳರ್ವಟ್ಟು.

ರ್ದ ಪುರುಷಮೃಗಂಗಳಂ ಸಿಡಿಲ್ವೊಡೆಯೆ ಕೋಡುಂಗಲ್ಗಳ್ ಕಡೆವಂತೆ ಯೊಂದೇ ಕೋಲೊಳ್ಕಡೆವಿನಮೆಚ್ಚಿಪಂ ಮೆಚ್ಚಿಂಟೆಯೆಂಬುದುವಾಕೆ ನೀಡುಂ ಭಾವಿಸಿ ನೋಡಿ ನಡನಡ ನಡುಗಿ,

ಇವರನಿಸುವಾಗಳೆನ್ನಯ ।
ಕಿವಿಯೋಲೆಯ ¹ಮೋಲೆ¹ಯುಕ್ಕುವೆಂದಾರತಿ ಕಂ ॥
ತುವಿನಿಸುವ ಕೆಯ್ಗೆ ಪಾಯ್ವಂ ।
ತೆವ್ರೊಲವಳಾಶಬರನಿಸುವ ಕೆಯ್ಯಂ ಪಿಡಿದಳ್ ॥೬೮॥

ಪುರುಷಮೃಗಂಗಳಲ್ಲಮಿವರಪ್ಪೊಡೆ ದಿವ್ಯಮುನೀಂದ್ರರೆಚ್ಚೊಡಂ ।
ಕಡಿವಿದು ತಾಗಲಣ್ಮದಿವರಂ ನಡಲೊಲ್ಲದೆ ಸೂರ್ಯರಶ್ಮಿಯೋ ॥
ಸರಸಿಯೆ ಪೋಗುತಿರ್ದಪುದು ನೋಡ ಪದಾಬ್ಜಮನೋಪ ಸಿಂಹಮುಂ ।
ಶರಭಮುಮೊತ್ತಿದಪ್ಪುವಿವರಿಂ ಬಲವಂತಮೆ ನಿನ್ನ ಸಾಯಕಂ ॥೬೯॥

ಕೆಳ*ರ್ದು ಪರಿತಂದ ಬೇಗೆಯು ।
ಮಳುರಲಾತ್ನಳ್ಕಿ ನಿಂದು ಪೆಱಕಾಲೊಳ್ಕಂ ॥
ದಳಿರಂ ಕೇರ್ಗಟ್ಟಿದವೋಲ್ ।
ಬಳೆಯಿಸಿ ಮುಱಿದಪುದು ನೋಡ ಮುನಿಪುಂಗವರಾ ॥೭೦॥

ವ॥ ನೀನಿವರನೆಂತು ಬಲ್ಲೆಯಪ್ಪೊಡೆ—

ಹರಿಶಕ್ತೀ ಭವದಸ್ತ್ರಭಿನ್ನಕರಿಕುಂಭೋನ್ಮುಕ್ತಮುಕ್ತಾಫಲೋ ।
ತ್ಕರಮಂ ಮಾಱಲೆ ಪೋಗಿ ರಾಜಗೃಹದೊಳ್ ಕೊಂಬೆಂ ಗೃಹದ್ವಾರದೊಳ್ ।
²ಬರೆ²ಪಾದರ್ಗತಭೂಪನಾವೃಷಭದತ್ತಂ ಭಕ್ತಿಯಿಂದೀಮುನೀ ।
ಶ್ವರರಂ ತಾನಿದಿರ್ಗೊಂಡು ಕಾಲ್ಕೆಱಗುವಂ ರತ್ನಂಗಳಿಂದರ್ಚಿಪಂ ॥೭೧॥

ಎನೆ ಬಿಲ್ಲುಮನಂಬುಮನಾ ।
ವನಚರನೀಡಾಡಿ ದಿವಿಜಧನುವಂ ಮಿಂಚಂ ॥
ಘನಮೀಡಾಡುವೋಲ್ ಭೋಂ ।
ಕೆನೆ ಶರದದೊಳವುಳನಾಗಲುದ್ಯತನಾದಂ ॥೭೨॥

ವ॥ಆಗಿ³ಯಾವೇಗ³ದೊಳುತ್ತರೋತ್ತರಸ್ಥಾನಮಂ ತಾನೇಱುವುದನಱಿಪುವಂತೆ ನಗಾಗ್ರಮನೇಱಿ ತಾವರೆಗಳ್ಗೆ ತಪ್ಪಂ ಮಾಡಿ ಕಾಲ್ವಿಡಿವ ತುಂಬಿಗ

ಪಾ—1. ಕ, ನೋಲೆ. 2. ಗ, ಬರ. 3. ಕ, ಗ, ಯಾಬೆಗ.

ಳಂತಾಯೋಗಿಯುಗಳಪದಯುಗಳಂಗಳ ಮುಂತೆ ಮೆಯ್ಯಿಕ್ಕಿಪೊರ್ದುಮನ್ನೆ ಗಮಾಮುನಿಕುಮಾರರ್ ಕೆಯ್ಯೆತ್ತಿಕೊಂಡು ಲಬ್ಧಕನಕಾಲಲಬ್ಧಿಕ್ಷಯೋಪಶಮಮುಮಂ ಕಂಡು ಕರ್ನೆಯ್ದಿಲ ಮೇಲೆ ಕುಮುದಪ್ರಿಯನಮೃತಮಯಮಯೂಖಮಂ ತಳೆವಂತೆ ದಯಾಮೃತರಸಮಂ ತಳೆದು ದುಃಪಾತಕನಂ ಪೂತಂಮಾಡಿ—

ಕೊಲಲಾಗದು ಕಳಲಾಗದು ।
ಕುಲಟೆಯರೊಳ್ ನೆರೆಯಲಾಗದಾರ್ತದಿನ ॥
ಕ್ಕಲವರಲಣಮಾಗದು ಪುಸಿ ।
ಯಲಾಗದೀಬ್ರತಮನೈದುಮಂ ಪಿಡಿ ಮಗನೇ ॥೨೩॥

ಎನೆ ಮಹಾಪ್ರಸಾದಮೆಂದು,

ಶರವದು ಕೆಯ್ಯೊಳ್ ಪಂಕಂ ।
ಸರಸಿಜಜನಕತ್ವಗುಣಮನಳವಡೆ ಕೊಳ್ವಂ ॥
ತಿರೆ ವಿಮಳಮತಿಯ ಕೆಯ್ಯೊಳ್ ।
ಪರಮವ್ರತಮಂ ಕಿರಾತನೊಲವಿಂ ಕೊಂಡಂ ॥೨೪॥

ಜಿನಸಮಯವ್ರತಮೆತ್ತಲ್ ।
ವನಚರನೆತ್ತಲ್ ವಿರುದ್ಧಮೆನಬೇಡ ಜಗ ॥
ಜ್ಜನನುತಸಿದ್ಧರಸಂ ಕ ।
ಬ್ಬುನಮಂ ಪೊನ್ಮಾಡಲಾಯ್ತು ಪೊನ್ನೇನಾಯ್ತೋ ॥೨೫॥

ವ॥ ಅಂತು ಮೇರುವಂ ಸಾರ್ದ ಕಾಗೆ ಪೊಂಬಣ್ಣಮಾದಂತಿರಾಜಾತರೂಪಧರರಂ ಸಾರ್ದ ಶಬರಂ ಸುವ್ರತಸ್ವೀಕಾರಭಾಸುರನಪ್ಪುದುಂ ವಾಗುರೆಯುಂ ಮನಮಲ್ಲದ ಮನದೊಳಾನುಮೀವ್ರತಮಂ ಕೈಕೊಂಡೆನೆಂದು ಪೊಡವಡೆ ಪರಸಿ ಪೋಪ ಪರಮೇಶ್ವರರ ಬೞಿಯುಸವರ್ದುಗುಳ್ದವಲ್ಲಿವರಂ ಪೋಗಿ ಮಗುಳ್ದು ಬಂದು ವಿಪಿನಮಂ ಪೊಕ್ಕು ತನ್ನ ಮುನ್ನೆಗೆಯ್ದ ವಧಭೀಭತ್ಸಸ್ಮರಣಮೆ ಕಂದಮೂಳಫಳಾಸ್ವಾದನದೊಳ್ ಮುಟ್ಟುಪಡಮಂ ಪಡೆವುದುಮದೇನುಮಂ ನೆನೆಯದೆ ಮದನಾರಿಗಳ ಪದನಳಿನಮಂ ನೆನೆಯುತ್ತುಮಿರೆಯಿರೆ,

ಸ್ವಗೃಹೀತವ್ರತರಕ್ಷಾ |
ಪ್ರಗಲ್ಭಮತಿ [1]ಪುಟ್ಟಿದತ್ತು[1] ತದ್ವನಚರಸೂ ||
ನುಗೆ ಕಾಷ್ಠಕ್ಕನಲಂ ಪಂ |
ದಿಗೆ ಮುತ್ತುರಗಂಗೆ ಮಾಣಿಕಂ ಪುಟ್ಟುವವೋಲ್ ||೨೬||

ವನಚರರಿಲ್ಲದಲ್ಲಿ ಮೃಗದಿಂ ಮೃಗಮಾರಣಮಿಲ್ಲದಲ್ಲಿಯೆ |
ಲ್ವಿನ ಕೊಲಮಿಲ್ಲದಲ್ಲಿ ಖಗದಿಂ ಖಗಮರ್ದನಮಿಲ್ಲದಲ್ಲಿ ತೋ ||
ಱಿನ ಕವಿಯಿಲ್ಲದಲ್ಲಿ ಶಿಬಿರಂ ಫಣಿಹಿಂಸನಮಿಲ್ಲದಲ್ಲಿ ಕೊ |
ಲ್ವನೆ[2]ವೊಸಲಿ[2]ಲ್ಲದಲ್ಲಿ ಶಬರಂ ಸುಖಮಿರ್ಪನಿದೇಂ ಸುಚಿತ್ರಮೋ ||೨೭||

ಗಿಳಿ ತಿನ್ನದ ಬಿಂಬಫಲಂ |
ಗಳನಿತ್ತಂ ಪರಭೃತಂ ಕರ್ದುಕದಿಮ್ಮಾವಿನ ಪ ||
ಣ್ಗಳನನ್ಯಪಕ್ಷಿಯುಣ್ಣದ |
ಫಲಾಟುಸಂಕುಳಮನಾಯ್ದು ಮೆಲುವಂ ಶಬರಂ ||೨೮||

ಜಳಧರವಿಮುಕ್ತಧಾರಾ |
ಜಳಮಂ ಕುಡಿದಿರ್ಪ ಖಗದವೊಲ್ಕುಡಿವ ಮಹಾ ||
ಚಳಶಿಖರದಳಿತನಿರ್ಝರ |
ಜಳಮಂ ಸಲೆ ಬೇಡನುಚಿತದ ಜಲಮಂ ಬೇಡಂ ||೨೯||

ವ|| ವಾಗುರೆಯೊಡನೋದುವ ಬೇಡತಿಯರ್ ಮೇರೆಗೆಡೆಮ ಕಂಡುಂ ನೀನುಂ ನಿನ್ನ ಗಂಡನುಂ ಪುಲಿಯುಂತಿರ್ದು ನರಿಯುಂತಿರೇಕೆಯಿರ್ದಪಿರೆನೆ ಕಣ್ಬನಿಯುಂ ತೀವಿ ಭಿಲ್ಲಿಯಿಂತೆಂದಳ್:—

ತುಡೆ ಕೋಲಂ ಮುನಿಗಳ್ಗೆ ಕಾವ ಫಲಮಂ ಕೈಗೆಯ್ಯೆ ಕಂಡಪ್ಪೆನಾ |
ದಡಿಗಂ ಮಂತ್ರಿಸಿ ಕಟ್ಟಿದ[3]ಕರಿಯು[3] ಕೆಯ್ಯಂ ಬಾಯುಮಂ ಕಟ್ಟಿ ನಾಂ ||
ಪಿಡಿಯುಂ ಪಕ್ಕಿಗಳಂ ಮೃಗಕ್ಕೆ ಬಿಡಲೊಲ್ಲಂ ನಾಯ್ಗಳಂ ಜೇನುಮಂ |
ಬಡಿಯುಂ ಗಾಣನುನಿಕ್ಕನೊ[4]ಕ್ಕನಿಸಿ[4]ಯುಂ ತಸ್ಸಿಕ್ಕೆಯುಂ ಬಾಳ್ಕೆಯುಂ ||೩೦||

ವ|| ಎಂಬುದುಮಾಕೆಗಳೆಂದರ್:—ನೀನೆಮ್ಮ ಮನೆಯೊಳ್ ಬಾ[illegible] ಬಯಸಿದುದನುಂಡು ಮೆಯ್ಗೆ ಬೆಚ್ಚಿದಂತಿರುಬಾಯೆಂಬುದುಂ ವಾಗುರೆ ತಲೆಯ

ಪಾ—1. ಕ, ಗ, ಪುಟ್ಟಿದಂತು. 2. ಕ, ವೊಸೆಯಿ. 3. ಕ, ಕರಲಿಯ.
4. ಗ, ಕ್ಕಗಿನಿ.

ನಲುಗಿ ಬೆರಲಂ ಮಿಡಿದು ಮನದೊಳರ್ದುದಂ ಮಾತಿನೊಳ್ ಬಱಕೆಯ್ವನಲ್ಲದೆ ಬೇಱೊಂದರ್ಕೆ ಬಗೆದವಳೆನಲ್ಲೆನಿನ್ನೆನ್ನ ನಲ್ಲನಪ್ಪುದನಪ್ಪೆನದು ಲೇಸಾದೊಡಂ ಪೊಲ್ಲಾದೊಡಮೆನ್ನ ಪುಣ್ಯಮೆಂದು ಪೂಣ್ದಿರ್ದಳಿರ್ಪುದುಮೊಂದು ದಿವಸಂ ವಿಂಧ್ಯಕನೆಲ್ಲಿಯುಮೊಳ್ಳಿದುವಪ್ಪ ಫಲಂಗಳಂ ಪಡೆಯದಱಸುತ್ತುಂ ಬಂದೊಂದು ಕುಬ್ಜಾಮ್ರಕುಜದ ಬೀೞ್ಗೊಂಬಿನ ಪಸುರೆಲೆಯ ಕುಸುಂಕುಱೊಳಗೆ ರಸಾಯನದ ಕುಪ್ಪಿಗೆಯಂತೆ ತೋರ್ಪ ತನಿವಣ್ಣಂ ತಿಱಿಯಲೊಡನೆ

ತರುಣತರವಿಷಧರಂ ಕೋ |
ಟರಮುಖದಿಂ ನುಂಗಿದಂತಘುಪ್ರೇರಣೆಯಿಂ ||
ಪಿರಿದಪ್ಪ ಪೋಟಲೊಳಗಾ |
ಸರಸಫಳಂ ಕೈಕರ್ದುಂಕೆ ಬಿರ್ದತ್ತಾಗಳ್ ||೯೧||

ಆಪಣ್ಣನಱಸುವಳಪಿಂ |
ದಾಪೋಟಲ್ಗಿಯ್ದೆ ತತ್ಕಿರಾತನ ಕರಮಂ ||
ಕೋಪದೊಳಹಿ ಕೊಂಡುದು ತರು |
ಚಾಪದಿನಂತಕನ ಕಣೆಯ ಕೊಂಡವೊಲೆನಸುಂ ||೯೨||

ಅಯ್ಯೊ ! ಫಳಾಮೃತರಸಮಂ |
ಕೆಯ್ಯಿಂದಂ ಪಿಡಿಯೆ ವಿಷಮುದಾಯ್ತೇ ಬೇಡಂ ||
ಗಯ್ಯ ನೃಶಂಸಕೃತಾಂತನ |
ಕೆಯ್ಯಡಕಮನಱಿವೆನೆಂಬ ದೇವನುಮೊಳನೇ ||೯೩||

ಪಿಕಹಾಹಾಕ್ರಂದನಮಂ |
ವಿಕಳೆ ವನಾಗ್ರಸ್ತೆ ಮಾಡೆ ಸತಿ ಸತ್ತು ಯಶೋ ||
ಧಿಕವೃಷಭದತ್ತವಿಭುಗಿ |
ಭ್ಯಕೇತುವೆಂಬಾತ್ಮಜನಾದಂ ವ್ಯಾಧಂ ||೯೪||

ವನಚರಿಯುಮೆನಗೆ ಮತ್ಕಾಂ |
ತನ ಲೋಕಮೆ ಲೋಕಮೆಂದು ಹಸ್ತಮನಾಪಾ ||
ವಿನ ಪಲ್ಗೆ ಕೊಟ್ಟು ಸತ್ತಾ |
ತನ ಪೊಟಲೊಳೆ ಮುಖ್ಯನಪ್ಪ ದೀವಳನಾದಂ ||೯೫||

ವ|| ಆವೃಷಭದತ್ತವೈಶ್ಯೋತ್ತಮನ ವಿಭವಮಂ ಪೇೞ್ವೊಡೆ–

ಪಿಂಗದ ಪೊನ್ನ ರಾಸಿಯು ಬಿಸಿಲ್ಗಳ ಮುತ್ತಿನ ಮೊತ್ತದಚ್ಚವೆ |
ಳ್ದಂಗಳ ಮಾಣಿಕಂಗಳಳಸಂಜೆಯ ನೀಳ್ದಗೆದಿಂದ್ರನೀಲಜಾ ||
ಲಂಗಳ ಮರ್ವೆ ವಜ್ರರುಚಿಯೇೞ್ಗೆಯ ಪಚ್ಚೆಯ ರೋಚಿಯುಚ್ಚಜಾ |
ಳಂಗಳ ಸಂತತಂ ವೃಷಭದತ್ತವಣಿಕ್ಪತಿಯೊಂದು ಗೇಹದೊಳ್ ||೮೬||

ಬಮುಮುಳ್ದಭಕರ್ದಮುಮಂ |
ಕ್ರಮದೊಳ್ ಕಾನೀಕಜಾನುದಪ್ನುಮನೆ ತುರಂ ||
ಗಮಲಾಲಾಜಳದ ಪೊನಲ್ |
ತೆಮಳ್ದು ತೊಳೆವುದು ತದೀಯಗೇಹಾಂಗಣದೊಳ್ ||೮೭||

ತೆಗೆದತಿವರ್ತಿಗಳಂ ದಂ |
ತಿಗಳ ಮೊಗಂಗಾಣದತ್ತ ಕಟ್ಟಿದೊಡೆ ಮೊಗಂ ||
ಬುಗಲವ್ವಳಪುವು ಮಣಿಹ |
ರ್ಮ್ಯಗತಸಿಜಚ್ಛಾಯೆಯೊಳ್ ವಣಿಗ್ವಲ್ಲಭನಾ ||೮೮||

ಪರದನ ಪೆರ್ಮನೆಯೊಳ್ ಕ |
ಪ್ಪುರಮಂ ಬೆಳ್ವಟ್ಟೆದೆಂದು ಚೇಟಿಕೆಯರ್ ಕ ||
ತ್ತುರಿಯುಂ ಹರಿನೀಲಮನೋ |
ಹರಕುಟ್ಟಿಮರಜಮಿದೆಂದು ಪೊಱಗುತ್ತಿರ್ಪರ್ ||೮೯||

ಪದ್ಮದ ಸುತನಖಿಳಕಳಾ |
ಸದ್ಮಂ ಚತುರಾಸ್ಯನಾದ ತೆಱನಂ ತೋಱಲ್ ||
ಪದ್ಮಶ್ರೀಯಸುತಂ ವಿಪ |
ಪದ್ಮರಸುತನಿಭ್ಯಕೇತು ಕಳೆಗಳನಾಳ್ದಂ ||೯೦||

ಸಮಸಂದಾರತಿಯಿಭ್ಯಕೇತುವಿನ ರೂಪಂಗಂಡು ಕಣ್ಸೋಲುತ್ತಕಾ |
ಡುವ ಕಾಯ್ಪಿಂದಭಿಸಾರಿಕಾಪದವಿಗಂದೊಂದಾಸೆಯುಂ ಮಾಡುವಳ್ ||
ಭವನಿನ್ನೊರ್ಮೆಮನೋಜನಂ ಮುನಿದುನೋೞ್ಪಿಂದೇನೊಪ್ಪುವಳ್ವಸಂ |
ತವಿಳಾಸಕ್ಕೆ ಕನಲ್ವಳೆಂದೊಡೆ ವಣಿಕ್ಕಾಂತಂ ಕರಂ ಕಾಂತನೋ ||೯೧||

ಶ್ರುತವಧು ಕೂರ್ತು ಕೊಟ್ಟ ತೆಱದಿಂದೆಸೆದಿರ್ಪುದು ನಾಟಕಪ್ರವೀ |
ಣತೆ ಕೃತಿಭಾವಕೋವಿದತೆ ಶಬ್ದಸಮಗ್ರತೆ ತರ್ಕರೀತ್ಯಭಿ ||

ಜ್ಞತೆ ನಯವಾಗ್ವಿಚಕ್ಷಣತೆ ವಾದ್ಯವಿದಗ್ಧತೆ ನರ್ತನಪ್ರಗ |
ಲ್ಭತೆ ರಸಗಾನಮುಗ್ನತೆ ವಿಳಾಸಗಸಜ್ಞತೆ ವೈಶ್ಯಪುತ್ರನಾ ||೯೨||

ಬಾಧಿಸುವಂ ಮನೋಮೃಗಮುನಂಗಜದಾವಮುನಿಟ್ಟು ಸೋಲ್ತು ಬಿಂ |
ಬಾಧರೆಯುರ್ಕಳೊಪ್ಪುಪಿಣಿಲಂ ನವಿಲಂ ಪಿಡಿವಂ ವಿವೇಕವಿ ||
ದ್ಯಾಧರನಂಗಜಾಳದೊಳ್ ಸಿಲ್ಕಿಸುವಂ ಸಲೆ ಪೋದ ಜನ್ಮದಾ |
ಪೋದನಕೆಯ್ತುಮಂ ಕೆದಱುವಂತಿರೆ ಲೋಚನಮತ್ಸ್ಯಜಾಲಮಂ ||೯೩||

ಅಪ್ರತಿಮರಾಜಗೃಹನಗ |
ರಪ್ರಭು ಜಿತಶತ್ರುವೆಂಬನಾಭೂಪಂಗಂ ||
ಸುಪ್ರಭೆಗಂ ಪುಟ್ಟಿದ ಕಮ |
ಳಪ್ರಭೆ ರೂಪಾತಿಶಯದ ಸಿರಿಯುಂ ಪಡೆದಳ್ ||೯೪||

ವ|| ಆಕೆಯ ನೂತನತನುಮನಕ್ಕೆ ವಸಂತದಂತೆ ಬಂದ ಪೊಸಜವ್ವನಮಂ ಜಿತಶತ್ರುಮಹಾರಾಜಂ ಕಂಡು ಭೂಮಂಡಲದೊಳುಳ್ಳ ರಾಜಕುಮಾರರಂ ಬರಿಸಿ ಸ್ವಯಂಬರಮಂ ಸ್ಮರಂ ಬರಮಿತ್ತಂತೆ ಮಹಾವಿಭೂತಿಯಿಂ ಮಾೞ್ಪುದುಂ ವನದೊಳಗೆ ಬಳೆಯುತ್ತುಮಿರ್ಪ ಮೀನಕೇತುವಿನಂತೆ ನೆಲನುಂ ನೇಸಱುಂ ಕಾಣದಂತು ಮನೆಯೊಳಗೆ ಬಳೆಯುತ್ತುಮಿರ್ದಿಭ್ಯಕೇತುಕುಮಾರನಂ ಬೇಡವೇಡನೆಯುಂ ನಿಜಜನಕನೊಡನೆ ಬಂದು ನೋಡುತ್ತುಮಿರೆ—

ಎನಿತಲರ್ಗಳಲರ್ದೊಡಂ ಭೃಂ |
ಗನಾಯಕಂ ಜಾತಿಗೆಱಗುವಂತಿರೆ ನೃಪಸಂ ||
ದನರೆನಿತೆಸೆದಿರ್ದೊಡಮಂ |
ಗನೆಯುಲರ್ಗಣ್ಣಿಭ್ಯಕೇತುಗೆಱಗಿದುವಳಪಿಂ ||೯೫||

ರಾಗದಳುರ್ಕೆಯಿಂ ನೆರೆದ ರಾಜಕುಮಾರರ ಕಣ್ಗಳೆಯ್ದ ಸಿ |
ಗ್ಗಾಗಿರೆ ಕಾಮಿನೀಜನದ ಕಣ್ಗಳೆಱಲ್ತರೆ ತನ್ನನುರ್ಚಿದಾ ||
ಪೂಗಣೆ ಪಲ್ಲವಂಬಿಡಿದು ಮಾಲೆಯನೇಱಿಸಿ ಮೇಲೆ ಸೂಸುವಂ ||
ತಾಗಿರೆ ವೈಶ್ಯಸೂನುಗೊಲವಿಂ ಕಮಳಪ್ರಭೆ ಮಾಲೆಸೂಡಿದಳ್ ||೯೬||

ಅಱಿದು ಜಿತಶತ್ರುಭೂಪನ |
ಕಿಱುಪುರಸಿ ವಸಂತಸೇನೆಯಾಕಾಮಿನಿಯ ||

ಟ್ಕಿಱ ತನುಜೆ ಮದನಸೌಂದರಿ |
ನೋಡಿದಳ್ ನೃತ್ಯದೊಳಮುಸಮುಸಾಹಿತ್ಯದೊಳಂ ||೯೭||
ವನಿತೆಯು ರೂಪಂ ಪೊಸಜ |
ವ್ವನಮಂ ಮೋಹನಮದಿನ್ನುದಂಜಿತರಸನ ||
ರ್ತನಭಾವಭಾವಿತಂ ಗಡ |
ನನೆ ಕಾಮನಮೋಘಬಾಣಮಾದುದು ಪೆಱತೇ ||೯೮||

ವ|| ಅಂತು ಭುವನಬುಂಭುಕಮಾದ ತನ್ನ ಮಗಳ ವಿಚಿತ್ರನೃತ್ಯವಿದ್ಯಾನಿಳಾಸಮಂ ಕಂಡು ಜಿತಶತ್ರುಮಹಾರಾಜನೀವಿದ್ಯೆಗಿಭ್ಯಕೇತುಕುಮಾರನೆ ಬಲ್ಲನಾತನಲ್ಲದೆ ಸರ್ವನುಮಱಯನೆಂದು ವಿವಿಧವಾದ್ಯವಾದನವಾಚಾಳಮುಂ ಗಾಯಿಕಾಜನಸಂಛನ್ನಮುಂ ವಾಂಶಿಕಸಂಕುಳಸಂಕೀರ್ಣಮುಂ ಶೈಲೂಷಸಮೂಹಸಂಮರ್ದಮುಂ ಭಾರತಿಕವೃಂದಭರಿತಮುಂ ವಾಗ್ಮಿಯಕಾರವಿಳಸಿತಮುಂ ಪ್ರಗೀತಪ್ರಕೀರ್ಣಮುಂ ತಾಳಧರಾಧಿಷ್ಠಿತಮುಮಪ್ಪ ಮಣಿಮಯನೃತ್ಯಮಂಟಪಕ್ಕೆ ಇಭ್ಯಕೇತುಕುಮಾರನಂ ಬರಿಸಿ—

ಇಕ್ಕಿದ ಮುತ್ತಿನೆಕ್ಕಸರದೋಲೆ ತುಱುಂಬಿದ ಜಾದಿವೂವೆ ತೊ |
ಟ್ಟೆಕ್ಕಸರಂ ಕೆಲಕ್ಕೆ ನಸುಗೊಂಕಿದ ಕತ್ತುರಿಯಡ್ಡಬೊಟ್ಟು ತ ||
ಳ್ತಿಕ್ಕಿದ ಚಂದನಂ ಮುರಿದು ಸುತ್ತಿದ ಚಂಪಕಮಾಲೆ ಕಣ್ಗಳಂ ಜ |
ಕ್ಕುಲಿಸಿತ್ತು ಪಚ್ಚಳು ವಜ್ರದ ಕಂಕಣಮಾಕುಮಾರನಾ ||೯೯||

ವ|| ಅಂತು ಕಂತುವಿನಂತೆ ಬಂದ ಸೌಭಾಗ್ಯಸಕಿಂಚನನುಂ ಕಾಂಚನಪೀಠದೊಳ್ಕುಳ್ಳಿರಿಸಿ ಕೇಳಿಕೆಯುಂ ಮಾಡಿ—

ವನಿತಾಪಾದಪಯೋಜಸಂಗಸುಖದಿಂದಂಗಕ್ಕೆ ರೋಮಾಂಚಮಾ |
ಯ್ತೆನೆ ನಟ್ಟಂತಿರೆ ಸೂಸೆ ಸೂಜೆಗಳನಾಪೊಂಜಾಜಿಯೊಂದೊಂದು ಚಾ ||
ರ್ಮನೆಗೊಂಡೊಂದಲರಾಯ್ತು ತೋಯ್ದುತೆಱದಿಂದಿರ್ದಂತು ಫುಲ್ಲಾಂಬುಜಾ|
ನನೆ ಪುಷ್ಪಾಂಜಲಿಗೊಟ್ಟಳಂಗಜಸುಧಾಸಾರಂ ಪೊದಟ್ಟಿಂದದಿಂ ||೧೦೦||
ಬಾಡಿದಲರಱಿಪೆ ನೋಡೆ ನಂ |
ಜಾಡಿದ ಸೂಜೆಗಳನುರಿಪಿ ಕುಂಭಿಯೊಲವನೇ ||
ನಾಡಿದಳೊ ಸೂಜೆಗಳ ಕೂ |
ಪೊಡೆದ ಮೊನೆಯುಲರ ಮೇಲೆ ನಾನಾವಿಧದಿಂ ||೧೦೧||

ಪರೆದ ತಿಳಕಮನೆ ಕಂಡೆಸೆ |
ದಿರೆ ಕೊಟ್ಟುದ್ದಂಡಪಾದದುಗುಗ್ಗ*ನ್ನಡಿಯೊಳ್ ||
ತರಳಾಕ್ಷಿ ತಿರ್ದಿದಳ್ ಚೆ |
ಚ್ಚರದಿಂ ಮತ್ತೊಂದು ಪಾದದುಂಗುಟದಿಂದಂ ||೧೦೨||

ವ|| ಅಂತು ಸಮವಿಷಮಮೆಂಬೆರಡುಂ ತೆಱದ ನೃತ್ಯಮತ್ಯಂತಮ ನೋಹರಮುಂ ಕೌತುಕಕರಮುಮಾಗೆ ಮಗಧಸುಂದರಿ ಪಿರಿದುಬೇಗಮಾ ಡುತ್ತುಮಿರೆ ಮೆಯ್ಮಱೆದು ನೋಡುತ್ತುಮಿರ್ದ ನಯನಹಂಸಂಗಳ್ಗೆ ಪಯೋ ವರ್ಷಮಾದ ಪಯಂಗಳುಮಂ, ಬೆಡಗಿರ್ಪ ಪೊಳೆಯರ್ಕೆ[1]ಮಾಚಾಳಯು ಮಾದ[1] ಚಾಳಿಯಂಗಳುಮಂ, ಚತುಃಷಷ್ಟಿಕರ್ಮಂಗಳಾಲಂಬಹಸ್ತಮಾದ ಹ ಸ್ತಗಳುಮಂ, ಭಾವರಸಾಕೃಷ್ಟಿಗಳಾದ ದೃಷ್ಟಿಗಳುಮಂ, ಸರಸ್ವತಿ[2]ಗಳಂತಃ[2] ಕರಣಂಗಳಾದ ಕರಣಂಗಳುಮಂ, ಶೃಂಗಾರಶ್ರೀಗೆ ಹಾರಮಾದಂಗಹಾರಮು ಮಂ, ನರ್ತಸಕ್ಕೆ ಚಾರುತ್ವಂಬಡೆದ ಚಾರಿಗಳುಮಂ, ನೃತ್ಯವಿದ್ಯಾದೇವತೆಗೆ ಮಂಡನಮಾದ ಮಂಡನಂಗಳುಮಂ, ಸುಲೇಖೆಗೆ ನೆಲೆಯಾದ ನಿಲವುಗಳು ಮನವರವರ ಬಲದೆಡೆಗಳೊಳ್ ಪೊಸಯಿಸಿ ಪೆಸರಿಟ್ಟು ಕಾಳದೊಳ್ ತೂಗಿ ದಂತೆ ವಾದ್ಯದೊಳಳೆದಂತೆ ನಿರುತಮಾದ ನೃತ್ಯಂ ನೃತ್ಯಶಾಸ್ತ್ರಮನಭಿನಯಿ ಸುವಂತಾದುದೀ ಕಪೋತಖಗವಿಕೀರ್ಣಕನಕಸೂಚಿಸಂಚಯಸಸ್ಥಾಪನಕೌತು ಕಕ್ರಿಯಾಕೌಶಲಮುಮಾಪುಷ್ಪಾಂಜಲೀಕ್ಷೇಪಣನೈಪುಣ್ಯಮುಮಾವಿಷಮವಿ ದ್ಯಾಸಾದನಮುಂ ಸರಸ್ವತಿಗಂ ಸಾರದೆಂದು ಕುಮಾರಂ ಮೆಚ್ಚಿ ಮೆಚ್ಚಿಂಗೆ ಮೆಚ್ಚುಗುಡುವಂತೆ ಮಹೀನಾಥನಾಕುಮಾರಿಯುಮಂ ಕುಡೆ ಮಹಾವಿಭೂ ತಿಯಿಂ ಮದುವೆನಿಂದು,

ಅನುರಾಗಾಂತಂ ವಸಂತಪ್ರಿಯನ ವಿರಹದೊಳ್ ಗ್ರೀಷ್ಮತಾಪಜ್ವರಂ ಮೇ|
ದಿನಿಗಾದಂಪುಟ್ಟಿಮೇಲೇಂ ತಳದುದೊ ಮೞೆಯಂ ಪ್ರಾವೃಷಂ ಚಂದ್ರಿಕಾಚಂ||
ದನಮುಂ ಸೂಸುತ್ತುಮೆತ್ತಂ ಶರದಮಿರದೆ ತಂದತ್ತು ತೆಂಗಾಳಿಯುಂ ಹೈ |
ಮನಮುಂ ಹೇಮಂತಮೆತ್ತಂ ಸುರಿದುದು ಶಿಶಿರಶ್ರೀತುಷಾರಂಗ[3]ಳರ್ಪಂ[3] ||

ವ|| ಅಂತು ಬಂದಾಱುಂ ಋತುಗಳೊಳಾದನುಭವೋಚಿತಕ್ರೀಡಾ

ಪಾ—1. ಕ ಪ್ರತಿಯಲ್ಲಿಲ್ಲ. 2. ಕ, ಗಳಂ. 3. ಗ, ದಿರ್ಷಂ.

ರಸಂಗಳನಾಱುಂ ರಸಂಗಳಂ ಸವಿನಂತೆ ಸವಿದು ಸಕಳಕಳಾಸೌಕರ್ಯಕ್ಕಂ ಸೌಭಾಗ್ಯಕ್ಕಮೇಕಪತಿಯಾಗಿ

ಅನುಪಮರಾಜ್ಯನಂದನೆಯುರಾಕಮಳಪ್ರಭೆಗಂ ವಿಲಿಪ್ತಚಂ |
ದನಧವಳಾಂಗಿಗಾಮಗಧಸೌಂದರಿಗಂ ಪತಿಯಾದನಾವಣಿ ||
ಗ್ಜನದಧಿನಾಥನೊಂದೆ ಕೊರಳಲ್ಲಿಯೆ ಪುಟ್ಟಿ ಪೊಗೞ್ತೆವೆತ್ತ ಪ |
ದ್ಮಿನಿಗಮನಾರತಂ ಸಿತಸರೋಜನಿಗಂ ದಿನನಾಥನಾದವೋಲ್ ||೧೦೪||

ಅಸಿಯಳ ವಿದ್ಯೆ ಕೂರಿಸಿದುದಿಲ್ಲ ನೃಪಾಗ್ರತನೂಜೆಯಿಂದೆ ಕೂ |
ರಿಸಿದುದಧೀಶನಂ ಸೊಬಗು ಕೂರಿಸುವಂತಿರೆ ಪೆಣ್ಣ ವಿದ್ಯೆ ಕೂ ||
ರಿಸುಗುಮೆ ತುಂಬಿ ಮಲ್ಲಿಗೆಗೆ ಕೂರ್ಪವೊಲೊಪ್ಪೆ ವಿಚಿತ್ರಬಂಧದಿಂ |
ದೆಸೆದಿರೆ ಕಟ್ಟಿ ತಂದು ಸೊವಡಿಲ್ಲದ ಮಾಲೆಗೆ ಕೂಡಲಾರ್ಕುಮೇ ||೧೦೫||

ವ|| ಅಂತು ಮಗಧಸೌಂದರೀವಿವಾಹವಿಹಿತಮನಾದೀನಮಾನಸೆಯಾದ ಕಮಲಪ್ರಭೆಯು ಕನಲ್ದ ಮುದ್ದುಮೊಗಮಂ ನೋಡಿ

ಹೃದಯಾಧೀಶಂ ಕುರುಳ್ಗಳ್ವಳಸೆ ನುಡಿಸೆ ಮೇಲ್ವಾಯೆ ಲಲ್ಲೈಸೆ ಮೆಲ್ಪಿಂ|
ಮೊದಲೊಳ್ ಸರ್ವಾಕ್ಷಿಪಾತಂ ಬೞಿಕದು ನಯನಾರ್ಧಾವಲೋಕಂ ಬೞಿ
ಕ್ಕೊಂ || ದುದಯಂ ನೇತ್ರತ್ರಿಭಾಗಂ ಬೞಿಕಿೞಿದುದಪಾಂಗೇಕ್ಷಣಂ ತಾಂ
ಬೞಿಕ್ಕಾ | ವುದುಮಿಲ್ಲಾಯ್ತ್ತಗಳಂ ಕಾನುದಮಿಸಿಯಳ ಸನ್ಮಾನದಿಂ ಮಾನ
ಮಲ್ತೇ ||೧೦೬||

ವ|| ಎಂಬಿನಂ ಕಮಳಪ್ರಭೆಗಂ ತನಗಂ ಹುರುಡಿಂದಮೇ ಪರಸ್ಪರಾನುರಾಗಮಳವಿಗೞಿಯೆ,

ಪುಳಕಂ ಪಕ್ಕಗೆ ಸಾರದಂತು ಬೆಮರೆಂದುಂ ಕುಂದದಂತರ್ಧಕು |
ಟ್ಮಳತಂಗಳ್ನಯನಂಗಳುಳ್ಳಲರದಂತೊಂದೊಂದಱೊಳ್ ಪತ್ತಿ ಮೆ ||
ಯ್ಗಳಲಂಪಿಂ ಬಿಡದಂತು ಸೈಸಮಯುದತ್ತಾನಂದಮಾರಾತ್ರಿಯೊಳ್ |
ಮುೞುಗಿರ್ದಳ್ಳೆರ್ದೆ*ಮೂಡದಂತು ಕುವರಂ ಕೂಡಿರ್ದನಬ್ಜಾಕ್ಷಿಯೊಳ್ ||

ವ|| ಇಂತು ಮಾಗಧಸೌಂದರಿ ತನ್ನ ಪಾಳೆಯದೊಳಂ ವಾಸವಸಜ್ಜಿಕೆಯಾಗಿ,

ಪತಿಚಿತ್ತಾನರ್ದನಿದ್ರಾವಿರಹಿತೆಯಿರುಳಂತಪ್ಪುದುಂ ಸುಪ್ತಪಾರಾ |
ವತಮುಂ ಬಂದೆತ್ತವಳ್ ಹಂಸೆಗಳೆರಡೆಮೆಯೊಂಧಾಗಿಲೀಯ್ವಳ್ನವಿಲ್ವಾ ||

ಣತಿಯಂ ಕಣ್ಮುಚ್ಚಲೀಯಳ್ ಗಳಪುವ ಗಿಳಿಯಂ ತೂಂಕಡಂಗಾಣಲೀಯಳ್ |
ಕತೆಯಂ ಪೇೞೆಂದವಳ್ ಸಾರಿಕೆಯುಮನನಿವಂಗೆಯ್ದುಕಣ್ಗೆಯ್ಯಲೀಯಳ್ ||
ಅರಗಿಳಿಯಂ ಮೃಗಾಕ್ಷಿ ಪಿಡಿದೋದಿಸಲಮ್ಮಳ್ ಸುಯ್ಯ ಬೆಂಕಿಯಿಂ |
ಕರಿಮುರಿಯುಕ್ಕುಮೆಂದು ತೆಗೆದಪ್ಪಲುಮಮ್ಮಳ್ ಮೆಯ್ಯ ತಾಪದಿಂ ||
ಕುರವಕಮೆಯ್ದೆ ಸೀದಪುದೆಂದು ಕರಂ ತಿಳಕಾವನೀಜಮಂ |
ಕೊರಗುಗುಮೆಂದು ನೋಡಲಣಮಮ್ಮಳ್ ತಪ್ತವಿಲೋಚನಾರ್ಚಿಯಿಂ ||೧೦೯

ಪರಪಿ ನಱುಸುಯ್ಯ ಕಂಪಂ |
ಸುರತಸುಖಾಸ್ವಾದಸುಭಗಚಿಂತಾಭರದಿಂ ||
ಪಿರಿದು ವಿರಹಾರ್ತಿ ಬೇಟದ |
ಬಿರಿಮುಗುಳ್ವೊಲಿರ್ಪಳಳಕುಳಾಳಕಿಯುದಱೊಳ್ ||೧೧೦||

ತಡೆದು ಬರೆ ಸಲ್ಲನೀಕ್ಷಿಪ |
ಮಡದಿಯ ಕಱ್ತಲಿಪ ಮೊಗಮುಮರುಣೇಕ್ಷಣಮುಂ ||
ತೊಡೆದಂಜನಮುಂ ಮಱೆದಳ |
ವಡೆ ನೀರ್ಗುಂಕುಮಮನೆಚ್ಚ ಕೊಂಡವೊಲೆಸೆಗುಂ ||೧೧೧||

ವ|| ಆಮಗಧಸೌಂದರಿಯ ಸೌಂದರವಿದ್ಯೆಯ ದೌರ್ಭಾಗ್ಯಮೆ ನಿರ್ವೇಗನಿಮಿತ್ತಮಾಗೆ

ಮನಮಂ ವಿರಕ್ತಿಗಿತ್ತು |
ಳ್ಪನ ರಾಜ್ಯಮನಿಭ್ಯಕೇತುಕುಮರಂಗಿತ್ತಂ ||
ತನುಮಂ ತಪಕ್ಕೆ ಜಿತಶ |
ತ್ರುನೃಪಂ ನಿಯಮಸ್ಥಯತಿಯ ಪಾದಾಂತಿಕದೊಳ್ ||೧೧೨||

|| ದ್ರುತವಿಲಂಬಿತಂ ||

ಅವನಿ ಕೀರ್ತಿಸೆ ತಾಳ್ದದನಿಭ್ಯಕೇ |
ತುವಿನ ತಂದೆಯುಮೊಳ್ತಪಮಂ ಮನೋ ||
ಭವನನಂಡಲೆದಿಕ್ಕಿದ ಮಂದರ |
ಸ್ಥವಿರರೆಂಬ ಮುನೀಂದ್ರರ ಪಕ್ಕದೊಳ್ ||೧೧೩||

ಇನಬಿಂಬಂ ಕೋಂಟೆಯ ಕ |
ಟ್ಟನ ತೊತ್ತಳದಂಬುಗಂಡಿಯೊಳ್ನುಸುಳುತ್ತೆ ||

ಯ್ಯನೆ ಸಿಕ್ಕಿ ನಿಲ್ವುದಾಪುರ |
ವನಿತೆಯರಾಕರ್ಣಪೂರಕಮಳದ ತೆಱದಿಂ ||೧೧೪||

ಇಂದುವ ಬಿಂಬಂ ಪೆಱಯಿಗೆ |
ಯಿಂದಂ ಪಿಡಿವಡೆದು ಕಿಱದುಬೀಗಂ ನಗರೀ ||
ಸೌಂದರಿಯ ಕೆಯ್ಯ ಕೇಳಿಯ |
ಕಂದುಕದಂತಿರ್ಪುದೊಪ್ಪೆ ಪತನೋತ್ಪತನಂ ||೧೧೫||

ಅವಿರಳಕೇತಕಪರಿಮಳ |
ನವಾಪ್ತಶೈತ್ಯಂ ಸಮುದ್ಯನಳನೀಳಗಳಂ ||
ಪವನಪವನಾಸನಿಂದುವು |
ದು ವಿಯೋಗಿಪ್ರಾಣಪವನನಂ ಪುರವರದೊಳ್ (?) ||೧೧೬||

ವ|| ಎಂಬ ಪೊಗೞ್ತೆಗೆ ಜನ್ಮಗೃಹಮುಂ ಲಕ್ಷ್ಮಿಗೆ ಕುಳಗೃಹಮುಂ ಕಳಾಧಿದೇವತೆಗೆ ಕೇಳೀಗೃಹಮುಮಪ್ಪ, ರಾಜಗೃಹಕ್ಕಧಿರಾಜನಾಗಿ,

ಕರಧಾರಾಸ್ವಾದನಂ ಚುಂಬನಮಧುಪಸುಹೃತ್ಸಂಗಮಾಲಿಂಗನಂ ವೀ |
ರರಸಸ್ವೇದಾಂಬುದೃಪ್ತಾಹತಹತಿಸಿತಕಾಮಾಂಕುಶಾಗ್ರಕ್ಷತಂ ಕುಂ ||
ಜರಕುಂಭಾಸ್ಫಾಲನಂ ಪೀವರಕುಚಕಲಶಾಸ್ಫಾಲನಂ ಲೀಲೆಗಾಗು |
ತ್ತಿರೆ ರಾಜ್ಯಶ್ರೀಯ ಸಂಭೋಗಮನೊದವಿಸಿದಂ ರಾಜವಿದ್ಯಾವಿಳಾಸಂ||೧೧೭||

|| ಗದ್ಯ ||

ಇದು ಮೃದುಪದಬಂಧಬಂಧುರ ಸರಸ್ವತೀಸೌಭಾಗ್ಯವ್ಯಂಗ್ಯಭಂಗಿನಿಧಾನ ದೀಪವರ್ತಿ
ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರ ಕೃತಮುಂ,
ಶ್ರೀಮತ್ಪ್ರತಾಪಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾದಿತ
ಮಹಾಪ್ರಧಾನ ಸೆಜ್ಜೆವಳ್ಳ ಪದ್ಮನಾಭದೇವ ಕಾರಿತಮುಮಪ್ಪ

## ನೇಮಿನಾಥ ಪುರಾಣದೊಳ್

### ತೃತೀಯಾಶ್ವಾಸಂ

# ಚತುರ್ಥಾಶ್ವಾಸಂ

ಶ್ರೀಪತಿಯುಂ ಸೈಪಿಂ ಪೃ |
ಥ್ವೀಪತಿಯುಂ ವೀರಪತಿಯುಮಿರ್ಪುದುಮಿರದ ‖
ಲ್ತಾ ಪೊತ್ತುವಿತ್ತು ಕೀರ್ತಿ |
ಶ್ರೀಪತಿಯಾದಂ ಸರಸ್ವತೀಶೃಂಗಾರಂ ‖೧‖

ಪೊಂಪಟ್ಟಮಪ್ಪಪೊಲ್ಮ |
ಶರ್ಗಂ ಪಂಡಿತನಪ್ಪ ತೆಱದೆ ವಾಣಿಯ ದಯೆಯಿಂ ‖
ಗಂ ಪರದನರಸನಾಗಿ |
ರ್ಗಂ ಪೃಥ್ವಿಗೆ ಸೈಪು ಸಮೆಯಲಾಱದುದುಂಟೇ ‖೨‖

ವ॥ ಒಂದು ದಿವಸಮಾಪ್ರತಾಪಮಾರ್ತಾಂಡಂ ಮಾರ್ತಂಡೋದಯಸಮಯದೊಳೊಡ್ಡೋಲಗಂಗೊಟ್ಟಿರೆ—

ಕರಿಕುಂಭದ ಮುತ್ತಂ ಕ |
ತ್ತುರಿಮಿಗಮುಂ ಸಿಂಹಶಾಬಮುಂ ದರ್ಶನಮಿ ‖
ತ್ತುರವಣಿಸಿ ಕಂಡನಾಧೀ |
ವರನಾಯಕನಿಭ್ಯಕೇತು ಭೂನಾಯಕನಂ ‖೩‖

ವ॥ [1]ಕುಡ[1]ಲೊಡನಾರ್ಗಂ ಮಾಡದ ಮೋಹಮನವಂಗೆ ಮಾಡಿ ಸೇನಾಪತಿಪದವಿಯುಂ ಕೊಟ್ಟು ತನಗಾತನೇ ಪರಮವಿಶ್ವಾಸಭೂಮಿಯುಂ ಪರಮಪ್ರೇಮಭೂಮಿಯುಮಾಗೆ ಮಳಯಾನಿಳಂಬೆರಸು ವಸಂತನ ರಾಜ್ಯಂಗೆಯ್ವಂತೆ ದೂತಾಯಾತಧೀವರಂ ಬೆರಸು ವಿಳಾಸವಸಂತಂ ರಾಜ್ಯಂಗೆಯ್ಯುತ್ತುಮಿರ್ದೊಂದು ದಿವಸಂ ಆಮಂದರಧೀರಂ ಮಂದರಸ್ಥವೀರಭಟ್ಟಾರಕರ ಸಮೀಪದೊಳ್ ಧರ್ಮಮಂ ಕೇಳುತ್ತುಮಿರ್ದ ದೂರದೇಶದೊಳರ್ದ ಧೀವರಾಖ್ಯನಲ್ಲಿಗೆ ಮೆಲ್ಲಗೆ ಪತ್ತಸಾರ್ದು ಸಾರ್ದ್ರಹೃದಯನಾಗಿ ಮನಃಪ್ರಿಯ ವಚನಾಮೃತಮಂ ಕಿವಿಗುಡಿತೆಯಿಂ ಕುಡಿಯುತ್ತುಮಿರ್ಪುದಂ ಕಂಡು—

ಎನಗೀಮೀಂ[2]ಗು[2]ಲಿಗನ ಮೋ |
ಗನಿಮಿತ್ತಂ ಪ್ರೇಮಮುಣುಗಮಗನೊಳಮೊಲ್ವಂ ‖

ಪಾ—1. ಕ, ಗ—ತೊಡ. 2. ಕ, ಗ—ಬು.

ಗನೆಯೊಳವಾಗದುದಾಯಿತ್ತದ ।
ನನುಪಮ ನಿರ್ವೇದಬೋಧಭಾಸುರ ಬೆಸಸಿಂ ॥೪॥
ಎನೆ ನಿನ್ನ ಪೊಂದ ಭವದಂ ।
ಗನೆ ವಾಗುರೆಯೆಂಬಳೀತನಾಭವದೊಳ್ ಸೀಂ ॥
ವನಚರನೆ ಎನಲೊಡಂ ತೆ ।
ಕ್ಕನೆ ನೊಂದಂ ಜನ್ಮನಾಟಕಕ್ಕವನೀಶಂ ॥೫॥
ಆರೇನಾದಪರೆಂಬುದ
ನಾರಱವರೊ ಜಗದೊಳುಳ್ಳ ರೂಪುಗಳಂ ಸಂ ॥
ಸಾರಿಯುಮಾಸೂತ್ರಧಾರ ।
ಪ್ರೇರಣೆಯಿಂ ಪೊತ್ತು ಸುತ್ತಿ ಕುಣಿಯುತ್ತಿರ್ಪಂ ॥೬॥

ವ॥ ಎಂದು ಬೇಗದಿಂ ನಿರ್ವೇಗಪರನಾಗಿ ಸುಕೇತುವೆಂಬ ತನ್ನ ತನಯಂಗಿಭ್ಯಕೇತು ರಾಜ್ಯಭಾರಮನಿತ್ತು ತಪೋರಾಜ್ಯಭಾರಮನೆತ್ತಿಕೊಳ್ಳಲೊಡನೆ—

ಯುವತಿ ಕಮಳಪ್ರಭೆಯುಮಾ ।
ತ್ಮವಲ್ಲಭಪ್ರೇಮದಿಂ ತಪಂಬಟ್ಟಳ್ ಕಾಂ ॥
ತವಸಂತಂ ಬೀತೊಡೆ ಮಾ
ಧವಿಲತೆಯುಂ ಪಿಂತೆ ಬೀಯದೇನಿರ್ಪುದೇ ॥೭॥
ಅವ್ರತಪತಿಪದಕಮಳಮ
ಧುವ್ರತನೇದಾಗಿ ಧೀವರಂ ಲೋಪಿತಪಾ ॥
ಪವ್ರಣನಣುವ್ರತಾದಿಗು ।
ಣವ್ರತ ಶಿಕ್ಷಾವ್ರತಂಗಳಂ ಕೈಕೊಂಡಂ ॥೮॥

ವ॥ ಅಂತು ಮಕರಕೇತುವಿಂಗೆ ಧೂಮಕೇತುವಾಗಿಭ್ಯಕೇತು ದಿವ್ಯಕುಂತಳ ಕಟಾಕ್ಷಧವಳ ದೀಧಿತಿಸುಧಾಸೌಧಮಪ್ಪ ಸೌಧರ್ಮಕಲ್ಪದ ಶ್ರೀನಿಳಯ ವಿಮಾನದೊಳ್ ಶ್ರೀದೇವನೆಂಬ ದೇವನಾದಂ. ತಪಸ್ತಪನವಿಕಸಿತ ವದನಕಮಳಪ್ರಭೆಯಪ್ಪ ಕಮಳಪ್ರಭೆಯುಂ ಸುಪ್ರಭವಿಮಾನದೊಳ್ ವಿಮಲಪ್ರಭನೆಂಬ ದೇವನಾದಳ್. ವ್ರತಸ್ವರೂಪನಿರೂಪಣಪ್ರವೀಣಪರಮಾಗಮಶ್ರವಣನಿರ್ಮಳಭೂತಧೀವರನಪ್ಪ ಧೀವರನುಂ ವಿದ್ಯುತ್ಪ್ರಭವಿಮಾನದೊಳ್

ಶ್ರುತಪ್ರಭಾಂಕನೆಂಬ ದೇವನಾದಂ. ಇಂತಾಮೂವರುಂ ಸುರಲೋಕ ಸೌಖ್ಯಮನನುಭವಿಸಿ ಬಂದು—

ಶ್ರೀದೇವಂ ಚಿಂತಾಗತಿ ।
ಯಾದಂ ವಿಮಳಪ್ರಭಂ ಮನೋಗತಿಯುಂ ತಾ ॥
ನಾದಂ ಶ್ರುತಪ್ರಭಾಂಕನು ।
ಮಾದುರಿತಾರಾತಿ ಚಪಳಗತಿ ತಾನಾದಂ ॥೯॥

ವ॥ ಇದು ನಮ್ಮ ಮುತ್ತಮೂವರ ಭವಪಂಚಕಪ್ರಪಂಚಿತಪ್ರೀತಿ ನಿಮಿತ್ತಮೊಂದು ಹಿತೋಪದೇಶಮಂ ಕೇಳ್ವುದೆ—

ಇದಱೊಳನಿರುದ್ಧನವರಂ
ಧ್ರದೊಳಪಘನಘಟದೊಳಟನಶೀಲನದಿಂ ಪೋ ॥
ಪುದು ಚೋದ್ಯಮೆ ಇರ್ದಪುದೆಂ ।
ಬುದೆ ಚೋದ್ಯಂ ಪ್ರಾಣಪವನನಸುಚಿತಭವನಂ ॥೧೦॥

ಎಡೆಯಾಡುತಿರ್ಪವೆನಣುವೆ (?) ।
ಕೆಡೆವಂತಿರೆ ತಂತು ತೀವ್ರದುಂ ಹತಕಾಯಂ ॥
ಕೆಡೆವುದು ಕಾಣಲ್ಕಲ್ಲದೆ
ಸಡಪುಡನಱಿವನ್ನನಾವನಾಯುವ ತವಿಲಂ ॥೧೧॥

ವ॥ ತಿಂಗಳಂತೆ ನಿನಗೊಂದೇ ತಿಂಗಳಾಯುಷ್ಯಮವಶ್ಯಂ ಪರವಶನಾಗಿ ಪರಲೋಕಹಿತಮನೆ ಮಾಡಿಗೊಳ್ಳೆಂಬುದುಮಪರಾಜಿತನಿಂತೆಂದಂ :—

ಇಂದುಗಮಿನಂಗ[1]ಮಂಬುದ[1] ।
ಬೃಂದಕ್ಕಂ [2]ಪುಳಿನಶೋಭೆಗಂ[2] ಮೇದಿನಿಗಂ ॥
ಮಂದಾನಿಳಂಗಮಿನ್ನೆ ।
ಮ್ಮಂದಿಗರ್ಗಂ* ಸಲೆ ಪರೋಪಕಾರಮೆ ಶೀಲಂ ॥೧೨॥

ಗುಣದಿಂದಂ ಸಹಜಾತಮಾಪದ ಋಣಂ ಬಳ್ಳಿತ್ತು ನೀಮಾಮುಹಾ ।
ಗುಣದಿಂದಲ್ಲಮತತ್ತ್ವಮಂ ಬಿಸುಟೊಡಂ ತಾಂ ಬಿಟ್ಟುದಿಲ್ಲೆಮ್ಮ ಮೋ ॥
ಗಣ ನಿಮ್ಮೊಂದು ಮಮತ್ವಮಿಂತುಟು ಋಣಂ ಕ್ಷೇತ್ರವ್ಯಮೊಂದಂದು ಚಾ ।
ರಣಯುಗ್ಮಕ್ಕತಿಭಕ್ತಿಯಿಂದೆಱಗಿದಂ ವಿದ್ಯಾವಧೂವಲ್ಲಭಂ ॥೧೩॥

---

ಪಾ—1. ಕ, ಗ—ಮಂಬುಧ. 2. ಕ, ಪಳಿನಸಾಪೆಗಂ.

ವ || ಎಱಗುವುದುಮವರಭ್ಯುದಯಪರಂಪರಾಪ್ರಾಪ್ತನಾಗೆಂದು ಪರಸಿ ಪೋದರಿತ್ತಲಪರಾಜಿತನುಂ ಮುನ್ನಿನಂತೆ ನಿರೀಕ್ಷಣಮುಮಹಂಕಾರಮಿಲ್ಲದೆ ಪರಮಪ್ರೀತಿ ಪೊಱಲಂ ಪುಗುವಂತೆ ಪೊಱಲಂ ಪೊಕ್ಕು ನೆರೆಮನೆಗೆ ವರ್ಷಾಂತರಮನೆಗೆವಂದು ಸಗ್ಗಕ್ಕೆ ಸಲ್ವಲ್ಲಿಗೆ ಇವಲ್ಲದಿವು ಸಲ್ಲವೆಂದುದ್ಯೋಗಿಸುತ್ತುಂ ತ್ಯಾಗದಾನಂಗಳೊಳಂ ಸಾಂಯುಗೀನಜಗಂಗಳೊಳಂ ಕಾಲ್ಗಡದ ಮೋಹಮುಂ ಧರ್ಮಧವಳದ್ವಿರದನಮನೇಱಿಸಿ ಪವನಜವಸತ್ವರತುರಂಗಮಂಗಳ ಮೇಗಣ ಮನಮನುಚ್ಚೈಶ್ರವಮಪ್ಪ ವೈರಾಗ್ಯವಾಜಿಯ ಬೆಂಗೆವರಿಸಿ ಮುಂದಲೆಯ ಕಸದಂತೆ ಮುಂತಿರ್ದ ಕಸವರಮಂ ಸತ್ಪಾತ್ರದ ಕೆಯ್ಗೆ ಮಂಣಿಕ್ಕುವಂತಿಕ್ಕಿ,

ಪರಿತಾಪಾತಪಮುೞಿದತ್ತೊಗೆದುದುದ್ಬೋಧಪ್ರದೀಪಂ ದಮ |
ದ್ವಿರದಾರೂಢನೆನಾದನೇವೆನಿದನೆಂದಂದಾನೃಪಂ ಛತ್ರಚಾ ||
ಮರಸಿಂಹಾಸನಮೆಂಬಿವಂ ತ್ವರಿತದಿಂ ಪ್ರೀತಿಂಕರಂಗಿತ್ತ[1]ನಾ ||
ಳ್ವರೆ[1] ಮಿಕ್ಕಚ್ಯುತರಾಜ್ಯಮಂ ಪಡೆವವೊಲ್ ಸಾಮಾನ್ಯಸಾಮ್ರಾಜ್ಯಮಂ ||

ವ|| ಅಲ್ಲಿಂಬೞಿಯುಂ ಬಂಡಾರದ ಪೊನ್ನೆಲ್ಲಮಂ ತೆಗೆಸಿ ತ್ರಿಭುವನಾಭರಣಮೆಂಬ ಜಿನಮಂದಿರದ ಮುಂದೆ ಮಂದರಮಂ ಮಾಡಿಸಿ ಪಂಚರತ್ನಸಂಚಯದಿನದಕ್ಕೆ ಕಲ್ಪಕುಜಂಗಳಂ ಕಲ್ಪಿಸಿ ನಕ್ಷತ್ರಮಾಲೆಯೆಂಬ ಹಾರಮಂ ಚಂದ್ರಾದಿತ್ಯರೆಂಬ ಮಣಿದರ್ಪಣಂಗಳುಮಂ ಬಲವರಿಸಿ

ಅನಘಂ ತಾನೆ ಮಹೇಂದ್ರನಾಗಿ ಮಹನೀಯಾನರ್ಘ್ಯಮಾಣಿಕ್ಯಮಂ |
ಡನಮಾಳಾಂಶುಸಹಸ್ರನೇತ್ರತನುರಾಜೇಂದ್ರಂ ಜಿನೇಂದ್ರಂಗೆ ಮ ||
ಜ್ಜನಮಂ ನಿರ್ಮಿಸಿ ನಿರ್ಮಳಾಧ್ವರಮನಂದಷ್ಟಾಹ್ನಿಕಂ ಮಾಡಿ ತ |
ತ್ಕನಕಾದ್ರೀಂದ್ರಮನಿತ್ತನರ್ಥಿನಿಕರಕ್ಕಾಧೈರ್ಯವಿದ್ಯಾಧರಂ ||೧೫||

ರಮಣೀರಾಗವಿಕಾಸಕೋಶಫಲನಾಂಭೋಜಾತಲಾವಣ್ಯಮಂ |
ದಮಧೂಳಿಚ್ಛಿಷ್ಟಮನುಂಡು ಬೆಂಡುನೆಗೆದಸ್ಪೃಶ್ಯಂಗಳಾಗಿರ್ದ ತ ||
ನ್ನ ಮನೋನೇತ್ರಮದಾಳಿಗಳ್ಗೆ ಸಮಗಂಗಾಸ್ನಾನದಿಂ ಶುದ್ಧಿಯಂ |
ಸಮೆದಾಸಂಯಮಭಾಜನಂ ಜಿನಪದಾಂಭೋಜಂಗಳೊಳ್ ಸಾರ್ಚಿದಂ||೧೬||

ವ|| ಅನಂತರಂ ಬಾಂಧವಬಂಧನಮಂ ಪಱಿದು ಪಂಚಮುಷ್ಟಿಯಿಂ

ಪಾ—1. ಗ— ನೊಲ್ವರೆ.

ಕೇಶಪಾಶಂಗಳಂ ಪಱಿದುಱಿದೆಪ್ಪತೆರಡು ದಿವಸಮಂ ಪ್ರಾಯೋಪಯೋಗ ಸನ್ಯಸನದಿನಿರ್ಪತ್ತೆರಡು ಸಾಗರೋಪಮಾಯುಷ್ಯಮಂ ಪಡೆದಂತಚ್ಯುತಸಾಂತಕರವಿಮಾನದೊಳಚ್ಯುತೇಂದ್ರನಾಗಿ,

ಭೋಗಾಮೃತಮಂ ಪುಣ್ಯನಿ |
ಯೋಗದಿನೀಂಟುತ್ತುಮಿರೆಯು [1]ಮಾಱದ[1]ತೃಷ್ಣಾ ||
ವೇಗಮಿದೇಂ ದ್ವಾವಿಂಶತಿ |
ಸಾಗರಜೀವನಮನೀಂಟಿದತ್ತನಿಮಿಷನಾ ||೧೭||

ಇತರರ ಸಂಪತ್ತೇನ |
ಚ್ಯುತಕಲ್ಪದಿನಾಯುರಬ್ಧಿಯುವಸಾನದೊಳ ||
ಚ್ಯುತನಚ್ಯುತನಾದಂ ಯಮ |
ಹತಕಂ ಸುಸ್ಥಿತರನಾರುಮಂ ಸೈರಿಪನೇ ||೧೮||

ಎಂದುಂ ಕಾಲಕ್ಕೆ ಚಲಂ |
ಸಂದುದು ಮೂಜಗದೊಳಚಲಮೆಂದೊಡೆ ನಗುತುಂ ||
ಬಂದು ತಳರ್ಚುಗುಮಚ್ಯುತ |
ನೆಂದೊಡೆ ಕೆಡಪುಗುಮಧಮರನೆಂದೊಡೆ ಕೊಲ್ಗುಂ ||೧೯||

ನಿರುಪಮಜಂಬೂದ್ವೀಪದ |
ಭರತಕ್ಷೇತ್ರಕ್ಕೆ ಸಸ್ಯಸಂಪದಮೆನಿಕುಂ ||
ಕುರುಜಾಂಗಣಜನಪದಮು |
ಲ್ಲಿ ರಂಜಿಕುಂ ಹಸ್ತಿನಾಪುರಂ ಪೊಸದೆನೆವೋಲ್ ||೨೦||

ಮೃಗಮೆತ್ತುನ್ಮೃಗಮುಗ್ಧವೀಕ್ಷಿತಮು[2]ದಿತ್ತಂ ಜ್ವಾಲ[2]ವೆತ್ತೋಷ್ಠಲ|
ಕ್ಷ್ಮಗೆ ನೋಂತಾಲದ ಪಣ್ಣದೆತ್ತ ಬಱಿಯಾಪುತ್ತೆತ್ತ ಕೇಶಾಸಿರೋ ||
ಮುಗಮೆ[3]ತ್ತಂ ತಮವೆತ್ತ[3] ಪೀರ್ವಮೃತಮೆತ್ತಂತಾಪುರಸ್ತ್ರೀಮುಖೇಂ|
ದುಗಳಂ ಪೋಲಿಸಿ ಪೊಂಗುವರ್ಸಮು[4]ರತ[4]ಶ್ರಾಂತಂಗಳಂ ತಿಂಗಳಂ ||೨೧||

ನಡೆ ನೋೞ್ಪರ ಕಡೆಗಣ್ಣುಂ |
ಕಡುನಲ್ಲರ ಮನಮುಮೊಡನೆ ಪೊತ್ತುವು ಪುರದೊಳ್ ||

---

ಪಾ—1. ಗ, ಮಾರ್ವದ. 2. ಗ,—ಧೆತಜ್ವಾ. 3. ಗ,—ತ್ತಂಕಮದೆ. 4. ಗ,—ತನು.

ಮಡದಿಯರ ಮೊಲೆಯನಲ್ಲದೊ |
ಡುಡಿಯವೆ ಬಳವಳಕೆವಡೆದ ಬಡನಡು ಭರದಿಂ ||೧೨||
ಆಪುರಮನಾಳ್ವನವೃತಾ |
ಳಾಪಂ ಯಮಕೋಪನತ್ಯುದಾರಂ ಧೀರಂ ||
ರೂಪೇಕ್ಷುಚಾಪನನ್ವಯ |
ದೀಪಂ ಶ್ರೀಚಂದ್ರನವನತಾರಿನರೇಂದ್ರಂ ||೧೩||
ದಯಿತೇಕ್ಷಣಮುಗ್ಧಮೃಗಂ |
ವಿಯತ್ಪದೋದ್ಬಾಸಿ ರುಧಿರಕರ್ದಮವಲ್ಮೀ ||
ಕಯುತಂ ಶ್ರೀಚಂದ್ರಮುಖ |
ಪ್ರಿಯಚಂದ್ರಂ ಕೀರ್ತಿಚಂದ್ರನೆಸೆವಸಿಚಂದ್ರಂ ||೧೪||
ಆಮಹಿಪತಿಯ ಮನಃಪ್ರಿಯೆ |
ಕಾಮಿನಿ ಮಿಕ್ಕಗ್ರಮಹಿಷಿ ತಾನೆನಿಸಿರ್ದಂ ||
ಶ್ರೀಮತಿಯೆಂಬಳ್ ದಾನ |
ಶ್ರೀಮತಿಯಿಂ ಕಾಮಧೇನುವೆನಿಸಿದಳಳೆಯಂ ||೧೫||

ಅವಳಂಗಚ್ಛವಿಗೋತು ಪಚ್ಚೆ ಕುರುಳಂದಕ್ಕೋತು ನೀಳಂ ನಖ |
ಚ್ಛವಿಗೋತುಜ್ಜ್ವಳವಜ್ರಮೆಲ್ಲ ಸುಲಿಪಲ್ಗೋತಚ್ಚಮುಕ್ತಾಫಳಂ ||
ಪವಳಂ ಬಾಯ್ದೆಱೆಗೋತು ಬಂದು ಸಲೆ ಸೇವಾವೃತ್ತಿಗೆಯ್ವಂತೆ ರ |
ತ್ನವಿಭೂಷಾವಳಿಯೊರ್ಮೆಯುಂ ತೊಲಗವಂತಾಶ್ರೀಮತೀದೇವಿಯಂ ||೧೬||

ಆನೃಪತಿಗಮಾರಾಜ್ಞಿಗ |
ಮಾನಾಕಜನೊಸಗೆ ಪುಟ್ಟೆ ಪುಟ್ಟೆ ಮಹಾ[1]ಪ್ರ ||
ಣ್ಯಾನೀಕಂ[1] ಪಡೆದಂ ಶಿಶು |
ಭಾನುದ್ಯುತಿ ಸುಪ್ರತಿಷ್ಠನೆಂಬೊಳ್ಪೆಸರಂ ||೧೭||

ಆರಾಜಪ್ರಿಯಸೂನು ತನ್ನೆಳವೆಯಂದುದ್ದಾಮವಾಗ್ದೇವಿಯಂ |
ಧೀರಂ ಯೌವನದಂದು ಸನ್ನುತಸುನಂದಾದೇವಿಯಂ ಕ್ಷತ್ರಿಯಾ ||
ಚಾರಖ್ಯಾತಿವಿಧೇಯನೀತಿಯಱಿಯಲ್ಕಲ್ತಂದು ಲೋಕಸ್ತುತಂ |
ವೀರಶ್ರೀಯನಲಂಪಿನಿಂ ಮದುವೆಸಿಂದುತ್ಸಾಹಮಂ ತಾಳ್ದದಂ ||೧೮||

---

ಪಾ—1. ಗ,—ಪುಣ್ಯಾನಸ್ವಿತ.

ಬೇಡ ಕೊಲಲೆಂಬ ತೆಱದಿಂ |
ಕ್ರೀಡಾರಸದಿಂದೆ ರಾಜತನಯಂ ಕೊಂಬಂ ||
ದಾಡೆಯುಮಂ ಕಿೞ್ತೀನೊಡ |
ನಾಡಿಸುವನೊ ಕಾಡ ಕರಿಗಳಂ ಹರಿಗಳುಮಂ ||೨೯||

ವ|| ಅಂತಿರಿವನೊಱೆದ ಪ್ರಾಯದ ಪುತ್ರನಂ ಕಂಡು ಸಂಸಾರದ ಕಡೆ ಗಂಡಂತೆ ಸಂತೋಷದಂತನೆಯ್ದಿ,

ಚಂದ್ರಂ ಬುಧಂಗೆ ಕುಡುವವೊ |
ಲಿಂದ್ರಪ್ರತಿಮಂಗೆ ಸುಪ್ರತಿಷ್ಠಂಗಾಶ್ರೀ ||
ಚಂದ್ರಂ ರಾಜ್ಯಮನಪಗತ |
ತಂದ್ರಂ ಕೊಟ್ಟೊಳ್ತ್ಪಕ್ಕ ಕಚಮುಂ ಕೊಟ್ಟಂ ||೩೦||

ಮಂದರಕುಧರಸಮಾನಸು |
ಮಂದಿರಗುರುಪಾದ ಸೇವೆಗೆಯ್ದಾಚರಿಸು ||
ತ್ತಂದಂದಿಂಗಕಳಂಕಂ |
ಕುಂದಿದನುತ್ತಮತಪಶ್ರಿತಂ ಶ್ರೀಚಂದ್ರಂ ||೩೧||

ವಿಗತವಸನಾಂಶು[1] ವಿರಸಂ[1] |
ಪ್ರಗಲ್ಭನಿಷ್ಕಪಟವೃತ್ತಿರಹಿತಂ ವಿಮಲ ||
ಪ್ರಗುಣನುಪಶಾಂತಕಾಮಂ |
ಪೊಗಸಿನ ಚಂದ್ರಂಬೊಲಿರ್ದನಾಶ್ರೀಚಂದ್ರಂ ||೩೨||

ಇತ್ತ ಪಿತೃವಿತ್ತರಾಜ್ಯಮು |
ನಿತ್ತು ಭುಜಕ್ಕಾಜ್ಞೆಯುಂ ವಿರೋಧಿಗಳ ನೊಸ ||
ಲ್ಗಿತ್ತರಸುಗೆಯ್ದನಾತ್ಮ |
ಯತ್ತಂ ಕಲಿ ಸುಪ್ರತಿಷ್ಠನಯನಯನಿಷ್ಠಂ ||೩೩||

ಧೃತಿವೆತ್ತತವದಿಗ್ಜಯೋದ್ಯಮಭವದ್ಭೇರೀಪ್ರಣಾದಕ್ಕೆ ಕಂ |
ಪಿತಮುಪ್ಪಿದಿಯು ಕೂರ್ಮನಂ ಫಣಿಪನಂ ದಿಗ್ದಂತಿಯುಂ ಗೋತ್ರಪ ||
ರ್ವತಮುಂ ಭೂಮಿ ಬಿಸುಟ್ಟು ಬಂದು ಪಿರಿದುಂ ನಿಶ್ಚಿಂತದಿಂ ಸು |
ಪ್ರತಿಷ್ಠತಮಾಗಿರ್ಪುದು ಸುಪ್ರತಿಷ್ಠಿತಪಟಿಷ್ಠೋದ್ದಂಡದೋರ್ದಂಡದೊಳ್ ||

---

ಪಾ—1. ಗ,— ವಿಸರಂ.

ಮಾನಂ ಸದ್ಧೈರ್ಯದೀಕ್ಷಾಗುರು ಸುರಗಿರಿಗಂ ಕಲ್ಪವೃಕ್ಷಕ್ಕೆ ಹಸ್ತಂ।
ದಾನೋಪಾಧ್ಯಾಯನಾತ್ಮಾಕೃತಿಯತನುಗೆ ಬಿಲ್ಲೋಜನೋಜಃಪ್ರಸಾದಾ ।
ಧೀನಂ ತನ್ನುಕ್ತಿ ವಾಗ್ನರ್ತಕಿಗಖಿಳಕಳಾಲಾಸ್ಯಶೈಲೂಷನಾಗ ।
ಲ್ತಾನಾಯ್ತೆಂಬನ್ನಮಾದಂ ಜಗಮನೆಱಗಿಸಲ್ ಸುಪ್ರತಿಷ್ಠಂ ಗರಿಷ್ಠಂ ॥೩೫॥

ಆದತ್ತು ಸುಪ್ರತಿಷ್ಠಧ ।
ರಾದಯಿತಂಗಧಿಕದೃಷ್ಟಿಯೆನೆ ಮೇದಿನಿ ಭಾ ॥
ಗ್ಯೋದಯಮಂ ಪಡೆದ ಸುನಂ ।
ದಾದೇವಿ ಸುದೃಷ್ಟನೆಂಬ ಮಗನಂ ಪಡೆದಳ್ ॥೩೬॥

ಉಕ್ಕೆವದೆಳೆ ಮಾಯದ ಕೊಳ ।
*ವರ್ಕ್ಕಿಯ ಗೆಳೆ ತಿಳಕವಿಡುವ ಪೊಳೆ ಪುಸಿಯಪುಣಿಲ್ ॥
ಟಕ್ಕಿನ ಬಿಸಲತೆ ಮುತ್ತಂ ।
ಮುಕ್ಕುಳಿಸಿದ ಪವಳದಂತೆ ಮುರುಳಿಸುವಂಗಂ ॥೩೭॥

ಊಡುವ ಪೊಸದಳಿರಲರಂ ।
ಸೂಡಿರ್ಪಳಿ ಕಂಪನಱಿವ ಸಂಪಗೆ ನಯದಿಂ ॥
ನೋಡುವ ನಿಡುನೈದಿಲ್ಮಾ ।
ತಾಡುವ ತಾವರೆ ವಿರಾಜಿಕುಂ ನೃಪಸತಿಯಾ ॥೩೮॥

ಪ್ರಭೆಯುಂ ಚಿಂತಾಮಣಿ ಕ ।
ಲ್ಪಭೂರುಹಂ ಪುಷ್ಪಮಂಜರಿಯಿನೆಸೆವವೊಲಾ ॥
ತ್ರಿಭುವನಭೂಷಣನೆಸೆದಂ ।
ಶುಭನಂದನೆಯಿಂ ಸುನಂದೆಯಿಂದನವರತಂ ॥೩೯॥

ಪಡೆದು ಯಶೋಧರಯತಿಪತಿ ।
ಯಡಿದಳಿ*ರ್ಗಳನೆಱಗಿ ಕೆಯ್ಯೊಳಿರ್ಕಲ್ಪಡೆದಾ ॥
ಗಡೆ ಪಂಚಾಶ್ಚರ್ಯಮುಮಂ ।
ಪಡೆದಂ ಸತ್ಪಾತ್ರದಾನಿ ಪಡೆಯದುದುಂಟೆ ॥೪೦॥

ಪಡೆಯಲೆ ಬರ್ಪುದಾಪುರುಷವೇದಿಯನಿಂದ್ರನರೇಂದ್ರಲಕ್ಷ್ಮಿಯುಂ ।
ಪಡೆಯಲೆ ಬರ್ಪುದಾರಯೆ ಸುಪಾತ್ರಮನೊಂದನೆ ಯೋಗ್ಯಕಾಲದೊಳ್ ॥

ಪಡೆಯಲೆ ಬಾರದಲ್ಲದೆಡೆಗೀವವನೇವಡೆದಂ ಸುಪಾತ್ರಮಂ |
ಪಡೆದನೆ ವಸ್ತುವಂ ಪಡೆದನಾತನ ಪುಣ್ಯಮೆ ಪುಣ್ಯಕಾರಣಂ ||೪೧||

ಪಡೆದುಂ ಪಣಮಂ ಪಾತ್ರಂ |
ಬಡೆಯದೊಡದು ನಿಷ್ಫಲಂ ಫಲಾರ್ಥಿಗೆ ಪಾತ್ರಂ ||
ಬಡೆವುದೆ ಪುಣ್ಯಂ ಪಣಮಂ |
ಪಡೆವುದು ಪುಣ್ಯಮೆ ಪಣಂ ಮಹಾಹಿಂಗಮಿಲ್ಲಾ ||೪೨||

ತಡೆಯದೆ ಮುಗಿಲ್ಗೆ ಕುಡುವುದು |
ಕಡಲಿತರಜನಕ್ಕೆ ಕೈಪೆಯಪ್ಪುದು ಕುಡಲು ||
ಳ್ಕೊಡೆ ಪಾತ್ರಮಱಿದು ಮಾಣದೆ |
ಕುಡುವುದಪಾತ್ರಕ್ಕೆ ಕೊಟ್ಟೊಡೇಂ ಪುರುಳುಂಟೇ ||೪೩||

ಸ್ವಾತಿಯ ಮುಗಿಲ್ಗೆ ತಾನಿ |
ತ್ತಾತೋಯಂ ರತ್ನಮಾಗೆ ರತ್ನಾಕರಮಾ ||
ಯ್ತಾತೋಯದಿನೆಡೆಯಱಿಯದೆ |
ಪಾತಾಳಕ್ಕಿತ್ತ ತೋಯಮೇನಾಯ್ತಱಿಯಾ ||೪೪||

ದೇವರ್ಗಲ್ಲದೆ ಕಳೆಯಂ |
ಜೈವಾತೃಕನೀಯದಂತಿರುತ್ತಮಪಾತ್ರ ||
ಕ್ಕೀವುದು ಧನಮಂ ಸೌಖ್ಯಮ |
ನೀವುದದುಂ ತವೆಯದಾಯುಗಾಂತಂಬರೆಗಂ ||೪೫||

ತರಳಜಳಬಿಂದು ಮೌಕ್ತಿಕ |
ಭರಮಪ್ಪವೊಲುದಧಿಶುಕ್ತಿಪತಿತಂ ನೀರುಂ ||
ಪಿರಿದಪ್ಪ ಪುಣ್ಯಮಕ್ಕುಂ |
ಪರಮತಪೋಧನರ ಪಾಣಿಸಂಪುಟಪತಿತಂ ||೪೬||

ಕುಡುವಾತನರ್ಥಿಯಪ್ಪಂ |
ತೊಡರದೆ ಕೊಳ್ವಾತನುತ್ತಮಪ್ರಭುವಪ್ಪಂ ||
ಕಡೆಗಣಿಸಿ ಧರ್ಮಪಾತ್ರಂ |
ಪಡೆದುನ್ನತಿಯುಂ ಸುರಾದ್ರಿಯುಂ ಪಡೆದಪುದೇ ||೪೭||

ಓವಿ ಫಳತರುಗೆ ನೀರ್ಗಳ |
ನೀವುದುಮಂ ಬೈತು ಬಿತ್ತನೊಲವಿಂ ಬೆಳೆಗೆ ||
ಯ್ಗವುದುಮಂ ಸತ್ಪಾತ್ರ |
ಕ್ಕೀವುದುಮಂ ದಾನವೆಂಬ ನಾಚಿಕೆಯುಂಟೇ ||೪೮||

ಬಿಡುಮುತ್ತಂ ಮಾಣಿಕಮಂ |
ಪಿಡಿದೊಡ್ಡಿದ ಯತಿಯ ಕೆಯ್ಯೊಳಿಕ್ಕಿದಪರೆಯೊ ||
ಪಿರ್ಡಿಗೂಟಿನಿಕ್ಕಿ ಸಗ್ಗಂ |
ಬಡೆಯದ ನರನೆಗ್ಗನಲ್ತೆ ಭುವನಾಭರಣಾ ||೪೯||

ವ|| ಎಂದು ಪೇಳ್ವ ಧರ್ಮೋಪಾಧ್ಯಾಯರ ವಚನಾಮೃತದಿಂ ಮಾಡಿ ಮಡಲ್ತ ದಾನಬುದ್ಧಿಕಲ್ಪಕುಜಂ ಸತ್ಪಾತ್ರಪ್ರೋಷಣಮಾಗೆ ಧರ್ಮವಿಜಯಿಯಾಗಿ ರಾಜ್ಯಂಗೆಯ್ಯುತ್ತುಮಿರೆ—

ಅತಿಸಂಗ್ರಾಹ್ಯಮೊ ಮಲ್ಲಿಕಾಪರಿಮಳಂ ಮಾಕಂದದಾಮೋದಮೊ |
ಳ್ಳಿತೊ ವಾಸಂತಿಯ ಕಂಪು ಲೇಸೊ ಸುರಭಿಶ್ರೀಸೌರಭಂ ಯೋಗ್ಯಮೋ ||
ಸ್ತುತಮೋ ಪಾಟಳಗಂಧಮೆಂದು ಪಿಡಿಯಲ್ಬರ್ಪಂತೆ ಬಂದತ್ತು ಪಂ |
ಡಿತಶೀಲಂ ಮಳಯಾನಿಳಂ ಮಲಯಜಾಮೋದೈಕಸಂಸಕ್ತನೋ ||೫೦||

ವ|| ಆಬಂದ ಮಂದಮಳಯಾನಿಳನನಿದಿರ್ಗೊಳಲೆಂದೊಂದಿರುಳ್ ಮಾನವೇಂದ್ರನಿಂದ್ರಂ ವಿಮಾನಮನೇಱುವುದನನುಕರಿಸುವಂತೆ ಕರುಮಾಡಮನೇಱಿ, ಪಾಸಿನ ಪೊರೆಯೊಳ್ಪಟ್ಟಪರ್ದನಭಿನಯಿಸುವಂತೆ ಪರಾಂಗಣದೊಳ್ ಪಚ್ಚವಡಿಸಿರ್ದಮೃತಾರ್ಣವತರಂಗಸ್ಥೂಲಹಂಸತೂಳತಳ್ಪದೊಳ್ ಮಗ್ನಮೂರ್ತಿಯಾಗಿ ಕುಳ್ಳಿರ್ದ ಬಲೆಯ ಕಣ್ಣ ಬೆಳಗಿಂಗೆ ಬೆದಱಿ ಕತ್ತಲೆಯ ಮೊಗ್ಗರಂ ಮಗುಳ್ದು ಮೂದಲಿಸಿ ಕವಿವಂತೆ ಕನಕಕೇತಕೀದೀರ್ಘದಳದಾಮಾನುಲೇಪನಕರ್ಪೂರತಾಂಬೂಲಬಹಳಪರಿಮಳಕ್ಕೆ ಪರಿತಂದು ಮುಸುಱಿ ಮುತ್ತುವ ಮತ್ತಮಧುಕರನಿಕರಮಂ ಲೀಲಾಕಮಲದಿಂ ಸೋಂದು ಸೇದೆವಡುವ ಸುನಂದಾದೇವಿಯ ಮುದ್ದುಮೊಗಮಂ ನಸುನಗೆವೆರಸು ನೋಡುತ್ತುಮಿರೆ,

ಬಿರಿವನ್ನಂ ತನುವೆಂಬ ನೀಳಗಿರಿಯುಂ ತಾರಾಸಹಸ್ರಾಕ್ಷನುಂ |
ಬರೆ ಗೋತ್ರಾಂತಕನಿಟ್ಟ ವಜ್ರಮೆನಸುಂ ಬೀಳ್ವಂತೆ ಕಣ್ಗಕ್ಕೆ ಕಣ್ಮರ |

ಲಂ ಪೆಣ್ಬಡೆ ಮುಚ್ಚ್ಟಿ ಭೂಪವರನೆಂಬೊಳ್ವುಲ್ಲ ಮೇಲೊಂದು ದ |
ಳ್ಳುರಿ ಬೀೞ್ವಂತೆವೊಲುಳ್ಕು ಬಿರ್ದುದು ನೃಪಂ ಬೆಂಬೀೞ್ ನಿರ್ವೇಗದಿಂ ||

ಅದಟಲೆವ ಕೊಳ್ಳಿಯಂ ತು |
ಳ್ಕುದ ಕೊಳ್ಳಿ ಕನಲ್ದು ಬಿೞ್ದುದಂ ಕಂಡು ಕರಂ ||
ಬೆದಱ್ ಮಿಗೆ ಕೊಳ್ಳಿಯಂ ಕು |
ತ್ತಿದವೊಲ್ಮಱುಗಿತ್ತು ಚಿತ್ತಮವನೀಪತಿಯಾ ||೫೧||

ವ|| ಎಂದು ತನ್ನೊಳಿಂತೆಂದಂ :—

ಏಕುಳ್ಕಂ ಪೊಲ್ಲೆಂಬುದೊ |
ಲೋಕಂ ಪೋಯಿತೆನ್ನ ಮನದ ಮೋಹಧ್ವಾಂತಾ ||
ನೀಕಂ ಪ್ರಯೋಜನಾರ್ಥಾ |
ಲೋಕನಮುಳ್ಕಪ್ರದೀಪದಿಂದಾಯತ್ತಾಗಳ್ ||೫೨||

ತೇಜಂ ಬಾಡಿಸುತಿರ್ಪ ರೇಖೆಯೊ ಚಿರಂ ಬಾೞ್ವಾಸೆಯಿಂದೀಮಹಾ |
ರಾಜನೋರ್ಡುವ ತೀವ್ರತೇಜದ ಮಹಾಸಪ್ತಾರ್ಚಿಗಂಡುಂ ಮಹಾ ||
ತೇಜಂ ಭಾಸ್ಕರನಸ್ತದೊಳ್ಕೆಡೆವುದಂ ಕಂಡುಂ ಮಹೋಳ್ಕಂ ಜ್ವಳ |
ತ್ತೇಜಂ ಬೀೞ್ವುದಗಂಡುಮುದ್ಗತಮಹಾಮೋಹಾಂಧಕಾರಾಂಧಕರ್ ||೫೪||

ಪುಟ್ಟಂಗುರುಡಂ ಕಾಣ್ಬನೆ |
ಬಟ್ಟೆಯನಮಳಾಕ್ಷನಂತೆ ಸದ್ದೃಷ್ಟಿಯೆ ಬಾ ||
ಯ್ಕುಟ್ಟದೆ ಕಾಣ್ಗುಂ ಧರ್ಮದ |
ಬಟ್ಟೆಯ ನೆಱೆ ಕಾಣಲಱೆವನಕ್ಕು ಮದಾಂಧಂ ||೫೫||

ವ|| ಆಪ್ರಸ್ತಾವದೊಳ್

ಕಂದಿಸೆ ಭಾಮಂಡಲರುಚಿ |
ಸಂದೋಹಂ ಮೂಡುತಿರ್ಪ ರವಿಮಂಡಲಮೆನೆ ||
ಬಂದುದು ತನ್ನಗರಕ್ಕೆಸು |
ಮಂದಿರಜಿನಪತಿಯ ಸಮವಸೃತಿ ಜಿತದುರಿತಂ ||೫೬||

ವ|| ಸುಪ್ರತಿಷ್ಠಾಚಾದಗೆಯಭಿನ್ನಘನಧ್ವನಿಯಂ ಪ್ರಾವೃಡಾಗಮ
ನಮನಱೆವಂತೆ ದೇವದುಂದುಭಿಧ್ವನಿಯಿನಱೆದಱಲ್ಕೊಂಡನ ಮೇಲೆ ತೋಱೆ

ಬಂದತ್ತೆಂದು ಸಂತಸಂಬಟ್ಟು ಪಾಪಪ್ರತಿವ್ಯೂಹಭೀತಿಯಿಂ ಸಮವಸರಣ
ದುರ್ಗಮಂ ಶರಣ್ಬೊಕ್ಕಂ

ಎನಸುಂ ಭಿನ್ನಘಟಕ್ಕೆ ತೂಂತಿಡುವುವೇ ನದ್ಯಾದಿಗಳ್ ಭಿನ್ನಭಾ |
ಜನವೊಂದಂದಱಿಯಂ ನಿಜಾಮೃತಮಯಶ್ರೀಧರ್ಮತೀರ್ಥಕ್ಕೆ ಬಂ ||
ದಿನಿಸುಂ ಸದ್ಗುಣಭಾಜನಂ ಸುಲಭನುಂ ಪುಣ್ಯಾಂಬುವಂ ತನ್ನ ಕೊ |
ಳ್ವನಿತಂ ಕೊಳ್ಳದೆ ಪೋದ ಕಾಲವೊಳವೇ ನಿರ್ವಾದಬೋಧಾಂಬುಧೀ ||೫೭||

ವ|| ಎಂದು ದೇವಾದಿದೇವನಂ ಸ್ತುತಿಯಿಸಿ,

ಆಜಿನನ ದಿವ್ಯಪಾದಪ |
ಯೋಜಾಂತಿಕದಲ್ಲಿ ದೀಕ್ಷೆಗೊಂಡನಿಳೇಶಂ ||
ಬೀಜಂಗೊಳ್ವಂತಿರೆ ವಿ |
ಭ್ರಾಜಿಸುವಾರ್ಹಂತ್ಯವಿಪುಳಫಳಮಂ ಪಡೆಯಲ್ ||೫೮||

ವ್ಯಾಲೋಲರಾಜ್ಯವಿಭವವಿ |
ಶಾಲವಿಭೂಷಣಕಳಾಪಮಂ ಕಳೆದೊಲವಿಂ ||
ದೋಲಾಡುತಿರ್ದನುಪಶಮ |
ಲೀಲಾರಸದೊಳ್ ಸರಸ್ವತೀಶೃಂಗಾರಂ ||೫೯||

ವ|| ಆತಪೋಧನರ ತಪೋರಾಜ್ಯಯೋಗಕ್ಕೆ ಯೋನಿಯಾಗಿ

ನಲಿದು ನವಿಲ್ ಜಗರ್ತುದು ಪಿಕಧ್ವನಿ ಪಣ್ತುದು ಮಿಂಚು ಕಣ್ಗಳೊಳ್ |
ಮೊಳೆತುದು ಶಕ್ರಚಾಪಲತೆ ಪೊಣ್ಮೆ ಪಸುರ್ತುದು ಮುಗ್ಧಚಾತಕಂ ||
ಗಳ ಸಿತಚಂಚುವುಳ್ಳಲರ್ದುದಂಬರಮೆಂಬ ತಮಾಳಮಾಗಳೇ |
ಗಳೆ ಮುಗಿಲಂ ತಳರ್ತುದೆಲೆದ್ರೆ ತೀಡಿದುದಕ್ಕುಮೆ ಪಶ್ಚಿಮಾನಿಳಂ ||೬೦||

ವ|| ಆಘನಾಗಮದೊಳ್—

ಸಿಡಿಲ ಸರಿ ಮೊಱಗುಗಳ ಮೊಳೆ |
ಕುಡುಮಿಂಚಿನ ಸೋನೆಯಾಲಿಗಳ ಬೆಳ್ಸರಿಗಳ್ ||
ಬಿಡದ ಜನಿಗಳ ಮುಱಿಯೊಳೆ |
ಮಿಡುಕದೆ ಮರಮೊದಲೊಳಿರ್ದನಿರ್ಪವೊಲಚಳಂ ||೬೧||

ಶಾಳಿಯ ಕಂಪನೊಟ್ಟೆ ನಳನಂಗಳನಳ್ಕಿಸಿ ಬೆಳ್ಮುಗಿಲ್ಗಳಂ |
ತೊಳವನೆತ್ತುವಂತಳೆದು ಸೋಗೆಯ ಹೀಲಿಯ ಬೇಱನೆತ್ತಿ ಹಂ ||

ಸಾಳಿಯ ತುಪ್ಪುೞಿಂ ತುೞಿದು ಪಶ್ಚಿಮದಿಂ ಬಡವಾಗಿ ಬರ್ಪ ಮೇ |
ಘಾಳಿಯನೊತ್ತಿ ತೀಡಿದುದು ಮೂಡಣ ಗಾಳಿ ಹಿಮಪ್ರವೇಶದೊಳ್ ||

ವ|| ಆಹಿಮಾಗಮದೊಳ್

ರಂಗತ್ತರಂಗಶೀಕರ |
ಮಂ ಗಾಳಿಗಳೊಟ್ಟೆ ಕರಗಿ ಸುರಿದಂತಿರೆ ಬೆ ||
ಳ್ದಿಂಗಳವೊಲೆಯುಲ್ಕಲು ಬೆ |
ಳ್ಳಂಗೆಡದಿರೆ ಯೋಗಿ ಬೆಳ್ಳವಾಸಮನಿರ್ದಂ ||೬೩||

ಪರಿಮರಿಯಾಡಿ ದಾವದುರಿಗಾಳಿಗಳೊಳ್ಬಿಸಿಲೊಳ್ಕನಲ್ವ ಕ |
ಲ್ಸರಿಯುಯ್ಯಲಾಡಿ ಪುಡಿಯಾಟಮನಾಡಿ ಚರಾಚಳಂಗಳಂ ||
ಕರಿಮುರಿಯುಪ್ಪಿನಂ ಹುರಿವ ಹಂಚುವಿವಿರ್ದೆಳೆಯೊಳ್ ಕೃತಾಂತನೆ |
ಚ್ಚರಿಗಣೆಯಂತೆ ಬಂದುದು ಲಯಾನಿಳಕಲ್ಪನಿದಾಘಜಾನಿಳಂ ||೬೪||

ವ|| ಆಸಮಗ್ರೋಷ್ಮಗ್ರೀಷ್ಮಾಗಮದೊಳ್

ಕೆಳ*ರ್ದುರಿವ ಬಿಸಿಲ್ಗಂ ಕೇ |
ಸುರಿಗಳ್ಳಂ ಕಿಡಿಯುಮನುಗುಳ್ವ ಕಿಚ್ಚಿನ ಸರಿಯಂ ||
ತಳ*ರ್ದ ತಳತಳಪ ತಪನೋ |
ಪಳದೊಳ್ ಶಾಂತ್ಯಮೃತಜಳಧಿ ಕಲ್ನೆಲೆಸಿಂದಂ ||೬೫||

ವ|| ಅಂತು ತನ್ನ ತಪಂ ತ್ರಿಕಾಲಮುಂ ಗೆಲೆ ಬೋಧಂ ತ್ರಿಭುವನಮನೊಳಗುಮಾಡೆ ತನ್ನ ದರ್ಶನಂ ತ್ರಿದರ್ಶನಮನಧಃಕರಿಸೆ ಸುಪ್ರತಿಷ್ಠವ್ರತಿಪನನುಕ್ರಮದಿನೇಕಾದಶಾಂಗಧರನಾಗಿ ಸಮ್ಯಕ್ತ್ವಾದಿಷೋಡಶಭಾವನೆಗಳಂ ಭಾವಿಸಿ ಸದ್ಗುಣಂಗಳಂ ತೀರ್ಥಕರಪುಣ್ಯಮುಂ ಕಟ್ಟಿಕೊಂಡುಮೊಡನಹಮಿಂದ್ರತ್ವಮಂ ಕುಡೆಂದು ಜಿನೇಂದ್ರಂಗೆ ಪಾಳಂಬಡುವಂತೆ ತಿಂಗಳ್ ಸನ್ಯಸನಮಿರ್ದೊಡಲನೀಡಾಡಿ ಯುತ್ತರವಿಜಯಂತಿವಿಮಾನದೊಳಹಮಿಂದ್ರನಾಗಿ ತ್ರಯಸ್ತ್ರಿಂಶತ್ಸಾಗರೋಪಮಾಯುಷ್ಯನುಮೇಕರತ್ನಿಪ್ರಮಾಣನುಂ ಶುಕ್ಲಲೇಶ್ಯಾಪರಿಣಾಮನುಂ [1]ಸಾರ್ಧ[1]ಷೋಡಶಮಾಸನಿಶ್ವಾಸನುಂ ತ್ರಯಸ್ತ್ರಿಂಶದ್ವರ್ಷಸಹಸ್ರಾಂತೋಪಭುಕ್ತಾಮೃತಾಹಾರನುಂ ನಿಪ್ರವೀಚಾರಸುಖನುಂ ಸಪ್ರವೀಚಾರಾಂತಗುಣನುಂ ಲೋಕನಾಡಿಕಾಭ್ಯಂತರಗತಾವಧಿ

ಪಾ—1. ಕ, ಸಾದ್ರ.

ಜ್ಞಾನನುಂ ಸ್ವಾವಧಿಕ್ಷೇತ್ರಬಳ[1]ಪ್ರಕಾಶ[1]ಶರೀರವಿಕ್ರಿಯಾದಿಗುಣಾಲಂಕೃತನುಮಾಗಿ ದಿವ್ಯಸುಖಮನಾಸ್ವಾದಿಸುತ್ತುಮಿರ್ದಂ.

ನಱುಸುಯ್ಗುಂಪಿನಲಂಪಿಂ |
ದಱುದಿಂಗಳ್ಗೊಮ್ಮೆ ಪೀರ್ದು ತಣಿದಿರ್ಪಳವೋಲ್ ||
ಮಿಱುಗೆ ನಿಜನೀಲಭೂಷಣ |
ಮುಱುದಿಂಗಳ್ಗೊಮ್ಮೆ ಸುಯ್ವನೆಸೆವಹಮಿಂದ್ರಂ ||೬೬||

ಅಹಮಹಮಿಕೆಯೆಂತತಿಶಯ |
ಸಹಜಾಳಂಕರಣಗಳನಹಂಪೂರ್ವಿಕೆಯಿಂ ||
ಬಹುಭೋಗಮಹಂಕೃತಿಯಿಂ |
ದಹಮಿಂದ್ರಂಗಪ್ಪುದಪ್ರವೀಚಾರಸುಖಂ ||೬೭||

ಮೇದಿನಿಯೊಳ್ ವಿನೂತನದ ವರ್ಣನಮಾಗ್ಗೆ ವಸಂತವರ್ಣನಂ |
ಸ್ವಾದಮೆನಿಕ್ಕುಮಲ್ತೆ ನೆಗೞ್ದೀ* ಕೃತಿಯೊಳ್ ಕೃತಿನಾಥ ನೇಮಿನಾ ||
ಥೋದಯಮಸ್ತು ವರ್ಣನಮೆ ಮುಖ್ಯತೆವೆತ್ತೊಡಮಾದಿಯೊಳ್ ಪೊದ |
ಱ್ದದರಣೀಯುವಮಾದುದೆನಗಾತನ ವಿಶ್ರುತವಂಶವರ್ಣನಂ ||೬೮||

ವ|| ಅದೆಂತೆಂದೊಡೆ:—ಫುಲ್ಲಶರನ ಶಸ್ತ್ರಶಾಲೆಯಂತಿರ್ಪ ಪುಷ್ಪವಾಟಿಗಳಿಂ| ಮನೋಜರಾಜನ ರಾಣಿವಾಸದಂತಿರ್ಪೆಳಲತೆಯ ಬಳ್ಳಿಗಾವಣಂಗಳಿಂ| ಅಂಗಜನರಾಜಗೃಹಂಗ[2]ಳಂತಿರ್ಪ[2]ನಾಗವಲ್ಲಿಗಳಿಂ | ಶೃಂಗಾರಸೂಕ್ತಿಯುಶೃಂಗಾರಭವನದಂತಿರ್ಪ ಮಲ್ಲಿಕಾಭವನಂಗಳಿಂ| ಲಕ್ಷ್ಮೀಸುತಸ[3]ಸೂತಿಕಾಗಾರದಂತಿರ್ಪ[3]ಕದಳಿಯ ಸುತ್ತಿನಿಂ| ನನೆಗಣೆಯನ ಗರುಡಿಯಂತಿರ್ಪ ಪೂವಿನಪುಡಿಯ ಪುಟಿಲ್ಗಳನಗೊರ್ಲನೋಲಗಸಾಲೆಯಂತಿರ್ಪ ಜಾದಿಯ ಪಂದರಿಂ | ಕಂತುವಿನ ಖೇಡಾಕುಟೀಯಂತಿರ್ಪಕ್ರೀಡಾರಸಂಗಳಿಂ| ರತಿಯ ರತಿಗೃಹಂಗಳಂತಿರ್ಪ ಚಾಳೋಪಂಗಳಿಂ| ರತಿಯ ನೃತ್ಯಮಂಟಪದಂತಿರ್ಪನವಮಾಳಿಕಾಮಂಡಪಂಗಳಿಂ| ಕಂತುಕಾಂತೆಯ ಕಳಕೂಜನದ ಗುಣ್ಣಾಣೆಯಂತಿರ್ಪ ಸಾರಸರಸಿಕಕಮಳಕುವಳಯಷಂಡಂಗಳಿಂ | ಅನಂಗನ ವನಿತೆಯ ವಿನೋದದಳಿಯ ಗಿಳಿಯ ಕೋಗಿಲೆಯ ಕಾಪಿನಾಕೆಗಳಂತಿರ್ಪ ಚೂತಲತೆಗಳಿಂ| ರತಿಪತಿಯ ಪಡಿಯಱತಿಯರಂತೆ ಕೆರಳ ತರುಗಳೊಳ್ ಮೆಯ್ಗರೆದು ಕರೆವ ಕೋಗಿಲೆ

---

ಪಾ—1. ಕ, ಪ್ರಕಾರ  2. ಗ, ಳಿನಂತಿರ್ಪ.  3. ಕ, ಗ, ಸುತಕಾರ.

ಯು ದನಿಯಿಂ ಪುಗಿಲ್ಪುಗಿಲೆಂಬ ಸಹಕಾರವಲ್ಲರಿಗಳಿಂ|ಮನ್ಮಥನ ಮೆಯ್ಗಾಪಿನಾಕೆಗಳಂತೆ ಸುಕುಮಾರಶಾಖಾಭುಜಾಗ್ರಭೀಷಣಭುಜಂಗಮುಜಂಗಮಾಸಿತಲತೆಗಳಿಂ ತಳೆದ ಚಂದನಲತೆಗಳಿಂ| ದರ್ಪಕನ ದೀಪ್ರೋತ್ಸವದೀಪಮಾಲೆಗಳಂತೆ ಪೂತು ಸೊಗಯಿಸುವ ಸಂಪಿಗೆಗಳಿಂ|ಮನಸಿಜಂಗೆ ಮೀನಕೇತುವನೆತ್ತುವಂತೆ ನೀರ ಮೇಗೆ ನೆಗೆದ ನಿಡಿಯ ನಾಳದ ನಳನದರಲೊಳ್ ಪೊಳೆದು ಪಾಱಿಬೀೞ್ವ ಬಾಳೆಮೀನಿಂ ತೊಳಪ ತಿಳಿಗೊಳಂಗಳಿಂ| ನೀರ ಮೇಲೆ ಪರಿವ ರತಿವಲ್ಲಭನ ವಾಜಿಕುಳದಂತೆ ತೊಡಗಿಸುವ ಜಕ್ಕವಕ್ಕಿಗಳಿಂ| ಚಿತ್ತಭವಚಕ್ರವರ್ತಿಯ ನಡುಪಟ್ಟ ಪಟ್ಟದಾನೆಯಂತೆ ಮಗಮಗಿಸುವ ಮದಮದದ ಸೊನೆಸೊನೆಯಿಂ ಬಿಡುವ ಬಾಳರಸಾಳಂಗಳಿಂ| ಕಾಮದೇವನ ದೀವದ ಪಿಂಡಿನಂತಿರ್ಪ ಕಳಹಂಸೆಗಳಿಂ| ಸ್ಮರನರಸಿಗೆ ಸೀಗುರಿಯನಿಕ್ಕುವಂತಿರ್ಪ ಸೋಗೆನವಿಲ್ಗಳಿಂ|ಅವಳ್ಗೆ ಪೊನ್ನ ಬಟ್ಟಲೊಳ್ಕತ್ತುರಿಯುರುಳಿಯಂ ಪಿಡಿದಿರ್ಪಂತೆ ತುಂಬಿಪಾಯ್ವ ಕುಸುಮಂಗಳನೆಸೆವ ಕೊಸಗುಗಳನಾಕೆಗೆ ಕುಂಕುಮದುರುಳಿಯನವಟ್ಟೈಸುವ ಘಟ್ಟಿವಜ್ತಿಯಂತೆ ಪಣ್ತ ನಾರಂಗವಲ್ಲಿಗಳನುದ್ಯಾನದೇಶಮನಾಚಲೆಂದು ಕಾಮನ ಕೆಯ್ಯೊಳ್ [1]ತೊಳಗಿದ[1] ಪತ್ತಳೆಯಂ ಕೊಂಡು ಚಾದಂಕುಡದಂತೆ ತಳರ್ತಶೋಕೆಗಳಿಂ|ಪಂಚಶರನ ಪಾಯ್ದಾಳನಂತೆ ಚಂಚರೀಕದ ಕುಂಚಮನೆತ್ತಿ ಕಿಂಜಲ್ಕದ ಕೆಂದೂಳಿಯೊಳ್ಪೂರೆದು ಮಕರಂದಬಿಂದುವೆಂಬ ಬೆಮರಂ ಪೇಱ ಪರಿತರ್ಪ ತಣ್ಣೆಲರಿಂ ಶಂಬರಹರನಗುಳಗಳತಕಂಟಕಂಗಳಿಂ ಬರೆವಕೇದಗೆಗಳಿಂ|ವಸಂತಸಖನ ನಿಸೃಷ್ಟಾರ್ತದೂತಿಯಂತಿರ್ಪವಸಂತದೂತಿಯಿಂ ಮದನಮಹಾರಾಜನರಮನೆಯಂತಿರ್ಪರಮನೆಯಿಂ ಮನಂಗೊಳಿಸಿ ಕಂದರ್ಪನಾದೇಶಂಗಳಂತಿರ್ಪ ದೇಶಂಗಳಿಂ—ಭರಿತಮಾದಭರತಕ್ಷೇತ್ರದೊಳ್

ಉಂಟು ಕೃತಾರ್ಥಮೆಂಬ ವಿಷಯಂ ವಿಷಯ......ರಪ್ಪಿನಂತೆ ನಿ |
ಷ್ಕಂಟಕಮಲ್ಲಿ ಶೌರ್ಯಪುರಮುಂಟು ಸುರೇಂದ್ರಪುರೋಪಮಂ ಪ್ರಭಾ ||
ಲುಂಟಿತಶೂರಸಾರಗುಣನಾಳ್ವನದಂ ಕಲಿ ಶೂರಸೇನನಾಂ |
ತೆಂಟುಮಿಭಂಗಳಾಂತ ಧರೆಯಂ ದೃಢದಕ್ಷಿಣಬಾಹುದಂಡದಿಂ ||೬೯||

ಸುರನಿಭಶೂರಸೇನನ ಸುತಂ ಸ್ಮರಸನ್ನಿಭಶೂರವೀರನಾ |
ನರಪತಿಯಂ ಪತಿಂವರೆಗೆ ಧಾರಿಣಿಗಂಧಕವೃಷ್ಟಿಯೆಂಬನುಂ ||

---

ಪಾ—1. ಕ, ಗ, ತೊಳಗಿಳದ.

ನರಪತಿವೃಷ್ಣಿಯೆಂಬನುಮುದಾತ್ತರಸಾಢ್ಯಪಲಪ್ರದತ್ತಮುಂ |
ಭರಸಹಸತ್ವಮುಂ ನೆಗೞ್ದ ಧಾರಿಣಿಗಾದವೊಲಾಧರಾತ್ಮಜರ್ ||೨೦||

ಅವಿಜಗೀಷುವಿಂಗೆ ವಧುವಂಧಕವೃಷ್ಣಿಗೆ ವಿಷ್ಣುವಿಂಗೆ ಲ |
ಕ್ಷ್ಮೀವಧುವೊಲ್ ಸುಭದ್ರೆ ಶುಭಲಕ್ಷಣೆಯಾದಳುಮಾವರಂಗುಮಾ ||
ದೇವಿವೊಲಾನರಾಧಿಪತಿ ವೃಷ್ಣಿಗೆ ಪದ್ಮದಳಾಯತಾಕ್ಷಿ ಪ |
ದ್ಮಾವತಿಯಾದಳಂತು ನೆಗೞ್ದಂಧಕವೃಷ್ಣಿಗಮಾಸುಭದ್ರೆಗಂ ||೨೧||

ನಾಭಿನಿಭಂ ಸಮುದ್ರವಿಜಯಂ ಮೊದಲಾಗೆ ಪದಿಂಬರಾಧರಾ ||
ಕ್ಷೋಭನುಮುತ್ಕನುಂ ಸ್ತಿಮಿತಸಾಗರನುಂ ಹಿಮವಂತನುಂ ಧೃತೋ ||
ರ್ವೀಭರನಾಗಿ ಸಂದ ವಿಜಯಾಚಳದಾರಣಪೂರಣರ್ಕಳುಂ |
ಶ್ರೀಭವನಾಭಿನಂದನನುಮಾವಸುದೇವನುಮೆಂಬ ನಂದನರ್ ||೨೨||

ಕ್ರಮಮುಂ ವಿಕ್ರಮಮರ್ಥಮುಂ ವಿತರಣಂ ವಾಗ್ಮಿತ್ವಮುಂ ನನ್ನಿ ತೇ|
ಜಮುಮೈಶ್ಯಂ ಪ್ರತಿಭಾಸಮುಂ ಸಕಲಶಾಸ್ತ್ರಾಭ್ಯಾಸಮಾದಾಭಿಜಾ ||
ತ್ಯಮುಮಾಚಾರಮಪಾರಸೌಂದರತೆಯುಂ ಸೌಭಾಗ್ಯಮೊಲ್ದೀದೆ ಮೆ |
ಚ್ಚಿ ಮರುಳ್ಗೊಂಡವೊಲಪ್ಪಿವೊಪ್ಪಿ ಶಿವದೇವೀಕಾಂತನೊಳ್ಸಂತತಂ ||೨೩||

ಅದ್ರಿಗಳರ್ಕಚೇತನೆಯೊಳೆಂದು ಧರಾಧರ ಕೂರ್ಮ ಶೇಷ ದಿ |
ಗ್ಭದ್ರಗಜಂಗಳ್ಕೈದೆ ದಶಭೂಭುಜರಾದರೆನಿಪ್ಪತತ್ಪ್ರತಾ ||
ಪದ್ರವಿಣರ್ಗೆ ನೇರ್ಗಿಱಿಯನಾಗಿ ನೆಗೞ್ತೆಗೆ ನೋಂತ ಕೊಂತಿಯುಂ |
ಮಾದ್ರಿಯುಮದ್ರಿರಾಜಸುತೆಗಂ ಸತಿಗಂ ಸರಿವಂದರೇೞ್ಗೆಯೊಳ್ ||೨೪||

ದ್ಯುಮಣಿಪ್ರದ್ಯೋತದಿಂ ಪದ್ಮಿನಿಗೆ ನಗೆಯುಮಾನಂದಮುಂ ಲೀಲೆಯುಂಶ್ರೀ|
ಯುಮನೂನಂ ಪುಟ್ಟುವಂತಾವರನರಪತಿವೃಷ್ಣೀಶಗಿಂದುಗ್ರಸೇನೋ ||
ತ್ತಮನುಂ ಶ್ರೀದೇವಸೇನಾಖ್ಯನುಮೆಸೆವ ಮಹಾಸೇನಭೂವಿಶನುಂ ಸ |
ತ್ಕ್ರಮದಿಂ ಗಾಂಧಾರಿಯುಂ ಪುಟ್ಟಿದರೆಸೆದಿರೆ ಪದ್ಮಾವತೀದೇವಿಗೊಳ್ಪಿಂ||೨೫||

ವಸುದೇವಂ ಪೊಱಗಾಗೆ ಮಿಕ್ಕಿನರಮಕ್ಕಳ್ಗೊಪ್ಪಿದರ್ಕಾಮಕೇ |
ಳಿಸುಖಾಸಕ್ತಿಯರಾಗಿ ಚಂದ್ರಕಳೆಯುಂ ಮಾರೋದ್ಧನುರ್ಲ್ಲೇಖೆಯುಂ ||
ಕುಸುಮಾಸ್ತ್ರಾವಳಿಯುಂ ಮನೋಜನ ವಸಂತಶ್ರೀಯುಮೋರಂದದಿಂ |
ಮಿಸುಗಲ್ಮೀನಪತಾಕೆಯುಂ ಮದನತೀರೂಪಕ್ಕೆ ಪಕ್ಕಾದವೊಲ್ ||೨೬||

॥ ಪೃಥ್ವೀ ॥

ಸುಯುಕ್ತೆ ಶಿವದೇವಿಯುಂ ನವಧೃತೀಶ್ವರಾದೇವಿಯುಂ ।
ಸ್ವಯಂಪ್ರಭೆಯುಮುದ್ಭವಾನ್ವಿತೆ ಸುನೀತೆಯುಂ...... ॥
ಪ್ರಿಯಂವದೆಯುಮಾಪ್ರಭಾವತಿಯುಮಂತೆ ಕಾಳಿಂದಿಯುಂ ।
ಕ್ರಿಯಾನಿಧಿಗಳಂತೆ ಸುಪ್ರಭೆಯುಮೆಂಬರಬ್ಜಾಕ್ಷಿಯರ್ ॥೭೭॥

ವ॥ ಅಂತು ಶೂರಸೇನನನೆಡೆಗೊಂಡು ತನ್ನಿಂದಮೋ ಮೊಳೆವೋಗಿ ವೃಷ್ಣಿಯುಗಳದಿನೀರೆಲೆವೋಗಿ ಸಮುದ್ರವಿಜಯೋಗ್ರಸೇನಾದಿಗಳಂ ಮಡಲ್ತು ಹರಿವಂಶವಲ್ಲರಿಗೆ ಮೊತ್ತಮೊದಲಾದ ತನ್ನ ಮಹಿಮೆ ಮಹೀತಳಮಹನೀಯಮಾಗೆ ಶೂರವೀರಮಹಾರಾಜಂ ರಾಜ್ಯಲತೆಗಡರ್ಪಾಗೆ ಮತ್ತಮತ್ತಲ್,

ಕುರುವಂಶಪ್ರಭುಶಕ್ತಿಸಂಸವಕೆ ತಾಂ ಪುಟ್ಟಿದಂ...ಹಸ್ತಿನಾ ।
ಪುರದೊಳ್ ಸಂದ ಪರಾಶರಂ ಸರಶಿರಂ ಶೂಲಪ್ರತಾಪಂ ಪರಾ ॥
ಶರನಿಂ ಸತ್ಯಪರಾಖ್ಯಸತ್ಯವತಿಗಾದಂ ಮತ್ಸ್ಯರಾಜಾನ್ವಯಾಂ ।
ಬುರುಹಶ್ರೀಗೆ ಸುತಂ ಜಿತವ್ಯಸನನಾವ್ಯಾಸಂ ಯಶೋವಲ್ಲಭಂ ॥೭೮॥

ಸುತರಾದರಾಪರಾಶರ ।
ಸುತಂಗವಾಸತಿ ಸುಭದ್ರೆಗಂ ಭದ್ರಮನಂ ॥
ಧೃತರಾಷ್ಟ್ರಂ ಧೃತರಾಷ್ಟ್ರಂ ।
ವಿತತಯಶಃಪಾಂಡು ಪಾಂಡು ವಿದುರಂ ವಿದುರಂ ॥೭೯॥

ಅಂತು ಪೊಗೞ್ತೆವೆತ್ತವರೊಳಗ್ಗದ ಪಾಂಡುವಿನಂತರಂಗಮಂ ।
ಕೊಂತಿಯ ರೂಪವರ್ಣನದ ಮಾತು ಜಗದ್ಗದಿತಂ ಬೞಿಕ್ಕಮಾ ॥
ಕಂತುವ ಪುಷ್ಪಬಾಣನಿಕರಂ ಸುಖಲಬ್ಧಪಥಂ ಬೞಿಕ್ಕಮಾ ।
ಕಾಂತೆಯ ರೂಪಕಂ ಪೊಳೆದು ಪೊಕ್ಕುದು ಕೆಂಡದ ಬೊಂಬೆಯೆಂಬಿನಂ ॥

ಕೆಂಡದ ನೀಳ್ದ ಕೇಸುರಿಯ ಬಣ್ಣದಶೋಕೆಯ ಪುಷ್ಪಪಲ್ಲವಂ ।
ಪಾಡುವಿನಂಗಮಂ ಸುಡುಗೆ ಪಾಸಿದ ಮಲ್ಲಿಗೆಯುಂ ಮೃಣಾಳಮುಂ ॥
ಕೊಂಡುವು ಕಿಚ್ಚಿನಿಂದಣಕವಲ್ಲದೆ ಮೂಡಿದುದೆರ್ದೆ ಬೂದಿವೋಲ್ ।
ಪಾಂಡುಗೆ ಕಾಮಪಾಂಡುರತೆ ಸಾರ್ಥಕನಾಮಮನುಂಟುಮಾಳ್ಪವೋಲ್ ॥

ಸುಡದೆ ಕನಲ್ವ ಕಿಚ್ಚಿನೊಡನಾಡಿದ ತೆಂಬೆಲರಾತಪಂಗಳಂ ।
ಕುಡಿವ ಸರೋರುಹಂ ಸುಡದೆ ನುಂಗುವ ಪಾವಿನ ಪಲ್ಲ ನಂಜು ನಿ ॥

ಚ್ಛದದಮೃತಾಂಶುಮಂಡಳಮದೇಂ ಸುಡದೇ ಹಿಮವುಂಡು ಬಾಷ್ಪಿತ |
ಣ್ಮಡುವಿನ ಪೂವೆ ಸುಟ್ಟಪುದು ಮಾಯ್ದು ವಿಯೋಗಿಯೊಳೆಂತು ಬರ್ದಪರ್ ||
ಪರಿಕಿಸೆ ಪಾಂಚಭೌತಿಕಮಿದೆಂಬುದಸಂಗತಮೇಕಭೌತಿಕಂ |
ವಿರಹಿಜನಾಳಗೀಭುವನಮೆಂತೆನೆ ಸೂಸುವ ಶೀತಳಂ ಜಳಂ ||
ಸುರಭಿಸಮೀರಣಂ ಸ್ಮಿತವನೋಲ್ಲಸಿತಂ ವಸುಧಾತಳಂ ಸುಧಾ |
ಕರಕರಪಾತಪಾಂಡುನಭಮಾದುದು ಪಾಂಡುಗೆ ಪಾವಕೋಪಮಂ ||೮೩||

ಶರಶಲ್ಯಮಿನಿತು ಸಿಲ್ಕಿಯು |
ಮರಿದಸುವಂ ಪಿಡಿಯಲೆರ್ದೆಯುನಲ್ಲದೆ ನಡೆ ವಿ ||
ಸ್ಮರಶರತತಿ ಕಿಟಿಲರಿಯೆವು |
ವಿರಹಿಯ ನೋವಿಂಗೆ ಸಾಯಲಿಲ್ಲದಱಿಂದಂ ||೮೪||

ವ|| ಅಂತು ಕಂತುರಾಜನ ಕೊಂತದಂತೆ ಕೊಂತಿಯ ರೂಪಮೆರ್ದೆಯಂ ನಾಡೆಯುಂ ನೊಂದು ಮದನದಾಹದಿಂ ದೇಹಂ ಕೊರಗೆ ಮಲ್ಕಲಂ ಮಱುಗಿ ಮನಮಂ ನಿಡಲ ಪಿಡಿಯಲಾಱದೆ ಪಾಂಡುರಾಜಂ ಪುಂಡರೀಕದಂತೆ ವನಮೆ ಭವನಮಾಗಿರ್ಪುದುಮೊಂದು ದಿವಸಮಾವಸಂತವಾಸಮೆಂಬ ಭವನದ ಮನೋಹರಕೆ ಮನಮೊಳದುವರಿಯೆ ಮನೋಹರಿಯೆಂಬ ಮನಃಪ್ರಿಯೆವೆರಸು ವಜ್ರಮಾಳಯೆಂಬ ವಿದ್ಯಾಧರಂ ಬಂದೊಂದು ಬಂಧುರಮಪ್ಪ ಮಾಧವೀಮಂಡಪದೊಳ್ ಮನೋಭವಸುಖಮನನುಭವಿಸಿ ತನ್ನ ಬೆರಲುಂಗರದ ಕೆಂಬರಲುಗೆ ಕಣ್ಬೊತ್ತು ದಾಡಿಂಬದ ಬಿತ್ತುಗೆತ್ತು ಸೋವುವ ಸುಖಶಿಶುಗೆ ಮಣಿಮುದ್ರಿಕೆಯುಂ ಕಳೆದು ನೀಡಿನೀಡಿಯೊಳಮಾಡಿ ಮಱೆದೀಡಾಡಿ ಪೋಪುದುಮಾಪುರದೊಳ್ ಪಾಂಡುರಾಜಂ ಬಂದು ಮನೋಜಬಾಣಭಿನ್ನಮಪ್ಪ ಬಿರಯಿಯೆರ್ದೆಯಿನುದಿರ್ದ ವಿರಹಾಗ್ನಿಯಂತಿರ್ದುಂಗುರಮಂ ಕಂಡು ನೀಡುಂ ಭಾವಿಸಿ ನೋಡುತ್ತುಮಿರೆ

ಆವಜ್ರಮಾಳಯುಂ ಮು |
ದ್ರಾವಿಟಯುಚಳತನಯನಾಕಾರಕಳಾ ||
ಕೋವಿದನಾತನ ಭಾಗದ |
ದೇವಂ ಬರ್ಪಂತೆ ಬಂದನತಿಸಂಭ್ರಮದಿಂ||೮೫||

ವ॥ ಬರೆ ಕಂಡರಸಂ ದರ್ಶನೇಂಗಿತದಿಂದೀತಸುಂಗುರಮೊಂದಱಿದು ಕುಡುವುದುಮಾವಿವೇಕಕ್ಕೆ ಮೆಚ್ಚಿ—ವಿಯಚ್ಚರಮಿದು ಕಾಮರೂಪಸಾಧನಮೆಂಬುದು ನೀನುಂ ದುರ್ಲಭದಯಿತಾನುರಾಗರಾಶಿಯಾದ ತೆಱದಿಂ ತೋಱಿದಪ್ಪೆಯಾಮದೀಯಮುದ್ರಿಕೆ ನಿನ್ನ ಕೆಯ್ಯೊಳೊಂದೆರಡು ದಿವಸಮಿರ್ದು ಸುರತಸಾರಥಿಯಕ್ಕೆಂದು ಕೊಟ್ಟು ಪೋದನಿತ್ತ ಪಾಂಡುರಾಜನುಮಾಪೊೞ್ತು ಪೊೞ್ತಾಗಿ ಕೊಂತಿಯಲ್ಲಿಗೆ ಕೂಟಂಬಡೆವಾಣತಿಗೆಂದು ಮದನಮುದ್ರಿಕೆಯಂ ಕೊಂಡು ಪೋಪಂತೆ ಮಣಿಮುದ್ರಿಕೆಯನಿಟ್ಟದೃಶ್ಯರೂಪನಾಗಿ ಹಸ್ತಿನಾಪುರಕ್ಕೆ ಪೋಗಿ ಕನ್ಯಾವ್ರತಭಂಗಭೀತಿಯುಂ ಕಂಡು ನೋಣಮುಡ್ಡ ಪಾಱದಂತಾಗಿ ಸುತ್ತಲುಂ ಕಟ್ಟಿದ ಕಟ್ಟಾನೆಗಳಂ ಪ್ರತ್ಯಂತಪರ್ವತಂಗಳಂ ಬಳಸಿನಿಂ ಬಗೆಗೊಳಿಸುವ ಕನಕನಗದಂತಿರಭ್ರಂಕಷಮಾದ ಕೆಂಬೊನ್ನ ಕನ್ನೆಮಾಡದೇಟನೆಯ ನೆಲೆಯೊಳ್ ಸಮಾನವಯೋವಿಳಾಸವಿಭ್ರಮವಿಭವೆಯರಪ್ಪ ವಿಳಾಸಿನಿಯರ್ವೆರಸು ಕೆಂಮುಗಿಲ ಪೊರೆಯೊಳ್ ಪೊಳೆವೆಳಮಿಂಚಿನ ಗೊಂಚಲಂತೆ ತಳತ್ತಳಿಸಿ ಕೇಳೀಕಲಹದಿಂ ಮುಳಿದ ಕಾಮನ ಕಾಲ್ವಿಡಿವ ರತಿಯಂತೆ ಕಾಮದೇವನಂ ಪೂಜಿಸಿ ಪೊಡೆವಡುತ್ತುಮಿರ್ದ ಕೊಂತಿಯುಂ ಕಂಡು ಕೂಡಲ್ ಬಯಸಿ ತನ್ನೊಳಿಂತೆಂದಂ:—

ಗರಗರನಾಗಿ ಭೋಗಿಪೊಡೆ ಮೇಳಿಸಿ ಮುಗ್ಧೆಯನಾಗುಮಾಱ್ಪುದೋ |
ಗರದಧರಾಮೃತಂ ತುಱುಕಲಾಗದು ಬೇಸಱವಾಗದಪ್ಪು ಕ ||
ಣ್ಬರಿಯಣಮಾಗ ಪಣ್ಣಳಿಯದಿಂಪಗೆಯಾಗದಲಂಪುಮೀಸಲಂ |
ತಿರೆ ಮನಮಿರ್ಪುದೇಱಿಸದು ಲಜ್ಜೆಯು ಲಚ್ಚಣನಂಗಜಾಜ್ಞೆಯಾ ||೮೬||

ಸ್ವೈರಣೆಗುಂದದತ್ತ ಮೊಗಮಾದೊಡೆ ಬೆಚ್ಚಿ ಮನಕ್ಕೆ ಬೇಸಱಂ |
ತಾರದೆ ಮೀಱಿ ಮೆಯ್ದೆಗೆಯೆ ಮಾಣದೆ ಪೋದೊಡೆ ಪೋಗದಿಚ್ಚೆಯಿಂ ||
ಗೋರಿಗೆ ತಂದು ಮುಗ್ಧೆಯ ಮನೋಮೃಗಮಂ ನವಸಾಂಪ್ರಯೋಗಶ್ಯಂ |
ಗಾರಮನಾಳ್ದವಂ ಮದನರಾಜನ ರಾಜ್ಯಮನಾಳ್ದನಲ್ಲನೇ ||೮೭||

ಅಂತುಮಲ್ಲದೆ,

ಪೆಣ್ಣಱಗದೆ ಕೂರ್ತಱಗಿದ |
ಕಣ್ಣಱಿದುರದಂತೆ ಬಿಡುಗೊಡಂಬಡುಗೆ ನೋಣಂ ||

ಪ್ಪುಣ್ಣಂ ಸಾರ್ವರ್ವೊಲೊಲ್ಲದ |
ಪೆಣ್ಣಂ ಸಾರ್ದಹಹ ! ಸಾಸಿ ಕೊಳ್ವುದ ಕೇಳಂ ||೮೮||

ವ|| ಎಂದು ನಿಜಸ್ವರೂಪಮನಾತರುಣಿಗೆ ತೋಱಲೆಂದು ಬಗೆದು

ಉಂಗುರಮಂ ಕಳೆಯಲೊಡಂ |
ಪಿಂಗಿದುದು ಶರೀರಮಾಯೆ ಕೊಂತಿಯ ಪೂಜಾ ||
ಸಂಗಕ್ಕೆ ಮೆಚ್ಚಿ ಮೆಚ್ಚದ |
ನಂಗಂ ಪ್ರತ್ಯಕ್ಷಮಾದವೋಲ್ ನೃಪನೆಸೆದಂ ||೮೯||

ಆಗಳ್

ಗೊಂಚಲ್ಲಿರೆ ಚಲ್ಲುವ ನಯ |
ನಾಂಚಳಮಂ ನಾಣ್ಚಿ ತೆಗೆವ ಕರಿಯುಸಿಯಳ್ ಚೆ ||
ಲ್ವಂ ಚಲ್ಲಿದಳನಿದಿರೊಳ್ |
ಮಿಂಚುವ ನವಮೇಘಮಾಲೆವೊಲ್ಕಾರಿರುಳೊಳ್ ||೯೦||

ಚಕಿತಪ್ರಕ್ಷಿಪ್ತಪಕ್ಷ್ಮಾಂತರದೊಳೞಮೆಯುಂ ಮಿಱುಱಿದಂತಿರ್ಪದೀರ್ಘಾಂ
ಬಕಶಸ್ತ್ರಶ್ರೇಣಿಯುಂ ತತ್ಶ್ರವಣಕುವಳಯಶ್ರೀಣಿಶಾಣಾಗ್ರದೊಳ್ ದ ||
ರ್ಪಕದೇವಂ ದರ್ಪದಿಂ ಮಿಂಚಡರೆ ಮಸೆವವೋಲ್ ಚೆಲ್ವನಾಯಸ್ತಕೆಯುತ್ಸು|
ತ್ಸುಕಯಾತಾಯಾತವಕ್ರೋತ್ತರಳತರುಣಿಮಾನೀತನೇತ್ರತ್ರಿಭಾಗಂ ||

ಮದನಂ ಮಧುಮಯುವರುಣಾ |
ಸ್ತ್ರದಿನೆಚ್ಚನೊ ಮದನಮೋಹರಸಮಂಗಜತಾ ||
ಪದಿನುಕ್ಕಿದತ್ರೊ ಪೇೞನೆ |
ಸುದತಿ ಬೆಮರ್ತಳ್ ಕುಮಾರನಂ ಕಾಣಲೊಡಂ ||೯೧||

ವ|| ಅಂತು ಚಂದ್ರೋದಯದೊಳ್ ಬಿಂದುವಿಡುವ ಶಶಿಮಣಿಶಲಾ
ಕೆಯುಂತಿರ್ದಾಕೆಯುಂ ಕಂಡು ಮನಂಗೊಂಡು

ಅಲಿ ಮುಗುಳಂ ತುಱುಂಕಿ ನವಸೌರಭಮಂ ಸವಿವಂತೆ ಗಂಡುಗೋ |
ಗಿಲೆ ಪಡೆವಂತೆವೋಲ್ ಕಳಿಕೆಯೊಳ್ ರಸಮಂ ದಿವಸೇಂದ್ರನಬ್ಜಕು ||
ಟ್ಮಲಮನಲರ್ಚುವಂತೆ ಮಧುಮುಗ್ಧವನಾಂಗನೆಯೊಳ್ ವಿಕಾಸಮ |
ಗ್ಗಲಿಸಿರೆ ಕೂಡುವಂತೆ ಗಡ ಕೂಡಿದನಂಗಳೆ ಪಾಂಡು ಕೊಂತಿಯೊಳ್ ||

ವ|| ಕೂಡಿ ಸುಖಲಸ್ವಪ್ನದಂತದೃಶ್ಯಮಾಗಿ ಪೋಗಿ ಕೆಲವಾನುಂ ದಿವಸದಿಂ

ಎಳವಸಿಱಾಗೆ ಬಾಳಕಿಗೆ ಬೆಳ್ಪಡರ್ದಂಗದೊಳಣ್ಪನಿಕ್ಕಿದರ್ |
ಮಳಯಜಪಂಕದಿಂ ಕಮಳಕುಟ್ಮಳದೊಳ್ ಮಱಿದುಂಬಿ ಪಾಯ್ದವೊಲ್ ||
ತೊಳಪ ಕುಚಂಗಳೊಳ್ಪುದಿಯೆ ಪೀಱಿದ ಕತ್ತುರಿಯಂ ತೊಡೆದರ್ವಿದಗ್ಧೆ [ಯರ್ |
ಕೆಳದಿಯರೊಮ್ಮೆಯುಂ ಮಱಸಲೆಂದು ಕುಮಾರಿಯಗರ್ಭಚಿಹ್ನಮಂ||೯೪||

ಪಡೆಯೆ ಮಗನಂ ನಿದಾನಮ |
ನಿಡುವಂತೆವೊಲಿಟ್ಟು ಪೊನ್ನ ಮಂದಸಿನೊಳಗಾ ||
ಗಡೆ ಗಡ ಬಿಟ್ಟರ್ಜಗುನೆಯ |
ಮಡುವಿನೊಳ್ಕೆಳದಿಯರ್ಗೆ ಕೊಂತಿಯೆ ನೋಂತಳ್ ||೯೫||

ವ|| ಅದನಾದಿತ್ಯನೆಂಬರಸನಾದಿತ್ಯನುದಯನಗಮನೇಱಿ ನಳಿನವನಮ ನಲರಿಸುವಂತಿರುತ್ತುಂಗಪ್ರಾಸಾದಮನೇಱಿ ಸೌಂದರರಾಜಪುರದ ಸೌಂದರಿಯರ ನಳಿನವನಮನಲರಿಸುತ್ತುಂ ಯಮುನಾಮನೋಹರತೆಯುಂ ನಿರೀಕ್ಷಿಸುತ್ತುಮಿರ್ದು ಪರಿವ ಕರಿಯ ನೀಱಮುಗಿಲ ಮೇಗೆ ಪರಿವ ರವಿಮಂಡಳದಂತೆ ತೆರೆಮಸಗಿ ಪರಿವ ಜಗುನೆಯ ಪೊನಲೊಳ್ ಪೋದ ಪೊನ್ನಮಂದಸಂ ಕಂಡು ತರಿಸಿ ಕಮಳಕುಟ್ಮಳದಳಪುಟಮಂ ತೆಱೆವಂತೆ ತಾನೆ ತೆಱೆದು ನಲಿದು ನೋಡಿ ಕೆಲದೊಳ್ಕುಪ್ಪೆಗೊಂಡ ಮಾಣಿಕಂಗಳ ಬೆಳಗಿನೊಡನೆ ಬಾಳಕನ ಮೆಯ್ವೆಳಗು ದಳವೇಱಿ [ಮಿಳ್ಳಿಸಿದೊಡೊಳ್ಳಱಿದುನೋಡುತ್ತುಂ]

ಕನಕಸರಸೀರುಹದೊಳ್ ಸಿರಿ |
ಮನಸಿಜನಂ ಪೆತ್ತು ಬಿಟ್ಟು ಪೋದಂತಿರೆ ಕಾಂ ||
ಚನಮಂಜೂಷೆಯೊಳೊಪ್ಪುವ |
ಜನಪತಿ ಸುತನಂ ನೃಪಾಳಕೃಷ್ಣಂ ಕಂಡಂ ||೯೬||

ವ|| ಕಂಡು ಮನಂಗೊಂಡು ಬಾಳಕಂ ನಿಮ್ಮೊಳಾರ ಕೆಯ್ಗೆ ನೆಗೆದು ನಗುತ್ತುಂ ಬಂದನವಳ್ಗೆ ಕುಡುವನೆಂಬುದುಮರಸಿಯರೆಲ್ಲ ಮೆಮಗೆ ತಮಗೆಂದು ಗೊಂದಳಿಸಿ ಕರಕಿಸಲಯಂಗಳನಡಸಿ ನೀಡುವುದುಂ ತಳರ ತುಱುಗಲಂ ತೊರೆದು ತಾಮರೆಗೆಱಗಲೆಱಗುವ ಮಱಿದುಂಬಿಯಂತೆ ಮಂದಸಿನಿಂ

ರಾಧೆಯೆಂಬರಸಿಯು ಪಾಣಿಪದ್ಮಕೆ ಬಂದು ವಿಶಾಖೆಯಿಂದನೂರಾಧೆಗೆ ಬಂದ ಬಾಳೇಂದುವಿನಂತೆ ಬಾಳಕಂ ದರಹಸಿತಧವಳದೀಧಿತಿಗಳಂ ಪರಪೆ ಪುತ್ರವಿಶೇಷದಿಂದಾಕೆ ತೋಳ್ಮೊಗಂಗೊಂಡು ಕೊಂಡಾಡಿ ನಡಪೆ

ಕಿವಿವಿಡಿದು ಪುಟ್ಟಕಂನೆಗೆ |
ದಿವಾಕರಂ ರಾಧೆಗೀಯೆ ಮಗನಾದುದಱಿಂ ||
ದವೆ ಕರ್ಣಂ ಕಾನೀನಂ |
ರವಿಜಂ ರಾಧೇಯನೆಂಬ ಪೆಸರಂ ಪಡೆದಂ ||೯೭||

ಅವಿಹಿತಕುಮತಕಥಾಂಬು |
ಪ್ರವೇಶದಿಂ ಕರ್ಣಶೂಲಮಾರ್ಗಗದೊ ಪೇ ||
ಟ್ಕವಿಯೊಳ್ ಕರ್ಣಂ ಗಡ ಸಂ |
ಭವಿಸಿದನಿಂತಪ್ಪ ಪುಸಿಯ ಪೊಟ್ಟಣಮೊಳವೆ ||೯೮||

ತನ್ನಂ ಪಾಂಡುಗೆ ಕೊಟ್ಟು ಕನ್ನೆಯೊಳಗಾದೀಸಾಹಸಂ ಕೂಡಿತೆಂ |
ಬನ್ನಂ ಕೂಡಿದ ಕೊಂತಿ ಕಂತುಮನದೊಳ್ತಾರಚ್ಚೆಯೊಳ್ಪುಟ್ಟಿಪೆ ||
ತ್ತನ್ನಂ ತಾನೆನೆ ತಾಗಿದಾಗಿ ಸುಭಟಂ ಸೌಭಾಗಿನೇಯಂ ದಲೆಂ |
ದನ್ನಂ ಕೀರ್ತಿಸನಾತರ್ು ಕೂತರ್ು ಕೃತಭೂಲೋಕಕರ್ಣನಂ ಕರ್ಣನಂ ||

ಧರೆಗಿತ್ತುದಸ್ಥನಾದನೆ |
ಸಿರಿವಂತಂ ಕೀರ್ತಿಗಂಜುವನೆ ಕಲಿ ಪಿರಿದುಂ ||
ಪೊರೆದಾಳ್ದನ ಕಾರ್ಯಕ್ಕೇ |
ಸರಿಸದೆ ಸತ್ತ್ವವನೆ ಬಿಟ್ದನೆಂಬಂ ಕರ್ಣಂ ||೧೦೦||

ತೊಡರ್ದರಿಯಂ ಕೇಸರಿಯೊಳ್ |
ತೊಡರ್ದಿಭಮೆಂತಂತೆ ಮಾಡುವಂ ಭುಜಬಳದಿಂ ||
ಪಡೆದೊಡಮೆಯ್ಯುಮಂ ಪೆಣ್ಣಂ |
ಪಡೆದಂತಿರೆ ಬೇಡಿದವರ್ಗೆ ಕುಡುವಂ ಕರ್ಣಂ ||೧೦೧||

ವ|| ಮತ್ತಂ ಕೊಂತಿಯು ಕನ್ನೆಸಾಸದಿನಾದ ಕನ್ನೆವೇಟದೊಳ್

ತರುಣಿಯು ಮೆಯ್ಯ ಬೆಂಕೆಯೊಳೆ ಬಿದ್ದಮೃತಾಂಶುಮರೀಚಿ ಸುಟ್ಟ ಕ |
ಪ್ಪುರದವೊಲಾಗೆ ಸುಟ್ಟಪುದಿದಲ್ಲದೆ ಡೆಲ್ಲಿಯುದೆಲ್ಲಿಯು ತಾಪಮೋ ||

ಸರಿಸದೆ ಪುಷ್ಪಬಾಣನಿಸೆ ನಾಂಟೆ ಮುರುಂಟಿದ ಪೂವೆ ಪುಳ್ಳಿಯಾ |
ಗಿರೆ ಮನಮೊಯ್ದು ಬೆಂದಪುದದಿಲ್ಲದೊಡೆಲ್ಲಿಯದಂಗಜಾನಳಂ ||೧೦೨||

ಕಡುದಂಕೊಲರಲೆಯೆ ಬೆಮ |
ರೊತ್ತಡೆ ಬೀಸುವರಬ್ಜದಳದಿನಬಳೆಗೆ ಬೆಳ್ಳಂ ||
ಗೆಡೆದೆಳವೆಳ್ದಿಂಗಳೊಳಂ |
ಕೊಡೆವಿಡಿವರ್ ಸಖಿಯುರಂಗತಾಪಮದೆಂತೋ ||೧೦೩||

ವ|| ಆದನಱಿದಭಿಮುಖಪ್ರಜಾತಪ್ರಜಾಪತ್ಯಸಂಬಂಧಬಂಧುರಮಪ್ಪ ಬಂಧುಭಾವಮೆಸೆಯೆ

ಸಿಂಧು ಸಿರಿಯುಂ ವಿಭೂತಿಯು |
ಮಂ ಧರಣಿಧರಂಗೆ ಕೊಟ್ಟವೊಲ್ ಪಾಂಡುನೃಪಂ ||
ಗಂಧಕವೃಷ್ಣಿನೃಪಂ ಕೊ |
ಟ್ಟಂ ಧರೆ ಮಿಗೆ ಪೊಗೞೆ ಕೊಂತಿಯುಂ ಮಾದ್ರಿಯುಮಂ ||೧೦೪||

ಅಳಿನೀಳಾಲಕೆಯುಂ ಕಾಮದಕುಸುಮಧನುರ್ಲೇಖೆಯುಂ ಪುಷ್ಪಬಾ |
ಣಾವಳಿಯುಂ ಪೆತ್ತಂತೆ ಪಾಂಡುಕ್ಷಿತಿಪನ ಸತಿಯುಂ ಕೊಂತಿಯುಂ ಮಾದ್ರಿ
[ಯುಂ ಕೋ ||
ಮಳೆಯುಕರ್ಣಮಾನುರಾಗಂಬಡೆದು ಪಡೆಯೆ ಧರ್ಮಾತ್ಮಜಂ ಭೀಮಸೇನಂ |
ಚಳದೊಳ್ತೊಟ್ಟರ್ಜುನಂ ಸಂದ ನಕುಳಸಹದೇವರ್ಕಳೆಂದಾದರೈವರ್ ||೧೦೫||

ಕಡುಗಲಿ ಧೃತರಾಷ್ಟ್ರಂಗಂ |
ಕುಡೆ ನರಪತಿ ವೃಷ್ಣಿನೃಪತಿ ನೆಱೆ ನೋಱಿಸಲಿಂ ||
ಪಡೆವಂತಿರೆ ಪದ್ಮಿನಿ ತಾಂ |
ಪಡೆದಳ್ ಗಾಂಧಾರಿ ನೂರ್ವರಂನಂದನರಂ ||೧೦೬||

ಸುತರೊಳ್ ದುರ್ಯೋಧನನಧಿ |
ಕತೆ ದುಶ್ಶಾಸನನ ದೃಢತೆ ದುರ್ಧರ್ಷಣನು ||
ದ್ಧತಧೃತಿ ದುರ್ಮರ್ಷಣನ |
ಪ್ರತಿಮತೆ ಗಾಂಧಾರಿಗಿತ್ತುದತಿಸಮ್ಮದಮಂ ||೧೦೭||

ವ|| ಅಂತು ಹರಿವಂಶಮುಂ ಕುರುವಂಶಮುಂ ಸಿಂಧುಯುಗಳಸಂಭೋದದಂತೆ ಪಿಡಿಸಲ್ಬಾರದಂತು ಕೂಡಿ ಕೊರ್ವುವಡೆದು ಸುಕೃತಫಲಮಂ ಪಲ

ಕಾಲಮನನುಭವಿಸುತ್ತುಮಿರೆ ಮತ್ತೊಂದು ದಿವಸಂ ಗಂಧಮಾದನಮೆಂಬು ದಯುಗಿರಿಯೊಳುದಯಿಸಿದ ಸುಪ್ರತಿಷ್ಠರೆಂಬ ಸೂರಿಸುಧಾಕರರ ಸಮೀಪ ದೊಳ್ ಸುರವೀರಂ ಚಕೋರಂ ಪುತ್ರಪೌತ್ರಾದಿಗಳ್ವೆರಸು ನಿರ್ಮಳಧರ್ಮಾ ಮೃತಮನೀಂಟಿ ನಿಷ್ಠುರಸಂಸಾರಪರಿತಾಪತೃಷ್ಣೆಯಂ ತೂಟ್ಟಿ ಸಂವೇಗ ಮಂ ಸಂವರಿಸಿಯಂಧಕವೃಷ್ಣಿಯೆಂಬರಸು

ಎತ್ತಿದನಧಿಕೋತ್ಸವದಿಂ ।
ದುತ್ತಮಸತ್ವಂಗೆ ರಾಜ್ಯಭರಮಂ ಪೋಱೆಯಂ ॥
ಪೊತ್ತಿರ್ಪಂತಿರೆ ಗಾಂಪಂ ।
ಮತ್ತಾಂಪವರುಳ್ಳೊಡಮುಳಹರಿಕುಳತಿಳಕಂ ॥೧೦೮॥

ವ॥ ನರಪತಿವೃಷ್ಣಿಗಂ ಯುವರಾಜ್ಯಪದಮಂ ಕೊಟ್ಟು ತಪಂಬಟ್ಟ ನಲ್ಲಿಂಬಳಿಯಂ ಪನ್ನೆರಡುವರ್ಷಂ ಪೋಗೆ,

ಶತಪತ್ರಶ್ರೀಯನಿಂದುಪ್ರಭೆಯನಿಱಿಸೆವಕ್ತ್ರೇಂದುಮೆಯ್ಸೂರ್ಯಕಾಂತ ದ್ಯುತಿಯಿಂಚಂದ್ರೋಪಳಚ್ಛಾಯೆಯನೊಲಿಸೆಚಕೋರೌಘಮಂಚಕ್ರವಾಕೀ ತತಿಯಂ ಪಂಚೇಂದ್ರಿಯಂಗಳ್ ಸಗಲುಮಿರುಳುಮೋರಂದದಿಂಪೋಲೆಪೂತ| ಪ್ರತಿಮಾಯೋಗೈಕನಿಷ್ಠಂನೆಲಸಿದನಗದೊಳ್ ಸುಪ್ರತಿಷ್ಠಂವರಿಷ್ಠಂ ॥೧೦೯

ಅಮುನಿಗೆ ಗಜಱಿ ಗರ್ಜಿಸಿ ।
ಜೀಮೂತಂ ಮೊೞಗಿ ಮುತ್ತುವಂತಿರೆ ಗಿರಿಯಂ ॥
ಭೀಮೋಪಸರ್ಗಮಂ ಗಡ ! ।
ತಾಮಸದಿಂ ಮಾಡಿದಂ ಸುದರ್ಶನದೇವಂ ॥೧೧೦॥

ಅರಿಪುವಿನುಪದ್ರವಮಂ ।
ಸೈರಿಸದಾಯತಿಗೆ ಪುಟ್ಟಿದತ್ತು ತಮಸ್ಸಂ ॥
ಹಾರಕಮನ್ಮೃತಂ ಮಥಿತಾಂ ।
ಭೋರಾಶಿಗೆ ಪುಟ್ಟುವಂತೆ ಕೇವಲಬೋಧಂ ॥೧೧೧॥

ವ॥ ಆಗಳಾಗಂಧಮಾದನಮೇದಿನೀಧರಕ್ಕೆ ಕೇವಳಪೂಜ್ಯಪೂಜಾಪ ರಮೋತ್ಸವಮಂ ಮಾಡಲ್ಬರ್ಪ ದೇವನಿಕಾಯದ ದುಂದುಭಿಧ್ವಾನಾಹೂತ ನಾಗಿರೆ ಪುರುಹೂತನ ಪಿರಯುರಸಿಮೆರಸಂಧಕವೃಷ್ಣಿಯುಂ ಬಂದು ಭುವನ ಬಂಧುವೆಂದು ದೇವದುಂದುಭಿ ದೇವಧ್ವನಿ ಪ್ರಭವವಿಭವವೈಡೂರ್ಯರತ್ನಾಕರ

ಪ್ರರೋಹಣ ರೋಹಣನಗೇಂದ್ರಖಗೇಂದ್ರದೇವೇಂದ್ರಗವೇಂದ್ರ ಸಮೂಹ ಸಮಸ್ತಕಪ್ರಕರ್ಷಘರ್ಷಣವಿಕೀರ್ಣ ಪಾದಪೀಠಪ್ರಕೀರ್ಣಮಣಿಗಣಾರುಣ ಕಿರಣರೇಣುಕ್ರೀಡಾನುರಂಜಿತರಾಜಕುಂಜರವೃಂದನಂ ಬಂದಿಸಿ ಮುಂದೆ ಕುಳ್ಳಿರ್ದು ಕೆಯ್ಗಳಂ ಮುಗಿದು

[1]ಕೇವಳ[1] ಬಿನ್ನಪಮಿಂತೀ |
ದೇವರ್ಕಳ್ ನಿನ್ನನೊಸೆದು ಪೂಜಿಸಿದಪರಾ ||
ದೇವಂ ಮಾಡಿದನೇಕೆಯೊ |
[2]ದೈವಗುರೂ ಪ್ರೇರಣಂ ಗು[2]ರೂಪದ್ರವಮಂ ||೧೧೨||

ಎನೆ ಜಿನನೆಂದಂ ಕೇಳಾ |
ತನೆ ಕರಮುಪಕಾರಿಯೆನಗೆ ಪೀಡಿಸಿದೊಂ ಕಾಂ ||
ಜನಪಾಪಾಣಕಮಂ ಪೊ |
ನ್ನನೆ ಮಾಳ್ಪಂ ಪೊಲ್ಲಕೆಯ್ತನಪ್ಪನೆ ನೃಪತೀ ||೧೧೩||

ವ|| ಅದಂ ಪೇಳ್ವೆವಿನಾ ಜಂಬೂದ್ವೀಪದ ಭರತಕ್ಷೇತ್ರದ ಚಂಪಾಪುರದ ಪರಪರ್ ಸೂರದತ್ತನುಂ ಸುದತ್ತನುಮೆಂಬರೀರ್ವರುಂ ಪರದುಪೋಗಿ ಪಿರಿದಪ್ಪೊಡಮೆಯುಂ ಪಡೆದು ಪೊೞಲಂ ಪುಗುವಲ್ಲಿ ಸುಂಕಿಗರ್ಕಾಣ್ಗುಮೆಂಬ ಶಂಕೆಯಿಂದುಸಿರಂ ಬಿಸಲಾಱದಸುವಂ ಬಿಡುವಂತಾಪುರದ ಪೇರಡವಿಯೊಳೊಂದು ಪೊದಱ್ದ ಪರ್ವಿದ ಪೊದಱ ಮೊದಲೊಳ್

[3]ಎರೆದರ್ಗ[3]ಮನುಗ್ರಹಿಸುವ |
ಪರಮಕವೀಶ್ವರರ್ಗ[4]ಮಿನಾವುದಾಗೀಗಳ್[4] ಬಂ ||
ದೆರೆಯದ ನೆಲಕಂ ಪೀಡಿಸು |
ವರಸಿಂಗಂ ಕುಡುವ ಕೃಪಣನಗ್ಗಳಮಲ್ತೇ ||೧೧೪||

ವ| ಎಂಬ ನೀತಿಯುಂ [5]ಪೂಣದೆ ಪೂಣ್ದು[5] ಪೋಪುದುಮೊರ್ವ ಕಳ್ಳನಿಗಂ ಕಳ್ಳಂ ಕೊರ್ವಿಸುವ ಬೇರುಂ ಬಿಕ್ಕೆಯುಮಂ ಬೆರಟುತ್ತುಂ ಬಂದಾ ಪೊದಱ ಮೊದಲನಗುೞ್ದು ನೆಗಪಿ ತನ್ನದೆನ್ನದೆಂದು ನಚ್ಚುವರಂ ನಗುವಂತು

---

ಪಾ—1. ಕ, ಕೇವಳಿ. 2. ಕ, ದೈವಗುರೂ ಪೇೞ ನಿನಗನು.
3. ಗ, ಎರೆದವರ್ಗ. 4. ಕ, ಗ, ಮಿವುದಾನಿಗಳುಂ.
5. ಗ, ಪೂಣ್ದೆಪೂಣು.

ಗಜಗಲಿಸುತ್ತುಮಿರ್ದ ಕಾಂಚನಪಂಚರತ್ನಸಂಚಯಮುಮಂ ಕಂಡು ಕೊಂಡು ಶೌಂಡಿಕಂ ಧನಶೌಂಡನಾಗಿ ಪೋದನಿತ್ತಲಾಪರದರಿರ್ವರುಮಡವಿಯೊಳ್ ಮಡಗಿದೊಡವೆಯುಮಂ ಕಾಣದೆ ಕಾೞ್ಕೋಣಂಗಳಂತೆ ಕೆಕ್ಕಳಗೆಳದರ್ ಕೆಚ್ಚನಾದ ಕಣ್ಣಂ ಬಿಚ್ಚನೆ ಬಿಟ್ಟು ಬಿಱಿವಿನವೊದರಿಯೊರ್ವರೊರ್ವರಂ ನಂಬದ ಬಗೆಯಿಂ ಕನಕಾಸ್ವಾದವಿಲ್ಲದೆಯುಂ ಮರುಳ್ಮಸಗಿ ಪಸುಗೆಗೆಟ್ಟು ಪಸಿಯು ಬಡಿಗೆಗಳನೆತ್ತಿ ಕೊಂಡು

ಮಿದುಳ್ಗ[1]ಳುಗೆ[1] ತಲೆಯು ಸಿರ್ಪುಗ |
ಳುದಿರೆ ದೃಢಕ್ರೋಧಲೋಭಭರದಿಂದಂ ಮೋ ||
ಹದ ಸೂರದತ್ತನುಂ ಕಲಿ |
ಸುದತ್ತನುಂ ಸತ್ತು ಮೊದಲ ನರಕಕ್ಕಿೞಿದರ್ ||೧೧೫||

ಆನರಕದಿಂದೆ ಬಿಂಜದ |
ಕಾನನದೊಳ್ ಬಂದು ತಗರ್ಗ*ಳಾದರ್ ಪರದರ್ ||
ಮಾನೇಯಮುತ್ತಮಾರಣ |
ಪೀನಂಗಳ್ ಶೃಂಗಕುಲಿಶದಲಿತನಖರಂಗಳ್ ||೧೧೬||

ಅಗಜಗಜಮುದಿರೆ ಜಳಮುಗೆ |
ಮಿಗೆ[2]ಮೇಗೆ ಸಿಡಿಲ್ದೊ[2]ಡುಕ್ಕಿ ಜಡೆಗೊಂಡುರಿನಾ ||
ಲಗೆವೊಲಿರೆ ದಹನನೇಱಿದ |
ತಗಱಿಂದದಿನಟ್ಟಿ ತಾಗಿ ತೆಗೆದುವು ತಗರ್ಗ*ಳ್ ||೧೧೭||

ಮುಲಿದಲೆದು ತಾಗೆ ಕೊಂಬಿನ |
ತಲೆಯೊಳ್ ಕೋಡೊಣಗಿ ಸಣಗಳಾಗದ ಮಿಗಗಳ್ ||
ಗಲಗಲಕೆ ನಲುಗೆ ನಲಿಸಲಿ |
ವಲಿವಂ ಕಟ್ಟಿದವೊಲೆಸೆದುದಾಮೇಷಯುಗಂ ||೧೧೮||

ಕಣ್ಣಾರಿ ಮುಟ್ಟಿ ನಟ್ಟನೆ ಮುರುಂಟಿದವೊಲ್ಮುರಿಗೊಂಡ ಕೋಡು ಮೈ |
ಯುಣ್ಣೆ ಕೞ್ಪಿನಂ ಕುಡಿದು ಕಿತ್ತುವ ಕಂಡದ ಕೊರ್ವು ಸೋತೆಯೊಳ್ |
ಪಣ್ಣವೊಲಬ್ಬರಂ ಬಿರಿಯೆ ರತ್ನಶಿಳಾಳಿ ನೇೞಲ್ಗೆ ಪಾಯ್ವ ಪೆ |
ರ್ಮಣ್ಣೊಡೆಯುತ್ತುಮಿರ್ದ ಪಣೆಯುದ್ಭುತಮಾದುದುರಭ್ರಯುಗ್ಮದಾ||೧೧೯

ಪಾ—1. ಕ, ಗ, ಳಿಗೆ. 2. ಕ, ಮಿಗೆಸಿಡಿಲಲ್ದೊ.

ಅವು ತಾಮುರ್ಟ್ಟಿನೊಳೊರ್ಮೆ ಕಂಡು ಕಿಡಿಯಂ ಕೆಂಡಂಗಳಂ ಸೂಸೆ ನಂ
ಟುವವೊಲ್ ಬೆಟ್ಟನೊಳೊಂದು ಬೆಟ್ಟು ಭವಬದ್ಧಕ್ರೋಧದಿಂ ಕಾಯ್ದುತಾ॥
ಗುವುದುಂ ಕಂಠದೊಳಾಱೆ ತೋರದಳೆಗಳ್ ಸತ್ತಂದು ಮೇಷಂಗಳಾ |
ದುವು ಗಂಗಾತಟಗೋಕುಲಕ್ಕೆ ಜಿತದಿಂ ಜ್ಞಾನಾಳಗಳ್ಗೋಱಿಗಳ್ ॥೧೦॥

ತಳೆದತ್ತುದ್ವೃತ್ತಿಯಂ ತದ್ವೃಷಭಯುಗಳಮಾಲಂಬಿಸಾಸ್ನಾಪಟಂ ಪಾ |
ಟಳನೇತ್ರಂ ವೃದ್ಧವಂಶಂ ಕುರುವಿಷಮವಿಷಾಣದ್ವಯಂ ಗೃಧ್ರಪಕ್ಷೋ ॥
ಚ್ಚಳಿತಾದಭ್ರಶ್ರವಂ ದುಂದುಭಿನಿಭನಿನದತ್ಕಂಧರಂ ದೀರ್ಘನೀಲೋ |
ತ್ಪಳನಾಳಾಲೋಲವಾಳಂ ವಿಪುಳಪರಿಪರಿಸ್ಥೂಳಮಾಭೀಳಶೀಳಂ ॥೧೧॥

ಪಣೆ ವರುಡಲ್ಕೆ ಪರ್ವಿದೆಡೆಯೊಳ್ ಪೊರೆದಳ್ಗಸಱಿಂ ವೃಷಂಗಳೊಳ್ |
*ಪೊಣರ್ದಿರಿಯಲ್ಕೆ ಪತ್ತಿದರುಣೌಘದಿನಾವೃಷಶೃಂಗಯುಗ್ಮಮೊಂ ॥
ದಣಿಯುರಮಾಯ್ತು ಸಾರಬಿಸಿನೆತ್ತರೊಳುಕ್ಕಿರದರ್ಚಿಸಿರ್ದ ಪೇ |
ರಣೆಮಣಿಯೆಂಬ ಭೈರವನ ಲಿಂಗದ ಸೀಯುದರಂಬೊಲದ್ಭುತಂ ॥೧೨॥

ಪ್ರತಿವೃಷಭಶೃಂಗ[1]ಶೀರಾ[1] |
ಕ್ಷಿತಿಲೇಖಾಲಕ್ಷಿತಂ ತದೀಯಕ್ಷೇತ್ರಂ ॥
ಕ್ಷಿತಿಯಮಾಯ್ತು ದರ್ಪಬೀಜಾ |
ಕೃತಮೆನೆ ಬಸವಂಗಳುಕ್ಕದೇನುಬ್ಬಸಮೋ ॥೧೩॥

ವ ॥ ಆಮದಕಳಕ್ರೂರಶೂರಸೌರ[2]ಭೇಯಂಗಳೊಂದು[2] ದಿವಸಮೊಂದೊಂದಱ ಕೆಲಪಂ ಕೇಳ್ದು ಕೆಳರ್ದು ಕೆಂಗಲ್ಮಸಗಿ ಮೂದಲಿಸದಂತೆ ಮಲೆತು ತಾಮಿರ್ದ ಮೊದಲ ನರಕಂ ತೆಱೆದು ತೋಱುವಂತೆ ಭೂತಳಮಂ ಕೊಱಗಿಂ ಪರಡುತ್ತುಂ ಮನಂ ವಾಯುಗೆ ಮಿದಿಲ್ದು ಕೆಯ್ಯಿಕ್ಕುವ ಸೂಕರ್ಗಳಂತೆ ತಲೆಯಿಕ್ಕಿ ತೊಲಗದ ಮನದ ಕನಲ್ಕೆಯಿಂ ಕಾದಿ ಕೊಂದು ಬಿರ್ದಕಂದಂಗಳೊಳ್ ನಡುಕೋಡುವರಂ ನಟ್ಟಕೋಡುಗಳಂ ಮಿಳಿಯಂ ಕಟ್ಟಿ ಗೋಪಾಲಕರ್ ಕೀಱೆ ಸತ್ತು ಸಂಮೋದಗಿರಿಯ ಕಾಡೊಳ್ ಕೋಡಗಂಗಳಾಗಿ ಪುಟ್ಟಿದುವು. ಇಂತು

ಅವರವಿವೇಕದಿಂ ಕುಱಿಯ ಪೋಱಿಗಳಾದರವುಂ ಪರಸ್ಪರಾ |
ಹವರಸಕಾಂಕ್ಷೆಯಿಂ ಕುಱಿಯ ಪೋಱಿಗಳೆತ್ತುಗಳಾದುವೆತ್ತುಗಳ್ ॥

---

ಪಾ—1. ಗ, ಖರ. 2. ಗ, ಭ್ಯಯಂಗದೊಳೊಂದು.

ತವದತಿಚಂಚಳಪ್ರಕೃತಿಪಾಕದಿನಕ್ಕಟ ಮರ್ಕಟಂಗಳಾ |
ದುವು ಪಿರಿದುಂ ಶರೀರಿಗಳ ಪಾಪವಿದೇಂ ಚರಿತಾನುರೂಪಮೋ ||೧೨೪||

ಪರಿಗತನಿರ್ಝರಿಣಿಯೊಳಾ |
ಗಿರಿಯೊಳ್ ಕಿಸಲ್ಯೈಕಶಿಖರಕಾನನಕಲದೊಳ್ ||
ಶರನಿಧಿ ಸುತ್ತಿದ ಲಂಕೆಯು |
ನುರುಪಿದ ಕಪಿಪತಿಯೊಲಿರ್ಪುದಾಕಪಿಯುಗಳಂ ||೧೨೫||

ವ|| ಅವಿಪುಲಫಲಕಕುಸುಮಕಿಸಲಯ[1]ಕುಳಂ[1]ಗಳುಂ ಕಪಿಕೇಸಂಗಳುಮಪ್ಪ ಕೇಶಂಗಳುಂ ಶಿಲಾಸಲಿಲನಿಮಿತ್ತಮುನ್ಮತ್ತ[2]ಪರ[2]ಪುರಾಣಪುರುಷ ವ್ಯಾಲೀಕೃತಬಾಲಿಸುಗ್ರೀವಂಗಳಂತೆ ಸುಗಿಯದಗಿಯದೆ ಸಂಗರಮಂ ಮಾಡಿ

ಬಂದಾಗಳೆ ಸತ್ತುದು ಮ |
ತ್ತೊಂದಿರ್ದುದು ಸಾಯಲದಱ ತಪಮಂ ಕಳೆಯಲ್ ||
ಬಂದುದು ಗಗನದಿನಿೞಿದ ರ |
ಮೀಂದುಗಳವೊಲಾಗಳಂತೆ ಚಾರಣಯುಗಳಂ ||೧೨೬||

ವ|| ಆಸುರಗುರುಗಳಂ ದೇವಗುರುಗಳೆಂಬ ಚಾರಣರಾಮರಣಾಭಿಮುಖನಪ್ಪ ಬಲೀಮುಖನಂ ಕಂಡು ಕರುಣಾಜಳಮುಮಂ ಕಮಂಡಲುಜಲಮುಮಂ ಮೊಗದೊಳ್ ತಳಯೆ ಕುಳಿಕೆರ್ದಾಡಿ ಕೋಡಗಂ ಕಣ್ಣಂ ತೆಱೆ[3]ದು ತಲೆಯನೆಱಗಿ ಪೊಡೆವಡೆ [3]ಪರಸಿ ತಿಬ್ಬದಿಂ[3] ಮಾತಲ್ಲದಿದಿರ ಮಾತಿನೊಳ್ ಧರ್ಮಮಂ ತಿಳಿಪೆ ಪಂಚನಮಸ್ಕಾರಮಂ ಪೇೞೆ[3] ಕೇಳ್ದು ಶುಭಸಂಸ್ಕಾರದಿಂ ಸತ್ತಾಸಂಮೇದಗಿರಿತರುಶಿಖರದಿನಾಚರಂ ಸೌಧರ್ಮಕಲ್ಪತರುಶಿಖರಕ್ಕೆ ಪಾಯ್ದು ಚಿತ್ರಾಂಗದನೆಂಬ ದೇವನಾಗಿ ದಿವ್ಯಸುಖಫಲರಸಮನಾಸ್ವಾದಿಸಿಬಂದೀ ಜಂಬೂದ್ವೀಪದ ಭರತಕ್ಷೇತ್ರದ ಸುರಮ್ಯವಿಷಯದ ಪೌದನಪುರದರಸಂ ಸುಸ್ಥಿತಂಗಂ ಸುಲಕ್ಷಣಾದೇವಿಗಂ ಸುಪ್ರತಿಷ್ಠನೆಂಬೊಂ ಸುತನಾಗಿ ಭೋಗೋಪಭೋಗಂಗಳನುಪಭೋಗಿಸುತ್ತುಮಿರೆ—

|| ಚಿತ್ರಲತಿಕೆ ||

ಕೇದಗೆವೂವಂ ಚಾದಗೆಬಾಯುಂ ಬಿಡೆಬಿಡುತಿರೆ ಬಿಡುವನಿ ಕಡುವಿಸಿಲಿಂ |
ಸೋದು ಬಿಸುಪರ್ಪಂ ಜಾದಿಯ ಕಂಪಂ ಕಡವಿನ ಕೊಡಸಿಗೆಯುಲರ್ಗಳ [ಸೊವಡಿಂ ||

---

ಪಾ—1. ಗ. ಕೊಳಂ. 2. ಗ, ಪಠ. 3. ಕ, ಗ, ಪರಸಿಪ್ಪದಿಂ.

ತೋದಿದಿರ್ಗೊಳ್ವಾಹ್ಲಾದಕರಂ ಸೋಗೆಯ ದನಿ ಪೊಱಮಡೆ ಪಡುವಣ
[ದೆಸೆಯಿಂ |
ದೂದೆ ಸಮುತ್ಸಹವೋದಮೊಲರ್ಬಂದುದು ಮೊಳೆ ಪಸರಿಸಿ ಪೊಸ
[ಮೞೆಗಾಲಂ ||೧೭||

ವ|| ಅಂದು ಸಿತಗಿರಿಯೊಳಾಪ್ರಾವೃಷೇಣ್ಯಜಳಧರಧ್ವನಿಗೆ ಮಸಗಿ ಮುಸುೞಿ ಮುತ್ತಿ ಮೊತ್ತಂಗೊಂಡು ಕಾಡುವ ಕೋಡಗಂಗಳಂ ಕಂಡು ಜಿತಸ್ಮಯನುಂ ಸಂಜಾತವಿಸ್ಮಯನುಂ ಜಾತಿಸ್ಮರನುಂ ವೈರಾಗ್ಯಪರನುಮಾಗಿ ಪೋಗಿ ಸುಧರ್ಮಾಚಾರ್ಯರ ಚರಣೋಪಾಂತದೊಳ್ ತಪಶ್ಚರಣಮುಮಂ ಕೈಕೊಂಡನಾಸೂರದತ್ತ ಚರರೆಮಾದೆವು. [1]ಇತ್ತ[1] ಸುದತ್ತ ಚರಶಾಖಾಚರನುಮಾ ಚರಾಚರಸ್ವರೂಪಮಪ್ಪ ಸಂಸಾರಕಾಂತಾರದೊಳ್ ತಿರಿದು ಬಂದು ಸಿಂಧುತೀರದ ಋಸಿಪಳ್ಳಿಯೊಳ್ ಮೃಗಾಯಣನೆಂಬ ಮುನಿಗಂ ವಿಶಾಳೆಯೆಂಬ ಗೊರತಿಗಂ ಗೌತಮನೆಂಬ ಮಗನಾಗಿ ಪುಟ್ಟಿ ತಪಂಬಟ್ಟು ಬೇಸಗೆಯಾಗೆ

ಭಗ್ನಮನೋರಥಂ ರತಿಸುಖಾಸವಸೇವೆಗೆ ಪಂಚಬಾಣಪಂ |
ಚಾಗ್ನಿತಪಕ್ಕೆ ನಿಲ್ವ ವಿರಹಾತುರನಂತಿರೆ [2]ಪ[2]ಶ್ಚಿತಾಗಮ ||
ತ್ವಗ್ನಿಳೆಯುಂ ನಿಳಿಂಪಸುಖಲಂಪಟನಾಗಿಯೆ ನಿಂದನಂದು ಪಂ |
ಚಾಗ್ನಿತಪಕ್ಕೆ ತಾಪಸಸಮೂಹಮಹೋತ್ತಮನಪ್ಪ ಗೌತಮಂ ||೧೮||

ಪಱುಗೞಿದ ಪಾಪಮಂ ಕೈ |
ಗೞಿದ ತಪೋನಳನೆ ಸುಡುಗುಮೊಟ್ಟಿದ ಕಿಚ್ಚಿಂ ||
ತಱಿಪಱಿನೆ ಪುಳ್ಳಿಯೊಳಗಣ |
ಪುಱು ಬೇಗಂ ಬೇಗುಮೊಗ್ಗ ಬೇಗುಮೆ ದುರಿತಂ ||೧೯||

ವ|| ಆತನಾತಪಃಫಲದಿಂ ಜ್ಯೋತಿರ್ಗಣದೊಳಗೆ ಸುದರ್ಶನನೆಂಬ ದೇವನೀತನಾಗಿ ಪೂರ್ವಜನ್ಮಜನಿತಪರುಷರೋಷಾವೇಶದಿನೆಮಗೀಯುಪಸರ್ಗಮಂ ಮಾಡಿದನೆಂಬುದುಮದೆಲ್ಲಮನಾಸುದರ್ಶನದೇವಂ ಕೇಳ್ದು ಸದ್ದರ್ಶನಮಂ ಕೈಕೊಂಡನಂಧಕವೃಷ್ಣಿಯುಂ ವಿರಕ್ತನಾಗಿ ಸಮುದ್ರವಿಜಯಂಗೆ ಪಟ್ಟಂಗಟ್ಟಿ ತಪಂಬಟ್ಟು ಮೋಕ್ಷಕ್ಕೆ ಪೋದನಿತ್ತಲ್

---

ಪಾ—1. ಗ, ಮತ್ತ. 2. ಗ, ಕು.

ಸೋದರರೆಣ್ಬರುಂ ಪಸುಗೆಯುಂ ಪ್ರತಿಪಾಲಿಸಿ ಲೋಕಪಾಲರಂ |
ತಾದರದಿಂದೆ ಬೆಚ್ಚು ಬೆಸಕೆಯ್ಯೆ ನಿಜಾಜ್ಞೆಗೆ ರತ್ನಗರ್ಭೆಯುಂ ||
ಕಾದು ಸುವರ್ಣಯುಕ್ತೆಯೆನೆ ತನ್ನ ಕರಕ್ಕೆ ಸಮುದ್ರಮೇಖಲಾ |
ಮೇದಿನಿಯುಂ ಸಮುದ್ರವಿಜಯುಂ ಮಣಿಮುದ್ರಿಕೆಯಾಗೆ ಮಾಡಿದಂ ||೧೩೦||

ಪೊಸದೇಶಿ ಪೊಂಗು ಪೊಂಗೆಸೆ |
ವೆಸಕಂ ಕಡುಗಾಡಿ ಗರುಡಿಯೆಂಬಿವಱಿಂದಂ ||
ವಸುಧೀಶನಣುಗದಮ್ಮಂ |
ವಸುದೇವಂ ಧರೆಗೆ ಕಣ್ಣ ಮುಳ್ಳಾಗಿರ್ದಂ ||೧೩೧||

ಪದೆದಡಿಯಿಟ್ಟವೊಲ್ ಕುಸುಮದೊಳ್ ಮದನಾಯುಧಲಕ್ಷ್ಮಿ ಬಾಳಚೂ|
ತದೊಳೆ ವಸಂತಲಕ್ಷ್ಮಿ ಯತಿವರ್ತಿಯೊಳಸ್ಮದಲಕ್ಷ್ಮಿ ಚಂದ್ರಬಿಂ ||
ಬದೊಳತಿಪೂರ್ಣಲಕ್ಷ್ಮಿ ನವಯೌವನಲಕ್ಷ್ಮಿ ವಿಳಾಸಲಕ್ಷ್ಮಿಯುಂ |
ದದಿನಡಿಯಿಟ್ಟುದಂದು ವಸುದೇವನ ಚೆಲ್ವಡರ್ದಂಗಯಷ್ಟಿಯೊಳ್ ||೧೩೨||

ವ|| ಅಂತು ಬಂದ ಯೌವನವಸಂತದೊಳ್ ವಸುದೇವಕುಮಾರಂ ತನ್ನೋರಗೆಯ ಚೆನ್ನಿಗರುಂ ಚದುರರುಮಪ್ಪ ರಾಜಕುಮಾರರುಮಂ ಮಂತ್ರಿಪುತ್ರರುಮಂ ಕೂಡಿಕೊಂಡು ನವಕ್ರೀಡೆಗೆ ವಿನೋದಜಳಕೇಳಿಗಳಂ ಮೊಗಸಲೊಡನೆ

ಅತನುವನತಿಶಯದಿಂ ಋತು |
ತತಿಗಳ್ ಬಳಸುವವೊಲೆಳಸಿ ಬಳಸಿದರಂತಾ ||
ಕ್ಷಿತಿಪತಿಸುತನಂ ವಿಟಪಂ |
ಡಿತನಟಪರಿಹಾಸಕಾದಿನರ್ಮಸಹಾಯರ್ ||೧೩೩||

ಪರಗುಣಗಣಮಂ ಸೈರಿಸು |
ವರಮುಗನಂ ಮನುಜರೊಲ್ವರಣಮೆಲ್ಲರ್ ಮ ||
ಚ್ಚರಿಪನನುಡುನಿಕರಂ ಕರ |
ಖರನಂ ಬಿಸುಟಮೃತಕರನನೋಲಗಿಸುವವೊಲ್ ||೧೩೪||

ವ|| ಒಂದು ದಿವಸಂ ಬಂದ ನಂದನವನಮಂ ತಳರ್ದು ಬರ್ಪಂತೆ ತಟ್ಟು ಪಿಡಿದ ಪೀಲಿಯ ತಳೆಯ ತುಱುಗಲೊಳಗೆ

ಬಳೆದಿರೆ ವೃತ್ತಪೋತಕಶುಕಧ್ವನಿ ತಳ್ತಿರೆ ಮತ್ತಕಾಮಿನೀ |
ಕಳಕಳಕೋಕಿಳಾವಿರುತಿ ಗರ್ಭಕಗಂಧಭರಕ್ಕೆ ತುಂಬಿಗಳ್ ‖
ಬಳಸಿರೆ ಪೂವಿನಂತೆ ಮುಗುಳಂತಿರೆ ಕೆಂದಳಿರಂತೆ ಮಾಣಿಕಂ |
ಗಳ ತೊಡವೊಪ್ಪೆ ಬರ್ಪನೊಸೆದಾವಸುದೇವವಸಂತವಲ್ಲಭಂ ‖೧೩೫‖

ವ‖ ಮತ್ತೊಂದು ದಿವಸಂ

ಕುಂಕುಮದಣ್ಪನೆಯ್ದೆ ಕಳೆದಾಗಳೆ ಚಂದನದಣ್ಪನಿಕ್ಕುವಂ |
ಸೋಂಕುವ ಬಾಳಕೇಳಿಮೃಗಮುಂ ತೆಗೆದಪ್ಪುವನಂಗಕಾಂತಿಯಿಂ ‖
ತಾಂ ಕುಡುಕಿಕ್ಕುತುಂ ಯುವತಿನೇತ್ರಚಕೋರಚಯಕ್ಕೆ ಭೋಂಕನೇ |
ಣಾಂಕನ ಕೆಯ್ತದಿಂ ಕೃತಕಶೈಲಮನೇಱಿ ನರೇಂದ್ರಚಂದ್ರಮಂ ‖೧೩೬‖

ವ‖ ಮತ್ತೊಂದು ದಿವಸಂ

ಕತ್ತುರಿಯಣ್ಕೆ ಕೆಂದಳಿರ ಕೆಯ್ಪೊಡೆ ಕೇದಗೆಯೊತ್ತೆ ಪೂವಿನಿಂ |
ದೆತ್ತಿದ ಮೀನಕೇತನಮಶೋಕೆಯ ಸೋರ್ಮುಡಿಕಟ್ಟು ಕೂಡೆ ಕೂ ‖
ಗುತ್ತರಲಂಬನಿಕ್ಷುಧನುವಂ ಗೊಲೆಗೆತ್ತಿ ತೊದಟ್ದನಂಗನಾ |
ಚಿತ್ತದೊಳಂ ಪುರಾಂತರದೊಳಂ ವಸುದೇವಕುಮಾರಮನ್ಮಥಂ ‖೧೩೭‖

ಪುಗುವನದೊರ್ಮೆಯುಂ ನಗುವ ದೃಗ್ವನದಂತಿರೆ ತೊಟ್ಟಪೂವಿನಂ |
ಗಿಗೆ ಪೊಳೆದೊಪ್ಪಿ ಕೆಂದಳಿದೊಳಂಕುಶವಜ್ರವಿಭಾದ್ರಿಭೇದಿಮು ‖
ತ್ತುಗಳಗುಳಂ ತಳತ್ತಳಿಸುವೇಱಿದ ದಂತಿ ಸುರೇಂದ್ರದಂತಿಯುಂ |
ನಗೆ ಸುರರಂತೆ ನೋಡೆ ಜನಮಾಪೊೞಲಂ ವಸುದೇವವಾಸವಂ ‖೧೩೮‖

ವಿದಳಿತಪದ್ಮಲೋಚನ ನವೋ ಗರುಡಧ್ವಜ ಕಾವುದೆಂದು ಲೋ |
ಕದ ಜನಮೆಲ್ಲಮೊಲ್ದೆಱಗೆ ಕಟ್ಟಿದ ಚೌರಿಯೊಱಂಕೆ ಮಾಗರಂ ‖
ನದ ಮೊಗಮುಟ್ಟನಾಂತ ಮೊಗಮಾಗಿರೆ ತಾರ್ಕ್ಷ್ಯನನೇಱುವಂ ಕದ |
ಕ್ಕದಿಸೆ ನಿರರ್ಗಳಂ ಪೊಳೆದುರ್ಪಾಱುವಿನಂ ವಸುದೇವವಲ್ಲಭಂ ‖೧೩೯‖

ಕಾಜಿನ ಬೀಣೆಯುಂ ಕಳೆದು ಕೊಂಡು ತಳಂಗಳನೆತ್ತಿಕೊಂಡು ನೋ |
ಱಿಪ್ಪೋಜೆ ಬೆಡಂಗು ಬಣ್ಣಸರಮೊಪ್ಪೆ ಕರಂ ಯತಿ ಧಾತು ಮೂರ್ಛನಾ ‖
ಪ್ರೋಜದೊಳಾಡೆ ಕೂಡೆ ಕುಡುಪುಂ ಬೆರಲುಂ ಕೃತಕಾದ್ರಿಕೂಟದೊಳ್ |
ಬಾಜಿಸುವಂ ಜಸಂಬಡೆಯೆ ಕಿನ್ನರನಂತೆ ನರೇಂದ್ರನಂದನಂ ‖೧೪೦‖

ವಾರಿಜಮನಿಟ್ಟು ಕಿವಿಯೊಳ್ |
ವಾರುವಮಂ ಪೀಲಿಯಿಂದೆ ಪಕ್ಕರಸಿ ಮನೋ ||
ಹಾರಿಯೆನೆ ಮೂಱುಮೊಗದ ಕು |
ಮಾರನವೊಲ್ ನೃಪಕುಮಾರನೇಱುವನೊಲವಿಂ ||೧೪೧||

ಇಂತು ಕಡುಚೆಲ್ವನಾಂತನ |
ನಿಂತಾಯಾತ್ತದೆಸೆವಸದನನಂ ವಸುಮತಿಯುಂ ||
ಕಂತುಗೆ ನನೆಗಣೆಯಲರ್ವಿ |
ಲ್ಲಂತಿರೆ ಸೋಲಿಸುವುದಕ್ಕೆ ಸಂದೆಯಮುಂಟೆ ||೧೪೨||

ಅವರೊಳ್ಗಾವುದು ಕೆಯ್ತ್ತಮೞ್ತ್ತು ಮತಿಗೆಟ್ಟಾವಾಕ್ಕೆ ತೋಳಪ್ಪಳೊ |
ಲ್ದಾವೊಂದಾಕೃತಿಗಾವೊಳಾವೆಸೆವ ನೇಪಥ್ಯಕ್ಕೆ ಕಣ್ಸೋಲ್ವರಾ ||
ಭಾವಂ ಚೆಲ್ಮೆವೊಲಂದಮುಜ್ಜರಿದವೊಲ್ ಶೃಂಗಾರವೊಳ್ದಿರ್ದವೋಲ್ |
ತೀವಿರ್ದಾರತಿರತ್ನಮೇರುಗೆ ಮರುಳ್ಗೊಂಡಿರ್ದರಬ್ಜಾಕ್ಷಿಯರ್ ||೧೪೩||

ಆವಳನಿಸುಮೆಂ ಕೆಡುಪುವೆ |
ನಾವಳಸಿನ್ನಾವಳಂ ಪೊರಳ್ಚುವೆನೆನುತುಂ ||
ತೀವಿ ತೆಗೆದಿಕ್ಷುಧನುವಂ |
ಕಾವಂ ಕಟಕಕ್ಕೆ ಸುರಗಿಗಿಱ್ವವೊಲಾದಂ ||೧೪೪||

ಅಲರ್ಗಣ್ಗಂ* ಬಾಳವೆಂದಿಕ್ಷುವಧನುಲತೆಯುಂ ತುಂಬಿಯುಂ ಬಿಟ್ಟು ಪಂಕೇ |
ಜಲತಾಚ್ಯಾಲೇಖೆಯುಂ ಕೆಂದಳಿರ ತಳಮಿದೇಕೆಂದು ಹಸ್ತಾಗ್ರದೊಳ್ ಪ ||
ಚ್ಚೆಲೆಯುಂ ಕೊಂಡಿಟ್ಟುಕಟ್ಟುತ್ತೊತ್ತರೆದು ಸಿಡಿವಿನಂ ಕೆಯ್ಬರಲ್ಪೊಂಗಿಮುಂಗೈ |
ಸುಲಿವನ್ನಂ ಕಾಮನೆಚ್ಚಂ ಪಡಲಿಡುವಿನೆಗಂ ಪೌರನಾರೀನಿಕಾಯಂ ||೧೪೫||

ಪುಸಿಯೆಂದಾದನದಿರ್ಪಿ ತಪ್ಪಿಸಿ ತರಲ್ಮೆತ್ತೊಂದು ತಾಂ ಪೋಗೆ ನು |
ಣ್ಬಸೆಯುಂ ಮುಟ್ಟದೆ ಮತ್ತಮೊಂದು ಕಣೆಕಲ್ಲಂ ತಾಗಿದಂತಾಗೆ ಕೊಂ ||
ಡಸಿಯುಂಬೊಂದನೆ ದಡ್ಡವಿರ್ದ ಹೃದಯಂ ಜಾಳಾಂದರಂಬೋಪಿಸಂ |
ಬೆಸೆದೆಚ್ಚಂ ಕಡುದೇಸಿವೆಂಡಿರನಿದೇಂ ಕಾಮಂ ಛಲಗ್ರಾಹಿಯೋ ||೧೪೬||

ಕಡುಗೆಚ್ಚುವಿರ್ದ ಮನಮುಂ |
ನಡದಡೆ ಬಿಸುಟರಲ ಸರಲ ನೀರದ ಸರವುಂ ||

ನಿಡುನನೆಯುಂಬಿಂ ಕೆಡೆಕೆಡೆ ।
ಕೆಡೆಯೆಂದೆಚ್ಚಾರ್ದು ಕೆಡಪಿದಂ ಡಾಳೆಯುರಂ ॥೧೪೭॥
ಕಂಟಣಿಪಿನವುಲಗ್ರಿಸಿದಂ । /ರಿ
ಕುಂಟಣಿಯುರ ಕೊರಡುಗೊಂಡ ಮನಮಂ ಮದನಂ ।
ಗೆಂಟಾಗಿ ವಿಕಾಸಕ್ಕೆ ಮು ।
ರುಂಟಿದ ಮಲ್ಲಿಗೆನಯುಲರಿಪಂತೆ ಮಂಸತಂ ॥೧೪೮॥

ಕಿಸುರ ಕಸಗಳೆದು ಮೊತ್ತಿಸಿ ।
ಪಸೆಬಸೆಯುಂ ಪೂಸಿ ರಾಗರಸದಿಂ ಪೊಕ್ಕಂ ॥
ಪುಸಿದೞಿವೆಂಡಿರ ಬೇಟಂ ।
ಬಿಸುಟೆರ್ದೆಯುಂ ಸ್ಮರನೆ ಪುಗುವವೊಲ್ ಪಾಚ್ಮನೆಯುಂ ॥೧೪೯॥

ನಟ್ಟುದು ನೊಂದೆನೆಂದೆರ್ದೆಯನೊತ್ತಿ ಕೊಳುತ್ತಮೆ ಬಂದೊಡೇನುಮಂ ।
ಸಿಟ್ಟಿಸಿ ನೋಡಿ ಕಾಣದೆಲೆ ನೋಡದೆ ಮಾಣದೆ ಕೇೞುಮಾರನಂ ॥
ಪುಟ್ಟರೆ ಪೆಂಡಿರೆಂತೆನಗೆ ಹೂಹೆಯುನೆಚ್ಚಪನೆನ್ನನೆಂದವಳ್ ।
ಕುಟ್ಟನಿ ಕೆಯ್ಗುೞಂ ಮುೞಿದು ಬಯ್ದುೞನಂಗನನಾಪ್ರಸಂಗದೊಳ್ ॥೧೫೦॥

ಅರಸಂಗೀತಂಗೆ ಕಣ್ಸೋಲ್ತಬಲೆಯರವರೇನಿರ್ವರೊ ಮೂವರೋ ನಾ।
ಲ್ವರೊ ಲೆಕ್ಕಂ ಲಕ್ಕೆಯುಂಕೋಟಿಯುಮೆನೆ ವಶಮಾದಪ್ಪರೇಗೆಯ್ವನೊರ್ವಂ॥
ಸ್ಮರಕೋಟಾಕೋಟಿಯುಂಪೂಣ್ದಿಸಲೆ ಪಡೆವೆನೆಂದಂದು ಪದ್ಮಾಕರಾಬ್ಜಾಂ ।
ಕುರಸಜ್ಜಂದರ್ಬದರ್ಭಂ ಧೃತಸಕಲಕಲಾಗರ್ಭನಂಭೋಜಗರ್ಭಂ ॥೧೫೧॥

ವ॥ ಅಂತು ಪಡೆಯುಲೊಡನೆ—

ಜಿನನಂಘ್ರಿದ್ವಂದ್ವದೊಳ್ ಧೂರ್ಜಟಿಯ ಜಡೆಗಳೊಳ್ ಬ್ರಹ್ಮನುತ್ತಂಸದೊಳ್ ಕೃ। ಷ್ಣನ ಕೇಶಾಕೇಶದೊಳ್ ಬಂದತ್ತೞಗಿ ತುೞುಗಿ ಪುಷ್ಪೇಷುಚಾರಂ ನಭಂ ಪೂ ॥ ವಿನ ಪಂದರ್ ಭೂತಲಂ ಪೂವಿನ ಪೊಸಪಸೆಗಳ್ ದೇಸೆವೆತ್ತಿರ್ಪಿನಂ ಪೂ। ವಿನ ತೇರಂತೆಚ್ಚುವಂತಾಪುರವರವನಿತಾಸ್ಯೈನ್ಯಮುಂ ಕಾಮುಸ್ಯೈನ್ಯಂ ॥೧೫೨॥

ಅಂತಿಸುವ ಮದನನಂ ಕಂ ।
ಡೆಂತೆಯಿದ್ದಪೆನಿವರ್ಗೆ ಸರಲನೆನಿತುಂ ನನೆವೂ ॥

ವಂ ತುಱುಗೆ ಪನಸಪಿಪ್ಪಲ |
ಸಂತತಿಗಳೊಳಂ ವಸಂತರಾಜಂ ಪಡೆದಂ ||೧೫೩||

ಸಿಕರಂ ತೆಂಕಣ ಗಾಳಿ ನಾಗರಿಕನಾಗಲ್ ದರ್ಪಕಂ ಪೀಠಮ |
ರ್ದಕನಾಗಲ್ ಮಧುಮಾಸಮೊಲ್ದು ವಿಟನಾಗಲ್ ಚಂದ್ರಬಿಂಬಂ ವಿದೂ ||
ಷಕನಾಗಲ್ ಪರಿಹಾಸಕಂ ಕುಮುದಿನೀವೃಂದಕ್ಕೆ ಸೌಭಾಗ್ಯನಾ |
ಯಕನಾದಂ ಶರದೃಷ್ಟದಕ್ಷಿಣಗುಣಂ ಶೃಂಗಾರಕಾರಾಗೃಹಂ ||೧೫೪||

|| ಗದ್ಯ ||

ಇದು ಮೃದುಪದಬಂಧಬಂಧುರ ಸರಸ್ವತೀಸೌಭಾಗ್ಯವ್ಯಂಗ್ಯಭಂಗಿನಿದಾನದೀಪವರ್ತಿ
ಚತುರ್ಭಾಷಾ ಕವಿಚಕ್ರವರ್ತಿ ನೇ ಮಿ ಚಂ ದ್ರ ಕೃತಮುಂ,
ಶ್ರೀಮತ್ಪ್ರತಾಪಚಕ್ರವರ್ತಿ ವೀ ರ ಬ ಲ್ಲಾ ಳ ದೇ ವ ಪ್ರಸಾದಾಸಾದಿತ
ಮಹಾಪ್ರಧಾನ ಸಜ್ಜಿವಳ್ಳ ಪ ದ್ಮ ನಾ ಭ ದೇ ವ ಕಾರಿತಮುಮಪ್ಪ

## ನೇಮಿನಾಥ ಪುರಾಣದೊಳ್

ವಸುದೇವ ಪ್ರತಾಪವರ್ಣನಂ,

ಚ ತು ರ್ಥಾ ಶ್ವಾ ಸಂ.

# ಪಂಚಮಾಶ್ವಾಸಂ

ಶ್ರೀಯುಂ ಸರಸತಿಯುಂ ಜಯು |
ಜಾಯೆಯುನಾವೀರಲಕ್ಷ್ಮಿಯುಂ ಜಸವೆಣ್ಣುಂ |
ಜ್ಯಾಯುನೆಱಗಿಸಿದ ನೀಱಂ |
ಸ್ತ್ರೀಯುರನೆಱಗಿಸುವುದರಿದೆ ಮನುಜಮನೋಜಂ ||೧||

ಅರಸನಱಿದಾಟ್ವ ನಗರದ |
ತರುಣಿಯುರುಡೆಯುಬ್ಬೆ[1]ವೋಂ[1]ಗದೊರ್ವನೆ ಸುಮನ ||
ಶ್ಯರನೇಂ ಶೂರನೆ ಚೇತಃ |
ಪುರಮಂ ನಿರ್ಧೂಮಧೂಮಮಾಗಿರೆ ಸುಟ್ಟಂ ||೨||

ವಚನ|| ಎಂಬಿನಮಾಕುಮಾರಂ ಕಣ್ಗಿಕ್ಕಿದ ಟಕ್ಕುಂ ಮನಕಿಕ್ಕಿದ ಮೂರ್ಛೆಯುಂ ಸುದತಿಯರ್ಗಿಕ್ಕಿದ ಸೊರ್ಕುಮೆನೆ ಬರ್ಪುದಂ ಕಂಡು—ಸೌಭಾಗ್ಯಕಾರ್ತಿಯರ್ ಸೌಭಾಗ್ಯಮಂ ಸೇಸಿಕ್ಕಿಯುಂ | ಚಲ್ಲಕಾರ್ತಿಯ[2]ರ್[2] ಚಲ್ಲದಿಂ ನಿವಾಳಿಸಿ ನಾಣಂಬಱಿದೀಡಾಡಿಯುಂ | ಸೋಲಕಾರ್ತಿಯ[2]ರ್[2] ಕಣ್ಸೋಲಮಂ ಕಾಣ್ಕೆಗೊಟ್ಟು ಮನಮಂ ಮೆಚ್ಚುಗುಡೆಯುಂ| ರಾಗರಸದೊಳ್ಮುೞುಗುತ್ತುಂತೆಸೆಯರ್ತೆಪ್ಪಂಬಿಡಿವಂತೆ ತಾಪದಿಂ ಮೃಣಾಳನಾಳದ ಪೊರಳಯುಂ ಪೊರೞ್ದು ತರ್ಕಯಿಸಿಯುಂ | ತೀಯಕಾರ್ತಿಯರ್ತಾಯಿಲ್ಲದ ಕೂಸಿನಂತೆ ಬಾಯುಂ ಬಿಡೆಯುಂ | ಕಟ್ಟೀಯಕಾರ್ತಿಯರ್ಕಟ್ಟುಮನಮನಱಿಸುವಂತೆ ಕಾಮಪಿಶಾಚದಿಂ ಪುಗದೆಡೆಯುಂ ಪುಗೆಯುಂ| ಪೊಸವೇಟಕಾರ್ತಿಯರ್ತಮ್ಮ ಕನ್ನೆವೇಟಮುವನೊಳಾಗದೆ ಕೆಟ್ಟೆವೆಂದು ಕಟ್ಟುಗೆಡೆಯುಯುಂ|ಚೇಟಗನಿತು ಬೇಟಮಾದೊಡಂ ಮನಮಾವೆಡೆಗಮೆಯ್ದದೆಂದಲವರಿಸುವ ಕಡುವೇಟಗಾರ್ತಿಯ ಕಾತರಿಕೆಯುಂ ಕಳೆಯಲ್ಪಡೆದೆಮ್ಮ ಮಕ್ಕಳ ಮಕ್ಕಳ್ಗೆವಗವಿಬಾಬೇಟಮೆ ಸಾಲ್ಗುಮೆಂದು ಪೞವೇಟಮಂ ಪೊಕ್ಕೞಗೊಕ್ಕು ಪೆಡೆಗೆಹಾರಂ ಪೊಸವೇಟಮಂ ಪೊಯ್ದು ತೊೞಲಲುಂ | ಮತ್ತಿನ ಗಂಡರ್ಮೊಱಿಯಲ್ಲರೆಂದು ಮನದೊಳಗೆ ಬೞಿನೀಗುಡಿದ ಬದ್ದಯರೀಭವಮಿಂತೆ ಪೋದುದು ಮಱುಭವದೊಳಾದೊಡವಿನಾತನೊಳೆ ಬೇಟಮಕ್ಕೆಂದು ಪರಿಸಿ ಪರಿಚ್ಛೇದಿಸಿ ಕಾಮಾಗ್ನಿ[3]ಯಿಂ[3] ಪೊಗೆಯುಂ | ಸತಿಯರ್ ಪತಿವ್ರತಿಕೆಯುಂ ನಂಬಿ

---

ಪಾ —1. ಗಾ, ದೊಂ. 2. ಕ, ಗ, ರ್ಕಳ. 3. ಕ. ಯುಂ; ಗ, ಯುಂ.

ಯುಗಲನಿಕ್ಕಿ ತೊಱೆಯೆಯುಂ | ಕುಂಟಣಿಯರ್ ಸೋಲ್ತು ಸವಿಗಂಡು ಬೇಟಕ್ಕೆ ಕಂಟಕರಾದೆವೆಂದು ನಿರಾಕರಿಸಿಯುಂ | ಪಱವೆಂಡಿರೆಮ್ಮ ದಿವಸದೊಳೇತಂ ಪುಟ್ಟದೆ ಪರಿಜುಂ ಪ್ರಾಯುಮುಂ ಸುಪಿಲುಂ ಬಸನಮುಂ ಬಱುದೊಱೆಯೋದುದಿನೆಯುಂ ಸಿರಿಯೊಡೆಯರ ಪೆಂಡಿರೆಲ್ಲಂ ಪರಿಚಾರಕಿಯರಂ ಕೂಡಿಕೊಂಡುಚ್ಚುಗಾಪಿನಚ್ಚರಂ ಪಿಡಿದುರುಳ್ಚ ಚೆನ್ನಸಂಕಲೆಯಿಂ ಪೆಡಗೈಗಟ್ಟಿ ಪಲ್ಲಿವಾಯೊಳ್ ಕ್ರೀಡಾಕಂತುಕಮಂ ತೂಂತಿ ಕಾಲ್ದುಡಿಗೆಯಂ ಕಳೆದೀಡಾಡಿ ಕಣ್ದೋಱೆ ಮಾಸಿದ ಸೀರೆಯಂ ಮುಸುಂಕಿ ತೊಱ್ತರೊಳಗಣ ತೊಱ್ತರಾಗಿ ಬೀದಿವರಿಯೆಯುಂ | ಜೈನೇಯರ್ಜನಪತಿಯೆ ದೈವಮೆಂಬ ನಂಬುಗೆಯೆ ಸಾಲ್ವುದು ಪರಪುರುಷಪರಿತ್ಯಾಗವ್ರತಮಂ ಗುರುಗಳಂ ಬೇಡಿಕೊಂಡು ಬಿಸುಡಿಕೊಂಡಪ್ಪೆವೆಂದು ಮನಂಧರಿಯೆಯುಂ | ಲೋಭಗುಂಟಣಿಯರ್ ಗಾಯಿಲೆಯಪ್ಪ ಮಕ್ಕಳನೋವರಿಯೊಳ್ನೂಂಕಿ ಪಡಿಗೆತ್ತು ಪೊಡಕಟ್ಟಂ ಕಟ್ಟಿ ಮುಸುಂಕಿಟ್ಟು ಕುಳ್ಳರೆಯುಂ | ಆಕೆಗಳ ಕೊಯ್ದಿಕ್ಕಿದ ಕುರುಳ್ಗಳಂ ತುಂಬಿಯು ಬಣ್ಣಂಬೆಯನೊಟ್ಟಿದಂತಾಗೆ, ಕಡಿದಿಕ್ಕಿದ ಬೆರಲ ಕಂಡಿಕೆಗಳಂ ಪಸಿಯರಸಿನದ ಕೊಂಬನುಡಿದು ಸುಣ್ಣಂ ತೊಡೆದೀಡಾಡಿದಂತಾಗೆ, ಕಿಱ್ತಿಕ್ಕಿದ ಕೆಂಬಲ್ಗಳಂ ದಾಳಿಂಬದ ಬಿತ್ತಂ ರಾಸಿಗೆಯ್ದಂತಾಗೆ, ಕಿರುವೆರಲ್ಗಳಂ ಕಚ್ಚುವ ಮುಖಮುಕರಂಗಳ್ಚಂದ್ರಮಂಡಲಂ ಪಾವಿನ ಪೆಡೆಯಂ ನುಂಗುವಂತಾಗೆ, ಬಯಲ್ದೊಱೆ[1]ಯುನೀಸು[1]ವ ಬಾಲೆಯರಿಂ ಸ್ತ್ರೀರಾಜ್ಯಮಂ ಸೂಱೆಗೊಂಡುಟ್ಟುದಂ ಸುಲಿವಂತಾಗೆ, ಸ್ಮರಪರಿತಾಪಕ್ಕೆ ಪಕ್ಕಾಗಿ ಪೊಕ್ಕು ಪೊರಲ್ವ ನರಳ್ವನಾರಿಯರ ನೆರವಿಗಳಂ ಬನಂಗಳೆಲ್ಲಂ ಮದನವ್ಯಾಧನಾಱಡಿಗೊಂಡಡವಿಯಂತಾಗೆ, ಕಮಳಕೇಸರದ ಕಿಸುವುಡಿಯುಂ ಕೆಚ್ಚನಿರ್ದ ನೀರೊಳ್ಬರ್ದ ನೀರರುಹನಾಳಂಗಳನೊಟ್ಟಿಕೊಂಡು ಬೆಂಡುನೆಗೆದ ಬೆಡಂಗಿಯರಿಂ ತಣ್ಮಡುಗಳೆಲ್ಲಂ ನೆತ್ತರುಂ ಕರುಳುಂ ಸುರಿಯೆ ಕಾಮಕಿರಾತಂ ಕೊಂದಿಕ್ಕಿದ ಮಡುಗಳಂತಾಗಿರೆತ್ತಂ ಪಿಂಗೆ ಪಿಂಗಲಾಱದಂಗನೆಯು ಪೊಱ್ದು ಕೊಂಡ ಪುಱಲ್ಗಳೆಲ್ಲಂ ಚಿತ್ತಚಕೋರನರೆಯೆಱಗಿಱದುದಱಗೆಡಪಿದಂತಾಗೆ, ಕಾಪಱದು ಪೊಱಲೊಳುಳ್ಳ ಬೆಲೆವೆಂಡಿರುಂ ಕುಲವೆಂಡಿರುಂ ಮರುಳ್ಗೊಂಡುದಂ-ಕಂಡು ಪಾರ್ವರೆಲ್ಲರುಂ"ಗೃಹಿಣೀಗೃಹಮುಚ್ಯತೇ" ಎಂಬುದು ಗರತಿಯುಲ್ಲದೆ ಗೃಹ

ಪಾ—1. ಕ. ನೀಗುವ; ಗ, ಯೆನಿಸುವ.

ಮೆಲ್ಲಿತ್ತೆಂದು ಗಾರ್ಹಸ್ಥ್ಯಕ್ಕೆಳ್ಳು ನೀರೆಱೆದು, ಪರದರೆಲ್ಲಂ ಪೆಂಡಿಜೋರ್ಡಾ[1]ಗೆ[1] ಪರದಾಡುವುದುಱದೆಂದಂಗಡಿಯ ಪಡಿಯುಂ ಕಿತ್ತು ತಳವರ್ಗಮೆಲ್ಲಂ ತಲೆಯುಂ ಪೆಂಡತಿಯುಮಂ ಕಂಡುವ್ರೋಳಗಮೊಂದು ಕೈದುವನಿಂಬಿಟ್ಟು ಪುರಜನಮುಮಂ ನೆರಪಿ ಕೊಂಡು ಬಂದು ಸಮುದ್ರವಿಜಯಂಗೆ ಪುಯ್ಯಲ್ಟೆ ಮೊಯ್ಯನಿಕ್ಕಿ ತಂತಮ್ಮ ಮಕ್ಕಳಂ ಮುಂದಿಡುವುದುಂ-ಆನೃಪಂ ನೋಡಿ ವಸುದೇವನ ದೇಹಮನಗೆಪ್ರೊಯ್ದಂತೆಯುಂ ಪಱಿದು ಪತ್ತಿಸಿದಂತೆಯುಂ ಮೊಕ್ಕಳಮಿಾಮಕ್ಕಳೇಕಾದುದೆಂದು ಬೆಕ್ಕಸಂಬಟ್ಟು ನೋಡೆ ನುಡಿಯಲವಸರಂಬಡೆದು ಬಳಸಿರ್ದ ಮಂದೀವೃಂದಮುಂ ಸೇವಕಸಮೂಹಮುಂ ಎಮ್ಮೆಮ್ಮ ಪುತ್ರಪೌತ್ರಾದಿಗಳುಮಿನ್ನರೆಂದಱಿವುದೀಪುರದ ಪುಣ್ಯಾಂಗನೆಯರುಂ ಮನಸಿಜನಂತೆ ಮನದೊಳಿರ್ಪ ವಸುದೇವನ ರೂಪು ಗರ್ಭದೊಳ್ಬಿಂಬಿಸಿ ಬಿತ್ತಾದಂತೆಯುಮುಚ್ಚೊತ್ತಿದಂತೆಯುಮಾತನಂತಪ್ಪ ಪುತ್ರರಂ ಪಡೆವರೊತ್ತೆಯಗೊಂಟಂ ಸೊಡರಿಟ್ಟೇಱುವಂತೆರವಿನ ಸಿರಿಯುಸಱಿದು ಪೊೞಲೊಳಂ ಪೊಱವೊೞಲೊಳಂ ಬೀದಿಯೊಳಂ ಅಂಗಡಿಯೊಳಂ ಕೇರಿಯೊಳಂ ಸೂಳೆಗೇಱಿಯೊಳಮೆಲ್ಲಿನೋೞ್ಪಡಂ ಕಾಮದೇವನೆ ಬಣ್ಣಿಗೆಬಂದಂತೆ ಬರ್ಪ ವಸುದೇವನನೆ ಕಾಣಲಕ್ಕುಮಿಲ್ಲಿಂ ಮೇಲೆ ದೇವರಱಿವರೆಂದುಸಿರದಿರ್ಪುದುಮರಸನವರಂ ಸಂತೋಷಂಬಡೆ ನುಡಿದು ವಿಸರ್ಜಿಸಿ ವಸುದೇವಂಗಾಗಳೆ ಬೞಿಯಟ್ಟಿ ಬರಿಸಿ ಊರಬ್ಬೆಯಾದ ತಮ್ಮಸಗುರ್ವಿಸುರ್ವಿಂಗುಬ್ಬೆಗಂಬಟ್ಟುಬ್ಬರವರಿದ ಸೊಬಗಿಂಗೆ ಸಂತೋಷಂಬಟ್ಟು ತೆಗೆದು ತಕ್ಕಯಿಸಿ ತೂಪಿಱಿದು ಕೆಲದೊಳ್ಕುಳ್ಳಿರಿಸಿ ಬಾಯ್ವಾಯೊಳ್ ತಂಬುಲಮನಿಕ್ಕಿ ಮೆಲ್ಲನಿಂತೆಂದಂ :—

॥ ಪೃಥ್ವೀವೃತ್ತಂ ॥

ಇದೇಕೆ ಮುಖಚಂದ್ರನೀಪಗಲ ಚಂದ್ರನೊಂದಂದಮಾ |
ಯ್ತಿದೇಕಧರಪಲ್ಲವಂ ವಿಧುರಪಲ್ಲವಚ್ಛಾಯಮಾ ||
ಯ್ತಿದೇಕನುಜ ನಿನ್ನ ಮೆಯ್ ಪೊಸೆದ ಪೂವಿನಂತಾ ||
ದುದಾನಿದಂ ಬಗೆದೆನಾಡುವ್ರೋ ಬಿಸಿಲೊಳೇಗಳಬ್ಜೇಕ್ಷಣಾ ||೭||
ಇಂತು ತೊೞಲ್ದಲದೆ ನಿನ |
ಗೆಂತಿರದೇನಮ್ಮ ನೀರೊಳಂ ನೆೞಲೊಳಮೊ ||

ಪಾ—1. ಕ, ಡೆ.

ಲ್ದಂತೆವೊಲುಟ್ಟುಂ ತೊಟ್ಟುಂ |
ಸಂತಸದಿಂ ಪೂವಿನಂತೆ ಸುಖವಿರಲಾಗಾ ||೪||

ವ|| ದೇವಕುಮಾರರುಂ ರಾಜಕುಮಾರರುಮಾರ್ಕಂಡರಾರ್ಕೆಲ್ದರೆಂಬತಿರವೇೞ್ಕುಂ! ತಿಟ್ಟನೆ ತಿರಿದು ಬಟ್ಟಸರಿವಂದೊಡೆ ಮೆಯ್ಯುಬಣ್ಣಮುಂ ಪೃಣ್ಯ[1]ರೊಲ್ವರಸಿನದ[1] ಪಿಂಜಿಯಂತೆ ಪಾೞ್ಪೋಕುಂ | ಲೋಕದ ಕಿಸುಱುಂ ಕಣ್ಣೆಂಜಲುಂ ಪತ್ತುಗುಮಿನ್ನೆಂದುಂ ಮನೆಯ ಪೊಸಂತಿಲಂ ಪೊಱಮಡಲಾಗದು | ನೀನೆತ್ತಲಾನುಮುಲಸಿಕೆಯಾದೊಡೆ—

ಹರೆಯದೊಳಾರುಮಾಡರೆ ಗೃಹಾಂಗಣದೀರ್ಘಿಕೆಯಲ್ಲಿ ಹಂಸನಂ |
ತಿರೆ ಗೃಹಮೇಣಿಕಾಕುಟಿಲನಿಷ್ಕುಟದಲ್ಲಿ ವಸಂತರಾಜನಂ ||
ತಿರೆ ತೊಳಪೀಸುವರ್ಣಕೃತಕಾಚಳದಲ್ಲಿ......ದೇವನಂ |
ತಿರೆ ವಸುದೇವ ನೀನೆಸಗು ನಿನ್ನ ವಿಹಾರವಿನೋದಮಂ ಗಡಾ ! ||೫||

ವ|| ಎಂದು ಸೌಭ್ರಾತ್ರಸುಭಗಸಹಜಸ್ನೇಹದಿಂ ನಿಜಹೃದಯಮುಮಂ ಮಱಸಿ ತಮ್ಮನ ಮನಮನಱೆದೊಡೆ ನೋಗುಮೆಂದಾರುಮಱೆಯದಂತು ಸಖಸುಖಪರಿಕರಂಗಳಂ ಸಲಿಸಿ ಮನಮಂ ಸೆಱೆಗೆಯ್ವಂತೆ ಸುಖದೊಳ್ ಸೆಱೆಗೆಯ್ದನಾತನುಮಣ್ಣನಿಕ್ಕಿದುಗುಬಮಂ ದಾಂಟದೆ—

ಮನೆಯೊಳಗಿರ್ದ ಪುರಸ್ತ್ರೀ |
ಜನಮುಮನಾತ್ಮಪ್ರಭಾವದಿಂದಲರಿಸಿದಂ ||
ಘನಪಟಲದ ಪೊರೆಯೊಳಗಿ |
ರ್ದಿನನಲರಿಸುವಂತೆ ಕಮಳಸೀಕಾನನಮಂ ||೬||

ವ|| ಅಂತಿರ್ಪು[2]ದೊಂ[2] ದಿವಸಕ್ಕಂ—

ಈಳೆಯ ಸಾದುಮಂ ಪಸಿಯಕತ್ತುರಿ ತೀವಿದ ಪೊನ್ನಸಿರ್ಪುಮಂ |
ಗಾಳಯುಮಣ್ಣದಂತಡರೆ ಕೆಂದಳದಿಂದಮೆ ಮುಚ್ಚಿ ಕೊಂಡು ಮಾ ||
ಚಾಳಕೆಯೊಂದು ನಕ್ಕು ನಡೆಗೊಳ್ವವೊಲಂತವುರಕ್ಕೆ ಪೋಪಮಾ |
ಚಾಳೆಯನೊರ್ವಳಂ ಚಟುಳಚೇಟಿಕೆಯಂ ವಸುದೇವವಲ್ಲಭಂ ||೭||

ವ|| ಹಿಡಿದು ಹಿಟಕವಾಡೆ ಚೇಟಿಕೆಯೆಂದಳ್ :—ಸೆಱೆಯೊಳಿರ್ದುಂ [3]ನಿನ್ನೀ[3]ವಿಕಾರಿತನಮನೊಂದಂ ಕೋಡಗಂಗಳೊಳ್ಕಂಡೆನೊಂದಂ ನಿನ್ನೊ

ಪಾ—1. ಗ, ರೊಲ'ಮರಿಸಿನದ. 2. ಕ. ಗ, ದುಂ. 3. ಕ, ಗ, ನಿಂ.

ೞ್ಕಂಡೆನೆ, ಕುತ್ತುವಡೆದಂತೆ ನೊಂದು ಪೇೞ್ದೇನೆಂಬುದುಂ ನಂಬಿಸಿ ಬೆಸಗೊೞುತ್ತುಮಿರೆ। ಪೇೞಿದಿರೆ ಪೊಣರ್ವಕ್ಕಿ[1]ಯುಂ[1] ಪದ್ಮದಲರುಮನೆೞಲಿಸಲೆಂದು ಕಟ್ಟಿಲೆಯುಂ ತೋಡುವಂತೆ ಕೆಯ್ಯಕತ್ತರಿಯುಂ [2]ಕೊಂಡವಳ ಮೊಲೆಯುಂ[2] ಮೊಗಮುಮಂ ತೊಡೆದು ನಿಮ್ಮರಸಿಗಟ್ಟಿದ ಕತ್ತರಿಯುನಿವ[3]ಳ್[3] ತೋಳ್ತೊಡೆಯೊಳ್ತೊಡೆದಳೆಂದರಸರ್ಗೆ ಪೇೞ್ವೆನೆನೆ। ಭಯಮುತ್ತು ತೊೞ್ತು ಮಲಹಾರಿಯಾದ ತೊೞ್ತಿನಂತೆ ನೀರಾಗಿ ಕಾಲ್ವಿಡಿದಾನೆಂದುದಂ ಪೇೞ್ವೆಂ ಈ ಪೊೞಲ ಪೆಂಡಿರೆಲ್ಲಂ ಮರೆವಳುಮರುಗಿಸಿ(?) ಮರುಳ್ಗೊಳಿಸಿ ನಿಚ್ಚಲ್ಮಚ್ಚಿ ಗಂಗೊಂಡು[4]ಪೊೞಲಿಜ[4]ರರೆಲ್ಲರುಮೊಲ್ಲನುಲಿದು ಮೊರೆಯಿಟ್ಟು ನಿನ್ನಮೊರೆಗೆಟ್ಟ ನಡೆವೞಿಯನಪೇಕ್ಷಿಸಿ ನಿಮ್ಮಂಣಂ ಮುನಿದು ನಿನ್ನನೀನೆವದಿಂ ಸೆಱೆಯಿಕ್ಕಿದನೆಂದು ಮತ್ತಮಿಂತೆಂದಳ್ :—

ನಿಸ್ತ್ರಿಂಶ ನಿನ್ನ ಕತದಸ |
ಮಾಸತ್ತ್ರಜ್ಞೆಯೊಳವರ್ಗೆ ವಿರಹಪಾಂಡುರಿತಪ್ರ ॥
ಥಸ್ತ್ರೀಯುರಗ್ನಿಶೋಭದ !
ವಸ್ತ್ರದವೋಲ್ ಜಲಕನಾದರೇನಿದನಱಿಯಾ ॥ ೮ ॥

ವ॥ ಎಂಬುದುಮೆರ್ದೆ ಪವ್ವನೆ ಪಾಱಿ ಬೆಱಗಾಗಿ ನೋೞ್ಪೆನೆಂದರಮನೆಯುಂ ಪೋಱಮಡಲಡಿಯಡುವುದುಂ ಮಿಡುಕಲಿಲ್ಲವೆಂದು ಮೊಗಮುಂ ಕಟ್ಟಗೆಯುಮನಡ್ಡಲಿಟ್ಟು ದೌವಾರಿಕರ್ ನಿವಾರಿಸೆ ಸಿಗ್ಗಾಗಿ ಸುಗ್ಗಿಯಂತೆ ನುಸುಳ್ದು ಬನಕೆ ಬಂದು ತನ್ನೊಳಿಂತೆಂದಂ :—

ಇದು ಮಟ್ಟಮೆಂದು ತಾಂ ಚ |
ಪ್ಪರಿಸಿದೊಡಾನಿರನೆ ಮುಚ್ಚುಮಱೆಯೇಕೆಯೊ ಶ ॥
ಕ್ಕರೆ ನಾಲಗೆ ನೃಪರೆರ್ದೆ ಕ |
ತ್ತರಿಯೆಂಬುದು ಜಳಕನಾದುದೆಮ್ಮಗ್ರಜ[5]ನೊಳ್[4] ॥ ೯ ॥

ತಾಂ ಗಡಮಿಕ್ಕುವಂ ಸೆಱೆಯೊಳಾಂ ಗಡಮಿರ್ಪೆನಿದಕ್ಕುಮೆನ್ನತ |
ನ್ನಂ ಗಡ ಕಂಡನೀನೆಗೆೞ್ದ ತಪ್ಪದನುಳ್ಳೊಡೆ ತಪ್ಪೆ ಕಲ್ಪಿಸ ॥

---

ಪಾ—1. ಗ, ಯುಂ. 2. ಕ, ಗ, ಕಂಡವಳ್ಮೊಲೆಯುಂ. 3. ಗ, ಳ. 4. ಕ, ಗ, ಪೊೞಲ್ತ. 5. ಕ, ಗ, ನಂ.

ಲ್ತಾಂ ಗುರುವಲ್ಲನೇ ಮುನಿದನೀಪುರುಳಿಲ್ಲದ ಪೌರರೂಟಿಕ್ಕೊಡ |
ಣ್ಣಂ ಗಡ ಮುಂತೆ ತಪ್ಪನಿತುಮೆಮ್ಮದು ಸ್ವೈರಣೆ ತಮ್ಮದಲ್ಲದೇ ||೧೦||

ಕರ್ಮಯನೊಕ್ಕು ನಿರ್ಗಳದೊಳಿಲ್ಲದ ದೋಷಮನಿಟ್ಟು ಕಟ್ಟಸೌ |
ಧರ್ಮಕೆಗೆಟ್ಟು ದೂಱಿ ಪರಿರೆಂದುದುಗೇಳ್ವುದುಮುಗ್ರಜಂಗಿದೇಂ ||
ಧರ್ಮಮೆ ಗೆಮ್ಮಗೆಂದೆನಿದನಾತ್ಮಮಹೋದಯದೊಳ್ ಸಹೋದರಂ |
ಘರ್ಮಮರೀಚಿಯುಂ ಬಳಸಲಿತ್ತನೆ ಬಾಳಸುಧಾಮರೀಚಿಯುಂ ||೧೧||

ತಮ್ಮರಸೆಂಬುದಂಬುಧಿಪರೀತಮೆ ಮಾಣೆಮ ತಮ್ಮದೊಂದು ದೇ |
ಶಮ್ಮಹಿಗುಳ್ಳನಾದುದೆ ವಿದೇಶವಿಹಾರಮನೆಯ್ದೆ ಮಾಡುವೆಂ ||
ಸಮ್ಮದದಿಂ ಸ್ವದೇಶಪರದೇಶವಿಶೇಷಣಮುಂಟೆ ಮನ್ಮಥಂ |
ಗೇಮ್ಮಳಯಾನಿಳಂಗಮೆನಗಂ ಮಧುಗಂ ಧರಣೀತಳಾಗ್ರದೊಳ್ ||೧೨||

ದೂಸಕರ ದೂಱುಗೇಳ್ದಂ |
[1]ನಾಸಿಗನೆ[1]ನ್ನಳವನಱಿದುಮಱಿಯದೆ ಪಿರಿದುಂ ||
ದೋಸಿಗನಾದೊಡೆ ಕೊಲ್ಗಂ |
ಪೇಸುವನಲ್ಲಂ ಸಮುದ್ರವಿಜಯುನಜೇಯುಂ ||೧೩||

ವ|| ಸಾವಂತಪ್ಪ ಕನಸುಗಂಡೊಡೆರ್ದೆ ಕುಳ್ಳಿರ್ಪುದುಂ ಕಂಪುಮ ನೆನ್ನುವುಂ ಸೆಱಿಗೆಯ್ವೊನಾವನೆಂದು ಬೇರ್ನೆಲಕ್ಕೆ ಪೋಪುದನೆ ನಿಶ್ಚೈಸಿ ವಸುದೇವನಿರ್ದನನ್ನೆಗಂ—

ಪೂಡುವ ಕುದುರೆ ಬೆಸಂಗೊಂ |
ಡೋಡುವ ತೇರ್ಗೊಂದೆ ಗಾಲಿ ಪೊಡೆವಂ ಪೆಱವಂ ||
ಕೇಡಿಂಗಲಸಿದೊಡಕ್ಕುಮೆ |
ನೋಡಿರೆ ರವಿ ಕೆಡೆದನಸ್ತಗಿರಿಮಸ್ತಕದೊಳ್ ||೧೪||

ಪುಟ್ಟುವಿನಂದಗಿ ಬಸದಿಯು|
ಬೆಟ್ಟುಗಳೊಳ್ಮೊಳಗೆ ಸಂಜೆವೇಳೆಯು ಪಱಿಗಳ್ ||
ತೊಟ್ಟನೆ ತೀವಿದ ಗಳಗೆಯು |
ಬಟ್ಟಲವೊಲ್ ದಿನಪನಟ್ಟನಪರಾಂಬುಧಿಯೊಳ್ ||೧೫||

ವ|| ಮತ್ತಮಿನಿಸಱಿಂ—

ಪಾ—1. ಗ, ಸಾಸಿರಗನೆ.

ಸಾವಿತ್ರದ್ಯುತಿ ದಾವಶಿ |
ಖಾವಳಿ ಪರಿದಳ್ಗೆ ಪೆರ್ಗೆ ಕರಿಕೆರ್ದ್‌ಪೊಲೇಂ ||
ತೀವಿದುದೊ ಭುವನತಳವುಂ |
ಗೋವಳಗಟ್ಟಲೆ ಸಮಸ್ತಭುವನಾತ್ಮಕಮಂ ||೧೬||

ವ|| ಅಂತುಮಲ್ಲದೆ

ಪಸರಿಸಿದುದು ಕಟ್ಟಲೆ ದೆಸೆ |
ದೆಸೆಗಂ ವ್ಯೋಕಾರನಂತೆ ಕಾಲಂ ಕಡಲೊಳ್ ||
ಬಿಸುಪಡರ್ದ ತಪನತಪ್ತಾ |
ಯಸಪಿಂಡಮನರ್ಗೆ ನೆಗೆದ ಪೊಗೆಯೆಂಬಿನೆಗಂ ||೧೭||

ಚಳಚಕ್ರಾಂಕಮರಾಳಮೋಘಪಟಳ ಕ್ರೀಮದ್ಧವೇಶ್ಯಾಂಗನಾ |
ಪಳಿತಕ್ಕಿಕ್ಕಿದ ಕರ್ಪ್ಪುರ ಸಾರಸರಸೀನೀಳಾಬ್ಜದೃಗ್ಜಾಳಕ ||
ಜ್ಜಳಪಗ್ಗ್ಯಂ ಪಟುಭೃಂಗಯಾಚಕಚಮೂಮಾರಾತ್ತಂಬುಜಾಮೋದದಾ |
ನಳಯೋತ್ಪಾದಕರಪ್ರದೋಷದಯಶಂ ಪೆರ್ಚಿತ್ತು ಭೀಮಂ ತಮಂ ||೧೮||

ವ| ಅಂತು ಪ್ರಡಿಗತ್ತರಿಯೆಂದು ಪಿಡಿಕ್ಕೈಸಿ ಪೂಸಲುಂ ಪಾಸಿ ಮೊಟ್ಟೆಗಟ್ಟಲುಂ ಮಿಡಿರಂಗಮಿಂದುಗಂ ಗುದ್ದಲಿಗೊಂಡಳಟ್ಟು ಪೊಱಗಾಗಲುಮಪ್ಪ ಕಾಳದ ಕಟ್ಟಲೆಯೊಳ್‌ವಸುದೇವನರಮನೆಯ ಮದಿಲಂ ವಿದ್ಯಾಧರಕರಣದಿಂ ಪೊಸಂತಿಲಂ ದಾಂಟುವಂತೆ ದಾಂಟಿ ಪೊಱಲಂ ಪೊಱಮಟ್ಟು ಪೊಱವೊಱೆಳಗನೆ ಕಿಱಿದೆಡೆಯಂ ಪೋಗೆಪೋಗೆ

|| ಶಿಖರಿಣಿ ||

ನಿಶಾಚರ್ಯಾದಾನಂ ಶಬರಶಿರಮಾಕೋಶಮುಖರಂ |
ಕೃಶಾನೂರ್ವೀದಾಹಶ್ರಮಶಬಮಯೋದ್ರೇಕಪಿಶುನಂ ||
ಪಿಶಾಚಪ್ರೌಢಸ್ತ್ರೀರಸವತಿಸುನಿಷ್ಪಾದ್ಯಸದನಂ |
ಶ್ಮಶಾನಂ ದ್ರಷ್ಟವ್ಯಂ ನೃಪಸುತನ ಕಣ್ಗಾದುದಿದಿರೊಳ್ ||೧೯||

ವಿಚಳದ್ಭೇತಾಳರಾಳಂ ಶಬರಭರವೃತಂ ಧೂಮವಲ್ಲೀವಿಕೀರ್ಣಂ |
ಶುಚಿರಕ್ತಾಕ್ತೋಕಸಕ್ತಂ ಶ್ವಗಣಮೃಗಮಯಂ ಮುಗ್ಧಪೈಶಾಚಕೇಶ ||
ಪ್ರಚಯಂ ದೀಪ್ತಾಗ್ನಿಭಾಗೋನ್ಮುಖಮಣಿಫಣಿಭೂತೋಗ್ರಮಾತಂಗ [ಮುತ್ತಂ |
ಗಚಿತೋದ್ಯತ್ಕಷ್ಟಮಂತಾಪಿತೃವನವನಮಾಯುತ್ತಮತ್ಯಂತಭೀಷ್ಮಂ ||

ತೆರೆತೆರೆಗೊಂಡು ಬಾನ್ಗಡರ್ವ ಕರ್ವೊಗೆ ಕರ್ಗಿದ ನೀರೆ ಕೊರ್ವುವಂ |
ತಿರೆ ವಿಚಳಚ್ಚಿತಾನಳಶಿಖಾವಳಿ ವಿದ್ರುಮವಲ್ಲಿ ಪರ್ವುವಂ ||
ತಿರೆ ತಳೆಯೊಡಿನೊಳ್ಪೊಳೆವ ಪಲ್ಗಳ ಸಿಪ್ಪಿನಮುತ್ತು ತೋಱುವಂ |
ತಿರೆ ಪರೆದಾಪರೇತವನಮಂಬುಧಿಯಂತಿರೆ ಭೀಕರಂ ಕರಂ ||೨೧||

ಅಲರ್ವರಲೊಕ್ಕ ಪಲ್ಪರೆಯುದಿರ್ದಳಯಿರ್ದಲ ರಾಸಿ, ಮೂಗುಗೋ |
ಗಿಲೆ ಕರಿಕೊಳ್ಳಿ, ಕೆಂದಳರೆ ಕೇಸುರಿ......ಕಾಮುಕರಾಗ್ನಿಯೊ ||
ಳ್ವ(?)ಲಸವಿಯೋಗಿಯುಂ ಪೊಡರ್ದು ಬೇವ ಶಬಾವಳಿಯಾದುವಸ್ಥಿಯೊಳ್ |
ಕಲಸಿ ಸಿಡಿಲ್ದು ಬಲ್ಮಿಡಿಗಳರ್ದ ಪರೇತವನಾಂತರಾಳದೊಳ್ ||೨೨||

ಪೊಗೆವ ಚಿತಾಗ್ನಿ ಪೊತ್ತುವ ಚಿತಾಗ್ನಿ ಪೊದಟ್ಟ ಚಿತಾಗ್ನಿ ಬಾಂಬರಂ |
ನೆಗೆವ ಚಿತಾಗ್ನಿ ನಂದುವ ಚಿತಾಗ್ನಿ ಕನಲ್ವ ಚಿತಾಗ್ನಿ ಗಾಳಿಯಿಂ ||
ಮುಗುಳ್ವ ಚಿತಾಗ್ನಿ ಮುಗ್ಗುವ ಚಿತಾಗ್ನಿ ಕಳಲ್ವ ಚಿತಾಗ್ನಿಯುಲ್ಲಿಗ |
ಲ್ಲಿಗೆ ಪುದಿದಿರ್ದುವಾಮುಸಣದೊಳ್ ವಿಳಯಾಗ್ನಿಯು ಬಿಟ್ಟ ಬೀಡುವೊಲ್ ||

ತಾಪಸಭದ್ರವಾಂಬುಧಿಯನುಣ್ಬುರಿ ಬಾಡವೆ ವಹ್ನಿ ಬೇಗವಿ |
ಲ್ಲಾಪೆಯ ಬೇಗೆ ಪತ್ತಿ ನೆಲನಂ ಸುಡುವಗ್ನಿ ದವಾಗ್ನಿ ಕೊಳ್ಳಿಗಳ್ ||
ಪೋಪ ಮುರುಳ್ಗಳಂ ಪಿಡಿದು ಪಾಯ್ವ ಸಿಡಿಲ್ಪುಲವಾಗೆ ವಹ್ನಿಮೇ |
ಳಾಪಕವಾದವೋಲ್ ಪ್ರತಿಭಯಂ ಪ್ರತಿವಾಸರವಾಶಬಾಲಯಂ ||೨೪||

ಉರಿದುದು ಚಿತಾಗ್ನಿ ನೆಲದಡಿ |
ವರೆಗಂ ಬಾಂಬರೆಗಮುವರ ಪೆಣನೆಯ್ದುವವೋಲ್ ||
ನರಕಂಬೊಕ್ಕರುಮಂ ಸುರ |
ಸರಣಂಬೊಕ್ಕರುಮನಳುರಲವ್ವಳಿಸುವವೋಲ್ ||೨೫||

ನೆಗೆದುರಿಬಿದೆಗೆಯ ತಲೆಯಂ |
ಮೊಗವಿಡೆ ಮುರುಳಲ್ಲಿ ಮೊಟಿಗೆ ಪೆಣವರೆ ಭೇತಾ ||
ಳಗಣಮುಗಿದಾಡೆ ರಕ್ಕಸ |
ವಗರಣವಾಡಿದುದು ನೋಡೆ ಸೂಲದ ಪೆಣಗಳ್ ||೨೬||

ನಾಲಗೆ ಬಾಯಾಡಿಸಿತುಂ |
ಲಾಲಮನುಗುಬುತ್ತೆ ಶುಷ್ಕತನುಭೇತಾಳಂ ||

ಸ್ಥೂಲಶಿರನಾರ್ದು ಕುಣಿದಂ ।
ಸೂಲದ ತಲೆ ಕುಣಿವ ತೆಱದೆ ಕುಣಪಾಲಯದೊಳ್ ॥೨೭॥

ಪಿಡಿದಡಸಿ ನುಂಗಿ ಪಸಿದಡ ।
ವಡಿಸುವ ಬೇತಾಳನುರಿವ ಪೆರ್ಬೆಣನಂ ತ ॥
ನ್ನೊಡಲಸ್ಥಿಕಾಷ್ಠದಿಂ ಪೆಣ ।
ತೊಡವೆಂದುದು ಬಸಿಱನೊಱಸಿ ಹಾಹಾಯೆನುತುಂ ॥೨೮॥

ಅಡಗಿಡಿದು ಕೊರಲ್ವೆರಗ ಪೂ ।
ಣ್ದೊಡವುಸುವಂ ಕಳೆಯದಿರ್ಪ ಕಡುಗಳ್ಳರನೇಂ ॥
ಪಿಡಿದುರ್ಚಿಕೊಂಡರೋ ಕೂ ।
ಗಿಡೆಯಿಡೆ ನರಕಕ್ಕೆ ನಾರಕರ್ ಪಿತೃವನದೊಳ್ ॥೨೯॥

ಅಸುವಿರ್ದಂತಿರೆ ಸೂಲಂ ।
ಬಸಿರ್ದಸುವಂ ಪಿಡಿದು ತೆಗೆದ ಕಲಿಗಳುವುಂ ಪ ॥
ಲ್ಮಸೆದು ತಿನಲ್ಮಸಗುವ ರ ।
ಕ್ಕಸರುವುನುಗ್ಗಡಿಸಿ ತಸ್ಕರರ್ ಪಿಡಿದುಯ್ವರ್ ॥೩೦॥

ಅರೆಮುಗಿದಿರ್ದ ಕಣ್ ಮುರಿದ ಮೀಸೆ ತುಱುಂಬಿದ ಜಾಜಿ ಪತ್ತೆ ಕ ।
ತ್ತರಿಸಿದ ಗಡ್ಡಮಿಟ್ಟ ತಿಲಕಂ ಬಳಪಂದೊಡೆದೋಲೆ ದೇಸೆಯುಂ ॥
ತಿರೆ ಸುಲಿಪಲ್ ತಳತ್ತಳಿಸಿ ತಂಬುಲವುಂ ಪೊಳಕುತ್ತೆ ರಾಗವಿ ।
ಲ್ಪರಕೆಗೆ ಕೊಟ್ಟ ಪಂದಲೆಯುಗುಂದಲೆಯಾದುದು ಬೀರನಣ್ಮಿನಾ ॥೩೧॥

ತೊಡೆದು ಸುಗಂಧವುಂ ನನೆಯು ಜಾದಿಯುನೆತ್ತಿ ತುಱುಂಬಿ ಪಾಲ್ಗಳಂ ।
ಕುಡಿಯಿಸಿ ಕೂಡೆ ಕಾಸಿ ಬಿಸುಸುಯ್ಯೊಳೆ ತನ್ನನೆ ನೋಡಿ ಜೀವವುಂ ॥
ಬಿಡಿದಿನಿಸಿರ್ಪ ಶೂಲದವನಂ ನಡೆನೋಡಿಯು ಮೀಸೆದಿರ್ದುತುಂ ।
ಮುಡಿದೆಳೆಯುಂ ನಖಾಗ್ರದೊಳೆ ಕಣ್ಬಸಿಯುಂ ಸಿಡಿಯುತ್ತೆ ನೀಡಿದಳ್ ॥೩೨॥

ಕಿವಿಗಿಸಿದಾಗೆ ತವ್ಮ ಕಳವಂ ಕತೆಮಾಡಿ ಮುರುಳ್ಗೆ ಪೇಟ್ದು ಪೊಂ ।
ಗುವ ರಸಮುಗ್ಗಳಂ ಬಸಿಯೆ ತಂಬುಲವುಂ ಪಿಡಿದಿಕ್ಕಿ ಪಿಂಡಿ ತೋ ॥
ಱುವ ತಿನಲೆಂದು ಸಾರ್ದುಸಿರನಾಲಿಸೆ ನೋಲ್ಪಿನಮಿಂಪು ಸೂಸೆ ಪಾ ।
ಡುವ ಪಿಶಿತಾಶರಂ ಪಿಡಿದು ಕಾಡುವ ಸೂಲದ ಬೀರರೊಪ್ಪಿದರ್ ॥೩೩॥

ಅಂಗಡಿಯಾನೆಯ ಬೀದಿಯ |
ಜಂಗಮಲಲನೆಯರ ಕಣ್ಣ ಪುಣ್ಯಮೆ ನಿಲಸಂ ॥
ಜಂಗಮವಿಷಮಂ ಪಿಡಿದಾ |
ವಂ ಗಡ ಪಿತೃವನಕೆ ತಂದು ತುಡಿಸಿದ ಬಂಟಂ ॥೩೪॥

ಊಡಿದೆನೋದಲಿಟ್ಟೆನುಡಕಲ್ವುದುಮಣ್ಣನ ಕೂಸುದಂದೆನಾಂ |
ಬೇಡೆನೆ ಮಾಱ ಕಳ್ಳರೊಡನಾಡಿಯೆ ಪೆತ್ತ ಬಸಿರ್ಗೆ ಸಂತಸಂ ॥
ಮಾಡಿದೆಯಿಂದಿದೇಂ ಮಗನೆ ಪಣ್ಣನೆ ನುಣ್ಮ್ರಗದಲ್ಲಿ ಪಿಸಾಸೆಗಳ್ |
ಮೂಡದ ಮುನ್ನ ನಿನ್ನ ಪೆಗಲೊಳ್ ಪೊಸಸೂಲಮಿದೆಂತು ಮೂಡಿತೋ ॥

ವ॥ ಎಂದು ಬಾಯಂ ಬಡಿದು ಬಸಿಱಂ ಬಡಿದು ಕೊಳ್ವ ತಾಯ್ಗೆ ತರಳನಿಂತೆಂದಂ :—

ಪಣವುಂಡೆಂ ಬಂದಿಯೊಳ್ಬಾಲಕನೆ ಪಲಗೆಜೂಜಾಡಿಪೆಂ ಸೂಳೆಗೆಯ್ದೆಂ |
ಪಣೆದಂಬೊಯ್ದೆಂ ತೊೞಲ್ದೆಂ ಪಿರಿಯರಕಳವುಮಂ ಕಳ್ದೆಸಿಂದಣ್ಮಿ ಸಾಯ॥
ಲ್ಕಣೆದೆಂ ಪೊತ್ತತ್ತು ಸೂಲಂ ಬರದ ಪೆಗಲೊಳಾಂ ಬೀಪನಾದೆಂ ಪರುಳ್ಕ|
ಯ್ಗಣೆಸಾದೆಂ ಮಜ್ಜೆ ದಂತುಳ್ಳವರನೆ ಪಿಡಿದುಂಡಪ್ಪೆನೆಂದುರ್ವತಿರ್ದೆಂ ॥೩೫॥

ವ. ಇಂತಿರ್ಪ ಮಗನ ನೆತ್ತರ್ಗೆ ಸಾರ್ವ ನಾಯಂ ನರಿಯುಮಂ ಸೋವುತುಂ ರಕ್ಕಸರ್ಗೆ ಕೆಯ್ಮುಗಿಯುತ್ತುಂ ರಕ್ಕಸಿ ತಾಯ್ ಕಾದುಕೊಂಡಿರ್ಪುದಂ ನೋಡುತ್ತುಂ ಪೋಗೆವೋಗೆ

ತಲೆಕೆಳಗಾಗಿ ನೇಲ್ವುದು ಶವಾವಳಿ ಬಲ್ವಲ ಪಿಂಡುಬಳ್ಗರುಳ್ |
ನುಲಿಗಳೆೞಲ್ಕೆ ಬೀೞಲ ಬೞಲ್ಕೆ ಕರಂ ಕುಱಿತೂಕ್ಕುತಿರ್ಪ ಪಂ ॥
ದಲೆಗಳೆ ಜೇನ ಪುಟ್ಟಿಯೆನೆ ಕೊರ್ವಿದ ಕೊಂಬುಗಳಲ್ಲಿ ಪಕ್ಕಿವೋಲ್ |
ಜಿಲಿಮಿಲಿಯೆಂದುವರ್ದ ಕೊಲೆಗಳ್ಕಣಪಾಲಯದಾಲವೋಳಿಯೊಳ್ ॥೩೬॥

ಸೂಲಮನೆತ್ತಿ ಹೂಂಕರಿಪ ಭೈರವಿ ಕತ್ತಿಗೆಗೊಂಡು ಬಪ್ಪ ಮಾ |
ಕಾಳ ಕುಕಿಲ್ವ ಶಾಕಿಸಿ ಶವಾಳಿಗೆ ನಾಲಗೆಗಿೞ್ತುಕೊಳ್ವ ಬೇ ॥
ತಾಳರೞಲ್ದ ಪಲ್ಮೊಗವ ಪೂತಿಸಿ ಫೂತ್ಕರಿಸುತ್ತೆ ಪೊತ್ತುಕಂ |
ಕಾಳಮನತ್ತಲಿತ್ತ ಪರಿದಾಡುವ ಕಂಡ ಕಪಾಳ ಕಾಪಿನೊಳ್ ॥೩೭॥

ಬಾಯ್ದೆಱೆಯುತ್ತೆ ತೂಂಕಡಿಪ ಕಿಂಕಿಣಿ ಬೇಪವರಂಕಜಾಳಮಂ |
ಪೊಯ್ದು ತಳಂಗಳಂ ಪೊಸೆದು ಮುಕ್ಕುವ ರಕ್ಕಸರಿರ್ದ ತೋಱಿನ ॥

ತ್ತೆಯ್ದುವ ಕಾಳರಕ್ಕಸಿ ಶುಭಂಕರಿ ಕತ್ತಿಗೆಯಿಂದೆ ಗಂಟಲಂ |
ಕೊಯ್ದು ಕಪಾಳದಿಂ ರುಧಿರಮಂ ಪಿಡಿದೀಂಟುವ ಭೂತಮದ್ಭುತಂ ||೩೯||

ಮರುಳತಿತ್ತೊಂದು ಬಿಕ್ಕಂ ಮಾಱಿದು ಮರುಳ ಮುಂಗೆಯ್ಯುಮಂ [ಬಿಕ್ಕಮಂ ನಿ |
ಬ್ಬರಿಬಾಯೊಳ್ಪೊಕ್ಕೊಡಂ ಕಂಡಿಸುವ ಸಿಡಿದ ಬೇತಾಳನಂ ಮುಷ್ಟಿದಿಂ ಬೆ ||
ಚ್ಚರದಿಂದಂ ಕಿಟ್ಟು ಬೇತಾಳನ ತಲೆಯುನೆ ಸತ್ತ್ವೋಚರಂ ತಿಂದ ಸತ್ತ್ವಂ |
ಚರನಂ ನುಂಗಿತ್ತು ಭೂತಂ ಬಿಸಿಪಿಶಿತಸಮೇತಂ ತ್ತಲೋಲಾತಿರೇಕಂ ||೪೦||

ಕಬಳತವಲ್ಲರಂಗಳ
ತಬುಕ್ಕವಾಪೀತರಕ್ತಮೇಂ ತಿಂದುದೊ ಪ ||
ಸ್ತುಬೃಹಸ್ರಸ್ತಿಷ್ಕಂ ತಾ |
ಯು ಬಾಯು ಮಾಂಸವನೆ ತೋಟಿ ರಾಕ್ಷಸಿತೋಶಂ ||೪೧||

ವ|| ಅಲ್ಲಿಯುಂ ಮಸಕದಿ ಕುಮುದಿಕಾಂತಿಯಂತೆಸದಿರ್ಪ ನೆತ್ತರ ಕೊಳಂಗಳೊಳ್ ಜಲಕ್ರೀಡೆಯಾಡುವ ಶಾಕಿನಿಯರುಮಂ ಪ್ರಸಾತ್ತವಕೊಂಡು ಪೆಣಂ ಪಕ್ಕೆಗೆರಡು ಪೆಣನೆಂದು ರಕ್ಕಸಿಬಾಹುಗಳ ಶುಭಂಕರಿ ಕತ್ತಿಯನೊತ್ತಿಗೊಳ್ವ ರಕ್ಕಸಿಯರುಮಂ ಬೇವ ಪೆಣದ ಬಿಸುಪುಡಗಂ ತುತ್ತ ಬಾಯುಬೇಯೆಯುಮುಗುಳಿವ ಪಿಶಾಚಿಯ ಮುಖಕೆ ಬೆರಲಂ ಮಿಡಿದು ಬಿರ್ದಬ್ಬಿ ತಮ್ಮ ಕೂಸುಗಳ ಬಾಯು ಬಿಸುಪುಡಗಂ ತೋಡಿ ಕಳೆದು ತಮ್ಮ ತಿಂಬಡಗಂ ಬಾಯ್ವಾಯೊಳಕ್ಕೆ ನಂಬಿಸುವ ಸಿಶಾಚಿಯರುಮಂ ಎಸತಡಗಸೂಡೆಯುಂ ಬಾಯಾಡಿ ನಲಿಯುವ ತಿಂಬಡಗಂ ತೋಡಿತಂದು ಕಾಡುವ ಕೂಸಂ ದಸಿಯೊಳಸೆಯುಱಿದು ಬಿಸಿಯಡಗಂ ಬಾಯೊಳ್ಗಿಡಿದು ತಿಸ್ನುತಿನ್ನೆಂದವೃಢಂ ತಿಂಬ ತಾಯುರಕ್ಕಸಿಯರುಮಂ ಸಿರಸುಯ್ಕಸೆ ಪಿಡಿದು ಸಿಡಿಗಾಲ ಮೇಲೆ ಪಟ್ಟರಿಸಿ ಪೊಸಪುದುಳಂ ಬೆಣ್ಣೆಯಿಕ್ಕಿ ತಲೆಯ ಸಿರ್ಪಸಿಂ ನೆತ್ತರಸೊಱಿದು ಬಾಯುಂ ತೊಡೆದು ಕೆಯ್ಯಂ ಸೇಪ ಅಪಿಱಿಪತ್ತಿ ಕೊಳ್ವ ಮರುಳ್ವಾಣತಿಯರುಮಂ | ಬೇವ ಪೆಣದುರಿವ ಬಾಯೆಗ್ಗಂಡದೊಳ್ ತಮ್ಮ ತನುವಂ ಪಿಡಿಱಂಡಂಗೊಯ್ದು ಬೀಟ್ವ ಸಾಧಕರುಮಂ| ಬಲಗೆಯ್ಯ ಬಾಳ್ವೇಗಮುಮೊಡದ ಕೆಯ್ಯಡಗುಂ ಬೆರಸು ಮಹಾಮಾಂಸಮುಮಂ ಭೂತಬಲಿಗೊಡಲೆಂದು ತೊಟಲ್ವ ಧೀರಸಾಧಕರುಮಂ ತಿಸಲಾಸೆಗೆಯ್ದು ತಮ್ಮ ಸೂಲದತ್ತ ಸಾರಲ

ಮ್ಮದೆ ಸುತ್ತಿಸುೞಿವ ಭೂತಕ್ಕಂ ಪ್ರೇತಕ್ಕಂ ಮೆಯ್ಯ ಮಾಂಸಮಂ ಕೊಯ್ದೀಡಾಡುವ ಕಲಿಗಳುಮಂ | ಘಟೋತ್ಕಚನ ತಲೆಯಂತೆ ಮರುಳಂ ಕಾಳೆಗಕ್ಕಾರ್ವ ಸೂಲದ ತಲೆಗಳಂ ತಮ್ಮಟ್ಟೆಯಾಟಕ್ಕೆ ಬಾಯ್ದಿಱಿಗುಟ್ಟುವ ಸಿಡಿದಲೆಗಳುಮಂ | ಪೊರೆಯೊಳೆಬ್ಬೀವ ಪೆಣದ ಪೊಗೆ ಕಣ್ಣೊಳ್ ಪುಗೆ ಸಮವಾಯಂ ಕಂಬನಿಗಳೊಳ್ ಪೋದೊಡೆ ಪಿಡಿಯೆಂಗುವೆಂಗು ಕಾಲಡಗಂ ಕಾಯ್ಗಾಲಿಗೊಟ್ಟು ರಕ್ಕಸರಂ ಕರೆದು ತನ್ನ ನೆತ್ತರಿಂ ಸಂದೆವ್ರೊಯ್ಸುವತಿಪ್ರತ್ಯಗ್ರವಿಶಾಲಶೂಲಭಿನ್ನರಪ್ಪ ಸುಭಟರುಮನಡಿಗಡಿಗೆ ಸಿಂದು ನೋಡುತ್ತುಂ ಬಂದು-ಮುಂದೊಂದೆಡೆಯೊಳ್ ಸೂಲದ ಪೆಣದ ಸೆರಗಂ ಸೀೞ್ದುಕೊಂಡದಱ ಬಾಯಿಂ ಬಸಿವ ನೆತ್ತರೊಳ್ಮರುಳ್ಕರುಳಂ ಕಿತ್ತು ಪೊಸೆದು ತೂಳಕೆಯೊಳರ್ದಿ ಕೊಂಡು ಮರುಳ ಕೆಯ್ಯ ಕೊಳ್ಳಿಯ ಬೆಳಗಿನೊಳ್ ಬರೆದ ಬಱಿಯ ಪಟಮಂ ಪೊರೆಯ ಮರದ ಕೊಂಬಿನೊಳ್ಕಟ್ಟಿಯುರಿವ ಸಿದ್ದಿಗೆಯ ಕೆಲದೊಳ್ ತನ್ನ ತೊಟ್ಟ ತೊಡವಂ ಕಳೆದಿಕ್ಕಿ ಪಾಯ್ದು ಪೋದುದಕ್ಕಂ ಮೆಟ್ಟಿ ಕಿಚ್ಚಿನೊಳ್ ಪಾಯ್ದು ಪಜ್ಜೆಯಂಗೂಡಿ ಕಿಂಕಿಣಿಯೆ ಬೇತಾಳನನಿತ್ತ ಬಾಯೆಂದು ಕರೆಕ್ಕೆ ಕೆಯ್ಯಂ ನೀಡೆಂದು ನೀಡಿದ ಕೆಯ್ಯ ನಡುವಂ ಪಿಡಿದಡರ್ದು ಪೆಗಲನೇಱಿ ಪರೇತವನದಿಂ ಪೊಱಮಟ್ಟು ತನ್ನ ಪಜ್ಜೆಯಂ ಪಜ್ಜೆಕಾಱರಱಿಯದಂತು ವಸುದೇವಕುಮಾರಂ ಪಾಯ್ದು ಪೋದಂ.

ಇತ್ತಲ್ನೇಸಱು ಮೂಡಲೊಡನಾಡಿಗಳುಂ ಕಾಪಿನವರುಂ ಕಾಪಿನೋವರಿಯೊಳ್ ವಸುದೇವನಂ ಕಾಣದೆಲ್ಲೆಡೆಯೊಳಮಱಸಿ ಸಮುದ್ರವಿಜಯಂಗೆ ಬಿನ್ನವಿಸುವ ಸಮಯದೊಳ್ ಬಂದ ಪಡಿಯಱಂ ಪೊಡೆವಟ್ಟು ಪರೇತವನದೊಳಗೆ ಪೊಸದೂವೆಯ ಕೆಲದೊಳ್ ಕಳೆದೊಟ್ಟಿದ ತೊಡವುಗಳುಮಂ ಮರದ ಕೊಂಬಿನೊಳ್ ಬರೆದು ಕಟ್ಟಿದ ಕಪ್ಪಡಮುಮಿರ್ದಪ್ಪುದೆಂದು ಪಿತೃವನಪಾಳಕಂ ಕಪಾಳಕುಂಡಳಂ ದಾರವಟ್ಟಕ್ಕೆ ಬಂದು ಬಿನ್ನವಿಸಿ ಮುಟ್ಟಿದನೆಂಬುದುಮರಸನಱಿದಂತಱಿಸಿದು ಪಾಱಿ ಪೋಗಿಮೆಂದು ಕಿಂಕರರಂ ಕಳಪುವುದುಮವರ್ಪರಿತಂದವಂ ಮುಂದಿಡಲೊಡನೆ ತನ್ನತಮ್ಮನ ಮಣಿಮುಂಡನಪೊಂದಱಿದು ಮಂದರಾಗನಾಗಿಯುಂ ಧೃತಿಯಿಂ ಮಂದರಾಗನಾಗಿ ಪಟದ ಬರೆಪಮಂ ಬಾಚಿಸೆಂದು ಸಂಧಿವಿಗ್ರಹಿಗೆ ಬೆಸಸಲೊಡನೆ—

ಪಾದರಿಗನೆಂದು ಪರಪರ |
ವಾದಭವಪ್ರಭುಗೆ ದೂಱಿದರ್ಗಡ ತಮಗಾಂ ||
ಸೋದರನಲ್ಲಂ ಬಸದಿಯೊ |
ಳೋದಂ ಪರವೆಣ್ಗೆ ಮಱೆದುಮೆಱಗದ ದಿವಸಂ ||೪೨||

ಆಯುಸಮಿದು ತೊಡೆವ್ರೊಡಖಿಲೋ |
ರ್ವೀಯಿಂದಮಾಯ್ತಾಯ್ತು ಕೆಲಬರಿಂ|ಬಕರ್ಗಂ ಕೆರೆಯು (?) ||
ಬಾಯುಂ ಮುಚ್ಚಲ್ ಕೆರಸಿಯು |
ಬಾಯುಂ ತಾಂ ಮುಚ್ಚಲಾರ್ಗುಮೇಂ ಬಂದಪುದೇ ||೪೩||

ದೂಱಿದು ತಮ್ಮಯ ಚಿತ್ತ |
ಕ್ಕೇಱಿದ ದಿವಸದೊಳೆ ಪೊಲ್ಲಕೆಯ್ದಂ ಮೊಳೆಮೋ ||
ಲೇಱಾಗಿ ಬದುಕಲಕ್ಕುಂ |
ದೂಱಂ ದುರ್ಯ್ಯಶಮುಮವನಿಗೆ ಬಾಳ್ವಂ ಭಟನೇ ||೪೪||

ಪಿಡಿದಂ ತಮ್ಮಡಿಗಳ ಕೇ |
ಸಡಿಯುಂ ಸೈರಿಸುವುದಪ್ಪಿದೆಂ ಪುಳಕಂಗಳ್ ||
ನಡುವಿನೆಗಂ ತಂಬುಲಮುಂ |
ಕುಡದೊಡಮುತ್ತೆಱಿದುಕೊಂಡೆನಾಂ ಬಾಯ್ವಾಗಿಲೊಳ್ ||೪೫||

ಪ್ರಾಯಶ್ಚಿತ್ತಂ ಗಡ ತ |
ಪ್ತಾಯಸಪುತ್ರಿಕೆಯಸಂಜದಪ್ಪುವುದು ಪರ ||
ಸ್ತ್ರೀಯರ ನಲ್ಲರ್ಗೆಸಗಿದ |
ನೀಯತರ್ಕವೆಂದು ಮಸಣದುರಿಯೊಳ್ ಪೊಕ್ಕಂ ||೪೬||

ಇದು ತಮ್ಮಿಂದಾದುಗೆ ಮ |
ನ್ಮಥನ ಮದಾವೇಶದಿಂದಮಾಯ್ತನ್ನಯ ತು ||
ಪ್ಪದೊಳಾನೆ ಬೆಂದೆನೆನಗಟಿ |
ಲದಱಿಂ ಗಡಮಱಿಯದಟಿದನೇ ವಸುದೇವಂ ||೪೭||

ಎನೆ ಮುನ್ನಂ ನೃಪತಿ ಸಭಾ |
ಜನಮನಿತುಂ ಬೞಿಕ ಮೂರ್ಛೆವೋದುದು ಕಡುಸಂ ||

ಜಿನ ಗಾಳಿಯೊ ನೋಣ್ಪಿಂವೋ |
ಹನಾಸ್ತ್ರಮೋ ನೃಪಕುಮಾರಪಾಠಶ್ರವಣಂ ||೪೮||
ಬಂದರಸಿಮಿತ್ತ ಮಲ್ಲನ |
ಲೆಂದಮರಂಗತಿವಿರುದ್ಧಮಹಿಪತಿಸಭೆಗಾ ||
ತರ್ಗೆಂದರೊ ಮುಕುಳಿತಕಮಲಾ |
ನಂದಾರ್ಥಂ ಸುಪ್ರಭಾತದೊಳ್ ಭಾಸ್ಕರನಂ ||೪೯||
ಆಸಕಳರ್ಧಿಸಮೇತಂ |
ವಾಸನೆಯುಂ ಪೊತ್ತುಕೊಂಡ ಪಾರದ ಪವನಂ ||
ಬೀಸೆ ಬಸನಬಿಮ ನೋಂಕಿಸ |
ಲಾಸಹಿತಂ ಲಬ್ಧಸಂಜ್ಞನಾಗಿ ನೃಪಾಳಂ ||೫೦||

ಹಾ ವಸುದೇವ ಹಾ ಹರಿಕುಲಾಸ್ತ್ರಕ ಹಾ ಚಿರಜೀವ ನಿನ್ನನಿ |
ನ್ನಾವೆಡೆಯಲ್ಲಿ ಕಾಣ್ಬೆನನುಜಾ ನುಡಿದಂತುಟಿನಗ್ರಜಂಗೆ ಮು |
ನ್ನೀವುದು ಪಂಥಮಿಂತು ವಿನಯಂಗಿದಲಿಕ್ಕುವೆ ವತ್ಸ ಪೊಕ್ಕುಮುಂ |
ಪಾವಕನೊಳ್ ಬಟಿಕ್ಕೆ ಪಗೆ ತೀರ್ಚುವೆನೆಂತೊ ಶೋಕವಹ್ನಿಯಂ ||೫೧||

ಮನಸಿಜನೆಂದು ಬೇವನೆ ಪರಾಂಗಳಸಿಂ ಪ್ರಸಿಯಿಂದು ಬೆಂದನೇ |
ವೆನೊ ವನದಿಂದು ಶೂನ್ಯಮೆಳವೆಂಡಿದ ಗಾನಿಣಿಯಿಂದು ಶೂನ್ಯಮಂ |
ಗನೆಯರೆ ಶೂನ್ಯಮೇರುಪಸ್ತ್ರಗಲಕ್ಷ್ಮ್ರನುಮಿಂದು ಶೂನ್ಯಮಿಂ |
ಪಿನ ಪೆಸರಿಂದು ಶೂನ್ಯಮುರಿದೆನ್ನಯ ರಾಜ್ಯಮುಮಿಂದು ಶೂನ್ಯಮೋ ||೫೨||

ಬೇವುದವಂ ಪ್ರಸಿ ಕಾಣಿರೆ |
ಪಾವಕನುಂ ಕಂಡೊಡನನನೊಳಕೊಳ್ಗುಂ ಸ್ವಾ ||
ಹಾವಧು ತನ್ನಿಸಿಯುಳ್ ವಸು |
ದೇವನ ರೂಪಿಂಗೆ ಸೋಲ್ದು ಮೊಂಬೀಭಯದಿಂ ||೫೩||

ವ|| ಎಂದು ಶೋಕಿಸುತ್ತಿರ್ದುಂ ಪೀನೆಂದಂತೆ ವಸುದೇವನಂ ವಸುದೇವನೊಳಕೊಳ್ವನಲ್ಲಂ ಕೆಲವಾನುಂ ದಿನಕ್ಕೆ ನಿನ್ನ ತಮ್ಮಂ ಬಂದಪನಟಲುಂ ಬಟಲುಂ ಬೇಡೆಂದಟಿದರರಸನಂ ಸಂತೈಸಿ ಪೋಗೆ

ಆನಿಯುಮೆ ನಿಜಾಗತಮಾ |
ಣೀನದಿ ತೀವಗೊಡೆ ತನ್ನೊಳೇನುಟಿವುದೆ ಯೋ ||

ಗ್ಯಾನುಜವಿಯೋಗಶೋಕೌ |
ವಾರ್ಗನಳನಿಂದಾಸಮುದ್ರವಿಜಯಸಮುದ್ರಂ ‖೫೪‖

ಅತ್ತ ನಿರಂಕುಶಂ ಮೊಡರಿದಾಳೆಣಿಯುಂಮಱಿದಂಜನನ್ಮನು (?) |
ನ್ಮತ್ತಮತಂಗಜಂಬೋಲೆಸೆದಾವಸುದೇವನುತ್ತಮಾಂಗನಾ ‖
ವೃತ್ತಕುಚಾದ್ರಿಕಂಟಕಮನೋತ್ಕಟರಾಗನದೀಪ್ರಚಾರಜಂ |
ತ್ರೋತ್ತರನೆಯ್ದಿದಂ ವಿಜಯಖೇಟಮನಂಗಜಸೌಖ್ಯವಾಟಮಂ ‖೫೫‖

ವ|| ಎಯ್ದಿ ಪೊಱವೊೞಲೊಂದು ನಂದನವನಮಂ ಪೊಕ್ಕು ಪದ್ಮಾಕರದೊಳೊಲೆದೋಲಾಡಿ ಕೊಳನ ತಡಿಯೊಳಕ್ಕಿರ್ದ ಮೃಗಮದಮುಮಂ ಸೆಳೆಗೊಂಬುಕೊಂಬನೊರಸೆ ಸುರಿದ ಸಿರಿಕಂಡದ ರಸಮುಮಂ ನಣ್ಪಿಕ್ಕಿ ಪೂವಂ ತುಱುಂಬಿ ತುಱುಂಬಿಗೆ ತುಱುಗಿ ಮುಸುಱಿದ ಮಱಿದುಂಬಿಯಿಂ ಕಣ್ಬೇಲಿಯ ತಲೆಸುತ್ತಂ ಸುತ್ತಿದಂತೆ ಸೊಗಯಿಸಿ ಸುರಯಿಯ ಸುರಹೊನ್ನೆಯಲರ ಬಿರಿಮುಗುಳ ಬೆರಕೆವಾಸಿಗಮಂ ತಲೆಸುತ್ತಿ ಕೇದಗೆಯ ಕುತ್ತುಂಗಱಿಗಳಂ ಕುತ್ತಿ ಕೇಶದ ಕೊನೆಯೊಳ್ ಕೇಸರದ ಕಿಸುವ್ರಡಿಯುಂ ಕೆದಱಿ ತಿಳಕದ ತಿಳಕಮಂ ತಳೆದು ಕೇದಗೆಯ ಬಿಳಿಯೆಸೞ ಬಳಪದೋಲೆಯನಿಟ್ಟು ಪೂಗೊಂಚಲಂ ತೂಗಿ ತೊನೆಯೆ ಕನ್ನವುರಂದೀವಿ ಮುಗುಳ ಮುದ್ರಿಕೆಯನಿಕ್ಕಿ ಕುಸುಮಕಂಕಣಮನೇಱಿ ನೂಂಕಿ ನಿಱಿದಳರ ತೊಂಗಲಂ ತೋಳೊಳೊತ್ತಡರ್ಚೆ ಚಂಪಕಮಾಲೆಯೊಳ್ಬರಸಿಕೊಳದ ಮಲ್ಲಿಗೆಯ ತಿಸರಮಂ ತೊಟ್ಟು ತಾವರೆಯ ನೂಲ ತಿರುವಂ ತೀಡೆ ವಕುಳದ ಪೂತ ಸೆಳೆಯ ಸೆಳೆವಿಲ್ಲಂ ಗೊಲೆಗೊತ್ತಿ ಪೊಸನನೆಯ ಪುಳಂಬಂ ಪೊಸೆದು ಸಲಿಸಿ ಕಿಱುದಳರಂ ಕೆಂಗಱಿಗಟ್ಟಿದ ಮಾವಿನಂಕುರದ ಕೂರ್ಗಣೆಗಳಂ ತಳಂತೀವೆ ಪಿಡಿದು ಪೊಲಗೆಟ್ಟ ಕಾಮದೇವನಂತೆ ವಸುದೇವನಾವನದೊಳಗೆ ವರ್ಗಗಳೊಂದು ತಿಳಗೊಳದ ತಡಿಯೊಳ್—

ಸುತ್ತುಂ ನವಪಲ್ಲವಮೊಱ |
ಲುತ್ತಿರೆ ಮುತ್ತಿದ ಮದಾಳಕುಳದಿಂ ಮದನಂ ‖
ಗೆತ್ತಿದ ನಣ್ಬೇಲಿಯ ಪೊಸ |
[1]ಸತ್ತಿಗೆ[1]ಯೆನಿಸಿದುದು ಬಂದ ಚೂತಕುಜಾತಂ ‖೫೬‖

ಪಾ—1. ಕ, ಗ, ಪತ್ತಿಗೆ.

ವ|| ಆವಮಾವಿನಡಿಯೊಳಡಿವಾಸಿಪೂವಿನ ಪುಡಿಯು ಪುಳಯುಂ ಜಗಲಿಗಟ್ಟಿ ಪೊಸದಳಿರಂ ಪೞಸಂ ಕುಸುಮದೆಸಟಿಂ ಪಚಕೆ ವಡಿಸಿ ಪೊಚ್ಚ ಪಚ್ಚಲೆಯುಂ ತಲೆಗಿಂಬುಮಾಡಿ ಬಾಳವಿಸವಿಸರದಿಂ ಬಿತ್ತರಿಸಿದ ಬಿತ್ತರಿಗೆಯುಂ ಕಾಲ ದೆಸೆಗೆ ಪೋಗೆ ನೂಂಕಿ ಪರಿಶ್ರಮಮುಂ ಕಳೆಯುಲೆಂದು ಪವಡಿಸಿ ಕರ್ಪೂರದ ಪರಲಂ ಬಾಯೊಳೆ ಪೊಯ್ದು ತಂಬುಲಮಂ ಕಳೆದುಕೊಂಡು

ಅರಸಂ ಶೃಂಗಾರವೃತ್ತಂಗಳನೆ ಗಿಳಿಗಳೊಳ್ ರಾಗದಿಂದೋದುತುಂ ಗಾ|
ವರಿಸುತ್ತುಂ ತುಂಬಿಯೊಳ್ ನುಣ್ಪಡರ್ದ* ಶಿಖಿಪಿಕಾರಾವದೊಳ್‌ಲೀಲೆಯಿಂದಂ|
ಬೆರಸುತ್ತುಂ ಷಡ್ಜಮಂ ಪಂಚಮುಮನೆಲದೊಳೋರಂದದಿಂ ತತ್ಸ್ವರಸ್ಸೀ |
ಕರಮಂ ಮೇಲೊಟ್ಟೆ ಮೆಲ್ಪಿಂದಲೆಯೆ ಮುಕುಳತಸ್ವಾಂತನೇತ್ರಾಬ್ಜನಾದಂ||

ಪ್ರಚ್ಛಾಯಾ[1]ಸುಪ್ತಂ[1] ಮೃದು |
[2]ನಿ[2]ಚ್ಛದನಪ್ರಸರಶಯನಸೋಪ್ಪಿತಮನಿಳ ||
ಸ್ವೇಚ್ಛಾ ಸುಖಿತಂ ನಿದ್ರೆಯು |
ತುಚ್ಛಶ್ರಮಭರಮನಾಳ್ದುದೊಂದರೆಜಾವಂ ||೫೮||

ವ|| ಅಂತು ಸುಖನಿದ್ರಾಸಕ್ತನಾಗೆ,

ಕೊಡೆಮಾವಿಂ ಪಾರಿಜಾತಂ ಕುಸುಮಶಯನದಿಂ ಶೇಷಶಯ್ಯಾತಳಂ ಕೀ |
ಲ್ಪಿಡೆ ಪಂಕೇಜಾಕ್ಷನಂತಾಯುವತಿಯುಮಳನೇತ್ರಪ್ರಭಾಪೂರಮಾಪಾ ||
ಲ್ಗಡಲಂ ಪೋಲೊಪ್ಪೆ ಲಕ್ಷ್ಮೀಲಲನೆಯು ತೆಱದಿಂ ಲೀಲೆಯಿಂ ತನ್ನ ಕಾಲಂ |
ಪಿಡಿಕೈಸುತ್ತಿರ್ದಳಂ ಕನ್ನೆಯನೆ ಕನಸಿನೊಳ್ ಕಂಡನಾರಾಜಪುತ್ರಂ ||೫೯||

ವ|| ಕಂಡು ನಿದ್ರೆದಿಳಯೆ ತಳವೆಳಗಾಗದೆ,

ಆವನಿತೆಯು ನಯನಜ್ಯೋ |
ತ್ಸ್ನಾವಿಲಸಿತದಿಂದಂ ಮಲರ್ದು* ಮಿಗೆ ಮುಗಿದ ನವೇಂ ||
ದೀವರಮಲರ್ದ*ಪುದೆನೆ ವಸು |
ದೇವಂ ಕಣ್ದೆಱೆದು ನೋಡಿ ವಿಸ್ಮಯದಿಂದಂ ||೬೦||

ನಿಜನಿದ್ರಾಮುದ್ರಿತಾಸ್ಯಾಂಬುಜಮನಱಕೆಯಿಂ ನೋಡಿ ನಿಶ್ಶಂಕನೇತ್ರಾಂ
ಬುಜನಾಗಳ್ ಲಜ್ಜೆಯಿಂದಂ ತೆಗೆಯೆ ನೆಗೆಯೆ ರೋಮಾಂಕುರಂ ಪೊತ್ತು
[ಪ್ರೋಲ್ ಘು ||

---

ಪಾ—1. ಕ, ಗ, ಸೂತಂ. 2. ಕ, ಗ, ನ.

ರ್ಮಜಳಂ ಕುಳ್ಳಿರ್ದು ತೋಳ್ಬತ್ತರಿಗೆಯ ಕೆಲದೊಳ್ ಕಾಲನೊತ್ತುತ್ತು
[ಮಿರ್ದರ್ ||
ವಿಜಯಶ್ರೀಯಂತಿರ್ದರರೆ (?) ಬಿಸಜವದನೆ ಬೇಱೊಂದವಷ್ಟಂಭದಿಂದಂ ||೬೧||

ಅವಳಾಂ ಮೆಲ್ಲನೆ ತೊಡೆಯಂ |
ತಿವಿದಪನೆಚ್ಚಱದೆ ತೆಱದ ಕಣ್ಗಳ ಪಸವ್ರೋ ||
ಡುವಿನಂ ನೋಱ್ಪಿನಮೇಕು |
ಪ್ಪವಡಿಸಿದನೊ ಕುವರನೆಂದು ಬೆಚ್ಚನೆ ಸುಯ್ದಳ್ ||೬೨||

ಮೊಲೆಮೇಲಂ ಮೇಲುದಂ ತಂದೆಡದ ಮುಡುಪಿನೊಳ್ಮೇಡುತುಂ
[ವಾಮಹಸ್ತೋ ||
ತ್ಪಲಮಂ ನ್ಯೈತಂಬಬಿಂಬಸ್ಥಳದೊಳಿಱಿಪುತುಂ ಬಳ್ಕೆ ಮಧ್ಯಂ ಕಚಂ ಬಿ ||
ಟ್ಟೆಳಗಿಣ್ಪಂ ಸಾರೆ ಬೆನ್ನೊಳ್ನಸು ಮುರಿಯೆ ಮೊಗಂ ಕೊಂಕಿನಿಂದಿರ್ದು ಚೆಲ್ವಿಂ|
ಬಲಗೆಯ್ಯಿಂ ಬೀಸುತಿದಳ್ಬಸರುಹದಳದಿಂ ಕಾಂತೆ ಮತ್ತೊರ್ವಳಾಗಳ್ ||

ವ|| ಅಂತು ತನ್ನಬಱಿಯಲೆ ಬಂದ ಭಾಗ್ಯದೇವತೆಯಂತಿರ್ದಳಂ ಕಂಡು ಕನಸೆ ನೆನಸಾದುದೆಂದು ಪೆಂಡಿರ್ಕಾರಣಮೆನ್ನ ಬೀಡು ನಾಡುಮಂ ಬಿಟ್ಟೋಡಿಬಂದೊಡಮವಳ್ದರೆನ್ನ ಬೆನ್ನನೇಕೆ ತಗುಳ್ದಪರಿನ್ನೇವೆನೆಂದೇವೈಸಿದಂ

ಮೊಗದೊಳ್ನಾಂಟಿದ ಕಣ್ಣಂ |
ತೆಗೆಯೆನೆ ಕಣ್ಣೊಡನೆ ಪರಿದು ನಾಂಟಿದ ಮನಮಂ ||
ತೆಗೆಯೆನೆ ಭೋಂಕೆನೆ ಕಾಲಂ |
ತೆಗೆದಂ ವಸುದೇವನಂಕದಿಂದಂಗನೆಯಾ ||೬೪||

ವ|| ಅದಂ ಕಂಡಾಚಿತ್ರಲೇಖೆಯೆಂಬಾಕೆಯ ಕೆಳದಿ ಬೀಸುವ ಬಿಸರುಹದೆಲೆಯ ಬಿಜ್ಜಣಿಗೆಯಂ ಮುಗುಳ್ನಗೆಯಿಂ ಪೊವಯಿಸೆ ಪೂವಿನ ಬಿಜ್ಜಣಿಗೆಯಂ ಮಾಡಿ

ಬಿಡಿಸುವೆಯೇಂ ಕಾಲಂ ಕೈ |
ವಿಡಿದಪಳೇಗಳ್ಕುಮಾರಿ ನೀನೀಕೆಯ ಕಾ ||
ಲ್ವಿಡಿವಂತಾದಪುದಿನ್ನೇಂ |
ತೊಡರ್ದೈ* ಕಡುಗೆಲ್ಲಕಾರ್ತಿಯಾಕಾಂತೆ ಗಡಾ ||೬೫||

ವ|| ಅರಸನಂತೆಂಬುದೇನೆನೆ; ಮತ್ತಮಾಕೆ—

ಈವಮಾವೀಕೆಗೆ ಕಾಮನರ್ಚಿಸಿದಮಾಯ್ತಂತೆಂದೊಡಂ ಭಾನುವೀ |
ಭೂಮಿಜಾತದ ತಣ್ಣೆಲೊಳ್ತೊಲಗದಾವಂ ಬಂದು ಸಾರ್ದಿರ್ದೊಡು ‖
ದ್ದಾವುಂ ಬಲ್ಲಿದರಾಣೆಯಿಟ್ಟ ತೆಱದಿಂದಿರ್ದಪ್ಪುದಾ ಶ್ರೀಮಹಾ
ರಾಮಂ ವಲ್ಲಭನೀಕುಮಾರಿಗಿದು ಸಿದ್ಧಾವೇಶಮುರ್ವೀಶ್ವರಾ ॥೬೬॥

ವ॥ ಈ ಪುಣ್ಯವತಿಯುವಿಶಾಪ್ರೋಟಿಲನಾಳ್ವ ಮಗಧಾಧಿಪತಿಯ ಮಗಳ್ ಶ್ಯಾಮಳೆಯೆಂಬೊಳೀಕೋಮಳೆಯಿಂದು ನಿನಗಿದಿರ್ವಪಂತೆ ಬಂದೀಬನದೊಳಗೆ ಬಿನದದಿನಾಡುತ್ತುಮಿರ್ದು ನೀಮೀಮಾಮರದಡಿಯೊಳ್ ಬಂದಿರ್ದುದುಮನೀತರುಣತರುಚ್ಛಾಯೆ ಪ್ರತಿಚ್ಛಾಯೆಯುಂತೆಯುಂ ನೆಲದೊಳ್ನಂಟ ಬೇರೂಱಿದಂತೆಯುಮೆತ್ತಲುಂ ತೊಲಗದಿರ್ದುದುಮಂ ಕಂಡು ಆದೇಶಪುರುಷನೆಂದಱಿದು ಪರಿತಂದು ಪೇೞ್ದು ವನಪಾಲಕಂಗೆ ಪಸಾಯಮನಿತ್ತು ಮತ್ತಮಿದಂ ತಮ್ಮ ಬೊಪ್ಪಂಗಱಿಪಲ್ ಕಳುಪಿ ಕೆಳದಿಯರ ನೂಪುರಕ್ವಣಿತಮೆ ಬದ್ದವಣಮಾಗೆ ರಾಗದಿಂ ಬಂದಿಲ್ಲಿ ಬಸಂತಂ ತನ್ನ ಮನಗೆ ಬಿರ್ದು ಬಂದ ಕಾಮದೇವನಂತೆ ಬೞಲ್ದು ಬೆಂದು ಬೆಱಗಾಗಿ ವಿಶ್ರಮಿಸೆ ಮಿಸುಗುತ್ತಿರ್ದ ನಿನ್ನ ಪದಪ್ರಚಾರಾತ್ಯರುಣಸರಸಿಜದ ಸಿರಿಯೆ ಸನ್ನಿದವಾದಂತೆ ಸಮ್ಮದಮನಪ್ಪುಕೆಯ್ದು

ಚಾಮರವಿಕ್ಕುವಂತೆ ತನು ಚಂಪಕಮಾಳಿಕೆಯುಂ ಮುಸುಂಕುತುಂ |
ಪ್ರೇಮವಿಳೋಕಮೆಂಬ ಪೊಸಪೂವಿನ ಪಚ್ಚಡದಿಂ ಕರಾಬ್ಜಘು ‖
ಮರ್ನ್ಮೃತದಿಂದೆ ನಿನ್ನಡಿಗಳಂ ನಯದಿಂದಮೆ ಪೂಸುತಿರ್ದಪಳ್ |
ಶ್ಯಾಮಳೆ ಪುಷ್ಪಕೋಮಳೆಯಿದೀಕೆಯವೃತ್ತಕಮೇಕೆ ಬೆರ್ಚುವೈ ॥೬೭॥

ಕೀರಕರಸ್ವರಂ ಮಧುರಮಂಗಳಪಾಠಕನಾದಮಾಗೆ ಝುಂ |
ಕಾರಿಸುತಿರ್ಪ ತುಂಬಿಗಳ ಗಾವರಮೊಪ್ಪುವ ಗೇಯಮಾಗೆ ಕೈ ‖
ವಾರದಿನೀಕೆಯುಂ ನಿನಗೆ ಚಿತ್ತಭವಾಗ್ನಿಯೆ ಸಾಕ್ಷಿಯಾಗೆ ಕೈ |
ನೀರೆಱೆವಂದದಿಂ ಸೊನೆಯನೀರ್ಸುರಿದಪ್ಪುದು ನೋಡೆ ಕೋಕಿಳಂ ॥೬೮॥

ಅನ್ನೆಗಂ,

ಹರಿಸೈನ್ಯಂ ಹಸ್ತಿಸೈನ್ಯಂ ಪಱೆ ಪಟಯಿಗೆ ಪಿಂಛಾತಪತ್ರೋತ್ಕರಂ ಚಾ |
ಮರಮೆಯ್ತ್ತಪ್ಪೋಜರಂ ಕನ್ನಡಿ ತಳಿರ್*ಗಳಸಂ ಬರ್ಪವರ್ಪ ಸತ್ತ್ವಂ ‖

ಡಿರ ತಂಡಂ ಪೆಂಡವಾಸಂ ಪಡಿಯುಱರಣುಗಳ್ ಮಂತ್ರಿಗಳ್ಮಂತ್ರಪಾಳರ್ |
ಬೆರಸಿಂದ್ರಂ ಬರ್ಪವೊಲ್ಮಾಗಧನಧಿಕಬಳಂ ಬಂದನಾನಂದದಿಂದಂ ||೧೯||

ವ|| ಬಂದು ಪೊಸವಾವೆ ಪಸುರ್ವಂದವಾಗೆ ಮದುವೆಮಾಡಿ ತನ್ನ ಮಗಳುಮನಳಿಯನುಮನೊಡಗೊಂಡುಪೋಗಿಯರ್ಧರಾಜ್ಯಮಂ ಬೞುವೞಿಗೊಟ್ಟು ಸುಖದಿನಿರೆ—

ಅಲಸಿಕೆ ನೋಟದೊಳ್ ತಣಿವು ಕೂಟದೊಳುಕ್ಕೆವಮುಟ್ಟುಱುೞ್ಚಲಂ
ನೆಲವಿನೊಳಪ್ಪಿನೊಳ್ ದರ...ಮಿಂಟಮುತಂ ಬೆಸಕ್ಕೆವ ಭಂಗಿಯೊಳ್ ||
ಪೊಲೆಗೆಳೆಸೋಲದೊಳ್ ಪದಿರೊಳೊತ್ತಿದಿರೊಳ್ ಪಲವಾತು ಮಾನದೊಳ್
ಕಲಿತನಮಾಗದಂತಬಲೆ ವರ್ತಿಸಿದಳ್ ಕವಿತಾವಸಂತನೊಳ್ ||೨೦||

ಚುಂಬನಮಪ್ಪ ಚಪ್ಪರಣೆ ಬೇಡುವ ಬಕ್ಕುಡಿ ಕಾಯ್ದು ಕೂಡುವ |
ಟ್ಟುಂಬರಿಯೆಂಬಿವಾಗೆ ಸಲೆ ತನ್ನವು ನಲ್ಲನ ಬಾಯ ತಂಬುಲಂ ||
ತಂಬುಲಮಿಕ್ಕಿದಣ್ಪು ತುಱುಂಬಿಗೆ ತುಱುಂಬಿದ ಪೂವೆ ಪೂವುಮು |
ಟ್ಟುಂಬರಮುಂಬರಂ ನಿರುತಮಾಗಿರೆ ಕೊಂಡಳನಂಗಸೌಖ್ಯಮಂ ||೨೧||

ವ|| ಅಂತಪ್ಪುಕೆಯ್ದೊಂದುದಿವಸಂ ವಿಷಮನೃತ್ಯಶ್ರಮಶ್ರಥೆಯಾಗಿ,

ಉಟ್ಟ ದುಕೂಲಮುಟ್ಟವೊಲತಿಸ್ಫುಟಮಾಗಿರೆ ತೊಟ್ಟಕುಪ್ಪಸಂ |
ತೊಟ್ಟವೊಲಿಟ್ಟುದಿಟ್ಟವೊಲಣಲ್ ನಱುದುಂಬಲದಿಂದೆ ಬೀಗೆಸುಯ್ ||
ಸುಟ್ಟಿದಿರಲ್ಕೆ ಸೋರ್ತರೆ ಕಚಂ ಮೊಗದೊಳ್ತರದಿಂದೆ ತನ್ನ |
ಮೇಲಿಟ್ಟೆಡದೋಳನತ್ತ ಮೊಗಮಾಗಿಯೆ ನಿದ್ರೆಯೊಳಿರ್ದ ನಲ್ಲಳಂ ||೨೨||

ಶ್ರವದಿಂ ಭಾಳಕ್ಕೆ ಬಾನಲ್ವರಿದ ಕುರುಳ ಕಸ್ತೂರಿಕಾರೇಣುಜಾಳ |
ದ್ರವಮಂ ಕಂಡರ್ದಿಕೊಂಡೆಳ್ನನೆಯುಮೊನೆಯೊಳಾಂಬಂದಪೆಂಪೋಗಿತಾನ ||
ನ್ನವರಂ ನಿಶ್ಚಿಂತಮಿರ್ಕ್ಕೆನಲಸಳ ನೆಲಸಿರ್ಪಗಳೆಂದಾಸುಕೇಶಿ |
ಶ್ರವಣಶ್ರೀಪತ್ರದೊಳ್ ತಾಂ ಬರೆದಱಿಯುದವೋಲ್ ಪೋದನಲ್ಲಿಂ
[ಕುಮಾರಂ ||೨೩||

ವ|| ಅಂತು ಶರೀರದಿಂ ಜೀವಂ ಪೊಱಮಟ್ಟು ಪೋಪಂತಾರುಮಱಿಯಲೀಯದೆ ಪೊಱಮಟ್ಟು ಪೋಗೆವೋಗೆ

ಶ್ರಮುದಂಭೋಧರಧಾರಾಗ್ರಹಮುಚಳಘನಾಸಾರನಾಸೀರಜಂಝಾ |
ಪವನವ್ಯಾಧೂತಭೂಜವ್ಯಜನಮತುಳತಾಪಿಂಛಪಿಂಛಾತಪತ್ರಂ ||

ಪ್ಲವಗಪ್ಲುತ್ಯುತ್ಪತದ್ವಿಃಕಿರಕರಗರುತಚ್ಛನ್ನಶಾಖಾಂತರಾಳಂ ।
ರವಿರುಕ್ಸಂಧುಕ್ಷಿತಾಂಗಕ್ಷಿತಿಪತಿತನಯಂಗಾಯ್ತರಣ್ಯಂ ಶರಣ್ಯಂ ॥೭೪॥

ಮಳಯಜವುಂ ಬಳಸಿದ ಫಣಿ ।
ಕುಳವುಂ ಕೇಕಿಗಳ ಕಳರವಂ ಸೋದುದು ಭೂ ॥
ತಳನಾಥರನೋಲಗಿಸುವ ।
ಖಳರಂ ಸೋವಂತೆ ಸುಕವಿಸೂಕ್ತಿಕಳಾಪಂ ॥ ॥೭೫॥

ಸೋಗೆಯ ಸೊಗಯಿಪ ದನಿಗಂ ।
ತಾಗುವ ಕೀಚಕದ ರುತಿಗವೊಡಸೋಲ್ತು ಕರಂ ॥
ಬಾಗಿ ಕುಲವೊಲೆದು ತಲೆಯಂ ।
ತೂಗಿದುದರಿಮಿತ್ರವರ್ಜಿತಂ ಗುಣಮಲ್ತೇ ॥೭೬॥

ಬಯಸಿ ರಸೆಯಹಿಗಳಂ ಮನ ।
ಮೆಯೆ ನೆಲದೊಳ್ ಪೊಕ್ಕು ಬರ್ಹಿಣಾವಳಿಯ ಶಿಖಾ ॥
ವಯವಮಿವೆ ತೋಱಿದಪುವೆನೆ ।
ಮಯೂರಶಿಖಿನಿಕರಮೆಸೆದುವಾಕಾನದದೊಳ್ ॥೭೭॥

ಅಹಿತಬಹುಬದರದಳ ।
ವ್ಯಾಹತಿಮಿರಹಿತಬುಭುಕ್ಷಿತೋತ್ತಾನಮುಖೋ ॥
ಗ್ರಾಹಿಶಿರೋರುಣಮಣಿಯಂ ।
ಹಾಹಾ ಪಣ್ಗೆತ್ತು ಪಾಯ್ದುದೊಂದು ವಿಹಂಗಂ ॥೭೮॥

ಅಡಗೆಂದೆಲವದ ಪೂವಿಂ ।
ಗಡಹಡಿಸಿಯೆ ಪಾಯ್ದು ಕಾಯ್ದು ಕಾದಿದವ್ರೊಡಲಂ ॥
ದಡಗಡವಪ್ಪನಮೊಱಕೆಗ ।
ಳುಡವಿನೆಗಂ ಕಣ್ಗೊಳೊಡೆವಿನಂ ಕಾಕಂಗಳ್ ॥೭೯॥

ಅಡವಿಯ ಖಗನಿಕರಂ ಬೞಿ ।
ಪಿಡಿದುಱಿದಱಿಯಟ್ಟಿ ಪಿಡಿಯಲಾಱದೆ ಕಡುಪಿಂ ॥
ಗುಡುಗುಡುಗುಡೆಂದು ಗಿಡಗಂ ।
ಕೆಡೆದುದು ಗಱಿಯುಡಿಯೆ ಪೊದೆದು ತನ್ನಯ ನೆೞಲಂ ॥೮೦॥

ಅರ್ಕಾಂಶುಗೆ ಪುಗಲಿಲ್ಲದೆ ।
ಸಿರ್ಕಿರಡಿಯ ಕಡುಪಿನಂದದೞವಿಯ ತಮುಮಂ ॥
ಮಾರ್ಕೊಂಡು ಸುೞಿವ ಕಾಡೆೞ ।
ವೆರ್ಕಿನ ಕಣ್ಣಡೆವ ಪೊಡರ್ಗಳೆನೆ ಜಲಜಲಿಕುಂ ॥೮೧॥

ಪೊಱೆವಿಡಿದು ಪೊಕ್ಕು ಪಾವಿನ ।
ಪೆಱೆಯುಂ ಪೆತ್ತೊಂತಿಯೆಂದು ಪರಿತರೆ ತಿರಿದೇಂ ॥
ಸರಟಶತಮೋಡಿ ಪೊಕ್ಕುವು ।
ಸುರನರಿಗೆತ್ತಿದರ್ ಖದಿರಬದರೋದರಮುಂ ॥೮೨॥

ಗಿಡು ಪಿಡಿಯೆ ತನ್ನ ಬಾಲಂ ।
ತೊಡ*ರ್ದೊಡೆ ಪರಿತರ್ಪ ಬೇಗೆಗಾಡುವ ಚಮರಂ ॥
ಬಿಡಿಸಿದಪೆನೆಂದು ನಿಂದುದು ।
ಕಡುಲೋಭಂ ಜವನ ಬಂದಿಯೋ ಬಂಧನವೋ ॥೮೩॥

ಅಡಸಿ ಬರೆ ಶಬರನುಡುಗಿದು ।
ದುಡು ಕಣ್ಣಂ ಮುಚ್ಚಿ ಪರಿಯನಾಗಡೆ ಗಡ ಕ ॥
ರ್ದಡಿಗನ ಕಣ್ಣೊಳ್ ಪೂವಿನ ।
ಪುಡಿ ಪೊಕ್ಕುದು ಮಾಱುತೇಱುತಂ ಕಾನನದೊಳ್ ॥೮೪॥

ಅಹಿಯ ವಿಷವರ್ಚ್ವ ನೆಗೆದಹಿ ।
ಗ್ರಹಮುಂ ಪೀರ್ದುರ್ಚಲವತ್ಸಭಲ್ಲವ ಬಾಯುಂ ॥
ದಹಿಯಿಸಿ ಪಾಪಿ ಪಾಪೇ ।
ನ ಹನ್ಯತೇಯೆಂಬ ನುಡಿಯನೇಂ ನಡೆಯಿಸಿತೋ ॥೮೫॥

ಮಾವಿನ ತಳಿರೊಳಗೆ ಮುಗು ।
ಳ್ಮಾವಿನ ಮೊಗಮುಳಿಯೆ ಮಿಸುಪ ತೊಡೆ ನಡು ಜಘನಂ ॥
ತೀವಿದವೊಲೆಯೆಂಬಿವು ಪಸು ।
ದೇವನ ಕಣ್ಗೆತ್ತುವತನುರಾಗೋದಯಮುಂ ॥೮೬॥

ಮುಗಮುಗಿಸಿ ಕವಿವ ಮದಗಂ ।
ಪುಗಳೆನೆ ಪೊಗೞ್ವಂತೆ ಮೊಱೆದು ಮುಸುಱುವ ಮುಱಿಪಂ ॥

ಬಿಗಳಂ ಕೊರ್ವಿದ ಕತ್ತುರಿ |
ಮಿಗಮಿರ್ಪವೊಲಿರ್ದುದೊಂದು ಗಂಧಗಜೇಂದ್ರಂ ॥೮೭॥

ತದುಕಿನ ಸರಳದ ಸಪ್ತ |
ಚ್ಛದದಾಮ್ರದ ತಳಿರನುಡಿದುಮೆಯ್ದದೆ ಕರಿ ಮೇ ॥
ದುದು ವಿರಹಿಯುಱಿಸಿ ಪೊಸವೇ |
ಟದ ಪಿಡಿ ನಸುಮೇದು ಬಿಸುಟು ಪೋದೆಡೆದಳರಂ ॥೮೮॥

ಮಧುಪರಿಮಳಮಂ ಕಾದುದು
ಸುಧೆಯನು ಪೇಚಕಮನೊಂದು ಮದಗಜಜಸಂ ॥
ಮಧುಸಖನ ಬಯ್ತ್ತರತಿಧನ |
ನಿಧಾನಮಂ ಕಾವ ಕಾಳಸರ್ಪನ ತೆಱದಿಂ ॥೮೯॥

ತಾಳಸ್ಥೂಳಕರಂ ತಮಾಳವಿಸರಚ್ಛಾಯಂ ಸುರೂಪಂ ಸುವ |
ಕ್ತ್ರಾಳೋಕಂ ಶುಭಬಿಂದುಶುಭ್ರರದನಂ ದಾನಾರ್ದ್ರಗಂಡಸ್ಥಳಂ ॥
ಲೀಳಾಯಾನನುದಗ್ರಪಲ್ಲವನದಿಂ ತಾನಾಯೊತ್ತ ನೂತಕ್ಷಮಾ |
ಶೀಳಂ ಕೇಸರಿಗಂ ನಿರೀಕ್ಷಣಸುಖಶ್ರೀಪಂಜರಂ ಕುಂಜರಂ ॥೯೦॥

ಗಜವೊಂದಿರ್ದುದು ರೋಹಣಾಚಲದವೋಲ್ ತತ್ಪದ್ಮರಾಗಪ್ರಭಾ |
ರಜಮಿರ್ಪಂತಿರೆ ತೋರ್ಪ ಪದ್ಮಪಟಲಂ ತಱ್ಪೊಯ್ದ ನೀಳೋತ್ಪಳ ॥
ವ್ರಜಮಿರ್ಪಂತಿರೆ ಮತ್ತಭೃಂಗಮಿಳಿತಂ ದಾನದ್ರವಂ ಮಾಳ್ವಾ |
ಯುಜಮಿರ್ಪಂತಿರೆ ಕಣ್ಣ ಪೆರ್ಮೞೆಯೊಳಂ ಮೇಲ್ಪೊಯ್ದಪಾಂಗಾಂಶುವಿಂ ॥

ನೇಱಿಲ ಪಣ್ತು ಕೊಂಬುಡಿದು ಬಿರ್ದವೊಲೊಟ್ಟಿದ ಸಿಂದಱಕ್ಕೆ ಪಾ |
ಯ್ದಾಱಿವಿಂಡಿಸಿಂ ಮುಱಿದು ಪೂಸಿದ ಮಾವಿನ ಕೊಂಬು ಮೇಲ್ಮವಂ ॥
ಗಾಱಿ ಕಟಂಗಳುಣ್ಮೆವಿಡೆ ಕಾಯ್ದು ಬಲಂ ಮಿಗೆ ಜೇಗೆಯಿಂದೆ ಬೆಂ |
ದಾಱಿದ ಬೆಟ್ಟನಂತೆ ವನವಾರಣಮಿರ್ದುದದೊಂದು ತಾಣದೊಳ್ ॥೯೧॥

ಚೂತಾಮೋದಕ್ಕೆ ಮೃಗಂ ಕದಿಕಿಪ ತಳಿರ್ಗಾಸ್ವಾದಮಂ ತತ್ಪುಳಿಂದೀ
ಗೀತಕ್ಕುತ್ಕರ್ಣಮಂ ಕುಟ್ಮಳತನಯನಮಂ ಕೋಕಿಲಾಸ್ಯಕ್ಕೆ ಮೆಯ್ಯಂ ॥
ಸ್ರೋತಶ್ಶೀತಾನಿಳಂಗೊಪ್ಪಿಸಿ ಸುಖಮಯನಾಗಿರ್ದುದಸ್ಪಂದಮಂದೀ |
ಭೂತಂ ಕರ್ಪಟ್ಟಮಂ ಕಂಡರಸಿ ಸಮೆದವೋಲ್ ನೀರದಾಭಂ ಮದೇಭಂ ॥

ನನೆವೆರಸು ಗುಜ್ಜವೂವಿನ |
ಕೊನರ್ಗಳನುಡಿದುಡಿದು ನೀಡೆ ಬೇಟದ ಪಿಡಿಯೋಂ ||
ಮನವೊಸೆದು ಮೇವುತಿರ್ದುದೊ |
ವನಕರಿ ಪರಿದಂತೆ ದಂತಹಸಿತಕಟಾಕ್ಷಂ ||೯೪||

ಕಡೆವಾಯಿಂ ಪ್ರತಿಹಸ್ತದೊ |
ಳಡಸಿದ ತಳಿರುದಿರೆ ತಟ್ಟು ಕೆಯ್ಯೊಳ್ ಕೆಯ್ಯಂ ||
ಪಿಡಿದು ಪಿಡಿ ತುಱುಸುತಿರ್ದುದು |
ಕಡೆಗಣ್ಣಿಂ ಸಮೆದ ಕರಿಯ ಕೊಂಬಿನ ಕೊನೆಯೊಳ್ ||೯೫||

ಅನುಸಿಂಚತ್ಸಲ್ಲಕೀಶೀಕರಪರಿಚಯದಿಂ ಶೀತಶೀತಂ ಲತಾಲಿಂ |
ಗನದಿಂದಾಮಂದಮಂದಂ ಫಣಿವಿಶಸನದಿಂ ಭೀತಭೀತಂ ಚಳಚ್ಚಂ ||
ದನಶಾಖಾಂದೋಳದಿಂದಂ ಚಕಿತಚಕಿತಮಾಯ್ತುಚ್ಚರತ್ಕೀಚಕಪ್ರ |
ಸ್ವನಿಕಂ ವಾನೇಯನಾಗಸ್ಫುಟಿತಕಟಮದಾಮೋದಭಾರಂ ಸಮೀರಂ ||೯೬||

ತಳರಂ ತೂಗಿ ಪರಾಗಮಂ ಪಿರಿದು ಪೂಸೇರಂ ತಡಂಗೂಡಿ ಗು |
ಗ್ಗುಳನಿರ್ಯಾಸಮನಾಂತು ಚಂದನರಸಕ್ಲೇದಂಗಳಂ ಪೊತ್ತು ಶೀ |
ತಳಕರ್ಪೂರಮೃಗೋದ್ಭವಾಗುರುಕುಮುಸ್ತಾಗ್ರಂಥಿಗಂಧಂಗಳಂ |
ತಳೆದಾಗಂದಿಗರಂತೆ ಬಂದೊಲೆದುದೋ ಮತ್ತೊಂದು ಮಂದಾನಿಳಂ ||೯೭||

ವನಜಮನೊಕ್ಕಲಿಕ್ಕಿ ಮಱಿದುಂಬಿಯನಾಳ್ದು ತರಂಗಮೆಂಬ ತ |
ಕ್ಕಿನ ಪರಿಕಾಱರಂ ತುಟಿದು ಸೀಕರಮಂ ತಳೆದೊಟ್ಟಿಕೊಂಡು ಪೂ ||
ವಿನ ಪುಡಿಯಂ ಮೃಗೇಂದ್ರಭಯದಿಂದೆ ತಿರೋಹಿತನಾಗಿ ಬರ್ಪ ಕಾ |
ನನಕರಿಯಂತೆ ಬಂದುದೆಲರೊಯ್ಯನೆ ರಯ್ಯನೆ ವಾರಿದೇಶದಿಂ ||೯೮||

ಆಗಾಳವೆಸಗಿನಿಂದಮೆ |
ಪೋಗಿ ಪರಿಶ್ರಮವಶಾತುರಂ ವಸುದೇವಂ ||
ನಾಗೇಂದ್ರನಂತೆ ಮದಲೀ |
ಲಾಗಮನಂ ಕಂಡನೊಂದು ಕಮಳಾಕರಮಂ ||೯೯||

ಗಂಗೆಯ ಗೋತ್ರಮೋ ಸೊದೆಯ ಸಾರಮೊ ಬೆಳ್ನಗೆಯೊಂದು ಬಿತ್ತೊ ಮು |
ತ್ತಿಂಗಡಲಿರ್ದ ಬೇರೊ ಪೊಸಮುತ್ತಿನ ಪುಟ್ಟುವ ನೀರೊ ತೋರ್ಪ ಬೆ |

ಳ್ದಂಗಳ ಬೈಕೆಯೋ ಜಗದ ದೀವರೆಯರ್ಕಳ ಕಣ್ಣ ಬೆಳ್ಪು ಬೆ ।
ಳ್ಳಂಗೆಡೆದತ್ತೊ ಪೇೞ್ವೆನೆ ನಿರ್ಮಲವಾದುದು ನೀರಜಾಕರಂ ॥೧೦೦॥

ತೆರೆಯಿಂ ಕಣ್ಣಿೞ್ದಾಡುವಂತಿರೆ ಚಳನ್ಮೀನಂಗಳಂ ನೋಡುವಂ ।
ತಿರೆ ನಾನಾಮಧುಪಾನಮತ್ತಮಧುಲಿಟ್ಝುಂಕಾರದಿಂ ಪಾಱುವಂ ।
ತಿರೆ ಮೋಲ್ಪಱುವ ಕುಂಕುಮಾರುಣರಥಾಂಗದ್ವಂದ್ವದಿಂ ತತ್ಪಯೋ ।
ಧರೆ ಸೆಂಡಂ ಪೊಡೆದಾಡುವಂತಿರೆ ಸರಶ್ರೀಕಾಂತೆ ಕಣ್ಗೊಪ್ಪಿದಳ್ ॥೧೦೧॥

ನೆಱೆ ಜಳಕೇಳಿಯಾಡಿ ಪೊಱಮಟ್ಟ ವನೇಚರಿಯರ್ಕಳೆಂಬಿನಂ ।
ತುಱುಗಿರೆ ತೀರದೊಳ್ ನವತಮಾಳಲತಾವಳಿಕುಬ್ಜಷಂಡದೊಳ್ ॥
ಪೊಱಮಡದಿರ್ದವಾಕೆಗಳ ಕಣ್ಮಲರುಂ ಮೊಲೆವಿಂಡುಮೆಂಬಿನಂ ।
ಮಿಱುಗಿದುವೊಮ್ಮೆಯುಂ ಪೊಳೆವ ಮೀಂಗುಲಮುಂ ಪೊಣರ್ವಕ್ಕಿಯೊ
[ಕ್ಕಲುಂ ॥೧೦೨॥

ಹರಿಯ ನಳನಾಭಿನಳಿನಂ ।
ವಿರಂಚಿಯುಂ ಪಡೆದುದರ್ಕೆ ಪುರುಡಿಸಿ ತಾನಾ ॥
ಸರಿಯನೆ ಪಡೆದವೊಲೆಸೆದುದು ।
ಸರೋವರಾವರ್ತನಳಿನಮೊಂದಳಿಗರ್ಭಂ ॥೧೦೩॥

ತರುಣಬಿಸಸದನಮಬ್ಜಾ ।
ಕರಕರಿ ಮೇಗೊಟ್ಟುಕೊಂಡುದದು ನೀರ್ವೂವಂ ॥
ಸರಸೀರುಹಪತ್ರಕರ್ಣಂ ।
ತರಂಗತರಮುಚ್ಯಮಾನಶೀಕರನಿಕರಂ ॥೧೦೪॥

ವನರುಹಸಹಸ್ರನೇತ್ರನ ।
ನನಿಮಿಷಸೇವಿತದಿನಾಸರೋವರಸುರನಾ ॥
ಘನನಾಂತ ಕರಿವೊಲೆಸೆದುದು ।
ವನಕರಿಯುನ್ಮಗ್ನಪೂರ್ವಕಾಯಂ ಕ್ಷಣದಿಂ ॥೧೦೫॥

ಸೊಗಯಿಸಿದುದು ಕನಕಾಬ್ಜದ ।
ಮುಗುಳ್ನಗೆಯಿಂ ಕರಿಯ ಬಿಳಿಯ ಕೆಂಪಿನ ನೀರ್ವೂ ॥
ವುಗಳಿಂದೆ ಪಂಚರತ್ನದ ।
ಪಗವಂ ತೆಗೆದಂತೆ ಸರಸಿ ಸರಸಿಜದೆಲೆಯಿಂ ॥೧೦೬॥

ನೀಲದ ಪೊಳೆವ ಪರಲ್ಗಳ |
ಕೀಲಣೆಯಿಂ ಜಲಕನಾದ ಜಲದೇವಿಯ ಪೊ ||
ನ್ನೋಲೆಯೆನಿಸಿದುದು ಪತ್ರಕ |
ಪೋಲಗತಂ ಕನಕನಳಿನವೊಂದಳಿನಳಿನಂ ||೧೦೭||

ಕೊಳದೊಳೆ ಮೃಗರೆದ...ವ್ರೋ |
ಕುಳವಿರ್ಪ್ಪೊಲಿಂದು ಕೂಡಿದುದು ಕುಮುದಿನಿಯೊಳ್ ||
ಜಳರುಹಮಂ ಕಡಿದುದು ಸೈ |
ವಳತರುಪ್ರಂಕು ಕುಟುಕುಗೊಂಡುದೊಂದು ಮರಾಳಂ ||೧೦೮||

ಗಲ್ಗಲನೆ ಕರಗುವಾಲಿಯ |
ಕಲ್ಗಳವಲ್ ಕರಗಿ ಪರೆವ ಜೊನ್ನದ ತಿಂಗ ||
ಳ್ಗಲ್ಗಳೊಸರದೆನೆ ಕಳದೈ |
ಕಿಲ್ಗೊಳನೆನೆ ಕುಳಿರ್ದಾಜಳಂ ತಿಳಿಗೊಳದಾ ||೧೦೯||

ಊದೆ ಕರಿಗಳ್ ಸರಸ್ಸ್ವ* |
ಚ್ಛೋದಕಮಂ ನೆತ್ತಿಗಡರ್ದ ಪನಿಗಳೆ ಪೊಸಮು ||
ತ್ತಾದುವದಲ್ಲದೊಡಡವಿಯು |
ವೇದಂಡದ ನೆತ್ತಿಯಲ್ಲಿ ಮುತ್ತುಗಳೊಳವೆ ||೧೧೦||

ತರುಣತರಂಗೋತ್ಥಿತಸೀ |
ಕರಹಿಮದಿಂ ಸೇವೆಗೊಂಡವ್ರೋಲ್ಪ್ರಕ್ಕ ಸರೋ ||
ಜರಜಃಪರಗುಂದಿತವೆನ |
ಲರಳದುದದು ಕುಮುದಮುಕುಳಕೋಟರಕುಟಿಯೊಳ್ ||೧೧೧||

ವ|| ಆಕುಸುಮಾರಣ್ಯಮೆಂಬ ಕಮಳಾಕರಮಂ ಕುಮಾರಂ ಪೊಕ್ಕು ಪ್ರಕ್ಷಾಳಿತಪಾದಮುಖಕಮಳಂ ಪೀತಶೀತಜಳನುಮಾಗಿ ನೀರಜರಜದ ನೀರ್ಗುಂಕುಮಮಂ ತೊಡೆದು ತಡಿಯೊಳಿಕ್ಕಿರ್ದ ಗಜಮದದಿಂ ತಿಳಕವಿಕ್ಕಿ ಸೆಂದುರದ ಬಿರಿಮುಗುಳಂ ತುಱುಂಬಿ ಕಮಳಪತ್ರಮಂ ರಾಗವಟ್ಟೆಕಟ್ಟಿ ಕಾವುವೆರಸಿರ್ದ ಕರಿಯ ನೆಯ್ದಲನಂಕುಶಂಮಾಡಿ ಪಿಡಿದು ವಿನೋದದಿನಾನೆವಸದನಂಗೊಂಡು ಆಕೊಳನ ತಡಿಯೊಳ್ ಸಮವಸರಣದಶೋಕೆಯಂತಿರ್ದ

ಅಶೋಕೆಯ ನೆೞಲೊಳ್ ಬೆಸದ ಮೆಯ್ಯಂ ಮುಱಿದು ಕಾಯ್ತೊಱಗಿದ ಬೞಿ
ಕಂಗಂ ಮಲಂಗಿ ಕುಮಾರಂ ಕುಳ್ಳಿರ್ದನನ್ನೆಗಂ—

ಕೊನೆಗೊಂಬಲ್ತು ಬಿಸಾಂಕುರಂ ಸಿರಮದಲ್ತುತ್ಕಚ್ಛಪಂ ನೇತ್ರಮು |
ಲ್ತಸಿಮೇಷಂ ಮದಮಲ್ತು ವಾರಿ ಕಿವಿಯಲ್ತಬ್ಜಚ್ಛದಂ ಪದ್ಮಕಾ ||
ನನಮಲ್ತಂಬುಜವನಾನೆಯಲ್ತು ಸರದೊಳ್ ಲೀಲಾಲಸಂ ಪುಟ್ಟಿದ |
ತ್ತನೆ ಮೂಡಿತ್ತವಗಾಹಮಿರ್ದು ಕೊಳದಿಂ ಕಾಯ್ದೊಂದು ದಂತಾವಳಂ ||

ತೋರದೆರೆ ಮುಱಿಯೆ ಮೂಡುವ |
ವಾರಣಮಂ ಪೋಲ್ತುದಡಸಿ ನಿಡುಗೆಯ್ಯಂ ಭಂ ||
ಡಾರಿಸಿ ಮೊಡರಿದ ತಳಿಯುಂ |
ಬಾರೆಯುಮಂ ಮುರಿಯೆ ಪೊಯ್ದು ಪೊಱಮಡುವಿಭಮಂ||೧೧೩

ವ|| ಅಂತು ಮಕರಾಕರದಿಂ ಪೊಱಮಡುವ ಕರಿ ಮಕರದಂತೆ ಕಮಳಾಕರದಿಂ ಪೊಱಮಟ್ಟು ದಡಂಗೊಳ್ವಲ್ಲಿ ಕಿೞ್ತು ಕೆಡೆದು ಕಾಲೊಳ್ತೊಡರ್ದು ಬಂದ ಬಿಸವಲ್ಲಿಗಳ್ ನೆಲನನೊಡೆದು ನಾಗಲೋಕಮಂ ಪುಗವೇಡೆಂದು ಗರುಡನ ಕಾಲಂ ಪತ್ತಿ ಬಿಡದ ಪಾವುಗಳಂತಿರ್ದುವದಱ ಗಾಳಗೆ ವನಗಜಘಟೆಗಳೆಲ್ಲಂ ಘನಘಟೆಗಳಂತಿರೋಡಿದೋಡಿದುವು | ಮೇಲ್ವಾಯ್ದ ಸಿಂಗಂಗಳೆಲ್ಲಮಾದಿಯ ಪಂದಿಯ ಪೇಱಿದ ಗ್ರಾಮಸಿಂಹಂಗಳಂತಿರ್ದುವು | ಪೆಳ್ಱಿ ಬೆಂಗುಡುವ ಬಟ್ಟಾನೆಗಳಂ ಮಣಿಯೇಱಿಂದಿಱಿದೆತ್ತಿದಲ್ಲಿ ಮದದ ಮಸಿಯಿಂ ಮಳೀಮಸಮಾದ ಮುಸುಂಬು ಮುಸುವಿನ ಮುಸುಂಬಿನಂತೆ ತ್ತಿರೆ ಕಡಲಂ ಕಟ್ಟಲೆಂದು ಬೆಟ್ಟಮಂ ಕಿೞ್ತೆತ್ತಿದ ಸುಗ್ರೀವನಂತಿರ್ದುವು | ವನಮಂ ಪೊಕ್ಕು ಮರಮುಸಕದಿಂ ಮರವಾಯ್ದು ಮರದುಱುಗಲಂ ಕಿೞ್ತೀಡಾಡುವಲ್ಲಿ ದಶಗ್ರೀವನ ವನಮಂ ಕಿೞ್ತೀಡಾಡುವಣುಮನಂತಿರ್ದುದು | ಪಲ್ಲವಮನುಡಿದು ಸೂಸುವಲ್ಲಿ ದೆಸೆಯಾನೆಗಳೆಗಕ್ಕೆಪುಲ್ಲಂ ಸೂಸುವಂತಿರ್ದುದು| ಅಂತು ಮಾಮಸಮಸಗಿ ಬಿಸಟಂಬರಿವ ಮದಕರಿಯುಂ ಕುಮಾರಂ ಕಂಡೀಕಟ್ಟಾನೆಯನೇಱಿದೊಡಾನೆಯಾನೆವಿನ್ನಾಣಿಯೆಂದು ಸಿರಂದೋಱಿದ ಸರದ ಬೞಿಯನೆ ಗಳೆವೞಿಯ ಪಾವಿನಂತೆ ಮೊಗದ ಬಿಗಿಪುಂ ಕಣ್ಣ ಬೀಡುಂ ಬೆರಸು ಗಾಳಗೆ ಗಱಿಮೂಡಿದಂತೆ ಗಿಱ್ರನೆಯ ಪರ್ಣೆಯುಂ ಚಪ್ಪರಿಸಿ ಪಿಡಿದಾಸೆ

ಗೊಟ್ಟು ಪುಷ್ಕರಣದೊಳ್ ಕೆಂದಳಂ ಕೆಂದಳರಂತೆ ತೊಳಗೆ ದೀರ್ಘಾಂಗುಳಯಿಂ ಪಿಡಿದು ಗರುಡನೊಪ್ಪಮುಂ ಗಾಳಿಯ ನುಸುಳ್ವುಮಂ ಕೈಕೊಂಡು ಕೋಡಾಡಿ ಮನಮೆ ಮಾನಸನಾದಂತೆ ಪರಿದು ಪರಿಯೊಳ್ ಬಿಳಲ್ದಿ ಕುಡೆಂಬ ತಿಕ್ಕುಮೊಳಗಿಂ ಜೆಂಗೆಯಿಂ(?) ಎಂಬಂತೆ ಬೂತಾಟನಂಗೆಯ್ದು ಗಜದ ಬೆಂಗೆ ಸಿಂಗದಂತೆ ಲಂಘಿಸಿಯಾನೆಯ ಪೊರಜೆಯಾಗೆ ಪೂರ್ವಾಸನದೊಳ್ ಪದುಳಮಿರ್ದಮುಬ್ಬು ಬಾಪ್ಪುಬಾಪ್ಪೆಂದು ಕುಂಭಸ್ಥಳಮನಾಸ್ಫಾಳಿಸಿ ಬೀರಸಿರಿಯ ಗುರುಕುಚಮನುಗುರೊಳುಗಿದು ತೊಡಗಂಗಳ್ ರೊಡಗವಾಗೆ ಹರಿಣಂಗಳ್ ಹರಿಕಾಱಂಗೆ ಪರ್ವತಂಗಳ್ ಪ್ರತಿಗಜಂಗಳಾಗುರುಳ್ ನೂಂಕಿಯುಂ ಸುರುಳ್ ನೂಂಕಿಯುಂ ಅಡ್ಡವಿಕ್ಕಿಯುಂ ಪೊಕ್ಕು ಪರಿಯಿಸಿಯುಂ ಅಂತಪ್ಪ ಕಟ್ಟಾನೆಯುಂ ಕೆಪ್ಪವಳವಡಿಸುವಂತೆ ಮಡದೊಳಮುಂಗುಟದೊಳಳವಡಿಸಿದ ರಾಜಪುತ್ರನ ಬಲ್ಪಿಂಗಂ ಬಿನ್ನಣಕ್ಕಂ ಬೆಕ್ಕಸಂಬಟ್ಟು—

　　ಅಪ್ರಸ್ತಾವದೊಳರ್ದರ ।
ತಿಪ್ರೌಢರ್ಖಚರರುಚಿರರುಚಿದಿವಿಜಧನು ॥
ರ್ಧಪ್ರಮಣಿಮಕುಟವಿಕಟಸ
ಟುಪ್ರಭೆಯಿಂ ಭೂಪಭಾನುಗರ್ಘ್ಯಮನಿತ್ತರ್ ॥೧೧೪॥

　　ಮದಪುರುಷರಗಿದು ರದನಿಯ ।
ಮದವಿಱಿದಱಿದಪುದೆಂದೆನೆ ಮುಯ್ಯಿಕ್ಕಿದವೊಲ್ ॥
ವಿದಳಿತವದನಪಯೋಜರ್ ।
ಪದೆದಚಿರಂ ಖಚರರೀರ್ವರವನತರಾದರ್ ॥೧೧೫॥

ವ॥ ಆಗಿ ಕೆಯ್ಗಳಂ ಮುಗಿದು ದೇವ ಬಿನ್ನಪಮಿಾಯಾನೆಯನೇಱುವೆನೆಂಬನ ನಸುನೆತ್ತಿಗೆಱಗು ಮುಸಿವನ ಮುನಿಗುಂ ಪರಿಯಿಸುವೆನೆಂಬನ ಪಸಿಪ್ಪರೆಗುಯಿಾಯುತಿವರ್ತಿಯುಂ ವಶವರ್ತಿಮಾಡಲುಮಂಕುಶಮಿಲ್ಲದಂಕಿಸಲುಂ ನಿನಗೆ ತೀರ್ಪುದು ನಿನಗಲ್ಲದ ದೇವನುಮೋತಱ ದೇವನೆಂದು ಗಳಗರ್ಜರಂತೆ ಪೊಗಟ್ದು ಬೇಗವಿಾಗಜದಿಮಿಱಿದೆಮ್ಮಧಿವಾಸನಾದೇಶಭಾಗಮನಿಱಿಪುವುದೆನೆ ವಸುದೇವನಿಱಿದು ನೀಮಾರ್ಗವೇನೆಂಬುದೆನೆ ವಿದ್ಯಾಧರರಿಂತೆಂದರ್—

ಮಾಣಿಸಿ ನಿರ್ದಯಂ ಜಿನಪತಿಸ್ನಪನೋತ್ಸವಮಂಗಳಾನಕ |
ಕ್ವಾಣಮದೊರ್ಮೆಯುಂ ಜಿನಮಹಾಮಹಮಂ ನಲವಿಂದೆ ನೋೞ್ಪ ಕ ‖
ಣ್ಣ ಣೆಮೆಯಿಕ್ಕಲೀಯದಿರೆ ತಾನೆ ನಗೇಂದ್ರದ ದಕ್ಷಿಣೋತ್ತರ |
ಶ್ರೇಣಿಗೆ ತಂದು ಮುಂದಿಡುವುದಾರುಹತಂ ಸುರಲೋಕಶೋಭೆಯಂ ‖೧೧೬‖

ವ॥ ಆವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯ ನಿಳಿಂಪಕಿನ್ನರಗೀತಮೆಂಬ ಪೊೞಲನಾಳ್ವಂ ಮಹಾಭಾಗನಶನಿವೇಗನೆಂಬನಂಬರಚರನಾತನ ಮಗಳ್ ಪರಪುರುಷಸುಖಶಾಲ್ಮಲಿ ಶಾಲ್ಮಲಿಯೆಂಬಳಾಕೆಗನುರೂಪನಪ್ಪ ಪುರುಷನಂ ಖಚರಕುಲದೊಳಂ ಭೂಚರಕುಲದೊಳಂ ಕಾಣದೆ ಖಿನ್ನನಾಗಿ ಪುರ್ದುಮಾದೇಶಪುರುಷನುಮಾಮದಗಜಮಂ ನೇೞ್ದನೆ ನಿಜಾತ್ಮಜೆಗೆ ಮದವನಿಗನೆಂದೊಡಾನಂದದಿನೆಮ್ಮಾಳ್ದನೆಮ್ಮರ್ಗಾರುಮನೀ ಕರಿಪತಿಗೆ ಕಾಪಂ ಪೇೞ್ದನಂದಿಂದಿತ್ತಲೀಯಡವಿಯಲಡಿಯಿಡುಕದೆ ಮೃಗಂಗಳಾಗಿರ್ದೆವೆಂದೆಮ್ಮ ಪುಣ್ಯಂ ಬರ್ಪಂತೆ ಬಂದು ಸಾಹಸಪುರುಷನುಮಾದೇಶಪುರುಷನುಮಾಗೆಯೆಮ್ಮ ತಪಮುಂ ಶಾಲ್ಮಲಿದತ್ತೆಯ ಕಾಮತಾಪಮುಂ ಸಫಲಮಾದುದೆಂದು—

ಇದು ದಿವ್ಯಶ್ರೀವಿಮಾನಂ ಮನವೊಸೆದಿದನೀನೇಱು ಬಾ ಪೋಪ [ಮಾ ತೋ |
ಪುರ್ಗೆ ಕಂಡೈ ಖಂಡಿತಾರಿಶ್ಮಯಜಯವಿಜಯಾರ್ಧಾಚಲಂ ನಿನ್ನನೆಯ್ತಂ ‖
ಬಿದಿಗೊರ್ಳ್ವಂದಿತ್ತ ಬರ್ಪುಜ್ಜ್ವಳಜಳಧರದಿಂ ನಿನ್ನ ಬರ್ಪುತ್ಸವಕ್ಕೆ |
ತ್ರಿದವ್ರೊಲ್ ಕೂಟಾಗ್ರದೊಳ್ನಿರ್ಝರಪಟಳಪತಾಕಾಳಿಯಿಂಲೀಲೆಯಿಂದಂ ‖

ಆನೆಯನೇಱ್ದೆಯೋಱು ವಿ |
ಮಾನಮನೇಱ್ದಪಯಚಳಪತಿಚೂಳಿಕೆಯಂ ‖
ತಾನೆ ಕುಡುಗುಂ ಮಹೋನ್ನತ |
ಮಾನೋನ್ನತಿಯಂ ನತೋನ್ನತಾರೋಹಣಮಂ ‖೧೧೭‖

ವ॥ ಎಂದಾಖಚರಯುಗಳಮವಟ್ಟೈಸಿದ ಮಣಿಮಯ ವಿಮಾನಮನೇಱ್—

ಪವನಪ್ರೇಂಖಾನಳಪ್ರೋಚ್ಛಳತಮರಕತಸ್ಥೂಲರತ್ನಾವಳೀಪ |
ಲ್ಲವಮಾಳಾತೋರಣಂಗಳ್ಪಸುರ್ಗುದುರೆಗಳಂ ಪೂಡಿದಂತೊಪ್ಪೆ ಕಯ್ಯೊಳ್ ‖

ನವಲೀಲಾನೀರಜಂ ರಂಜಿಸೆ ನಿಜರಥಮಂ ಬಂದು ಮಾರ್ತಂಡನೊಲ್ದೀ |
ಬವಪೊಲ್ತಾ ನೇಱಿದಂ ಕಾಂಚನಖಗರಥಮಂ ಮೂರ್ತಿಮಾರ್ತಂಡದೇವಂ ||

— ಗದ್ಯ —

ಇದು ಮೃದುಪದಬಂಧಬಂಧುರ ಸರಸ್ವತೀಸೌಭಾಗ್ಯವ್ಯಂಗಭಂಗಿನಿಧಾನದೀಪವರ್ತಿ
ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರ ಕೃತಮುಂ
ಶ್ರೀಮತ್ಪ್ರತಾಪಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾಧಿತ
ಮಹಾಪ್ರದಾನ ಸೆಜ್ಜೆವೆಗ್ಗಡೆ ಪದ್ಮನಾಭದೇವ ಕಾರಿತಮುಮಪ್ಪ

## ನೇಮಿನಾಥ ಪುರಾಣದೊಳ್

ಪಂಚಮಾಶ್ವಾಸಂ ಸಮಾಪ್ತಂ.

# ಷಷ್ಠಾಶ್ವಾಸಂ

ಶ್ರೀಪತಿಪಾದಂ ಗಗನಾ ।
ಕೂಪಾರದ ಮುತ್ತುಬೆಟ್ಟಮಾದವೊಲೆಸೆದಿ ॥
ಪೂರ್ವಪರ್ವತಕ್ಕೆ ಕೃತಿಕುಳ ।
ದೀಪಂ ಕವಿತಾವಸಂತವಸಿತಾಕಾಂತಂ ॥೧॥

ತುಱುಗಿದ ಕಡಲಂ ಸೂಸುವ ।
ಸಿಱಿಮುಗಿಲೊಳ್ ಪರಿವ ಗಗನಯಾನದೊಳರಸಂ ॥
ನೆಱೆ ಪೋಲ್ತಂ ಸ್ತ್ರೀರತ್ನಮ ।
ಸಱಸಲ್ ತಾಂ ಪಾಱೆ ಪೋಪ ಸಾಯಾಂತ್ರಿಕಮಂ ॥೨॥

ಕುಲಗಿರಿಸಂಕುಳಂ ಸುಕವಿಶೇಖರನುನ್ನತ ಗಂಡುಲಜ್ಜೆಯು ।
ಗ್ಗಲಿಸೆ ಕುನುಂಗುವಂತೆಸೆದು ತೋಱಿದುವಂದುಮಿಸುರ್ಪ ಸಂ ॥
ಕುಲಮನೆ ಕೂಡೆ ಕೊಂಕಿ ಪರಿಗೊಳ್ವ ನದೀನದಜಾಳದಿಂ ಮಹೀ ।
ವಲಮಹಿಲೋಕದಂತೆಸೆದುದಾಜಗತೀಪತಿಗೂರ್ಧ್ವಯಾನದೊಳ್ ॥೩॥

ವ॥ ಅಂತುಮಲ್ಲದೆ

ಸಾಗರಮೊಂದು ಕಂಕಣದಿನೂರ್ವರೆ ಕಾವಲಿಯಿಂ ಕುಳಾದ್ರಿಗಳ್ ।
ಪಾಗಲ ಕಾಯ್ಗಳಂ ಮದಗಜಾವಳಿ ಪಂದಿಗಳಂ ನದೀವ್ರಜಂ ॥
ಭೋಗಿಗಳಂ ತಡಾಗತತಿ ಕಣ್ಗೊಳಗುನ್ನತಪಾದಪೋತ್ಕರಂ ।
ಶ್ರೀಗಿರಿಯಿಂ ಕರಂ ಕಿಱಿಯವಾದುವು ಕಣ್ಗೆ ಗುಣಾವಲೋಕನಾ ॥೪॥

॥ ಮಾಲಿನೀವೃತ್ತಂ ॥

ಪರಿಗತಬಹುವರ್ಣಂ ತತ್ಸಮೀಭೂತಪದ್ಮಾ ।
ಕರಸಲಿಲದಚಲಾರಣ್ಯನಿಮ್ನೋನ್ನತ ಶ್ರೀ ॥
ಕರಮೆಸೆದುದು ಜಂಬೂದ್ವೀಪಮಾದಂ ಬೆಡಂಗಂ ।
ಬೆರಸಿ ಬರೆದ ಜಂಬೂದ್ವೀಪದಂತೀಕ್ಷಣೀಯಂ ॥೫॥

ವ॥ ಅಂತು ಕಿನ್ನರಗೀತಕ್ಕೆ ಪೋಗಿ ಕಾಲ್ಮಲಿದತ್ತೆಯೊಳ್ಮದುವೆನಿಲೆ—

ತುದಿ ಮೊದಲಪ್ಪುದಿಂಪಡರೆ ಕೂಡುವ ಕೂಟದೊಳೀಕ್ಷಣಕ್ಕೆ ರೂ ।
ಪದೆ ಪೊಸತಪ್ಪುದೊಲ್ದಳಸಿ ನೋಡುವ ನೋಟದೊಳೀನನಿತ್ತನಿ ॥
ತ್ತುದೆ ಬೆಳೆಯುಪ್ಪುದೆನ್ನಸುಗೆ ಬೇಡುವ ಬೇಟದೊಳೆನ್ನ ನಲ್ಲನಂ ।
ಮದನವಿಕಾರಸಾರಸುಖದಿಂದಮೆ ಮಾಡದೆ ಮಾಣನಬ್ಜಜಂ ॥೬॥

ಬಾಯ್ವಸವೋಡ್ತುತಡರೆ ಚುಂಬಿಸೆಯುಂ ಬಗೆದಂತು ತಣಿತ್ತೊಡಂ
ಮೆಯ್ವಸವೋಡವಪ್ಪ ಗಡ ಕಣ್ವಸವೋಡದಿದೆಂತು ನೋಡೆಯುಂ ॥
ಕೆಯ್ವಸದಂತವಂ ನೆರೆದೊಡಂ ಮನವಾಱದದರ್ಕೆ ಸಕ್ತಿಯಿಂ ।
ಸಯ್ವಱಗಾದ ಮೆಯ್ವನಿರ್ಗಳಂಬವೊಲಂಗನೆ ಕೂರ್ತು ಕೂಡಿದಳ್ ॥೭॥

ಸುರಯಿಸು ಮುಗುಳ್ಗಳೊಳುರುವಱಿದಳಿಪತಿ ।
ಬಿರಯಿಸೆ ಬೆರಸುವ ಬಸದನ 'ಜೆಸಸಿರೆ' ॥
ಸುರತಸುರಭಿರಸಪರಿಮಳಮಿಱಿತರೆ
ಬೆರಸಿದನರಮಗಸ್ಮರಸಿಯೊಳಸೆದಿರೆ ॥೮॥

ವ॥ ಅಂತು ಬಂದ ಬಸಂತದೊಳ್ ವನಜಲಕೇಳಿಯನಾಡಿ ಬಂದು ಬೞಲ್ದುದುಮಲ್ಲದೆ ಸುರತಶ್ರಾಂತರಾಗಿ ಶಾಲ್ಮಲಿದತ್ತೆಯುಂ ವಸುದೇವನುಂ ದೇವದಂಪತಿಯಂತೆ ಸೌಧಾಗ್ರತಲದೊಳ್ 'ತಳ್ತು' ಪವಡಿಸುತ್ತುಮಿರೆ:—

ಬಿಡಿಸಿ ಭುಜಂಗಿಯ ತಳ್ಪಂ ।
ಪಿಡಿದುಯ್ವಂತೆಳೆಯ ಮುಳಿಯುಜಾತಮನಳಿಪಿಂ ॥
ತೊಡರ್ದಾಖಚರಿಯ ತಳ್ಪಂ ।
ಬಿಡಿಸಿ ನೃಪಾತ್ಮಜನನೊರ್ವನುಯ್ದಂ ಖಚರಂ ॥೯॥

ವ॥ ಆಗಳಾಶಾಲ್ಮಲಿದತ್ತೆಯುಮೆಚ್ಚತ್ತು ಚಂದನಗಾತ್ರಿಯುಂ ಬೆನ್ನಟ್ಟುವ ಭುಜಂಗಿಯಂತೆ

ಬಕ್ಕ ನೆಗಂಗಿಸಿಂ ನೂಲೆಯ ಗಳಸಿ ಗಂಡುಡೆಯುಟ್ಟು ಸಜ್ಜಗಂ ।
ಪಿಕ್ಕ ಬೞ್ವ ಬಿಲ್ಲಿಣಿಬನೊತ್ತಿದೆಱಂಕೆವೊಲೆತ್ತಿಕೊಂಡವೊಲ್ ॥
ಪಕ್ಕದ ಬಾಳುಮತ್ತಪರಮುಂ ಪೆಳೆಯುತ್ತಿರೆ ಪಱದಳ್ ನಭೋ
ಗ್ರಕ್ಕತಿವೇಗದಿಂ ಖಚರಕಾಮಿಸಿ ಕಾಮನ ಪೀರಲಕ್ಷ್ಮಿವೋಲ್ ॥೧೦॥

ಪಾ— 1. ಜೆಸಸಿರೆ. 2. ಸೊ. 3. ಪಳ್ತು.

ಅತ್ತಪರಂ ಸಹಸ್ರಕಿರಣಂ ಪೊಣರ್ವಕ್ಕಿಯನಪ್ಪಿದಂತೆ ಪೊ ।
ನ್ನತ್ತಪರಂ ತಳತ್ತಳಿಸೆ ಪೆರ್ವೊಲೆಯೊಳ್ ಪೊಳೆಪಿಂ ತೊಡಂಕೆ ಕ ।।
ಣ್ಣತ್ತಿಗೆ ಗೊಂಬಿನೊಳ್ ನಲಿದು ನರ್ತಿಸುವೊಂದೆಳಮಿಂಚೆನಂತೆ ಮಿಂ ।
ಚುತ್ತಿರೆ ತೋಳ ಬಾಳನೊಲೆಯುತ್ತುಮೆ ಶಾಲ್ಮಲಿದತ್ತೆ ತೂಗಿದಳ್ ।। ೧೧ ।।

ವ।। ಅಂತು ಪಾಱಿ ಪೋಗಿ ಕಿಱಿದಂತರದೊಳ್ ಕುಮಾರನಂ ಕೌಂಕುಳೊಳವುಂಕಿಕೊಂಡು ಪೋಪ ಖಚರನಂ ಕಂಡು ಕಡುಮುಳಿದೆಲೆಲೆ ಸತ್ತೆಯಿನ್ನೆತ್ತ ಪೋದಪೆಯೆಂದು ಮಧುಮತ್ತಕೋಕಿಲಕುಮಾರಿಯಂತೆ ಖಚರಕುಮಾರಿ ಗಜಱಿ ಗರ್ಜನಂಗೆಯ್ಯು—

ಬಿಡು ಬಿಡು ಮನ್ಮನಃಪ್ರಿಯನನಲ್ಲದೊಡಸ್ಮೆನುತಾಕೆ ಖಡ್ಗಮಂ
ಜಡಿದೊಡನಾಲಿಯುಂ ಜಲಮುಮೊರ್ಕುವಿನಂ ಶತಖಂಡಮಪ್ಪಿನಂ ।।
ಸಿಡಿಲೆಳಮಿಂಚು ನುಚ್ಚುನುಱಿಯಪ್ಪಿನೆಗಂ ಕಡಿಖಂಡಮಪ್ಪಿನಂ ।
ಪೊಡೆವಳದೊಂದು ನೀಲಘನಮಂ ಪೊಡೆವಂತಿರೆ ಮತ್ತದಂತಿಯಂ ।। ೧೨ ।।

ಸೋಗೆಯ ಕಲರುತಿಗಳ್ಕದ
ನಾಗರವೊಲ್ ಗಜಱುವವಳ ದನಿಗಳ್ಕಿ ಖಗಂ ।
ಪೋಗಲ್ ಪಡೆಯದೆ ಖಚರಿಯ ।
ಮೇಗವನೀಡಾಡಿ ಪೋದನರಸರಮಗನಂ ।। ೧೩ ।।

ವ।। ಈಡಾಡೆ ಬೀೞ್ವ ಬಾಲಭೂಪಾಲಚಂದ್ರನಂ ಪೆರ್ವೊಲೆಯೊಳಾಂತು ಪಿಡಿದು 'ಪುಲಕಮಂ' ಕೀಲಿಸಿಕೊಂಡು ಕುಸುಮಸ್ತಬಕಮಂ ಕುಂಭಸ್ಥಳದೊಳೊಟ್ಟಿಕೊಂಡು ಕಾಮುಕರಿಣಿಯಂತೆ ಪೋಪ ಶಾಲ್ಮಲಿದತ್ತೆಯನೊಂದು ದಿವ್ಯಧ್ವನಿ—

ಎಲೆ ಖಚರಿ ಕುಮಾರಕನಂ ।
ನೆಲಕಿಱಿಪಳಿಪಿಂದಮುಯ್ಯದಿರು ಬಂದೀಭೂ ।
ತಲಮಂ ತೊಱಲ್ದು ನಿಮ್ಮಯ ।
ಕುಲಪತಿಯ ಮನೋರಥಕ್ಕೆ ಸಾರಥಿಯಕ್ಕುಂ ।। ೧೪ ।।

ವ।। ಎನೆ ನಾಲ್ಕುಂ ದೆಸೆಯುಮಂ ನೋಡಿಯಿದು ದೇವತಾವಚನಮಲಂಘ್ಯಮೆಂದು ವಸುದೇವನಂ ವಿದ್ಯಾಧರಿ ಪರ್ಣಲಘುವಿದ್ಯೆಯ ಕೆಯ್ಯೊಳ್

ಪಾ — 1. ಪುಲಕದಿಂ.

ಕೊಟ್ಟೊಡದು ಚಂಪಾಪುರದ ಪೊರವೊೞಲ ಪದ್ಮಷಂಡದ ನಡುವಣ ಪುಳಿನ ತಲದೊಳಿರಿಸಿ ಪೋಗೆ, ಬೞಿಯಮಿಸಿಸಾನುಂ ಬೇಗಕ್ಕೆ ನಿಶಾವಸಾನವಾಗೆ, ಕೊಳರ್ವಕ್ಕಿಗಳ ಕಳಕಳಕ್ಕೆ ಬೆರ್ಚಿದಂತೆಚ್ಚತ್ತು ಬೆಕ್ಕಸಂಬಟ್ಟದೇನೆಂದು ನಿರವಿಸಿ, ನೀರಜವನದ ರಮಣೀಯತೆಗೆ ಮನಮೊಳದುವರಿಯೆ, ಮಜ್ಜನಂ ಬೊಕ್ಕು ಜಿನಪತಿಯಂ ಚಿತ್ತಚೈತ್ಯಾಲಯದೊಳಳಂಕಾರನಂ ಕಾಣಲುತ್ಸುಕ ನಾಗಿ, ಮೋಹಮೆಂಬ ಮುೞಿವಸ್ತ್ರಮಂ ಕಳೆದು, ಶುದ್ಧಧ್ಯಾನಮೆಂಬ ಸುಧಾ ಸಾರದಿಂ ಸ್ನಪನಂಗೆಯ್ದು, ಸತ್ಯಸಲಿಲದಿನಾರಾಧಿಸಿ, ಸಹಜಾನಂದಚಂದನದಿನ ರ್ಚಿಸಿ, ನಿರೀಕ್ಷತಾಕ್ಷತೆಗಳಿಂದರ್ಚಿಸಿ, ಗೀತಸಿತವಾಕ್ಪುಷ್ಪದಿಂ ಪೂಜಿಸಿ, ಪರ ಮಭಕ್ತಿಪರಾನ್ನಮಂ ಮುಂದಿಟ್ಟು, ವಿಮಲಜ್ಞಾನಮಣಿದೀಪದಿಂ ಸಿವಾಳಿಸಿ, ದಶಧರ್ಮದಶಾಂಗಧೂಪಮಂ ಸಮರ್ಪಿಸಿ ಪುಣ್ಯಫಲನಿಚಯದಿನರ್ಚನೆಗೆ ಯ್ದು, ಕೃತಕೃತ್ಯನಾಗಿ ಕಣ್ದೆಱೆದು ಕೆಯ್ಯೆತ್ತಿಕೊಂಡು ಕೊಳದ ತಡಿಯೊಳ್ ಕಾಲ್ಗೊಗದೊಳ್ವ ಮಾನಸರಂ ಸರೋವರಮಂ ಪಾಯ್ದು ಪೊಱಿಯಾವು ದೆನೆ: ಕಳಕಳಿಸಿ ನಗುತ್ತುಮವರೀಯುಣ್ಣನಾಗಸದಿನೊಡೆದು ಬಿದ್ದಂತೆ ನುಡಿದ ಪನೆಂದೊಡರಸಂ ಸಿನ್ನ ಮಾತು ಮತ್ತಸಿಸದೆಂದು ಹನುಮನ ಮತದಿಂ ದಾಂಟಿ ಸಂಸಾರಮಂ ದಾಂಟಿದಂ ಸಿದ್ಧಾಲಯಮಂ ಕಾಣ್ಬಂತೆ ವಾಸುಪೂಜ್ಯ ಭಟ್ಟಾರಕರ ನಿರ್ವಾಣಭೂಮಿಯೊಳ್ ವಾಸವಾದೇಶದಿಂ ಘನಪತಿ ಸಮೆದ ಚಿತ್ರಚೈತ್ಯಾಲಯಮಂ ಕಂಡು, ಬಲಗೊಂಡು ಸರ್ವಜ್ಞಬಿಂಬಕಭಿಮುಖ ನಾಗಿ, ಮುಗಿದ ಕೆಯ್ಯಂ ಮಸ್ತಕಕ್ಕೆಯ್ದು

—ಸ್ತುತಿ—

ಸಂಸ್ಕೃತ ಜಯತ್ಯಮಲತಾವಾಸೋ ವಾಸುಪೂಜ್ಯೋ ಜಿನೇಶ್ವರಃ ।
ಯದ್ಬುದ್ಧಿಕಾಮಿನೀ ಮಧ್ಯೇ ತ್ರಿಲೋಕೀ ತ್ರಿವಲೀಯತೇ ॥

ವ॥ ಎಂದಭಿಷ್ಟುತಿಗೆಯ್ದಲ್ಲಿರ್ದ ಬೋಧಸಿಂಧುಭಟ್ಟಾಕರಂ ವಂದಿಸಿ ಧರ್ಮಮಂ ಕೇಳ್ದು ವಿದ್ಯಾಧರಲೋಕದಿಂದಿಲ್ಲಿಗೆ ಬಂದ ವೃತ್ತಾಂತಮಂ ಕೇಳ್ದು ಪೊಡೆಮಟ್ಟು ಬಸದಿಯಿಂ ಪೊಱಮಡಲೊಡನೆ—

ಇದು ವಾಣೀಮತ್ತಹಂಸೀಸ್ವನಮಿದು ಮದನಜ್ಯಾಲತಾಶಿಂಜಿತಂ ಮ।
ತ್ತಿದು ನೃತ್ಯದ್ಘಾರತೀನೂಪುರರುತಿಮಿದು ಪುಷ್ಪಾಯುಧಾಮೋದ'ಮುದ್ಯ'॥

ಪಾ—1. ವಿಕಸಿತ. 2. ದು. 3. ಮಾದ್ಯ.

ಸ್ಮದಭ್ರಂಗೀರಂಜಿತಂ ತಾನೆನೆ ನನೆಗಣೆಯಂ ತೋಱಿ ಬಾದಿಂಪುನುಣ್ಪಿಂ |
ದುದಿರ್ಪಂತಾರಾಜಪುತ್ರಶ್ರುತಿಗತಿಥಿಯದೊಂದಾಯ್ತು ವೀಣಾಪ್ರಸಾದಂ ||

ವ|| ಆವೀಣಾರವಂ ಬಂದ ಬಟ್ಟೆವಿಡಿದು ಪೋಗಿ ಬಸದಿಯೆಂಬುಸಿಯುಳುಟ್ಟ ಪಸಿಯ ನೇತ್ರಮುನಸಕಳಿವಂತಿರ್ದುಪವನದ ನಡುವೆ ಪೂವಿನ ಪುಡಿಯೊಳೊಟ್ಟ ಬೆಟ್ಟದಂತಿರ್ದದೊಂದು ಪೊಂಬಸದಿಯ ಮುತ್ತವಾರಣದ ಮೇಲೆ--

ಅಳಕಾಸಕ್ತೈಕಹಸ್ತಂ ಪ್ರಿಯಶುಕಪರಿಹಾಸಪ್ರಫುಲ್ಲೈಕಗಂಡ |
ಸ್ಥಳಮಾದಾಶಾರ್ಪಿತಂ ಲಕ್ಷಣಮುಚಿತಸಖೀವಾಗ್ವಿತೀರ್ಣೈಕಕರ್ಣಂ ||
ಕಳವೀಣಾಲಿಂಗಿತೈಕಸ್ತನಮೆಸೆದುದು ಕಾಂತಾಜನಂ ರತ್ನಪೀಠಂ |
ಗಳೊಳೇಕೈಕಾಂಗಲೀಲಾಬಲಮನೆ ರತಿನಾಥಂಗೆ ತೋರ್ಪಂದದಿಂದಂ ||

ವ|| ಮುತ್ತವಾಬಸದಿಯೊಳಗೆ ಬಿದಿ ಬಯ್ತು ಭುವನಭಾಗ್ಯದೇವತೆಯಂತಿರ್ದ ಪದ್ಮಾವತಿಯ ಮುಂದೆ ಚಂದ್ರಬಿಂಬಮುಂ ತುಂಬಿ ಮಾಡಿ ಬಿಸತಂತುಶಿಂಜಿನಿಯುಂ ತಂತಿಮಾಡಿ ಇಕ್ಷುಚಾಪದಂಡಮುಂ ದಂಡಿಗೆಮಾಡಿ ಪಂಚಶರಂಗಳಂ ಸಪ್ತಸ್ವರಂಗಳಂ ಮಾಡಿ ಜಿನಪತಿಯುಮನೆನ್ನ ಗಂಡನೊಳ್ ಪಡೆದು ಕುಡುವುದೆಂದು ದೇವಿಯನಾರಾಧಿಸಿ ಬೀಣೆಯಂ ಬಾಜಿಸುವ ರತಿಯಂತಿರ್ದಳನೊರ್ವಳಂ ಸೌಂದರ್ಯಸುಕುಮಾರಿಯಂ ಕುಮಾರಿಯಂ ಕಂಡು ಆಕೆಯ ವೀಣಾವಾದನವೈದಗ್ಧ್ಯಕೆಗಂ ಸಕಲ ತ್ರಿಭುವನಾತಿಶಯರೂಪಾಕೃತಿಗಂ ಕುಮಾರಂ ಮೆಚ್ಚಿ ಮೆಯ್ಮಱೆದು ಕಂಬದ ಮಱೆಯಂ ಸಾರ್ದು ಕೇಳುತ್ತುಮಿರ್ಪುದನಾಕೆಯ ಗುರು ಮನೋಹರನೆಂಬ ಗಂಧರ್ವಾಚಾರ್ಯಂ ಕಂಡು ವಸುದೇವನಂ ದೇವನೆಂದೇ ಬಗೆದು ಕೆಲಕ್ಕೆ ಕರೆದು ಕುಳ್ಳಿರಲ್ಕುಡಿಸಿ ಕುಮಾರನಾಕಾರಮುಂ ನೆರೆಯುಂ ಮಿಳಯುಂ ನೀಡುಂ ಭಾವಿಸಿ ನೋಡಿ--

ಶ್ರೀಯುಂ ತಾಳ್ದಿರ್ದ ವಕ್ಷಂ ಕಿಸುಸೆರೆವರಿದಿರ್ದಕ್ಷಿಯುಗ್ಮಂ ಪಯೋಜ|
ಪ್ರಾಯಂ ತಾಮ್ರಾಧರೋಷ್ಠಂ ವದನಮಿಭಕರಸ್ಪರ್ಧಿಗಳ್ ತೋಳ್ಗಳಂಗ ||
ಚ್ಛಾಯಮುರೋರೇಖಾಭಿರಾಮಂ ಪೊಱಮಡಿ ಮಕರಾಕಾರಮತ್ಯಾಯತಂಗಳ್ |
ದೇಯಂ ಸಾಮಾನ್ಯನಲ್ಲಂ ತ್ರಿಭುವನಜನತಾಮಾನ್ಯಸೀತಂ ವಿನೀತಂ||೧೩||

ವ|| ಎಂದು ಮನದೊಳ್ ಮಚ್ಚುತ್ತುಮಿರ್ಪನ್ನಗಂ ಪನ್ನಗಪೂಜಿತೆ ವೀಣಾವಾದನಪ್ರವೀಣತೆಗೆ ಮೆಚ್ಚಿ ಮನಮೊಸೆದು ಪಸಾಯಮಿತ್ತು ಮಕುಟದ ಮುಕುಳಮನಾಕುಮಾರಿ ಮುಡಿಯೊಳಗಿಟ್ಟು ಒಟ್ಟತ್ತಿಗೆ ಪೊಡಮಟ್ಟು ಬಂದುಪಾಧ್ಯಾಯಂಗೆಱಗಿ ದೇವಿಯೆನಗೆಂದುಮೀಯುವ ವರಪ್ರಸಾದಮನಿಂದು ಗುರುಚರಣಪ್ರಸಾದದಿನಿತ್ತಳೆಂದು ಪ್ರೋಕ್ತಮುಮುಪಾಧ್ಯಾಯನೀಮಹಾನುಭಾಗನ ಬರವುಮೀದೇವತೆಯ ಬರವುಮೀಯಿಂದುವದನೆಗೆಂದು ಸಮನಿಸಿದ ಕಾರಣದಿನೀಕಾರಣಪುರುಷನೀವರಾಂಗನೆಗೆ ವರನಾಗಲ್ವೇೞ್ಕುಮೆಂದು ಮಂದಸ್ಮಿತವದನನಾಗೆ ವಸುದೇವನಜ್ಜಿದೀಕುಮಾರಿಯಾರ ಮಗಳಾರ್ಗೆ ಕುಡಲಿರ್ಪಳೀಪರಮೇಶ್ವರಿಯ ಪರಿಜನಮೇಕೆ ಬಾಳಕರನತ್ತಿದಂತೆ ವೀಣೆಯುಂ ಕೊಂಕುಳೊಳ್ ತೆಕ್ಕೊಂಡಿರ್ಪಳೆಂಬುದುಮವೋಜನೆಂದನೀಕೆಗೀಪುರಮನಾಳ್ವಂ ಚಾರುಚರಿತಂ ಚಾರುದತ್ತನೆಂಬ ಪರದನ ಮಗಳೀವಾಣಿಗೀವೀಣೆಯೊಳ್ ವಾಣಿಯುಂ ಒಲ್ಲಳ್ ವೀಣಾವಾದನದಿಂ ತನ್ನನಾವಂ ಗೆಲ್ವನಾತನನಲ್ಲದೆ ಮದುವೆಯಾಗೆನೆಂದು ಪ್ರತಿಜ್ಞೆಯುಂ ಮಾಡಿವಳಿವಳಯ್ಯನುಂ ರಮ್ಯಮಾಗಿ ತಿಂಗಳ್ಗೊಮ್ಮೆ ವೀಣಾಸ್ವಯಂವರಮುಂ ಮಾಳ್ಪನನ್ನರಪ್ಪ ಕಿನ್ನರರುಮಾಕನ್ನೆಗೆ ಸೋಲ್ತು [1]ಕನ್ನೆಗೆ ವಂದರವಿಯಂತ ಸಿಪ್ತಭರಾಗಿ ಪೋಪರಿಮ ವಿಪಂಚೀಪ್ರಪಂಚಮನೆ ಕುಮಾರನೊಸೆದು ತನ್ನೊಳೀಂತೆಂದಂ:-

ಪರದರ ಸುತೆಗೆಸಿತು ಕಳಾ |
ಪರಿಣತೆಯುಂ ರೂಪುಮಾಗದೆಳಗೊಸಗಿನ ಪೂ ||        ‘ಕನ್ನೆಂತೆಕ
ಮರನಟಿಯೊಳಿರ್ದ ಸಂಪಗೆ |
ಯರಲಿರ್ಪವೊಲಿರ್ದಳೀಕೆಯಾವನ ಮಗಳೋ ||೧೮||

ವ|| ಎಂದು ಮನದೊಡನೆ ಮಾತಾಡುವ ಕುಮಾರಂಗೆ ಸಿನ್ನನುಮಾನಮನಱಿದನೆಂದು ಮನೋಹರನೆಂದನೀಪರದನ ಪರಮಮಿತ್ರನಮಿತಗತಿಯೆಂಬಂಬರಚರನಾತನ ಮಗಳೀಕೆ ಗಂಧರ್ವದತ್ತೆಯೆಂಬಳೀಚಾರುದತ್ತನ ಚಾರಿತ್ರಕ್ಕಂ ಚತುರತೆಗಂ ಅಗಲಲಾಱದಮಿತಗತಿ ವಿದ್ಯಾಧರಲೋಕಕ್ಕೊಡಗೊಂಡು ಪೋಗಿ ತನ್ನ ರಾಜ್ಯಮುಂ ಕುಡೆ ಕಡೆಗಣಿಸಿ ಗಂಧರ್ವದತ್ತೆಯ ಗಾಂಧರ್ವಗಂಧಿಯಪ್ಪ ಕಳಾಕೇಳಿಗಂ ವಲ್ಲಕೀವಲ್ಲಭತೆಗಂ ಜಡಂಗಿಂ ಗೆಡೆ

ಪಾ—1. ಸಂಚಯ.

ಗೊಂಡ ಗಾಡಿಗಂ ಬಯಸಿ ಕೊಳ್ಮಗಳ್ ಕೊಂಡನಿದೀಕೆಯ ವೃತ್ತಕಮೆಂದು ವಸುದೇವನಂ ತನ್ನ ಮನೆಗೊಡಗೊಂಡು ಪೋಗಿ ಮಜ್ಜನಭೋಜನಾದಿಗಳಿಂ ಮನ್ನಿಸಿ ಮನೋಹರಂಗೆ ಮನೋಹರಮಾಗೆ ಮರುದಿವಸಂ ವೀಣಾಸ್ವಯಂಬರಮಾಗೆ ವೀಣೋಪಾಧ್ಯಾಯನೊಡಗೂಡಿ ಸ್ವಯಂವರಮಂಟಪದೊಳ್ ಕುಳ್ಳಿರ್ದನನ್ನೆಗಂ ನೆರೆದ ಕಿನ್ನರ ಕಿಂಪುರುಷಗರುಡಗಂಧರ್ವ ಸಿದ್ಧವಿದ್ಯಾಧರರಂ ವೀಣೆಯೆಂಬ ಕಬ್ಬಿನ ಬಿಲ್ಲನೇಱಿಸುವಂತೆ ಕಳೆಯನೇಱಿಸಿ ಜೇವೊಡೆವಂತೆ ಮಿಡಿದು ನನೆಗಣೆಯಂ ಕೊಳ್ವಂತೆ ಕೋಣಮಂ ಕೊಂಡು ಮಗಮಗಿಸುವಂತೆ ಬಾಜಿಸಿ ಮನೋಜವಿಜಯಾಧಿದೇವತೆಯಂತೆ ಗಂಧರ್ವದತ್ತೆ ಸೋಲಿಸೆ ವಸುದೇವಂ ಕಂಡು ಮನೋಹರನನುಮತದಿಂ ಕಳನೇಱುವಂತೆ ವಿದ್ಯಾಪೀಠಮನೇಱಿ ಬೀಣೆಯಂ ಬೇಡುವುದುಮುಪಾಧ್ಯಾಯನೊಳ್ಳಿದುವೆಂದಾಯ್ದು ತಂದಿತ್ತ ಬೀಣೆಯಂ ಮಿಡಿದು ನೋಡಿ ತಂತಿಯೊಳ್ ತನುರೋಮಮಂ ಸೂರೆಯೊಳ್ ಶಲ್ಯಮಂ ಪ್ರವಾಳದೊಳ್ ಪಾಷಾಣಮಂ ತೋಱಿ ಕುಡುವೊಡೆ ನಿರ್ದೋಷಮಪ್ಪ ವೀಣೆಯಂ ಕುಡಿಮೆನೆ ಮನೋಹರನೆಂದನೀಲೋಕದೊಳಿವಲ್ಲದಿಲ್ಲ ನಿಮ್ಮ ಮೆಚ್ಚುವ ಬೀಣೆಯಾವ ಲೋಕದೊಳುಂಟೆನೆ ವಸುದೇವನೊಂದಾಖ್ಯಾನಮಂ ಪೇೞಲ್ ತಗುಳ್ದನದೆಂತೆನೆ:—

ನುತಹಸ್ತಿನಾಖ್ಯಪುರದಧಿ ।
ಪತಿ ಮೇಘರಥಂಗಮೆಸೆವ ಪದ್ಮಾವತಿಗಂ ॥
ಸುತರಾದರ್ ಜಗತೀವಿ ।
ಶ್ರುತವಿಷ್ಣುಕುಮಾರಪದ್ಮರಥರತಿಸೇವ್ಯರ್ ॥೧೯॥

ವ॥ ಮೇಘರಥಂ ಮೇಘೋಕ್ಷಣೇಕ್ಷಣದರ್ಶನದಿಂ ವೈರಾಗ್ಯಪರನಾಗಿ ವಿಷ್ಣುಕುಮಾರಂಬೆರಸು ತಪಂಬಟ್ಟಂ ; ಪೆಱಗೆ ರಾಜ್ಯದೊಳ್ ನಿಂದ ಪದ್ಮರಥನ ಮೇಲೆ ಮಲೆದೆತ್ತಿ ಬಂದ ಪ್ರತ್ಯಂತಭೂಪಾಲರ ಬಲಮಂ ಬಲಿಯೆಂಬ ಮಂತ್ರಿ ಮಂತ್ರಬಲದಿಂ ಬಾರದಂತು ಬಾರಿಸೆ । ಪದ್ಮರಥಂ ಮೆಚ್ಚಿ ಮೆಚ್ಚಿತ್ತೆಂ ಬೇಡಿಕೊಳ್ಳೆನೆ। ಬಲಿ ಜೋಕಾಜನಂತೀರೇೞು ದಿವಸದರಸುತನಮಂ ಬೇಡಿ ಪಡೆದನನ್ನೆಗಮಾಪುರದ ಪೊಱವೊೞಲ ಸೌಮ್ಯಗಿರಿಯೊಳ್ —

ಧೃತಿಯಿಂ ಮತ್ಸರಿಸುವ ಪ |
ರ್ವತಮಂ ತಾನಿಕ್ಕಿ ಮೆಟ್ಟಿದಂತಿರೆ ಯತಿಸಂ ||
ತತಿವೆರಸಕಂಪನಪ್ರತಿ
ಪತಿಯಿರ್ದಂ ಯೋಗಧುರ್ಯನಚಲಿತಧೈರ್ಯಂ ||೨೦||

ವ|| ಅದುಕಾರಣದಿಂದಕಂಪನಮುನೀಶ್ವರಂಗೆ ಬಲಿಯುಪಸರ್ಗಮಂ ಮಾಳ್ಪ ಮನಮನೆತ್ತಿಕೊಂಡು ಕೋಟಿಹೋಮಮುಮಂ ಬ್ರಾಹ್ಮಣಭೋಜನಮುಮಂ ಸಾಮ್ಯಗಿರಿಗುಹಾಗೇಹಂಗಳೊಳ್ ಮಾಡಿದಪನಲ್ಲಿಯಲ್ಲದೊಡೆಯುಂ ಗರಗರಿಕೆಯುಮಿಲ್ಲೆಂದು ಡಂಗುರಮಂ ಪೊಯ್ಸಿ ಬಾಯ ಸವಿಗೆ ಪಾವರೆಲ್ಲಂ ಪರ್ವತಕ್ಕೆ ಮೂಸೆಯಿಡುವಂತೆ ಸುತ್ತಿ ಮುತ್ತಿ ಬೆಳೆಯುಮ ನಡುಗೆಯುಮಂ ಎಡೆಯುಡುಗದೊಡರಿಸೆ—

ಮುಗಿಲ್ಗಳ ಶೃಂಗಮಂ ಮುಸುಱಿಮೇವವೊಲುರ್ವಿ ಪೊದಳ್ದು ಪರ್ವೆ ಪೆ |
ರ್ವೊಗೆ ಭಗಣಂಗಳಂ ಬಳಸಿದಿಂದುವಿನಂತೆ ಮಯೂಖಮಾಲೆಯೋ ||
ಲಗಿಸುವ ಸೂರ್ಯನಂತೆಸೆಯೆ ಸುತ್ತಿರಿದಗ್ನಿ ಭಟಾರನಂತೆ ಯೋ |
ಗಿಗಣಪರೀತನಸ್ಖಲಿತನಿರ್ದನಕಂಪನಯೋಗಿ ಯೋಗದೊಳ್ ||೨೧||

ವ || ಆಮುನಿಜನೋಪಸರ್ಗಮಂ ಮಾಳ್ಪುದುಗಂಡಿಂತೇಕೆಂದು ವಿಷ್ಣುಕುಮಾರನಱಿದು ಪದ್ಮರಥನಲ್ಲಿಗೆ ಪೋದೊಡಂ ಪೊಡೆವಟ್ಟೊಡಂ ಪರಸದೆ ಪೀತರಾಗಾಸನಮನಿಕ್ಕಿಕೊಂಡು ಕುಳ್ಳಿರದೆ ಕನಲ್ದಿಂತೆಂದಂ:—

ಮಂತ್ರಿ ಮುನಿದೀಮಹಾಮುನಿ |
ಸಂತತಿಗೆ ಮಹೋಪಸರ್ಗಮಂ ಮಾಳ್ಪುದುಗಂ ||
ಡಿಂತೇಕೆಯಣ್ಣ ಮಂತುವಿ |
ನಂತಿರ್ದಪೆಯರಸನಾದುದರ್ಕಿದು ಫಲಮೇ ||೨೨||

ವ|| ಎನೆ ಪದ್ಮರಥಂ ನಡುಗಿ ಮೂಱುಂ ಲೋಕಮನೆಱಗಿಸುವ ನಿಮ್ಮಡಿಯ ತಪೋರಾಜ್ಯಮೆ ಎಡೆಯ ಕಡೆಯ ಬಡವರುಮನೇಂ ಸಾಱದೆಮ್ಮ ರಾಜ್ಯಮೇತಱ ರಾಜ್ಯಮಿಂದ್ರೋಪೇಂದ್ರಾದಿಗಳ್ಗಾಸನಕಂಪಂಮಾಳ್ಪ ನಿಮ್ಮಡಿಯ ತಪಸ್ತೇಜದ ಪೊರೆಯೊಳ್ ಮನ್ನೆಯ ಮಂತ್ರಿಯುಮಂ ನಡುಗಿಸಲಾಱದೆಮ್ಮನ್ನರಪ್ಪ ನರಕೀಟಕಂಗಳ್ ತೇಜಮಾದಿತ್ಯನ ತೇಜದ ಪೊರೆಯ

ಮಿಳಿಂಬುಳುಪಿನ ತೇಜದಂತಕ್ಕುಮದಲ್ಲದೆಯುಂ ಪೇಗೆ ಪರ್ಪಿ ಪರ್ವತಂಗಳ ತಾಪಮಂ ಕಳೆವೊಡವಱಿಂದುನ್ನತಂಗಳಪ್ಪ ಜಲಧರಂಗಳ್ ಕಳೆಗುಂ ಕೀೞಿದುವಪ್ಪ ತೊರೆಯುಂ ಬಾವಿಯುಂ ಬಗಗೆಯುಂ ಕಳೆಯಲಾಱವೇ ಮಹಾನುಭಾವರುಪಸರ್ಗಮಂ ಪಿಂಗಿಸುವೊಡೆ ಸಾಮರ್ಥ್ಯವಂತರಪ್ಪ ನಿಮ್ಮಡಿಗಳ್ ಪಿಂಗಿಸುವರ್ ಮುಂದರಪ್ಪೆಮ್ಮವೆಱಗಿಂದೇನಪ್ಪುದೆನೆ—ವಿಷ್ಣು ಕುಮಾರನಂತಾದೊಡಾನು ನಿಯಮಿಸಿದಪೆನೆಂದು ಪೇೞಿಗಿ...

ಬಗೆಯೆ ಕವಲ್ತ ಕಾಸೆ ಪೊಸಜನ್ನಿವರಂ ಶಿಖಿ ಕೆಂವಣ್ಣಂ ಕರಂ ।
ಡಗೆ ಕಿಸುವೊನ್ನ ಬಟ್ಟಗೊಡೆ ಭಾಸುರ[1]ನಾಮದ ಬೊಟ್ಟು ಕೆಪ್ಪಿನೊಳ್[2] ||
ನೆಗೆದ ಕುಶಾಂಕುರಂ ಮಿಸುಪ ಮುಂಜಿ ಪಲಾಶದ ದಂಡು ಕುಂಡಳಂ ।
ಬಗೆವುಗೆ ಬಂದನಂದು ಬಲಿಯಲ್ಲಿಗೆ ವಾಮನನಾಗಿ ಕಾಮದಂ ||೭೩||

ವ || ಆಮಾಣಿಕವಂತಪ್ಪ ಮಾಣಿ ಮಂತ್ರಿಯು ಮುಂದೆ ನಿಂದು ಮಂತ್ರಮಂ ಪೇೞ್ದು ಸ್ವಸ್ತಿಯುಂ ಕೊಟ್ಟು:—

(ಸಂಸ್ಕೃತ) ॥ ಬಲಿನ್ ವಿಷ್ಣುರಯಂ ಕುರ್ಯಾದವಿಲಂಬಂ ಧನಂ ತವ ।
ಸಮಾಶ್ಲಿಷ್ಯತಿ ಯತ್ಪಾದಂ ಪದ್ಮಾ ಭಾತ್ಯಾತಪತ್ರಿವಾ ||

ವ|| ಎಂದುಪಶ್ಲೋಕಿಸಿದ ವಟುವಿನ ವಾಕ್ಪಟುತ್ವಕ್ಕಂ ಬ್ರಹ್ಮವರ್ಚಸ್ಸಕ್ಕಂ ಬೆಕ್ಕಸಂಬಟ್ಟು ಬಲಿ ಬಲವಂದು ಪೊಡೆವಟ್ಟು ಬೇಡಿಮೆನೆ ವಾಮನನೆನಗೆ ಕುಳ್ಳಿರ್ದನುಷ್ಠಾನಮಂ ಮಾಡಲ್ಕಕ್ಕನಿತನೆಮ್ಮ ಕುತ್ತಡಿ[3]ಯೊಳ್ ಮೂಱಡಿ ನೆಲನನೀವುದೆನೆ ಬಲಿ ಬೆಚ್ಚನೆ ಸುಯ್ದುಸಗದೃಷ್ಟಮೆಯ್ದಿದಿರ್ಕುಂ ಕಿಱಿದಂ ಬೇಡಿದಿರ್ ಕೊಟ್ಟೆನೆಳದುಕೊಳ್ಳಿಮೆನೆ:—

ವಟು ಮರದುದ್ದನಾದನಸಿತಲ್ಲದೊಡಿತ್ತಲೆಯುದ್ದವಾದನ
ಕ್ಕಟ ಮದಿಲುದ್ದವಾದನಿವನಾವನೊ ಪೆರ್ಮರದುದ್ದವಾದನಿಂ ||
ತುಟು ಗಿರಿಯುದ್ದವಾದನಿದು ವಿಸ್ಮಯಮಾಮುಗಿಲುದ್ದವಾದನೋ
ವಟನುಟಿಗಂ ದಿಟಕ್ಕೆನೆ ಕರಂ ಬಳೆದಂ ಮನವಂತೆ ವಾಮನಂ ||೭೪||

ವ|| ಅಂತುಮಲ್ಲದೆ—

ಮರನಂ ಮುಟ್ಟಿದನಿಲ್ಲ ಮೇಘಘಟೆಯೊಳ್ ಕಾಲ್ಕೋದನಿಲ್ಲಿಲ್ಲ ಭೂ।
ಧರಮಂ ದಾಂಟಿದನಿಲ್ಲ ಬಾಂದೊರೆಯೊಳಿಟ್ಟಂ ಕಾಲನಿಲ್ಲಿಲ್ಲ ಭಾ ||

ಪಾ—1. ಭಾರಸ—ಭಾಳದ ಎಂದಿವ್ವರೂ ಇರಬಹುದು 2. ಬೆಟ್ಟಿನೊಳ್.
3. ಕಿಳ್ತಡಿ.

ಸ್ಕರನಂ ಮೞಯದ ಮಾಣಿ ಸೇರ್ದೊಡದನೇ ಇಲ್ಗೆಂಬಿನಂ ನೀಡಿದಂ |
ತರದಿಂ ಪಾವನುಮಿರ್ದ ಕೊರ್ವಿ ಬಲಿಯುಂ ಗೆಲ್ವಾಮಸಂ ವಾಮನಂ || ೭೪ ||

ಅದೆ ಪೊಸಪೊನ್ನಸತ್ತಿಗೆಯುದಲ್ಲದು ರತ್ನಹಟಕ್ಕಿರೀಟಮು |
ಲ್ಲದು ವರವಜ್ರಕುಂಡಳಮುದಲ್ಲದು ಕೌಸ್ತುಭರತ್ನಮಂತದ ||
ಲ್ಲದು ಕರಚಕ್ರಮಲ್ಲದದು ನಾಭಿಸರೋಜಮೆನಲ್ ದಿನೇಶಬಿಂ
ಬವ ನೆಲೆ ತಗ್ಗಿತಪ್ಪಿನಮನುಕ್ರಮದಿಂ ಬಳೆದಂ ತ್ರಿವಿಕ್ರಮಂ || ೭೫ ||

ಇದು ಲೀಲಾಧೃತಭೂಕರೇಣುಕರಮಲ್ತುಧ್ರುತ್ವಪಟೀಕೇತುವ |
ಲ್ತಿದು ಸೂರ್ಯಾಂಬುಜನಾಳಮಲ್ತು ಶಶಿಲೋಕಾದೀಪಿಕಾಸ್ತಂಭಮ ||
ಲ್ತಿದು ತಾರಾಕುಸುಮಾವಳೀವಿಟಪಮಲ್ತುಭ್ರಾವನೀಶೇಷಮ |
ಲ್ತಿದೆನಲ್ ತಾಂ ಬಳೆದತ್ತನುಕ್ರಮದಿನಾಪಾದಂ ಪಯೋಜಾಕ್ಷನಾ || ೭೬ ||

ತರುವಿಂದತ್ತತ್ತ ಸೀಳ್ದಂ ಘನಪಟಲದಿನತ್ತತ್ತ ಮಿಕ್ಕಂ ಹಿಮೋರ್ವೀ |
ಧರದಿಂದತ್ತತ್ತ ಪೋದಂ ರವಿಯ ರಥದಿನತ್ತತ್ತ ಮೆಯ್ವೆರ್ಚಿದಂ ಸು ||
ಟ್ಟುರೆಯಿಂದತ್ತತ್ತಮತ್ತಂ ನಿಮಿರ್ದಿರಿಸಿದೇನೆಂದು ಜಾತಾದ್ಭುತಂ ನೋ |
ಳ್ಪರ ಕಣ್ಣುಂ ಚೇತಮುಂ ಕಾಲ್ಗಿಡೆ ಕಡುಜವದಿಂ ವಿಷ್ಣುವರ್ಧಿಷ್ಣುವಾದಂ ||

ವ|| ಅಂತುಮಲ್ಲದೆ

ಬಲಗೊಂಡತ್ತಮರಾದ್ರಿಗೆತ್ತಡೆಯೊಳಾಜ್ಯೋತಿರ್ಗಣಂ ಬಂದಿರುಳ್ |
ತಲೆದೋಱತ್ತೆಳವಿಗಾಂಗಳೊಂದು ದೆಸೆಯೊಳ್ ಕೆಯ್ದಿರ್ಪಿನಂ ತಪ್ತಕಂ ||
ದಳಿತಂ ಸಂದಣಿಗೊಂಡದೊಂದು ದೆಸೆಯೊಳ್ ಸೂರ್ಯಾತಪಂ ವಿಕ್ರಿಯಾ |
ಬಳದಿಂ ತಾಂ ಬಳೆಯಲ್ಕೆ ಭಂಜಿತಮುಹಾಮಂತ್ರಿಕ್ರಮಂ ತ್ರಿಕ್ರಮಂ ||

ರವಿಯುಶ್ವಂ ದೆಸೆವಾಯ್ದು ಪಾಯ್ದುಱಿವಿನಂ ತೇರಂ ನಯಂ ಪೆರ್ಚಿ ಪೆ |
ರ್ಚುವಿನಂ ಚಂದ್ರನ ಬೆಳ್ಮುಗಂ ಬೆದಱದಾತ್ಮಸ್ತ್ರೀಯುರಂ ಪೋೞ್ ಪಾ ||
ಱುವಿನಂ ತಾಂ ಪೊಲಗೆಟ್ಟು ಖೇಚರಚಯಂ ದಿಕ್ಪಾಲಕರ್ ಭೋಂಕೆನಂ |
ಜುವಿನಂ ವಿಷ್ಣುಕುಮಾರನೇಂ ಬಳೆದನೋ ಬ್ರಹ್ಮಾಂಡಮಂ ತಾಪಿನಂ ||

ಕಾವಟುವಿಂಗೆ ಮಿಂಚುವೆಳಮಿಂಚಿನ ಪಾರಿವಲೇಖೆ ಮಾಂಜಿಯುಂ |
ಕೋವಣಮಾಯ್ತು ಮುಟ್ಟೆ ರವಿಗರ್ಘ್ಯಮನೀವ ಪೊಡರ್ಪು
[ಮಾಯ್ದು ಮಾ ||

ಯಾವಿಗನೊಲ್ದು ಗುಂಡಿಗೆಯಿನಾಗಸಗಂಗೆಯ ದಿವ್ಯತೋಯಮಂ ।
ತೀವುವ ಬುದ್ಧಿಯೊಳ್ ಬಗೆದನಕ್ಕಟ ವಾಮನವಪ್ರಮಾಣಮಂ ॥ ೩೧॥

ಇಂತಪ್ಪ ಸಿತಗಸೀಪಟು ।
ವಿಂತಪ್ಪತಿವರ್ತಿ ಮಾಣಿಯುಂ ಕೋಡಗಮುಂ ॥
ಸಂತಮಿಡಲಾರ್ಕರ್ಮೇ ರಪಿ ।
ಯಿಂತಪ್ಪನ ಪರಿವ ಭಂಡಿಯೊಳ್ ಕಾಲ್ಗೋಲಂ ॥ ೩೨॥

ಅಂಬರತಳಕ್ಕೆ ಬಳೆದು ತ್ರಿ ।
ಯಂಬೊಳೆವಚ್ಯುತನ ಚರಣದಂಡಂ ನಕ್ಷ ॥
ತ್ರಂಬಳಸಿ ದೀಪಮಾಲೆಯ ।
ಕಂಬದವೋಲ್ ತೊಳಗಿ ಬೆಳಗುತಿರ್ದತ್ತಾಗಳ್ ॥ ೩೩॥

ಬಲಿಹರನ ಚರಣದಂಡದ
ತಲೆಯೊಳ್ ಕಿಱಿಗೊಂಡೆಜಲ್ವ ಬಾಂದೊಱೆಯಲರಿಂ ॥
ದೊಲೆದುದು ವಿಷ್ಣುಕುಮಾರನ ।
ಗೆಲವಂ ಕಂಡಮರರೊಸೆದು ಕಟ್ಟಿದ ಗುಡಿವೋಲ್ ॥ ೩೪॥

ವಾಮನಪದಹತಿವಿದಳಿತ
ಜೀಮೂತವಿಮುಕ್ತಬಹಳಜಲಧಾರೆಗಳಂ ॥
ದಾಮುನಿಜನಾಪಕಾರಕ ।
ಧೂಮಧ್ವಜನೆಯ್ದೆ ನಂದಿ ಪೋದತ್ತಾಗಳ್ ॥ ೩೫॥

ವ॥ ಅಂತಾಮಹಾಮುನಿಜನೋಪಸರ್ಗಮಂ ಮಾಣಿಸಲೆಂದು ವೈಕುರ್ವಣಋದ್ಧಿಯಿಂ ಬ್ರಹ್ಮಾಂಡಮನೊದೆದು ಬಳೆದಾತ್ರಿವಿಕ್ರಮನುತ್ಕ್ರಮಾಂಗುಷ್ಠಘಾತದಿಂ ತ್ರಿದಿವಮುದಿರ್ಗುಮೆಂಬ ಭಯಮಾಗೆ ಬಲವಿರೋಧಿ ಬೆಸಸಿದ ಗಂಧರ್ವದೇವರ್ ಬಂದು ಗಾಂಧಾರಗ್ರಾಮಮನಾಳಾಪಿಸಲೆಂದು ಧಾರಾವಿಯುಂ ಸಾರಿರಿಯುಮೆಂಬೆರಡುಂ ಬೀಣೆಗಳುಮನಳವಡಿಸಿ

ಕಳೆಯಂ ಪತ್ತಿಸಿ ಜೇವೆಯಂ ಸಿಱಿಸಿ ಮೆಲ್ಪಿಂ ತಂತಿಯಂ ತೀಡಿ ಕಾ ।
ಕಳಿಯೊಳ್ ಬೀಣೆಯನಾಗುಮಾಡಿ ಮಿಡಿಯುತ್ತಾಳೆರ್ದ ಸುಸ್ವರದ ।

ಕ್ಕಳಿ ಪೂವಂ ಗಿಳಿ ಪಣ್ಣನಾಲಿಸಿ ಲಸಚ್ಚೂತಾಂಕುರಾಸ್ವಾದಮಂ ।
ಕಳಕಂಠಂ ಬಿಡೆ ದೇವರಾಲಪಿಸಿದರ್ ತ್ರಿಸ್ಥಾನಸಂಶುದ್ಧಿಯಿಂ ॥೩೬॥

ವ॥ ಆಗಂಧರ್ವವಾದನಕ್ಕೆ ವಿಷ್ಣುಕುಮಾರನತಿಪ್ರಸನ್ನನಾಗಿ ನಿಜೋದ್ರೇಕಮುಮಂ ವೈಕುರ್ವಣಮುಮನುಪಸಂಹರಿಸಿ ಬಲಿಯಂ ಬಂಧನದೆ ಳಿರಿಸಿದನಾವೀಣೆಯ ವಂಶದ ವೀಣೆಯುಮಂಟಕ್ಕುಮದಂ ತಪ್ಪೊಡೆ ತನ್ನಿಮೆಂದ ವಸುದೇವನ ವಿಪಂಚೀಪ್ರಪಂಚವಾಚಾಕ್ವಣಿತಕಾರಕ್ಕಮತಿಮನೋಹರಾಕಾರಕ್ಕಮತ್ಯಂತಾಸಕ್ತೆಯಾಗಿ -

ಅತಿಮುಗ್ಧಾಪಾಂಗಭೃಂಗಂ ಮುಖಸರಸಿಜದೊಳ್ ತನ್ನ ಬಾಹಾ[ಭುಜಂಗಂ ।
ಸುತನುಶ್ರೀಖಂಡಶಾಖಾಗ್ರದೊಳಧರಲಸದ್ವಿದ್ರುಮಂ ದಂತಮುಕ್ತಾ ॥
ತತಿಯೊಳ್ ಪಾಣಿಪ್ರವಾಳಂ ಕುಚಕಲಶದೊಳಿಂಬಾಗೆ ತಜ್ಜಿತ್ತರ್ದಸಿಂದ್ರ ।
ಪ್ರತಿಮಂ ಗಾಂಧರ್ವದತ್ತಾಮೃದುಹೃದಯದೊಳಾರೂಪಕಂದರ್ಪದೇವಂ ॥

ವ॥ ಇದೊರ್ಂದು ದೆವಸಂ ವಸುದೇವಕುಮಾರಂ ವಿದ್ಯಾಮಂಡನ ಮಂಡನೀಭೂತಜಗತ್ತ್ಯಾಗಸಿಂಹಾಸನದೊಳ್ ಸಿಂಹಕಟೀತಟಮನುಪಮೊಗೆ ತರ್ಪಂತುಪವೇಶದನಳಂಕರಿಸಿಪ್ಪರ್ದುಮಾಪ್ರಸ್ತಾವದೊಳ್ ಕುಂಕುಮ ಮಂ ಕುಚಕಳಸನುಮೆಂಬರಿರ್ವರಕ್ಕರಿಗರ್ ಬಂದು ಶುಭೋದಯ ಮೆಂದು—

॥ ಸಂಸ್ಕೃತ ॥

ಕೇತಾರ್ವಾಜತಿ ಸೆಜ್ಜೆವಳ್ಳಸಚಿವಶ್ರೀಪದ್ಮನಾಭಪ್ರಭಾ ।
ತ್ರೈಲೋಕ್ಯಾಶ್ವಪತೇ ವಿಜೇಯ ಸುಚಿರಂ ದೃಷ್ಟ್ವಾಸಪೀಭಿಸ್ಫುಟಂ ॥
ಕಸ್ತೂರೀತಿಲಕೇನ ಲಕ್ಷ್ಮಣಕೃತೀ ಚಂದ್ರಸ್ಸಲಕ್ಷ್ಮಭತೇ ।
ಕಂಠೇ ಕಾಳಯತಿ ಪ್ರಸಿದ್ಧಮಗಮತ್ ಶೇಷೋಪಿ ಭೂಷೋಪಿ ಚ ॥

॥ ಪ್ರಾಕೃತ ॥

ಸಿರಿಯ ಸರಸಿಯ ಸಯಿಯ ಪರಲಂ । ತಿಯವಚ್ಛಾವ ಮುಹು ಮಿಹ ಭಯದಂಡೋ ॥ ಸಂಜೇಮಾಯ ಜೇಣಾಸಂಜಾಜ್ಜೈಪಟುಮಹಣಾ ವ್ರೋ । ವೀರಬಲ್ಲಾಳದೇವಂ ಪುತಿಯ ಪುಮಪಿಣಾಹೋ ಸಂಜಳೋ ಸಜ್ಜೆ ವಳ್ಳೋ ॥ ? ॥೩೭॥

ವ|| ಎಂದೋದಿದ ಭಟ್ಟಂಗೆ ತುಡಲಾರ್ಪನಿತು ಮಣಿಭೂಷಣಂಗಳ ನುಡಲಾರ್ಪನಿತು ಪಟ್ಟಾಂಬರಂಗಳಂ ಮೊಟ್ಟೆಗಟ್ಟಿ ಪೊತ್ತುಕೊಂಡು ಪೋಗಲಾರ್ಪನಿತು ಪೊನ್ನುಮನಿತ್ತು ನೀಮೆತ್ತಣಿಂ ಬಂದಿರೆಲ್ಲಿಗೆ ಪೋದಪಿರೆಂಬುದುಂ ಕುಚಕಲಶನೆಂದಂ:—ವಂಶವಿಷಯದೊಳ್ ಮಾಗಧಿಯೆಂಬ ಪೊೞಲನಾಳ್ವ ರಕ್ತಾಕ್ಷನೆಂಬರಸಂಗಂ ಸುಮಿತ್ರೆಯೆಂಬರಸಿಗಂ ರೋಹಿಣಿಯೆಂಬ ಮಗಳಾದಳ್ | ಅತ್ರಿಭುವನಸೌಂದರ್ಯಸಂಕೇತಭೂಮಿಯಪ್ಪ ಭಾಮಿನಿಯ ಶೃಂಗಾರಸ್ವಯಂವರಕ್ಕೆ ಜರಾಸಂಧ ಚಕ್ರವರ್ತಿಯುಂ ಸಮುದ್ರವಿಜಯಂ ಮೊದಲಾದ ಮಂಡಳಿಕರುಂ ನೆರೆದರ್ | ಇವರಂ ಬೇಡುವೆಮೆಂಬ ಬಗೆಯಿಂ ಬಂದೆಂ | ನಿನ್ನೀಭವನಕ್ಕೆ ನಾವಾರುಮಂ ಬೇಡದಂತುಂ ಬೇಡಿದನಿತನಾಮೆ ಕುಡುವಂತುಂ ಕೊಟ್ಟೆ | ನೀನೆ ದಾನಿಯೆಂದು ಪೊಗೞ್ದು ಪೋದರ್ | ಇತ್ತ ವಸುದೇವನಾಪೊೞ್ತು ಪೊೞ್ತಾಗಿ ಪರ್ಣಲಘುವಿದ್ಯೆಯಿಂ ಸುಪರ್ಣನಿಂ ಬೇಗವಾಗಿ ಮಾಗಧಿಗೆ ಪೋಗಿ ಪ್ರಾಕೃತಕಾವ್ಯದಂತೆ ಸಹಜಸೌಭಾಗ್ಯಭಂಗಿಭಾವಾಲಂಕಾರದಿನಲಂಕೃತನಾಗಿ ಸ್ವಯಂವರಮಂಟಪಮಂ ಪುಗುವುದುಂ | ಆಗಳಾಸ್ವಯಂವರಸಭೆಯಾಗ ವಾದಕಸಂಪ್ರದಾಯದೊಳ್ ಒರ್ವ ಪಾಣವಿಕನ ಪೆಗಲ ಪಣವಮಂ ತನ್ನ ಪೆಗಲೊಳ್ ತಗುಳ್ಚಿಕೊಂಡು ಮೂಱುಂ ತೆಱದ ಲಯದೊಳಮನಿತೆ ಜತಿಯೊಳಂ ವಿವಿಧವಾದ್ಯವಿಧಿಯೊಳಂ ಮಧುರಾತಿಮಧುರಮುಂ ಚಿತ್ರಾತಿಚಿತ್ರಮುಮಾಗೆ ಬಾಜಿಸುವ ವಾದ್ಯವಿದ್ಯಾಧರನ ವಾದನವೈದಗ್ಧ್ಯಗಂ ಮರುಳ್ಗೊಂಡು ಗಂಡಗಾಡಿ ಗಂಡುವೆಟ್ಟುಂಗೊಂಡು ಸ್ವಯಂವರಸಂಭ್ರಮಮುಂ ರಾಜಪುತ್ರಿಯ ಕೈಗೆ ಮಾಲೆಯೊಂದು ಬಂದ ಭರಮುಂ ಮೊಱೆದು ನೆರೆದ ರಾಜಲೋಕಮೆಲ್ಲಂ ರಾಜಸುತೆಯನೀಡಾಡಿ ಬಂದು ದೊಮ್ಮಳಿಸಿ ಮಮ್ಮೞ್ಗೊಂಡು ನೋಡುತ್ತುಮಿರ್ಪುದುಮಲ್ಲಿಗೆ ಕಾತರಚಿತ್ತೆಯಾಗಿ ಕಿವಿಯೊಳದುವರಿಯೆ ಕೇಳ್ದು ಮನವೆಳದುವರಿಯೆ ಬಂದು ಕಣ್ಣೊಳದುವರಿಯೆ ನೋಡಿ—

ಪಾಡುವ ಗೀತಮಂ ಜತಿಗಳಂ ಶ್ರುತಿ ಸೂಡೆ ವಿಲಾಸಲಕ್ಷ್ಮಿಯುಂ |
ಸೂಡೆ ವಿಲೋಚನೋತ್ಪಲದಳಂ ಪುಳಕಾಂಕುರಸಂಕುಳಂಗಳಂ ||
ಸೂಡೆ ನಿಜಾಂಗವಲ್ಲಿ ಮನಮುತ್ಸವದಿಂ ಕುಸುಮಾಸ್ತ್ರಮಾಲೆಯಂ |
ಸೂಡೆ ವಿರೋಧಿರಾಜಕುಳರಾಹುಗೆ ರೋಹಿಣಿ ಮಾಲೆ ಸೂಡಿದಳ್ ||೪೦||

ವ|| ಸೂಡಲೊಡನೆ ರಾಜಕುಮಾರರ ಮನದೊಳ್ ಸೂಡೆರ್ದಂತಾಗೆ ಚಕ್ರವರ್ತಿಗಂ ಮಂಡಳಿಕರ್ಗಂ ಕುಡಲಿರ್ದ ಕೂಸಂ ದೇಸಿಗಂ ಕೊಂಡನಿದೇನೆಂದು ಮಾಮಸಕಂ ಮಸಗಿ ಮುಳಿದು ಬಾಲಭಾಸ್ಕರನ ಮೇಲೆ ದೊಡ್ಡಿತಪ್ಪ ತಮದೊಡ್ಡು ಕವಿವಂತೆ ಕಿಶೋರಕೇಸರಿಯ ಮೇಲೆ ದಂತಾವಳದೊಡ್ಡು ಕವಿದು ಮುಸುಱಿ ಮುತ್ತುವಂತೆ ವಸುದೇವನ ಮೇಲೆ ರಾಜಕುಮಾರರೊಡ್ಡು ಕವಿದು ಮುಸುಱಿ ಮುತ್ತಿದಾಗಳ್—

ಕಿವಿ ಕೋಲಂ ಕೋಟಿಯುಂ ಕಾಱಿದಪುವೊ ಬೆರಲಿಂ ಬಾಣಮಂ ಭೋರೆನಿಂದ |
ಪುವೊ ಚಂಚನ್ಮೌರ್ವಿ ಜುಮ್ಮೆಂದುಗುೞ್ದಪುದೊ ಶರಶ್ರೇಣಿಯಂ ಮಾಣದೆಂಬಂ ||
ತೆವೊಲಡ್ಡಂ ಕಾಯ್ಪಿನಿಂದಂ ಕವಿಯೆ ಜವಕೆ ಕೆಯ್ವೊಯ್ದುಪಾಯ್ದಂಬನಂಬ |
ಟ್ಟುವವೊಲ್ ಪ್ರಾಂತಾನುಪ್ರಾಂತಂವೊಳ್ ಕಲಿಸಮನೋವೇಗದಿಂ ಬೇಗಮೊಟ್ಟಂ

ನೀಡಿದ ನಾಲಗೆಯಂತಿರೆ |
ಪೂಡಿದ ಕಣೆ ಕುಣಿದು ತೆಗೆದ ಕುಮಾರನ ಬಿಲ್ಲೊಳ್ ||
ಮೂಡಿದುದು ನುಂಗಲಹಿತರ
ಪಾಡಿಗಳಂ ಮಸಗಿ ಮಿಳ್ತು ಬಾಯ್ದೆಱೆದ ತೆಱಂ ||೪೦||

ಅಲಗುವೊಡೆ ಪರಿದ ಬಿಸಿಲವೊ |
ಲಲಗಲಗನೊಳ್ಕೊಳಿಸಿ ಪುಟ್ಟಿದುರಿ ಸುರಿದುವು ಕ ||
ತ್ತಲಿಸಿದುದು ದೆಸೆ ದಿನೇಶಂ
ಪೊಳೆಗೆಲ್ಲಂ ಮಸಗಿ ಮಿಸುಕದೆಸೆ ವಸುದೇವಂ ||೪೧||

ಮಱಿಮುಂಬಿಯುಲರ್ದ* ಸಂಪಗೆ |
ಗೆಱಗದವೊಲ್ ತಪ್ಪಿ ಪಾಱಿದುವು ಪಿರಿಯಣ್ಣಂ ||
ಪೊಱಮಯ್ವೊವರಂ ತೆಗೆದೆ
ಚ್ಚಱಕೆಯ ಪೊಸಗಱಿಯ ಕಣೆಗಳವನವರಜನಂ ||೪೨||

ಅದಟರನೊಂದೆ ಶಾತಶರದಿಂ ತುರಗಂಗಳನೊಂದೆ ಬಾಣದಿಂ |
ಮದಗಜದೊಡ್ಡನೊಂದೆ ಕಣೆಯಿಂದೆ ನಿವಾರಿಸೆ ಪೊರ್ದೆ ಪಾದಪ ||

ದ್ಮದ ಮೊದಲೊಳ್ ನಿಜಾಗ್ರಜನನೆಚ್ಚ ಶಿಲೀಮುಖಮಾಗಳಂಬು ತ ।
ಪ್ಪಿದೊಡಭಿಮಾದೆಯೆಂಬ ತೆಱದಿಂ ಪೊಡೆವಟ್ಟನಪಾರಪೌರುಷಂ ॥೪೫॥

ವ॥ ಪೊಡೆವಡುವುದುಂ ನಿರವಿಸಿ ವಸುದೇವನೆಂದಱಿದು—

ಕೆಯ್ತಪ್ಪಿದುದು ಕಾದಲೊರ್ವನೆ ಸಮಗ್ರಾಸೀಕದೊಳ್ ಕೋದುಕೋ ।
ಲ್ವಾಯ್ದಂ ಬಾಳಕನೊಕ್ಕ ತುಪ್ಪುಮುಡುಗಲ್ಕೇಂ ಬರ್ಕುಮೋ ಗಂಟಲಂ ॥
ಕೊಯ್ದಂ ಕೈತವದಿಂದಮೆಂದೊಗೆದ ನೋವಂ ಸಂತಸಂ ನೂಂಕೆ ಮೇ ।
ಲ್ವಾಯ್ದಿಂದ್ರೇಭಸಮಂ ಸಮುದ್ರವಿಜಯಂ ತಳ್ಕಯ್ಸಿದಂ ತಮ್ಮನಂ ॥೪೬॥

ಮಿಸಿಸೆ ಸುಖವಶ್ರು ಪುಳಕಂ
ಪಸರಿಸೆ ಬಿಲ್ಲೊಂದು ಜಾವಮಪ್ಪಿನಂ ಪಸವ್ರೋ ॥
ಡೆ ಸಮುದ್ರವಿಜಯನಪ್ಪಿರೆ ।
ವಸುದೇವನುಮಪ್ಪಿಕೊಂಡು ತೋಱಿದನಳವಂ ॥೪೭॥

ವ॥ ಬೞಿಯುಂ ಬಳಮುಖ್ಯರಪ್ಪ ಜರಾಸಂಧನಂಗಮಗ್ರಜನ ಬೆಸದಿ ನೆಱಗಿ ಮಱುದಿವಸಂ ಸೊಯಂಬರಕ್ಕೆ ನೆರೆದರಸುಮಕ್ಕಳೆಲ್ಲಂ ನಿಬ್ಬಣಿಗರಾಗೆ ರೋಹಿಣಿಯೊಳ್ ಮದುವೆನಿಂದು ಮಗುಳ್ದು ಸೂರ್ಯಪುರಕ್ಕೆ ಪೋಗಿ ಸುಖಸಂಕಥಾವಿನೋದದಿಂದಿರ್ದ ನಾಮಹಾನುಭಾಗನ ಸೌಭಾಗ್ಯಸಂಭೋಗಮಂ ಪೇೞ್ವೊಡೆ-

ಬರೆ ಭರದಿಂದೆ ನಿಬ್ಬಣಕೆ ಚಿತ್ತಜನುಂ ರತಿಯುಂ ವಸಂತನುಂ ।
ವರವನಲಕ್ಷ್ಮಿಯುಂ ಶಶಿಯುಮಾತನ ರೋಹಿಣಿಯುಂ ಶಿರೀಷಮುಂ
ಸುರಭಿಯುಮಾಮ್ರಮುಂ ಮಿಸುಪ ಮಲ್ಲಿಗೆಯುಂ ವಸುದೇವನಾಳ್ದನೀ ।
ಧರೆ ಪೊಗೞ್ಕೆ ಷೋಡಶಸಹಸ್ರವಿವಾಹಮಹೋತ್ಸವಂಗಳಂ ॥೪೮॥

ಗುಣನಿಧಿಯುದಯಿಸಿದಂ ರೋ ।
ಹಿಣಿಗಂ ವಿಧುವಿಂಗಮುದಯಿಪಂತೆ ಬುಧಂ ರೋ ॥
ಹಿಣಿಗಂ ವಸುದೇವಂಗಂ ।
ರಣರಸಿಕಂ ಪ್ರಬಲನತಿಬಲಂ ಬಲದೇವಂ ೪೯॥

ವ॥ ಅಂದಾಸ್ವಯಂವರದೊಳ್ ತನ್ನ ಬಲ್ಲ ಬಿಲ್ಲ ಬಿನ್ನಣಂಗಂಡು ಬಂಟರಾಗಿ ಬೞಿಸಂದು ಬೆಸಕೆಯ್ವ ಬೇಡಿಕೊಳ್ವ ರಾಜಕುಮಾರರ್ಗೆ

ಬಿಲ್ಲ ವಿದ್ಯೆಯಂ ಕಲಿಸುತಿರ್ಪ ವಸುದೇವನಲ್ಲಿಗೆ—

ಸುಡುದಲೆ ಬಿಟ್ಟ ಕಣ್ ಕಲಿವೊಗಂ ಕಡಿಗೊಂಡುಱೆ ಬೆಟ್ಟತಪ್ಪ ಕೈ |
ಯಿಡಿದು ಪೊರಳ್ಚಿ ಮಾಡಿದವೊಲಿಪ್ಪೊಡಲೊಪ್ಪುವ ರೂಪು ತುಪ್ಪಮಂ ||
ತೊಡೆದವೊಲಪ್ಪು ಮೀಸೆ ಮಿಸುಗುತ್ತಿರೆ ಬಂದನದೊರ್ವನಂದು ಬಿ |
ಲ್ವಿಡಿವು ಯುವಾನನಲ್ಲಿಗೆ ನವೀನನವೀರನದೋತ್ಕಟಂ ಭಟಂ ||೫೦||

ವ|| ಬಂದು ವಸುದೇವಂಗೆ ತುಱುಗಲ್ಲಿದುಮುರಸನೆತ್ತಣಿಂ ಬಂದೆ ಯೆತ್ತಪೋದಪೆ ನಿನ್ನ ಪೆಸರೇನೆಂಬುದುಂ ಭಟನಿಂತೆಂದಂ:—

ಜನನಾಥಾ ನಿತ್ಯಚಂದ್ರೋದಯಧರಣಿಪತೀ ನಾಡುನಾಡಂ ತೊೞಲ್ದಂ |
ಧನುವಂ ಕಲ್ವರ್ಥಿಯಿಂ ಬಿಲ್ಲಜನನಱಸಿ ಬಿಲ್ವಲ್ಮೆಯೊಳ್ ದೇವ ನೀಂ ದೇ
ವನೆಯಾನುಂ ಚಟ್ಟನಾಗಲ್ ನಿನಗೆ ಬಗೆದೆಯುಕ್ಕಂ ದ್ವಿಷಧ್ವಂಸನೆಂ ಕಂ |
ಸನೆನೆಂಬೆಂ ನಿನ್ನ ವಿಖ್ಯಾತಿಯನಖಿಳದಿಶಾಚಕ್ರದೊಳ್ ಕೇಳ್ದು ಬಂದೆಂ ||

ವ|| ಎನೆ ಕೈಕೊಂಡು ಕೋದಂಡವಿದ್ಯೆಯಂ ಕಲಿಸುತ್ತುಮಿರೆ ಕಂಸಂ ವಸುದೇವಂಗೆ ಚಟ್ಟನಾಗಿ ಮಿಕ್ಕ ಚಾಪಾಚಾರ್ಯರ್ಗೊವಜನಾಗಿ ಧನುರ್ವಿದ್ಯೆಯಂ ಸಾಧಿಸುತ್ತುಮಿರ್ದನನ್ನೆಗಂ:—

ಪೌದನಪುರವನಿತೆಗೆ ಸ |
ಮ್ಮೋದನಗಶ್ರೀನಿತಂಬ ಕಳಕಾಂಚಿಗೆ ತಾ ||
ನಾದನಘಿನವಪಯೋಧರ
ನಾದಂ ಪತಿ ತಾಳಹಸ್ತನೆಂಬನಸಳಂಬಂ || ||೫೨||

ಅವನೊರ್ವನೆ ಪಿಡಿದು ಕಂಠೀ |
ರವಪೋತಮನೋತು ಪೊರೆದು ಪಿಱಿದಪ್ಪುದುಮೇ ||
ಱುವನಾಗಿ ಪರಿಯುತಿರ್ದಂ |
ಭುವನದೊಳಾತಂಗೆ ಸಿಂಹರಥನೆಂಬ ಪೆಸರ್ || ||೫೩||

ಕುಱಿಯ ಕಡಿಯಣಕೆ ಬಾಯಂ |
ತೆಱೆಯದಿರಿಂ ಬಾಯ ಕರುಳ ಕಡಿಯಣಮಾಯ್ತಂ ||
ದುಱದೆ ನೃಪಸಿಂಹನೇಱಲ್ |
ಮುಱುಗುವನೇಱನೆ ಕಡಂಗಿ ಸಿಂಹಮನಾತಂ ||೫೪||

ಕರಿಯುಂ ಸಂಕ್ರಂದನಂ ಮೇಷಮನಸಿತಪದಂ ಕೋಣನಂ ಕಾಳನಾಳ್ಗಂ |
ಕರಸಾದಂ ಯಾದವ್ರೋದಂ ವರುಣನೆರಲೆಯುಂ ವಾಯು ಪೀಜಂ ಕುಬೇರಂ||
ಪಿರಿಯೆತ್ತುಂ ರುದ್ರನಾರ್ದೞಿಯುಮವೊದಪಿದಪರ್ ದೇವರೆಂದೆನ್ನವ್ರೊಲ್ ಕೇ
ಸರಿಯುಂ ಪಾಯ್ದೞ್ದಿಪಂತೆಂದೊಡರ್ವರೊ ಜಡರೆಂದೆೞ್ಪಿಪಂ ತಾಳಹಸ್ತಂ||

ಹರನೆತ್ತುಂ ಯಕ್ಷನೇೞಂ ಪವನನೆರಲೆಯುಂ ಸಾಗರಾವಾಸನಂಭ |
ಶ್ಬರವುಂ ನೈಋತ್ಯನಾಳ್ಕಂ ಯಮನೆ ಮಹಿಷಮುಂ ವಹ್ನಿಯಾಮೇಷಮುಂ ಕೊ
ಕ್ಕರಿಕುಂ ಸಂಗ್ರಾಮದೊಳ್ ಮನ್ಮೃಗಪತಿಯುಗುರಂತಾಗಲಿಂದ್ರೇಭಕುಂಭಂ
ಬಿರಿವನ್ನಂ ಪೊಯ್ದುಗ್ಗಮೆಂದೇ ಗಜಱುವನೊ ಸಿಜಾಸ್ಥಾನದೊಳ್ ತಾಳಹಸ್ತಂ||

ಉಕ್ಕಿಟ್ಟುದಕ್ಕೆನೆಂಬವ
ನುಕ್ಕಂ ತಾಂ ಬಿಟ್ಟನಾಗಿ ಸಿಂಹಮನೇೞಲ್

. . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . ||೫೭||

. . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . .

ಕೊಟ್ಟನಾವಿರೆ ಗಜಾರಿಯ |
ಮಟ್ಟುಂ ಬೆನ್ನೇಱುವರ್ಗೆಯೆಂಟೆರ್ದೆಯುಂಟೇ || ||೫೮||

ನಾಡೊಳಗೆ ಮೀಸೆದೆಱೆಯುಂ |
ಬೇಡಿಸುವಂ ಬೀರರರಸಿಯುರವೆಸರಿಂ ಕೂ ||
ಸಾಡಿಸಲೀಯುಂ ಹುಲ್ಲಿ |
ಯಾಡಿಸುವಂ ತೇಜದುರಿಯಿನರವಿಾಸೆಗಳಂ ||೫೯||

ವ|| ಎಂಬಗುರ್ವಿನ ಗರ್ವಸಿಂಹರಥನಾಂ ಜೀವಿಸುತ್ತುಮಿರೆ ಮತ್ತೊರ್ವನ ನೆತ್ತಿಯೊಳ್ ಸತ್ತಿಗೆಯುಂ ಕೆಯ್ಯೊಳ್ ಕೈದುವುಂಟೆಂಬುದೆ ಮದೀಯರಾಜವೃತ್ತಿಗಂ ವೀರವೃತ್ತಿಗಂ ಭಂಗಮೆಂದು ಸಿಂಹದ ಸಹಾಯಬಲಮುಂ ಕೂರ್ಪುವಡೆದ ಕೈದುವಿನ ಬಲಮುಂ ಮುಪ್ಪುರಿಗೂಡಿದಂತಾಗೆ ಮೇಗೆ ಮೆಯ್ಯಱಿಯದೆ—

ಬಿಡುವೆಸರ ಚಕ್ರಿಯುಪ್ಪೊಡೆ
ಮಡಕೆಗಳಂ ಮಾಡಿ ಕಳಪುಗಲ್ಲದೊಡೀಗಳ್ ||
ಮಡಕೆಗೆಡೆಮಾಡಿ ಕೊಳ್ಗಂ
ದಡದುರ್ ಜರಾಸಂಧಚಕ್ರಿಗಾತಂ ದೂತಂ ||೬೦||

ವ|| ಅಟ್ಟುವುದುಂ ಪೋಳಮಟ್ಟುಸುರಂಪುಸಗಿ ಪಿಾಸೆಯುಂ ಕಡಿದು ಕಿಡಿವೋಗಿ ಕಡೆಗಣ್ಣ ಕೋಪದುರಿ ಪೊತ್ತಿ ಪರಕಲಿಸಿ ಪರ್ವಿದಂತೆ ತಳತ್ತಳಿಸುವ ಚಕ್ರವರ್ತಿಯ ಕೆಯ್ಯಂ ನೀಡುವುದುಮಾತನಿಂತೆಂದಂ:—

ಖಳನಂ ಗೆಲ್ವುದೆ ಭಂಗಂ |
ಕೆಳೆಗೊಳ್ವುದೆ ಕಷ್ಟಮುವನೊಳಾಗದು ಪಗೆಯುಂ ||
ಕೆಳೆಯುಂ ಕರಮುಱಿಯನೆ ನೀಂ |
ಮುಳಿವನ್ನಂ ನೃಪತಿಪ್ರಳಯಮಣಿಜತಪದಾ ||೬೧||

ಕರಿಗೆ ಹರಿ ಹರಿಗೆ ಶರಭಂ |
ಶರಭಕ್ಕರೆ ನೃಪತಿ ಮುಳಿಗುಮಾಭೇರುಂಡಂ ||
ನರಿಗೆ ಹರಿ ಕರಿಗೆ ಶರಭಂ
ಹರಿಗೆಂದುಂ ಮುಳಿಯಲಱಿಯದಾಭೇರುಂಡಂ ||೬೧

ವ|| ಎಂಬುದುಮನಂತಚಾತುರ್ಬಲಂಬೆರಸು ನೆಲಂ ಬೆಸಲೆಯಾದಂತೆ ಪೋಗಿ ಪೌದನಪುರದ ಪೊಱಗೊಡ್ಡುವುದುಂ, ಅಟ್ಟಿ ತಿಂಬ ದೈವಕ್ಕೆ ಪಾಳಂಬಟ್ಟಂತಾನುದೊದು ಸಿಂಹರಥಂ ಬಲದ ಕಳಕಳಕ್ಕೆ ಕೆಳರ್ದು —

ತುಱಿಯೆ ಪದಾತಿಯುಂ ತವೆ ತುರಂಗದಳಂ ತುರಗಂಗಳಂ ರಥಂ
ತುಱಿಯೆ ರಥಂಗಳಂ ತುಱಿಯೆ ದಂತಿಗಳಂ ನವೆ ಸೇನೆ ಮುಮ್ಮ್ರತೆ ||
ತ್ತುಱಿದುಱಿದಂತೆ ತಮ್ಮೊಳಗೆ ಮುಮ್ಮುಱಿಯಾಗಿರೆ ಗಾರ್ಜಿಸುತ್ತೆ ಸೂ |
ಕ್ಕುಱಿಸಿ ದಿಶಾಗಜಂ ರಣದೊಳೇಱಿದ ಕೇಸರಿ ತಾಳದಸ್ಯನಾ ೬೩||

ವ|| ಅವನೊರ್ವನುಂ ಮಾರಿಯುಱಿದಾಡಿಸಂತೆ ಪೋಗಿ ಪೋಲ್ತು ಕೇಳ್ದು ಜರಾಸಂಧಂ ಜರಾಜರ್ಝರನಂತೆ ಜಕ್ಕನೆ ಱಿದು ಸ್ವಯಂಬರದನುವರದೊಳ್ ವಸುದೇವನ ಕೂರ್ಪಂ ಕಂಡನಪ್ಪುದಱಿನವನಲ್ಲದಿವನ ಮಿತ್ತುವಂ ಮಿಡಿಯಾರ್ಪರಿಲ್ಲೆಂದು ಶೌರಿಪುರಕ್ಕೆ ಪುರುಷರ್ಗಳಂ ಕಳಪಿ

ಸಿಂಹರಥನನಾವೊಂ ಪಿಡಿದು ತಂದವಂಗೆ ತನ್ನ ಮಗಳುಮಂ ಬೇಡಿದ ನಾಡುಮಂ ಚಕ್ರವರ್ತಿ ಕೊಟ್ಟಪನೆಂದು ಘೋಷಣೆಯಿಡಿಸೆ ಕಂಸಂ ಪಿಡಿದು ವಸುದೇವನಲ್ಲಿಗೆ ತಪ್ಪುದುಮಾನಕದುಂದುಭಿಯಾನಕದುಂದುಭಿಧ್ವನಿಯಿಂ ಜಟ್ಟರೊಳಗೆ ಪೆಸರಂ ನಿಲಿಸಿದೆಯೆಂದು ನಲಿದು ಪ್ರಸ್ಥಾನಭೇರಿಯುಂ ಪೊಯ್ದು ಪೊಱಮಡುವುದುಂ ನೀಂ ಬರಮಿದಾವ ಭರಮೆಂದು ಕಂಸಂ ನಿವಾರಿಸಿ ಪೇೞ್ದು ಪಡೆವೆರಸು ಪೋದನಪುರಕ್ಕೆತ್ತಿವರ್ಪುದುಂ ಸಿಂಹರಥಂ ಕೇಳ್ದು ಗಹಗಹಿಸಿ ಬಾಯ ತಂಬುಲಂ ಸೂಸೆ ಸೊಕ್ಕಾನೆದಿಂಬಂಗಾಡೆ ಪೋಱಿಗೆಯೆಂಬಂತೆ ಚಕ್ರವರ್ತಿಯ ಬಲಮುಂ ಬಱಿಕೆಯ್ದುನ್ನ ಸಿಂಹಕ್ಕೆಡೆಯ ಬಡವರ ಬಲವೊಂದು ಪಲ್ಲಕೊನೆಗಂ ಬಾರದೆಂದು ಮದದಿಂ ಮುಂದುಗಾಣದೆ ಕದನಕ್ಕೆ ದಿರ್ವಂದು ಕಂಸನ ಮೇಲೆ ಸಿಂಹರಥಂ ಸಿಂಹಮುಂ ಪಾಯಿಸೆ—

ಕಂಜನಱಿದೆಚ್ಚ ಕೂರ್ಗಣೆ
ಪಂಚಾಸ್ಯನನುರ್ಚಿ ಪಾಱಿ ಪೋದುದೆ ನೆಱೆ ಪಾ ||
ಯ್ದಂಕಿವೊಲಂಬಿನ ಬಱಿಯನೆ
'ಪಿಂಚಿಸಿ'[1] ಗಱಿವಱಿಯು ಪಾಪಿಸಂತಿರೆ ಸಿಂಹಂ ||೬೪||

ಮುರಿದಂಗಂ ಸೀಳ್ದ ಗಾತ್ರಂ ನೊಳಕಲಿಸಿ ಕರಂ ದಂಡೆಯುಂ ಸೀೞ್ದಂದಂ |
ಕರುವಿಟ್ಟಂತಿರ್ಪಸಂ ಚಪ್ಪರಿಸಿ ಬೆರಸಿ ಕಂಠಾಗ್ರದೊಳ್ ನಾಲ್ಕು ಬಾಯುಂ
ತೆರೆದೇಱಪ್ಪನ್ನೆಗಂ ಕಿಟ್ಟಲಗನೊದರಿ ಮೇಲ್ವಾಯ್ದು ಪಂಚಾಸ್ಯನಂ ವೀ |
ರರಸಾಂಗಂ ಶೂದ್ರಕಂಬೋಲ್ ಕದನದೊಳಱಿದಂ ಕಂಸನತ್ಯುನ್ನತಾಂಸಂ

ಕೇಸರಿಯುಗುರ್ವ್ವರ್ಗಯ್ಲಿಂ ಪೊಸ
ಬಾಸುಳವೇಂ ಕಂಸನಂಗದೊಳ್ ನೆಗೆದುವೊ ಕಾ ||
ರ್ತ್ತಾಸತ್ತು ನೆರೆದ ವೀರ
ಶ್ರೀ ಸೆಳೆವೊಂದಸಿಯ ಪಸಿಯ ಕುರುಗುರಿಸವೊಲ್ ||೬೬||

ವ|| ಅಂತು ಸಿಂಹಮುಂ ಸಂಹರಿಸಿ ಸಿಂಹದಿಂ ಮುನ್ನಮೆ ನೆಲದೊಳ್ ಬಿರ್ದಿರ್ದ ಸಿಂಹರಥನಂ ಮೇಗಱಿವಕ್ಕು ಮೇಕೆ ಬಿರ್ದಯುರ್ದ ಸಿನ್ನ ಸಿಂಹದ ಪಲ್ಲನೆಣಿಸಿ ನೋಡೆಂದದಱ ಪಲ್ಗಳಂ ಕಳೆದು ತಲದೊಳಕ್ಕೆ ಮಂದ

---

ಪಾ—1. ಪಂಚಿಸಿ.

ಮತಿಯು ಮುಂದೆ ತಲೆಯುಂ ಚುಂಚಮಂ ಪಿಡಿದು ಚರೆಯುಕ್ಕೆ ಬಿಟ್ಟು ಗೂಂಟ ನೆೞೆದು ತಪ್ಪಂತೆ ತಂದು ನಿಮ್ಮ ಸಿತಗನಪ್ಪ ಸಿಂಹರಥನಿವನಪ್ಪನೆ ಬೆಸಗೊಳ್ಳೆ ಮೆಂದು ಬೆಸನನೊಪ್ಪಿಸಿದ ಕಂಸಂಗೆ ವಸುದೇವನಂಗಚಿತ್ರಮನಿತ್ತು ಸಿಂಹ ಮುಮಂ ಸಿಂಹರಥನುಮಂ ಬಂಡಿಯೊಳಿಕ್ಕಿ ಕೊಂಡುಯ್ದು ಜರಾಸಂಧನ ಮುಂದಿಡುವುದುಂ ಮಂದಸ್ಮಿತಮುಖನಾಗಿ ಚಕ್ರವರ್ತಿ ಬೆಕ್ಕಸಂಬಟ್ಟುತ್ತ ಬಾರೆಂದು ವಸುದೇವಂಗೋರಾಸನಮನಿತ್ತು ಮೆಚ್ಚಿದೆಂ ಬೇಡಿಕೊಳ್ಳನೆ ದೇವಬಿನ್ನಪಮಿದೆನ್ನ ಬೆಸನಲ್ತೆನ್ನ ಚಟ್ಟನ ಬೆಸನೆಂದು ಕಣ್ಸನ್ನೆಯಿಂ ಕಂಸನಂ ಪೊಡೆಮಡಿಸೆ:—

ಪರಚಕ್ರಹರಿಗೆ ರಣಕೇ
ಸರಿಗೆನ್ನಂ ಕರ್ಜ ಮಾೞಲಾರ್ಪುದಟೆಂಬ
ಟ್ಟರದೆ ನಿಬರುಮೊಳರೆಂದೆನೆ
ದೊರೆಯಾನೇಗಣಿತಮವರೊಳಾನೆಪಿಕೆಯುಂ ॥ ೬೭ ॥

ವ॥ ಎನೆ ಕಂಸನಂ ನೀನೆತ್ತಣನಾರ ಮಗನೆನೆ ಕಂಸಂ ಕೈಮುಗಿದು ಕೌಶಾಂಬಿಯ ಕಳ್ಳವತಿ ಮಂದೋದರಿಯ ಮಗನೆಂಬುದುಮಂಗಸವನ ನೆರ ಲೆಱೆಯುಮಂ ನೋಡಿ ನೀಡು ಸಿರವಿಸಿ ನಿಜಾಂತರ್ಗತದೊಳ್—

ಸಿಂಗಮನಿಱಿಪೀಸಾಹಸ
ಮಿಂಗುಲಿಗರ ಮಗನೊಳಾಗರಾರ್ಪೊಡೆ ಪಿಡಿಗುಂ
ಮೀಂಗಗನಾಕೃತಿಯೊಳಮು
ತ್ತುಂಗನಿವಂ ರಾಜಪುತ್ರನಾಗಲ್ವೇೞ್ಕುಂ ॥ ೬೮ ॥

ಕಾಗೆ ಪೊರೆದನಿತಱಿಂದಂ
ಕೋಗಿಲೆ ತಾನದಱ ಪಿಳ್ಳೆಯಕ್ಕುಮೆ ಬೇಗಂ ॥
ನೀಗಿ ನವಜಾತವನದೊಳ್ |
ಪೋಗಿರ್ಕುಂ ಕರ್ಮಘಟಿತಮಘಟಿತಘಟಿತಂ ॥ ೬೯ ॥

ವ॥ ಎಂದು ಮಂದೋದರಿಯುಂ ಕರಿಸಲಟ್ಟಿದರಸಾಳ್ಪೋಗಿ ಬೇಗಂ ಪೊಱಮಡು ನಿನ್ನಂ ಚಕ್ರವರ್ತಿ ಚೆಕ್ಕನೆ ಪಿಡಿದು ತರವೇೞ್ದನೆನೆ ಪಿಡಿವೆತ್ತು

ಪಾ.—1. ದಚೆಸ್ಸಂಬರದೆ. 2. ಪಿಳ್ಳೆ.

ಕಳ್ಳನಂತೆ ಕಳ್ಳವತ್ತಿಗೆ ತಳವೆಳಗಾಗಿ ಬಲಿದುದೆತ್ತಣಮಿಟ್ಟುವೇ ನಿಮಿತ್ತಮೆನೆ ಸತ್ತ್ರವೆನಂ ಜನನೆಡೆಯೊಳ್ ಬಳೆಗಾದುದಾವ ಕ್ಷತ್ರಿಯಬಸಿಱಿಂ ಬಂದನೆಂದರಿಯನೆನ್ನ ಬಸಿಱೊಳ್ ಕಿಚ್ಚಂ ತಗುಳ್ಚಿದನಟ್ಟ ಕಳೆದೊಡಂ ಬೆನ್ನಟ್ಟದಪಂ ಮುನ್ನಿನ ಭವದ ಪಗೆಯೆಂದು ಮಂದೋದರಿ ಮಂಡಸಂ ಪೊತ್ತು ತಂದು ಜರಾಸಂಧನ ಮುಂದಿೞಿಪಿ ಬಿಟ್ಟ ತಲೆಯುಂ ಬೆಮರ್ತ ಮೆಯ್ಯುಂ ಬೆಳ್ಮೊಗನುಂ ಬೆರಸು ಕಾವುದು ದೇವ ಎಂದು ಪುಲ್ಗರ್ಚಿ ಮೆಯ್ಯನಿಕ್ಕಿ—

ಸೊಂದಿಯುವನೆನ್ನ ಮಗನ
ಲ್ಲಂ ದೇವರ ಪಾದದಾಣೆ ಬಿನ್ನಪಮಾಕಾ ||
ಳಿಂದಿಯೊಳಿರ್ದ ಕಂಜಿಸ
ಮಂದಸಿನೊಳ್ ಪುಟ್ಟಿ ಕಂಸವೆಸರಂ ಪಡೆದಂ ||೩೦||

ವ|| ಈ ಮಂದಸಿನೊಳಗಣ ತಾಯ ಕಲ್ಗೞಿಕೊಲೆಯೊಡವುಟ್ಟಿದುವೆಂದು ತೀವಿ ತಂದ ಮಾಣಿಕಂಗಳಂ ಮುಂದೆ ಸುರಿದು ಕೊಲ್ವೊಡಂ ಕಾವೊಡಂ ದೇವರೆ ಬಲ್ಲಿರೆಂಬುದುಮದಂ ದರಹಸಿತಮುಖನಾಗಿ ನಾಗಸಂಪಗೆಯೆಸಳಂತಿರ್ದ ಕನಕಪತ್ರಮನಲ್ಲಿ ಕಂಡು ಬೀಸುಂಬಟ್ಟೆಯುಮಿಲ್ಲದೆ ನಿಬಿಡವಾಗಿ ಬರೆದಿರ್ದಕ್ಕರಂಗಳಂ ಅನುಮಾನಿಸಿ ತಾನೆ ನೋಡಿ:—

(ಸಂಸ್ಕೃತ) ಉಗ್ರಧೀರುಗ್ರಸೇನಾನಾಂ ಕಾನ್ತ್ಮಧುರಾನ್ಮಧುರೇಶಿತುಃ |
ಪದ್ಮಾವತ್ಯಾಮಭೂತ್ಪಂದ್ರಾದ್ರುತ್ಕಾಯಃ ಕಾಮವಹ್ನಿವತ್ ||
ದುರ್ಮುಹೂರ್ತಪ್ರಭೂತತ್ವಾದೋಷದೋಷಗುಣೇಕ್ಷಣಾಃ |
ಮಂಜೂಷಾಯಾಂ ಪಿಕ್ಷಿಪ್ಯ ಯಮುನಾಯಾಂ ವಿಸರ್ಜಿತಃ ||

ವ|| ಎಂದು ವಾಚಿಸಿ ಭಾಗಿನೇಯನಪ್ಪುದನಱಿದು ಸಂತಸದಂತನೆಯ್ದಿ ಬೇಡಿದ ಕಾಡೆೞ ಮುೞಿಕೊಂಡುದೆಳಕುಳಿಗೊಳ್ವಂಗೆಱಂಗೊಟ್ಟಂತಾಯ್ತು ಕವರುಕತ್ತಿಗೆ ಕಡಿತಂಬಂದಂತಾಯ್ತು ಪ್ರದ್ಯೋತನಂಗೆ ಪಸ್ತ್ರನಿಯುಂ ಪಣನಂಬೊಯ್ದಂತಾಯ್ತು ಮುಹೂರ್ತಮೆ ಶುಭಮುಹೂರ್ತ[illegible] ಮಂದೋದರಿ ಬೆಸ[illegible]ಗಾಗಿ ನೋಡುತ್ತುಮಿರೆ:—

ನಿಸವಂ ನಿನ್ನೆನ್ನ ಕೂಸಿಂಗೊಡೆಮನೆಮನಗಿನ್ನುಂಟೆ ತೇಜಂ ಭವತ್ಪಾ
ದಸಸಿಂಹಕ್ರೀಡೆಗಾಂ ಪಂಗಿನನನಱಿದಿರೆಂದುತ್ಸವಾತೋದ್ಯಗೀತಾ ||

ನುಸರಂ ಟಂಕಾರವಂ ಮುಂದಿಡೆ ಮದನಧನುರ್ಮಂಜರೀಜೀವೆ ಜೀವಂ ।
ಜಸೆಯುಂ ಕಂಸಂಗೆ ಕೊಟ್ಟಂ ಜಸಮೆಸೆಯೆ ಜರಾಸಂಧನಾನಂದದಿಂದಂ ॥

ವ॥ ಅದಂ ಕಂಡು ಗಲ್ಲದೊಳ್ ಕೆಯ್ಯನಿಟ್ಟು ಮಱವಟ್ಟಿರ್ದ ವಸುದೇವದರಿಗುತಲುಂ ತುಡಲುಂ ಕೊಟ್ಟು ಕಳಿಪುವುದುಂ ಪಡೆದ ಮರೆ ಬೆಳಗೆಯ್ಯಂತೆ ಒಪ್ಪಿನೇದು ಒಳ್ಳಿತ್ತಿಗೆ ಜತ್ತವಡೆದು ಪೇೞ್ತ ನಿನ್ನ ಮಚ್ಚಿದ ನಾಡಂ ಬೇಡಿಕೊಳ್ಳೆನೆ ಕಂಸಂ ತನಗೆ ತಸಯುಪ್ರಯನಪ್ಪ ತಂದೆಯ ನಾಡನೆ ದಯೆಗೆಯ್ವುದೆನೆ ಕಂಸನ ಕೋಪನಕೋಪಗರ್ಭಗಭೋರದೀರಿತಮನಱಿದು ಧರಣಿಪತಿ ತನ್ಮಂತ್ರಗರ್ತದೊಳ್ :—

ಬಿಸವನುಗುೞ್ದಪ್ಪ ಸೀಸಾ
ಹಸಿ ತಂದೆಗೆ ಕಾಣದೇ[1]ನನೇನಂ[1] ಸಂಸಾ ॥
ರಸವುದ್ರದೊಳಗಿದೇತಾ
ಮಸವೆಸಡಿಯ ಬಸಿಜನೆಡೆದು ಪುಟ್ಟುವೆ ಮಱಗಳ್ ॥ ೭೨ ॥

ಎಸಿತು ಮುನಿದಳುದೋರ್ದಡಂ ನೀ
ರನಿಧಿಯೊಳೊಗೆದಗ್ನಿ ವಾರ್ಧಿಯಂ ತವೆ ಸುಡದಂ ॥
ತೆನಿತು ತನೂಜಂ ತಂದೆಗೆ
ಮುನಿದೊಡವಱಿವಂತು ಪೊಲ್ಲಕೆಯ್ಗಮ ಪಿರಿದುಂ ॥ ೭೩ ॥

ವ॥ ಬಿಸುನೀರ್ ಮನೆಯುಂ ಸುಡುಗುಮೆ; ಕೊಡುವೆನೆಂದು ಕೊಟ್ಟು ಕಳಿಪೆ ಕಂಸಂ ಜರಾಸಂಧಚಕ್ರವರ್ತಿ ಪೇೞ್ದ ಚತುರಕ್ಷೋಹಿಣಿಯ ಬಲಂಬೆರಸು ವಸುದೇವಸಹಿತಮೆತ್ತಿ ಪೋಗಿ ಮಧುರಾಪುರಮಂ ಮಹೀನೂಪುರನುಂ ಕೊಳ್ವಂತೆ ಲೀಲಾಮಾತ್ರದಿಂ ಕೊಂಡು—

ಅರಣಿಯನುರಿಪ್ಪವ ವೈಶ್ವಾ
ನರನಂತಿರೆ ಮನವುಸಿಸುವ ಮನಸಿಜನಂತಂ ॥
ತಿರೆ ಪಿಡಿದು ಕಟ್ಟಿ ಕಂಸಾ
ಸುರಸಿಕ್ಕಿದನಕಟ ಜನಕನಂ ಸಂಕಲೆಯೊಳ್ ॥ ೭೪ ॥

ವ॥ ಅಂತು ಪುಱಿಯೆ ಪಾಲಂ ಕಿಡಿಸುವಂತುಗ್ರಸೇನನಂ ಕಿಡಿಸಿ ಮಧುರಾಪುರದ್ವಾರದೊಳ್ ಸಂಕಲೆಯೊಳ್ ಸೆಱಗೆಯ್ದುದೆ ಸಂಸಾರಶರೀರಭೋಗನಿರ್ವೇಗಕ್ಕೆ ಕಾರಣನಾಗೆ ಯುವರಾಜಲಕ್ಷ್ಮಿಯನುೞಿದು ಯತಿಮುಕ್ತಕಂ ತಪಸ್ವಿಮಾನ್ಯಲಕ್ಷ್ಮೀಸಂಭೋಗಶೃಂಗಾರಪಯೋಪಯೋನಿಧಿನಿಮಗ್ನಸರೋಜನಾಗೆ ಕಂಸಂ ವಸುದೇವನಂ ಒರಿಸಿ ಸಿಂಹಾಸನಾಲಂ

ಪಾ.—1. ನೆನಗೀ.

ಕೃತನಂ ಮಾಡಿ ಸಾಷ್ಟಾಂಗಪ್ರಣತನಾಗಿ ನಿಟಿಲತಟವಿಘಟಿತ ಕರಕುಶೇಶಯಕುಟ್ಮಲನಿಂತೆಂದು ಬಿನ್ನಯಿಸೆ:-

ಹರಿವಂಶಂ ಹರಿವಂಶದಂತತುಲಭೋಗಖ್ಯಾತಮಾಯ್ತುರ್ವರಾ |
ಧರದಂದಂ ಸ್ಥಿರಮಾಯ್ತು ಶಾಸನಮುಮಾಯ್ತಾನರ್ಘಮೆಂಬಂತೆ ಪೃ ||
ಷ್ಠರಿಯಂತಾಯತದಾನಮಾಯ್ತು ದಧಿಯಂ ಕೃದ್ಧತ್ವ ಧಾಧಾಮುಮಾ |
ಯ್ತರವಿಂದಾಕರದಂತೆ ಲಕ್ಷ್ಮಿಗೆಲಾಸ್ಪದಂ ನಿಮ್ಮ ಕಾರುಣ್ಯದಿಂ ||೩೫||

ಅನೆತ್ತ ಕರ್ಣಸುತಾಪ್ರತಾಪಧರಮೆತ್ತಲ್ಲರ್ದ ಮಂಜೂಷೆಯು |
ತ್ತಾನೀಚಾಶ್ರಯಮೆತ್ತ ನಿಮ್ಮ ಬರವೆತ್ತೀ ಶಾಸ್ತ್ರ ಶಸ್ತ್ರವುಂ ||
ತಾನೆತ್ತಿಕ್ಕುವುದೆತ್ತ ಸಿಂಹರಥನಂ ಚಕ್ರಿಪ್ರಸಾದೋದಯಾ |
ಧೀನಂ ರಾಜ್ಯಮಿದೆತ್ತ ದೇವುದಿಸಿತುಂ ಯುಷ್ಮತ್ಪ್ರಸಾದೋದಯಂ ||೩೬||

ಅದಱಿಂದೆನ್ನುಮನೆನ್ನ ರಾಜ್ಯಭರಮುಂ ಸಪ್ತಾಂಗಮುಂ ಸಸ್ಯಸಂ |
ಪದಮುಂ ವಾರಿದಮುಂಬುಜಾತವನಮುಂ ತಿಗ್ಮಾಂಶು ನೀಳೋತ್ಪಳಾ ||
ಸ್ಪದಮುಂ ಶೀತಮರೀಚಿ ರಕ್ಷಿಸುವವೋಲ್ ನೀಂ ರಕ್ಷಿಸೆಂದೆಂದು ಬೇ |
ಡಿದನಾತಂ ನತಮೌಳಿರತ್ನರುಚಿಗಳ್ ತೀಟ್ಪುಯ್ಯೆ ದಿಗ್ಭಾಗಮುಂ ||೩೭||

ವ|| ಅಂತು ಬೇಡಿಕೊಂಡು ತನ್ನಯ ಮನೆಯ ಒಳದ ಕೆಲದೊಳನೇಕನೂತ್ನರತ್ನರಾಜಿರಾಜಿತ ಚಂಚತ್ಕಾಂಚನಮಯಮಹಾರಾಜಭವನಮುಮಂ ಮಾಡಿಸಿ ಕೊಟ್ಟು ಮುನ್ನಮೆ ವಸುದೇವನ ರೂಪವಿಲಾಸಸೌಭಾಗ್ಯಭಾಗ್ಯೋದಯಮುಮಂ ಕೇಳ್ದು ಕಿವಿವೇಟಂಗೊಂಡು ಕಾಮುಕಾಮೂರ್ಛನಿಮೂರ್ಛಿತ್ತ ಶಿಲೀಮುಖಸಹಸ್ರಸಮಾಕ್ರಾಂತಮಾನಸಸರೋಜಸಂಭಾವಕಿಯಾದ ದೇವಕಿಯ ಭಾವಮನಂತಃಪುರಪರಿಚಾರಕಿಯರಿಂ ಕೇಳ್ದು—

ಭೂವರವಸುದೇವಂಗೆ ಮ
ಹೀಪಿಶ್ರುತಕಂಸರಾಜಸಿತ್ರಂ ಬುಧನಂ ||
ಭಾವಕಿಯಂ ಮಾಸ್ಮಘನಂ
ಜೀವಕಿಯಂ ವಿಹಿತವಿಭವದಿಂ ದೇವಕಿಯಂ ||೩೮||

ಸರಸಿಜಸಂಭವಂ ಕುಸುಮಸಾಯಕನಾಗಿ ಸುಧಾಂಶು ಚಂದನಂ |
ಸರಸಿಜಮುತ್ಪಲಂ ನಂಸಿ ಚಂದ್ರಿಕೆ ಮಾಲತಿ ಚಂದ್ರಕಾಂತಮಂ ||
ಧುರಪರಮಾಣುವೆ ಬಿಮ್ಮ ಮನಸ್ಸುಕುಮಾರಹಸ್ತದಿಂ |
ವಿರಚಿಸಿದಂ ನಿಜೇಶಮುಖಸೌರಭಭೃಂಗಿಯನಾಂತಾಂಗಿಯಂ ||೩೯||

ವ|| ಮತ್ತಮಾಮನೋಜರಾಜಯೌವನವನವಸಂತಲಕ್ಷ್ಮಿಯು ಚರಣಪಲ್ಲವಾರುಣಿತನಖಮಯೂಖಮಾಲಾಮಂಜರಿಯಾ ರಾಜಶೇಖರರತ್ನನ ಚೂಡಾಮಣಿಗೆ ಚೂಡಾಮಣಿಯಾಗೆಯುಂ, ಅರತಿಪತಿ ಕೃತಕಗಿ

ರಿಸಾನುಕಲ್ಪಲತೆಯುಮಾಜಾನುಕಲ್ಪಲತೆಯುಮಾಹರಿವಂಶಪಾರಿಜಾತಶಾಖಾನುಕಾರಿಯುಮಾಜಾನುಶಾಖಾದ್ವಯಮುಮಾವೇಷ್ಟಿಸಿಯುಂ, ಆಮನ್ಮಥಮಹಾರಾಜರಾಜಭವನಮೂಲಸ್ತಂಭಸಾಂಚಾಳಿಕೆಯುಂ ರಂಭಾಸ್ತಂಭಾನುಕಾರಿಯುಮಾದೂರುಶೋಭೆಯುಮಾಕುಮಾರಕುಂಜರನ ಮನಃಕುಂಜರಾಲಾನಸ್ತಂಭಮಾಗೆಯುಂ, ಆಕಂತುಕೇಳೀತರಂಗಿಣೀಪುಳಿನಸ್ಥಳಮುಂ ನಿತಂಬಪುಳಿನಸ್ಥಳಮಾರಾಜರಾಜಹಂಸನ ಲೀಲಾರಾಜಹಂಸೀವಿನೋದಕ್ಕೆ ಪುಳಿನಸ್ಥಳಮಾಗೆಯುಮಾಕಾಮಕಾರ್ಮುಕಾಯಮಾನ ಭ್ರೂಲೇಖೆಯುಂ ಮುಷ್ಟಿಗ್ರಾಹ್ಯಮಧ್ಯಮಾಧನುರ್ವಿದ್ಯಾವಿಶಾರದಪುತ್ರ್ಯಾದೇಶನ ಕೋದಂಡಮಧ್ಯಪ್ರದೇಶಮಾಗೆಯುಮಾಕುಸುಮಾಯುಧಕುಂಭಿಲೀಲಾಕುಂಭಿಸಿಯುಂ ಕುಚಕುಂಭಮಾರಾಜಮೂರ್ಧಾಭಿಷಿಕ್ತನ ಸಾಮ್ರಾಜ್ಯಾಭಿಷೇಕಶಾತಕುಂಭಕುಂಭಮಾಗೆಯುಮಾಶೃಂಗಾರಸಂಭವಶರಚ್ಚಂದ್ರಚಂದ್ರಿಕೆಯುಂ ಮುಖಚಂದ್ರನಾಹರಿವಂಶಚಕೋರೀಚಂದ್ರನ ಚಂದ್ರಿಕಾವಿಹರಣಕ್ಕೆ ಸಂಪೂರ್ಣಚಂದ್ರನಾಗೆಯುಮನೂನಕಾಮಸಾಮ್ರಾಜ್ಯಸುಧಾಪಯೋಸಿಧಿಯೊಳೋಲಾಡುತ್ತುಮಿರೆಯಿರೆ:--

ತನು ಸೋಂಕಿಂ ಮಧುರಾಧರಾಮೃತದೆ ಸರ್ವಾಂಗೀಣಸೌಗಂಧ್ಯದಿಂ |
ಘನಲಾವಣ್ಯಸಮೃದ್ಧಿಯಿಂ ಪಿಕಸಿನಾದಸ್ಫೂರ್ತಿಯಿಂದೀಯೆ ಕಾ |
ಮಿನಿ ಪಂಚೇಂದ್ರಿಯಸೌಖ್ಯಮಂ ತಳೆದನುರ್ವೀಪಾಲವಂಶಪ್ರಭಾ
ದ್ಯುನದೀದ್ಯೋತಪಯೋಜಬಂಧುವು ಪ್ರತಿದಿನಂ ಸಾಹಿತ್ಯವಿದ್ಯಾಧರಂ ॥೮೦॥

—ಗದ್ಯ—

ಇದು ಮೃದುಪದಬಂಧಬಂಧುರ ಸರಸ್ವತೀಸೌಭಾಗ್ಯಭಂಗ್ಯಭಂಗಿಸ್ಥಿತಸದೀಪವರ್ತಿ
ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರ ಕೃತಮುಂ
ಶ್ರೀಮತ್ಪ್ರತಾಪಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾದಿತ
ಮಹಾಪ್ರಧಾನ ಸೆಟ್ಟಿಸೆಕ್ಕ ಪದ್ಮನಾಭದೇವ ಕಾರಿತಮುಮಪ್ಪ

## ನೇಮಿನಾಥ ಪುರಾಣದೊಳ್

ದೇವಕೀದೇವಿ ವಿವಾಹೋತ್ಸವವರ್ಣನಂ

ಷಷ್ಠಾಶ್ವಾಸಂ ಸಮಾಪ್ತಂ

# ಸಪ್ತಮಾಶ್ವಾಸಂ.

ಶ್ರೀವೆರಸು ಬಂದ ಚಂದ್ರಮ |
ನೀವಮೃತವನೀಯೆ ತನಗೆ ಮಧುರಾಧರದಿಂ ||
ದೇವಕಿಯ ನಗೆಮೊಗಂ ವಸು |
ದೇವಂ ದೇವಂಬೊಲಿರ್ದನಪ್ರತಿಮಲ್ಲಂ ||೧||

ವ|| ಒಂದು ದಿನಂ ಮಧ್ಯಂದಿನಸಮಯದೊಳ್ ಮಧುರಾಪುರಕ್ಕೆ—

ಬರಿಯೆಲ್ ಬೇೞ್ಪುದಱ ಕಂಕಾಳಿಕೆ ಪೆಡತಲೆಯೊಳ್ ಪೊಕ್ಕು ಕಣ್ ತೋರ್ಪಱ ಕೆಯ್ಯ್ಗ |
ಳ್ಸರೆ ಪಾತಾಳಕ್ಕೆ ಪೊಕ್ಕಿರ್ದೊಱಣವನೀಱುಡುಗಿರ್ದೊಱಂದುರಂ 'ಪೂೞ್ದ' ಬಾಯ್ ಜೇ ||
ಕರಿಯೋದಂತಿರ್ದಱ ಬಾನಂಗುಳಿ ಗಟಗಟಜಂತ್ರಂಬೊಲಾಗಿರ್ದಱ ಮೆ |
ಯ್ಸಿರಿ ಜಿದ್ರಾಪಕ್ಕ ಪಕ್ಕಾಗಿರೆ ಜರಿಗೆಗುಣಿಲ್ಬಂದನೊರ್ವಂ ಮುನೀಂದ್ರಂ ||೨||

ಬಿಸಿಲಿಂದಳುರ್ದೊಱ ಡೆದೊಡಲಿಂ
ಪಸಿವೆಂಬಸದಗ್ನಿ ಶಾಂತರಸದಿಂ ಮುಸಿಯಾ |
ಯ್ತೆಸದಳಮೆನೆ ಮುಯ್ಯು ಮುಲಂ |
ಮಿಸುಗಿದುದಾಮುದನಕರಟಿಕಂಟೀರವನಾ ||೩||

ಕೆಳರ್ದುಱ ಮಿೞ್ದುರಿದು ಗಗನಮು
ನಳುರ್ದುಱ ತಪೋಧನನ ತಪದ ಸೆಗಳ್ ಕನಲ್ದು |
ವ್ವಳಿಸೆ ತನಗೊಂಡಿ ಕಾಡುವ
ಜಳಧರಮಂಡಳದ ಮಱೆಯನರ್ಕಂ ಪೊಕ್ಕಂ ||೪||

ವ|| ಅಂತುಮಲ್ಲದೆ —

ಅಡವಿಯ ಕಿಚ್ಚುಱ ಕರ್ಚಿದುದು ಪುಲ್ಗಳನುಕ್ಕುವ ನೀರ ಕಿಚ್ಚುಱ ಪೆ |
ಗಱಡಲೊಳಡಂಗಿ ಪೋದುದು ಪ್ರಾಂತಕನಗ್ಗಳಗಣ್ಣ ಕಿಚ್ಚುಱ ಕೆಂ ||

ಪಾ.—1. ಪೊಣ್ಣ.

ಜಡೆಯೊಳಗಿರ್ದ ಗಂಗೆಯೊಳಗದಿರ್ದುದು ತನ್ನುರಿಪಕ್ಕೆನಲ್ ಕರಂ
ಕಿಡಿಗಿಡಿ ತಾಗುತಿರ್ದುದು ಮಹೋಗ್ರತಪಂ ತಪದಂಕಕಾರಣಾ ॥೫॥

ವ ॥ ಅಂತಪ್ಪ ತಪೋಧನನತಿಮುಕ್ತಕನೆಂಬೊನುಗ್ರಸೇನನಗ್ರಜನಪ್ಪ ದೇವಸೇನನ ಸೂನು ದೇವಕಿಯುಗ್ರಜಾತಂ ಕಂಸಂ ತನ್ನ ತಂದೆಯುಂ ಸೆರೆಗೆ ತಂದುದೆ ತನಗೆ ನಿರ್ವೇಗವಂ ತರೆ ತಂಪಗೆಯ್ಯುತಿರ್ದು ಮಾಸೋಪವಾಸದ ಪಾರಣೆಯೊಳ್ ಭ್ರಾಜಿಸಲೆಂದು ಕಂಸನರಮನೆಯ ಮುಂದಣಿಂ ಚರಿಗೆಗುಡುವುದುಮಾಪ್ರಸ್ತಾವದೊಳ್ ಪೊಸತಳಿರಂ ಪಿಡಿದಾಡುವೆಳಲತೆಯಂತೆ ದೇವಕಿಯಾನಂದವಸ್ತ್ರಮುಂ ಪಡಲಿಗೆಯೊಳ್ ಪಿಡಿದೊಸಗೆಮುರುಳ್ಗೊಂಡು ದೆಸೆವರಿನರಿದಾಡುವ ಜೀವಂಜಸೆ ಬಿಸಿಲ್ ಪತ್ತಿದತಿಮುಕ್ತಕನಂತೆ ಬಂಬಳ ಬಡಿಸರ್ದ ಯತಿಮುಕ್ತಕನಂ 'ಕಂಡು' ವೇಗದಿಂದಿರ್ದರೆ ತಮ್ಮಂ ನಿಲಿಪಲ್ಬಂದಪಳೆಂದು ಮುನಿ ಮುಂದೆಗೊಂಡು ಬರ್ಪನ್ನೆಗಂ

ಭಾಮಾ ನಮೋಸ್ತು ಸಿಮ್ಮಡಿ ।
ದೇವಕಿ ಮೆಯ್ಮೆರೆದಳೆಂದು ಬಂದಿರೆ ಲೇಸಾ ।
ಯ್ತಾವುವನುಡ ತಂದಿರೆನು
ತ್ತಾವಧು ಮೆಯ್ಪುಸಿಸಿ ನಗುತುಮತ್ತಂಬಂದಳ್ ॥೬॥

ಬತ್ತಲೆ ಬಂದಿರ್ ಪಿಡಿಯಿಂ
ಸುತ್ತಿಪುದಂ ಸಿಮ್ಮ ತಂಗಿಯುಡಲಿಟ್ಟಿದಳೆಂ ॥
ದೆತ್ತಿದಳವಂಗೆ ಮೊಗಮುರಿ
ದತ್ತಾತ್ತಾನಂದವಸ್ತ್ರಮಂ ದೇವಕಿಯಾ ॥೭॥

ವ ॥ ಅಂತು ತನ್ನ ಕುಲವಲ್ಲರಿಯುಂ ಜೀರ್ಣರಸು ಕಿತ್ತಿತ್ತುವಂತೆ ವಿರಕ್ತರ ಮೊಗಕ್ಕೆ ರಕ್ತವಸ್ತ್ರಮನಿತ್ತೆ ನಾಣ್ಚಿದರುಂ ನಾಣ್ಚಿನುಣ್ಚೆನೆಲನಡಿಯೊಗುತ್ತಿರ್ದುದೆ(?) ತನಗೆ ನಾಸೋಂಡು ಪೋಗುವಸಿತಾಗೆ ಕೇಳ್ ಕೊಂಚಾಡಿ ಕಾಡಿದ ಜೀವಂಜಸೆಯ ವಚನಮ ವಾಟಾಸಮಿತಿಗೆ ಪಿಚ್ಚುವಾಗಿ ಭಿಕ್ಷುವಿನ ಬುಭುಕ್ಷಾನಳನೆ ರೋಷಾನಳನಾದಂತೆ ಮುನಿ ಮುನಿಯದೊಡಂ ಮುನಿಯದ ಮುನಿ ಮುನಿದಿಂತೆಂದಂ:—

ಪಾ. —1. ನೊಂದು.

ಅತ್ತಿಗೆ ಕೇಳ್ಪೇೞುತಿರ್ಪೈ |
ಮಿತ್ತಿಕಗೆನವೇಡ ಪೇೞ್ವೆಮೀಬದ್ಧವಣ ||
ಕ್ಕತ್ತಿದ ಕೆಯ್ಯ್ಯನೆ ಬಸಿಱಿಂ |
ಗೆತ್ತುವೆಯಿದು ಕೂಡದಂದು ಕಾಡೆಲೆ ಕುಲಟೇ ||೮||

ತೋಱಿಸುಗುಮೆಮಗೆ ತೋಪೀರ್
ಕೂಱಿಯ ದೇವಕಿಯ ತನಯನಿಂದಂ ನೆತ್ತ ||
ಗಾರ್ಱುವ ಕಂಸನ ನೆತ್ತರ |
ಕೂಱಿಯನಿದು '¹ತಪ್ಪದಂದು' ನಿನಗುಂ ಮಗಳೇ ||೯||

ವ|| ಎಂದೊಡಾಕೆ ಕೆಕ್ಕಟಗೆ ಕಟ್ಟಗಿಳರ್ದಿಟ್ಟಂಗಾಱದೆ(?) ಪೆಂಟೆಯಂ ಕಚ್ಚುವಂತೆ ಪುಟ್ಟಿದ ಮನೆ ಪೊಕ್ಕಮನೆಯೆರಡುಂ ಕೇಡನಾಡಿ ತೋರ್ಪಂತಾಕಪ್ಪಡಮನೆರಡು ಕಡಿಯಾಗೆ ಸೞ್ನೆ ಸೀೞ್ದೀಡಾಡುವುದುಮವರ್ಮುತ್ತಮಿಂತೆಂದರ್:—

ಜೀವಂಜಸೆ ಯುದ್ಧನಿಬ |
ದ್ಧವನಿಯೊಳ್ ನಿನ್ನ ಗಂಡನಂ ತಂದೆಯುಮಂ ||
ದೇವಕಿಗೆ ಪುಟ್ಟಿದಾತನೆ |
ದೇವಕಾರ್ದೊಡಮುಡುರ್ತು ಕೊಲ್ಲದೆ ಮಾಣಂ ||೧೦||

ವ|| ಎನೆ ತನ್ನ ಕಿವಿಗೆ ಮಹಾಪ್ರಳಯಂ ಕವಿದಂತಾಗೆ ಕಾಲಮೇಲೆ ಬಿದ್ದಱಿಯದೆ ಗೆಯ್ದುಂ ಕ್ಷಮಿಯಿಸುವುದುಮೆಂದ ಜೀವಂಜಸೆಗವರಿಂತೆಂದರ್ :—ಮ್ಮ ಪರಕೆಗೆ ತೆಱವ ಬಾಯುಂ ಬಯ್ದುಳ್ೞಿಗೆ ತಿಱಿಯಿಸಿದೆ, ಕ್ಷಮೆಗೆ ಬಂದ ಮನಮುಂ ಮುನಿಸಿಂಗೆ ಒರಿಯಿಸಿದೆ, ಎಂತು ಕ್ಷಮಿಯಿಸುವೆಂ, ಅದು ನಿನ್ನ ನಸುನಗೆನಗುವ ಮೊಗಮನೞಿಸಿದಲ್ಲದೆ ಮಾಣದು ;

ದೇವಕಿಗಪ್ಪ ತನೂಜಂ |
ಭೂವಳಯಮನೆಱಗಿಪಂ ನಿಜಾಂಘ್ರಿಸರೋಜ ||
ಕ್ಕೀವಿಧದಿಂದಮಿದಾತನ |
ಭಾವಿಸಲಾಲಿಖಿತಮೆಂದು ಮುನಿಪತಿ ಪೋದಂ ||೧೧||

ಪಾ.—1. ತಪ್ಪದಂದು.

ಎಂಬುದುಮಂಬು ಕೋಡ ಮಱಿವುಲ್ಲೆ ವೋಲಿಕೆ ನೆಲಕ್ಕೆ ಬಿರ್ದು ಬಾ |
ಯಂ ಬಸಿಱಿಂಬಿವಂ ತರೆದುಕೊಂಡು ಪೊರಳ್ದಳ್ ನಂಬಿ ತೊಟ್ಟ ಹಾ ||
ರಂಬೆರಸಿಟ್ಟ ಕೆಯ ಕಡಗಂ ಬೆರಸಿಕ್ಕಿದ ಕರ್ಣಪತ್ರಪ
ತ್ರಂಬೆರಸಶ್ರುಗಳ್ಗೆದೆದು ನಾಕೆಯ ಗಂಡನ ಸಾವುಗಂಡವೋಲ್ ||೧೨||

ವ|| ಅಂತಾಬಾಲೆ ನೀರ್ಪೊಗೆಗಿಱಿದ ಬಾಳೆಯಂತೆ ಮಿಡುಮಿಡು ಮಿಡುಕಿ ಪುಡಿಯೊಳ್ ಪೊರಳ್ದು ಮೂರ್ಛೆವೋಗೆ ಪರಿಚಾರಕಿಯರ್ ಪರಿತಂದೆತ್ತಿಕೊಂಡು ಪೋಗಿ ಪಾಸಿನೊಳ್ ಪವಡಿಸಿ ಬಿಜ್ಜಣಿಗೆಯೊಳ್ಬೀಸಿಯುಂ ಕಣ್ಬನಿಯುಂ ಸೂಸಿಯುಮಂತಾನುಮೆಚ್ಚಱಿಸಿ ಮೂರ್ಛೆದಿಳಿಯೆ ತಾನುಂ ತಿಳಿದು ಪೆಱುಗೆಱೆದಱಲ ಕಿಚ್ಚುರ್ಪೊಳ್ಳುರದ ಕಿರ್ಚಿನಂತೊಳಗೊಳಗೆಱೆತೆ ಕನ್ನದೊಳ್ಸತ್ತ ಕಳ್ಳನ ತಾಯಂತೊಳಗೊಳಗೆಱೆತೆ 'ತನ್ನ ಗೆಯ್ದ' ಪಾತಕದಂತಾಗರ್ವಮುಸಿರಲಣ್ಮದೆ ತನ್ನೊಳಂತೆಂದಳ್:—

ಕಂಜದಳಾಕ್ಷಿ ಮೆಯ್ಮರೆವುದೇಕೆ ಮಹಾವ್ರತಿ ಬರ್ಪುದೇಕೆ ಬಂ |
ದಂಜದೆ ಮೂಱರ್ನಂ ಮಿಗೆ ಕಳಲ್ದಿದನೇಕೆನಗಾತಪೋಧನಂ ||
ನಂಜಿಡಲೇಕೆ ಭಾವಿಸೊಡಿದೆನ್ನ ಪುರಾಕೃತಕರ್ಮಮೊಂದು ಜೇ
ವಂಜಸೆ ಜೀವವುಂ ಪದುಳಮಿಟ್ಟು ವಿಷಾದದೊಳಿರ್ದಳಿರ್ಪಿನಂ ||೧೩||

ವ|| ಕಂಸನಾಕೆಯಿರ್ದವಸ್ಥಾಂತರಮಂ ಬಂದು ಕಂಡು ಬೆರ್ಚಿ ಬೆಗಡುಗೊಂಡು—

ಮೊಗಮಿಸಿತಾದುದೇಕೆ ನಗೆ ಪೋಗಲಿದೇಕೆ ಕಡಂಗಿ ಕಣ್ಣ ನೀರ್
ನೆಗೆದಪುವೇಕೆ ಸುಯ್ ಬಿಸಿಯವಾದುವಿದೇಕೆ ಕದಂಪು ಕೆಂಪನಾ ||
ಳ್ದುಗುಳ್ದಪುವೇಕೆ ಗಗ್ಗರಿಕೆಯಗ್ಗಳವಾದುವಿದೇಕೆ ನೀಂ ಕರಂ
ಪೊಗೆದಪೆಯೇಕೆ ಪೇಳೆನಗೆ ಪಂಕಜಪತ್ರವಿಶಾಲಲೋಚನೇ ||೧೪||

ವ|| ಎಂಬುದುಂ

ನಿಡುಸುಯ್ದು ಮೊಗದ ಕೆಂಪಂ
ಕುಡಿವಳ ಪಾಱಿಮವು ಮೊಗದೊಳುಳ್ಳಕ್ಕರಮಂ |
ಗಡೆ ಪಾಱಿದಂತಿರಿವು ಪೋದೊಡೆ |
ನುಡಿಯುಳ್ಳುಱಿಯುದಂತೆ ಮೋನದೊಳಿರ್ದಳ್ ||೧೫||

---

ಪಾ — 1. ತನಗ್ಗೈದಿದ.

ವ॥ ಅಂತಾಕೆ ಮೂಗರ್ ಕಂಡ ಕನಸಿನಂತೇನುಮಂ ನೆನಲಱಿಯದೆ ಕಿಱಿದುಬೇಗಮಿರ್ದು ನಿನಗೆ ನುಡಿಯಲ್ತಕ್ಕ ಮಾತಲ್ತೆಂದು ತಲೆವೀಸಿ ಯಮುನನನವಕ್ಕರಲಾಱದಿರ್ದೊಡು ಬಾರದುದಂ ಬಂದನೆಂದು ಮೆಯ್ಯುನಿಸಿ ದೇವಕಿದೇವಿಯಾನಂದವಸ್ತ್ರಮಂ ತೋಱಿ ತಱತಟಗಾಡಿದೊಡೆ ಎನಗೆನಗೆ ಯೆಂದಱಿಯದತಿಮುಕ್ತಕಮುನಿ ಮುನಿದಿಂತೆಂದನೆಂದರ್ಥೋಕ್ತಿಯೊಳ ಮೊನಂಗೊಂಡೆಡೆಗೆ ಗುಡುಗುಡನೆ ಕವಿವ ಕಣ್ಬನಿಗಳಂ ಸೆಳ್ಳುಗುರಿಂ ಸಿಡಿಮುಸಿಡಿದು —

ತನ್ನನುಜೆಗೆ ನಂದನನ
ತ್ಯುನ್ನತನಪ್ಪಂ ಗಡಾಗಿ ಸೀಂಟಿದುವೀವಾ ॥
ತೆನ್ನದಿರೆನ್ನಯ ತಾಯುಮ ।
ನೆನ್ನುಮನವನೋಲೆಗಳಸುವಂ ಗಡ ಕೇಳಾ ॥೧೬॥

ವ॥ ಎನೆ ಕೇಳ್ದು ಕಂಸಂ ಮೊಱಗಂ ಕೇಳ್ದು ಹಂಸನಂತೆ ಕುತ್ತು ವಡೆದಂತಾಗಿ:

ಕವಡೆ ಕಲಂಕದಿಕ್ಕೆಮ ಮರುಳ್ನುದಯುಂ ಪೊಱದಿಕ್ಕೆ ಕಂದು ನಾ
ಡದೆ ಪೊಸಪೂವುಮೇನರೆಯ ಚಂದನದೊಳ್ ಕಿಡಿ ಪುಟ್ಟದೇ ಸುರರ್ ॥
ಸೊದೆಗಡಲಂ ಕರಂ ಕಡೆಯೆ ಪೇೞ್ ವಿಷಮೇಱದೆ ಶಾಂತರಪ್ಪರಂ
ಮದಮುದಿತಾತ್ಮರೇೞಿಸೆ ವಿಕಾರಮನೆಯ್ದದೆದೇಕೆ ಸೈರಿಪರ್ ॥೧೭॥

ಮರುಳ್ ಕಡುಪೊಲ್ಲಕೆಯ್ದೆ
ಪಿರಿಯಂಗಂ ಮರ್ಮವೇದಿಗಂ ಮೂರ್ಖಂಗಂ
ನರಪತಿಗಂ ಧನಪತಿಗಂ ।
ಗುರುಗಂ ದೈವಕ್ಕಮಂಜವೇೞ್ಕುಮಮೋಘಂ ॥೧೮॥

ವ॥ ಇದಕ್ಕೋರ್ವಜರೇಕೆ । ಜನಮೆಲ್ಲಮಱಿಗುವರ್ಗಗದವರು ರದರನುರದಿಪುರ್ವದನೀವೊಲೆಯುಣ್ಬ ಮಕ್ಕಳೊಳಗಾಗಿ ಬಲ್ಲರ್ "ಸಮಣೋ ಅಮೋಘವಯಣೋ" ಎಂಬುದು ನಗುತೆಂದೊಡಂ ಸವಣರ ಮಾತು ಸತ್ಯಂ ಅದೆಂತೆಂದೊಡಮೇನಾಯಿತ್ತಿದಕೆಂದುಪಾಯಮಂ ನೆನೆದಂ ಕಾರಣ

ಪಾ.—1. ನಂತೇನುಮಂ.

ಮಿಲ್ಲದೆ ಕಾರ್ಯಮೆಂತಾದಪ್ಪುದು | ಇದರ್ಕೆ ಕಾರಣಭೂತಮಪ್ಪ ದೇವಕಿ ಯನೆ ಕೊಳ್ವೆನೆಂದು ಮನದೊಳೆತ್ತಿ ಕೊಳ್ವುದುಂ ಒಂದು ದಿವ್ಯಧ್ವನಿಯಾಗ ಸದೊಳಗೊಗೆದುದನೆ ಕೇಳ್ದವಧರಿಸಿ ದಿವ್ಯಕ್ಕೆ ಪಲ್ದಿನುತ್ತುಮಾಗಳೆ ವಸು ದೇವಸ್ವಾಮಿಯ ಸಮೀಪಕ್ಕೆ ಪೋಗಿ, "ವಿನೀತಿಧೂರ್ತಲಕ್ಷಣ"ಮೆಂ ಬಂತೆ ಭಯಸ್ಥನಾಗಿ ತುಱುಲ್ಗೆಯ್ದು ಕಾಲ ಕೆಳಗೆ ಕುಳ್ಳಿರ್ದು ಕೆಯ್ಮು ಗಿದು ಕಂಸನಿಂತೆಂದಂ:—

ತವರುಂ ಪೊಕ್ಕಿಲುವಾಗಿ ಮದ್ಗೃಹಮಿವಳ್ಗೆಸಂತಸಕ್ಕಿಲ್ಲದು |
ಕ್ಕೆವಸೌಧರ್ಮಿಕೆಯಿಂದಮೇಂ ಭಗಿಸಿಯಪೆತ್ತುತ್ಸವಕ್ಕಾದ ಬ ||
ದ್ದವಣಂ ಪೆರ್ಮನೆಗುದ್ಧವಂ ಪಡೆಗೆ ಸಾಸಿರ್ಮಕ್ಕಳಂ ಪೊತ್ತು ತೀ |
ವುವುಮಂ ಪೋ ಕಳೆಸಿಂ ಮದೀಯಭವನಕ್ಕೆದೇವಕೀದೇವಿಯುಂ ||೧೯||

ಎಂದು ಪಯೋವಮುಂಬವಿಪಕಂ |
ಭಂ ದೈನ್ಯಂಬಟ್ಟು ಬೇಡಿಕೊಂಡಂ ದಯೆಗೆ |
ಯ್ಯೊಂದೊಡೆ ಮನಮಲ್ಲದ ಮನ
ದಿಂದಾವಘುದೇವಸಿತ್ತನಾತಂ ಪೊತ್ತಂ ||೨೦||

ಸಿರಿವಂತರಾ ತಂಗೆವಿರಂ |
ತರಿಸಿ ತವರ್ಮನೆಗೆ ಪಿಂಗಲುಂ ಪೆಱಲುಂ ಬಿ |
ತ್ತರಿಪುದೆಸ ಬಲ್ಲದೆರ್ದೆ ಕ |
ತ್ತರಿ ನಾಲಗೆ ಬೆಲ್ಲಮೆಂದು ಬಲ್ಲವರೊಳರೇ ||೨೧||

ಪಿನಯಮೆ ಸಾಧುಜೆಂತೆ ಕರಮಾರ್ಥಮೆ ತಾನಪಕೀರ್ತಿಹೇತು ದು |
ರ್ಜನನತಿವಾಕ್ಪಟುತ್ವಮೆ ಲಸದ್ಗುಣದೂಷಣನಾಯಿ ರೂಪು ಯೌ |
ವನಮೆ ಪರಾಂಗನಾಪಹರದಿಂ ಬೇಗಾದಪೆನಾತನಿಂದಮಾ
ತನ ಗುಣದೊಂದು ದುರ್ಜನಿಕೆ ಮುಕ್ಕದು ಲೋಕದ ಪಾಪಮಲ್ಲದೇ ||೨೨||

ಖಲನೇಂ ಕಾಣ್ಗುಮೆ ಗುಣಮಂ |
ಕಲಂಕಮಂ ಕಾಣದಂತೆ ಸುಜನನುಲೂಕಾ
ವಲಿ ಬಿಸಿಲಂ ಸೂರ್ಯಂ ಕ |
ತ್ತಲೆಯುಂ ಮದ್ಗಿಂಗಮುಱಿಸಿ ಕಂಡೆಡೆಯುಂಟೇ ||೨೩||

ಜನಪರ ಕಿವಿಯೊಳ್ ಪಿಸುಣನೆ ।
ಜೆನುಗುಗುವುದು ಕುಡುವ ಭೀತಿಯಿಂ ದಿಕ್ಕರಿಕ ॥
ರ್ಣಸಿಕಾಯಾಸ್ಫುಟನಪಟಂ ।
ಘನಕಂಠೀರವ ರವಂಗಳುಂ ಕೊಟ್ಟಪುವೇ ॥೭೪॥

ಚಿಂತಿಸಿದಂ ಕಿಱುವಂಗೆಯು ।
ಸಂತತಿಯಂ ಕೊಂದು ಕೂಗಲಿರುಳುಂ ಪಗಲುಂ ॥
ಚಿಂತಿಸನೆ ಕೊಳ್ಳಿತುಳ್ಳರ ।
ಚಿಂತಾಗರಪಿಹಿ ಯೆಂಬ ನುಡಿಯಂ ಕಂಸಂ ॥೭೫॥

ತಂಗೆಯ ಮಕ್ಕಳನೆ ಕೊಲ ।
ಲ್ಕಂಗುರಮಿಕ್ಕನೆ ಕನಲ್ದು ತಂದೆಯುಮಂ ತಾಂ ।
ನುಂಗಲ್ಬಗೆವಂ ಪಶುದಿಂ ।
ಬಂಗಾಡಂ ತಿಂಬುದೆಂಬುದೇಂ ಪಾತಕಮೋ ॥೭೬॥

ವ॥ ಅಂತಾತನತಿಕುಪಿತಕ್ರೂರಕರಾಳಕಾಳಾಹಿ ತನ್ನ ತತ್ತಿಯಂ ತಾನೆ ತಿನಲಪ್ಪಂತೆಯುಮತಿಪ್ರಕಟವಿಕಟಭೀಕರಭ್ರುಕುಟಿಯಾಗಿ ಮನದ ಮುನಿಸೊರ್ಮೆಯುಮಡಂಗದೊಳಗೊಳಗೆ ಕಿನಿಸಿ ಕಿಂಕಿಸಿಪ್ಪೋಗಿ ಕೆಳರ್ದ ಮಹಾಕಾಳವೆನ್ನವರ್ತನ್ನವರೆಲ್ಲಮುಗಿದು ಕೊಂದು ಸರ್ವಗ್ರಾಸಂಗೊಳಲಿ ಪನ್ನಂತೆಯುಂ ತನಗೆ ತೋರ್ಪರಿಷ್ಟ'ಚೆಷ್ಟ'ವಂತಪ್ಪ ದೇವಕಿದೇವಿಯ ಗರ್ಭ ಚೆಷ್ಟಿತದತ್ತಾವಧಾನನಾಗಿ ಕಂಸಂ ಕಿಲುಂಬೇಱಿದ ಕಾಂಸ್ಯದಂತೆ ಕಲುಷವೇಱಿರ್ದನನ್ನೆವರಂ—

ಪೂವಂ ತೋಱದೆ ಪನಸು ಸ
ಲಾವಳಿಯುಂ ಪಡೆವ ತೆಱದೆ ಪಡೆಗಾತ್ಮಜರಂ ॥
ತೀವಿದ ಬಸಿಱಂ ತೋಱದೆ
ದೇವಕಿಯುಂದೊಸೆದು ಪರಸೆ ಕುಲದೇವತೆಗಳ್ ॥೭೭॥

ಮೊಲೆಯುಂ ಮೊಗಮುಂ ಚಂದ್ರನ
ನಿಲವಂ ಕೊಂಡೆಯ್ದೆ ಪಚ್ಚೆಕೊಂಡಂತಿರೆ ಪೆ

ಪಾ. ಭೇ.—1. ಚೆಷ್ಟ.

ಮೊಗಲೆ ಕಪೆಂ ನಗೆಯುಂ ಜಲ
ಜಲಿಸ ಮೊಗಂ ಬೆಳ್ಪನಾಳ್ದುದಾದೇವಕಿಯಾ ॥ ೨೮ ॥

ವ॥ ನವಮಾಸಂ ನೆರೆವುದಂ ಕಂಡು ಕಂಸನವಸ್ತುಭೂತನುಂ ಭೀತನುಮಪ್ಪುದಱಿಂ ಜನರಂಜನಾರ್ಥಮಾಕೆಗನೇಕಮಾಣಿಕ್ಯಮಯಮಾಗೆ ಮಾಡಿಸಿದ ಸೂತಿಕಾಸದನದೊಳ್ ಸಿರಿಯುಸಿರಿಸುವಂತೆ ದೇವಕಿಯುಂ ತರಿಸಿ ಕಾಪುವೇೞ್ದಿರಿಸಿ ಹಿತರುಮಹಿತರುಮಪ್ಪ ಪರಿಚಾರಕಿಯರಂ ಪರುಠವಿಸಿ ಪುಲಿಯಂತೆ ಪಾರ್ದಿರ್ಪಿನಮೊಂದರ್ಧರಾತ್ರದೊಳ್—

ದೇವಕಿಯುಮಳಂ ಪೆತ್ತಳ್
ದೇವಂಜಸೆ ಪೋಸೆ ಪರಿಯೆ ಜೆಸದಿಂದಂ ಮಾ
ಯಾವಿ ಪರಿತಂದು ನೈಗಮ
ದೇವಂ ತಂದಿಕ್ಕೆ ಮುಂದೆ ಮಾಯಾಶಿಶುವಂ ॥ ೨೯ ॥

ವ ರಾಮುಮುೞಿದಿನಮಳ್ವೞಿಯುಂ ತಪ್ಪಿಸಿ ಕೊಂಡುಯ್ವುಮಳರಂ ಮಳಯಾಚಳಕ್ಕೆ ಕೊಂಡುಯ್ದಂ, ಇತ್ತ ಕಂಸನಾಕೂಸುಗಳ ಕಾಳ್ಕಳೆಂಬುದನಿಗೇೞ್ದಲಿಯುಲಿಪ್ಪಗೇಳ್ದು ಬೆಕ್ಕನಂತೆ ಬೊಕ್ಕನೆ ಪಾಱ್ ಪಾಯ್ದು,

ಪಸಿದುಗ್ರವ್ಯಾಘ್ರನೇಣಿಶಿಶುಗಳನೆ ಗಡಂ ಕೊಂಡು ಕೊಲ್ವಂತೆ ಪಲ್ಲಂ
ಮುಸೆವತ್ಯುಗ್ರಕ್ರೋಧದಿಂ ತನ್ನಯ ಸಿರಿವನೆಯೊಳ್ಪೊಕ್ಕು ಪೆಮ್ಮಾರಿಯಂ ಪೂ
ಜಿಸಿ ಬಾಜಿಪ್ಪಂದದಿಂ ದಿಗ್ಬಲಿಗೆದವೊಲ್ ಸೂಸೆ ಮಾಂಸಾಸ್ಥಿ
| ಮಾಯಾ |
ಶಿಶುವಂ ಕೊಂದಿಕ್ಕಿದಂ ಪಾಸಱೆಯೊಳಸಗನೊಲ್ ಪ್ರೊಯ್ದು ಕೋಪದಿಂ
| ನೃಶಂಸಂ ॥ ೩೦ ॥

ವ ಮತ್ತಮೊಮ್ಮೆ—

ಅಸುರದೊಳಿಂದ್ರಜಾಲದ
ಕೂಸುಗಳಂ ಕಂಸನೊಗೆದನೞೆಯೊಳ್ ನೆತ್ತರ್
ಸೂಸೆ ದೆಸೆದೆಸೆಗೆ ಕಂಪಿಸ
ಪಾಸಂ ಪಿಡಿದೊಗೆವ ಪಟ್ಟುಕಾಱನ ತೆಱದಿಂ ॥ ೩೧ ॥

ವ॥ ಮತ್ತಮೊಮ್ಮೆ—

ದೆಸೆದೇವತೆಯೆ ಕುಸುಂಬೆಯ |
ಕುಸುಮಂಗಳನಿಂಡೆಯಾಡುವಂತಿರೆ ಕೆಂಗ ||
ಲ್ಮಸಗಿ ಪರಿತಂದು ಮಾಯದ |
ಸಿಸುಗಳನೇೞಿದೞಿಯೊಳೊಗೆದನಙ್ಗುಗುಲಿ ಕಂಸಂ ||೩೨||

ಮನೆಮುಱಿಯೊಳ್ಮಡಿದ ಕಂ |
ಸನ ಪೊಲ್ಲಮೆ ಮುಟ್ಟಿದತ್ತು ಮುಗಿಲಂ ಪೊಗೆ ಘೋರಂ ||
ಕನೆ ಪೊಱಮಡುವವೊಲಡುಗೆಯ |
ಮನೆಯಿಂ ಲೇಸಾಗಿ ಬೆಳಗಿನಂ ತೊಳಗಿರ್ಕುಂ ||೩೩||

ಪುರುಷರ್ ಮಾಡಿದ ಪುಣ್ಯಂ |
ಪರೆಯದು ನೀರೊಳಗೆ ಬಿಟ್ಟ ಘೃತಬಿಂದುವಿನಂ ||
ತಿರೆ ತೋರ್ಕುಂ ನೀರ ಪೊಯ್ಯಲ್ |
ಪರೆಗುಂ ಬಿಟ್ಟಂತೆ ತೈಲಬಿಂದುವನದಱೊಳ್ ||೩೪||

ವ|| ಅಂತು ಮೂಱುಗೆಯ್ದು ಋತುಗಳಂ ಪಡೆವ ಪೃಥ್ವಿಯಂತೆ ಋತುಮತಿಯಾಗಿ ದೇವಕಿ ಪೆತ್ತ ಮಕ್ಕಳನತ್ತ ನೈಗಮದೇವನೆತ್ತಿಕೊಂಡುಯ್ದುಂ ಇತ್ತ ನಿಷ್ಕರುಣನಾದೇವನಿಕ್ಕಿದ ಮಾಯದ ಮಕ್ಕಳನೆ ಮೊಕ್ಕಳಂ ಮುಳಿದು ಶಿಲೆಯೊಳೊಗೆದಾಱ್ ಪರಪಿ ಕೆಯ್ಯ ತೊಡೆದುಕೊಂಡು ಮುನಿಯ ಮಾತಂ ತೊಡೆದೆನೆಂದು ಕೊಲೆ ಪುಸಿಯುನ್ನದತಿಮುಕ್ತಕನಾದೇಶಮ ಪುಸಿಯಾದುವೆಂದವು ತನಗೆ ತಪ್ಪದಪಮೃತ್ಯುಗಳೆಂದಱಿಯದೆಯುಂ ಕಂಸನತ್ಯಧಿಕಾಂಸನಾಗಿ ನಿಶ್ಚಿಂತಮಿರ್ದಂ ಇತ್ತ ಕೃತಕಾಕ್ರಂದಕಂದಳಿತಶುಷ್ಕಶೋಕಾಕ್ರಾಂತಜೀವದ್ಯಶೋವಿಶೇಷಾವಿಷಾದ ಸಜೆಪ ಸೂಚಿತ ಪ್ರಸೂತಿಸಮಯಸಮುದ್ಭೂತ ಪುತ್ರಾವಿದ್ಯಾವರೇಣ್ಯೆಯುಮಶರಣ್ಯೆಯುಮಂತರ್ನಿಗೂಢಗಾಢಶೋಕ[1]ಪಾವಕೆ[1]ಯಪ್ಪ ದೇವಕಿ ತದ್ವೃತ್ತಾಂತಮೆಲ್ಲಮಂ ಜಲಕ್ಕನಱಿದು,

ಅಸಕಳಿದೞಲುಂ ಬಸಿಱೊಳ್
ಕುಸುಂಬೆವುರಿಯುರಿಯೆ ಸತ್ತಳತ್ತೞ್ ಬಸಿಱಂ
ಪೊಸೆದಳ್ ಜೆಗಿದಳ್ ನೀಡುಂ |
ಬಿಸುಸುಯ್ದಳ್ [2]ನುಡಿದು[2] ಕೆಡೆದು ಬಿದಿಯಂ ಬಯ್ದಳ್ ||೩೫||

---

ಪಾ. ಭೇ—1. ಪಾಂಕಿ 2. ಮಡಿದು.

ವ|| ಬಯ್ಕಾರುಮಿಲ್ಲದ ಪೊೞ್ತು ಪೋಯ್ತುಕೊಂಡ ಬಸಿಱ ಬಾಸುಳ್ಗಳ್ ತಗಟಂ ಪತ್ತಿಸಿದಂತಾಗೆ ಮಾಣದೊಳಗೊಳಗೆ ಮಾಗಱ್ತ್ಯುಯ್ತುಱ್ತು ಮುಸುಡು ಮಡಕೆಯನಿಟ್ಟಂತಾಗೆ ಬೆಂದ ಬಸಿರ್ಪೞಗೆ ಪೆತ್ತುಂ ಮಕ್ಕಳ ಮೊಗಂ ನೋಡದೆಯುಂ ಸತ್ತು ಕೂಸನಾದೊಡಮೆತ್ತಿಕೊಳ್ಳದೆಯುಂ ಬಳಗಂ ಬಳಸಿ ಸುತ್ತಿ ಕೊಳ್ಳದೆಯುಂ ಮೇಲೆ ಪೊರೞ್ದುಱದೆಯುಂ ಕರೆಯದೆಯುಂ ಪೊೞಲ್ಕೊಂಡು ಪೋಗದೆಯುಂ ಎಮ್ಮ ಬಾೞ್ವೆಯುಂ ಮಕ್ಕಳ್ವೆಱದು ಮಱ್ತ ವಡೆಯದಿನ್ನುಂ ಮನೆಯೊಳಪ್ಪುದಱಿಂ ಬಂಜೆಯಪ್ಪುದುಂ ಬಿಂಜದೊಳಪ್ಪುದುಮೊಳ್ಳಿತ್ತಂತಿರುಳ್ ನಿದ್ರೆಯುಂ ಪಗಲ್ ಪಸಿವುಮಿಲ್ಲದೆ ಮಮ್ಮಲಂ ಮಱುಗಿ ಮನ್ಯುಮಿಕ್ಕು ಗದ್ಗದಕಂಠೆಯಾಗಿರ್ದೊಂದು ದಿವಸಂ ಅತಿಮುಕ್ತಕಮುನಿಯುಂ ನಿರಿಸಿ ಕಣ್ಣ ನೀರೊಳ್ಕಾಲಂ ತೊಳೆದು 'ನೀರಂ' ಕೆಯ್ಯೊಳಕ್ಕಿ ಮುಸಿದಂತೆ ಕಾಲ ಮೇಲೆ ಬಿರ್ದು ಕಾಪರೆ ಕಣ್ಗೊಳ್ವರೆ ತಾಯೆ ರಕ್ಕಸಿಯಾದಳ್ ಕರುಳೆ ಪಾವಾಗಿ ಕೊಱೆದು ತಿಂದದುಪ್ಪೆಣ್ಬ ಕೂೞ್ ಕೊಂದಪುದು ಕುಡಿವ ನೀರ್ನಂಜಾದುದು ಮುಂಜೂರೊಳ್ಕೆರ್ದುಮ ಕಣ್ಣ ನೀರ್ಕತ್ತರಿವಾಣಿಯಾದುದು ಬಸಿರ್ಬೞಿದಾಗೆ ಪೆತ್ತು ಪುತ್ರಮುಖಂಗಾಣದೆ ಪೋದೆನೊಂಭತ್ತು ತಿಂಗಳ್ ಬತ್ತಿ ಬಾಳುಕವಾಗಿ ಪೊತ್ತ ಬೇನೆಯುಂ ಸತ್ತ ಬೇನೆಯುಮಂ ನೀಗಲಾಱೆಂ ನೀವೆನ್ನ ದುಃಖಮಂ ಪರಿವಡೆ ತಲೆಯುಂ ಪಾೞಿಯಿಮೆಂದು ಪರೆದ ತಲೆಯುಮಾಱಿದ ಬಾಯುಂ ಬೆರಸಱಲ್ ಮರುಳ್ಗೊಂಡು ಬಾಯುೞಿದಳ್ವ ದೇವಕಿದೇವಿಗೆನಲದೇನುಮಿಲ್ಲ ಶಾಂತಂ ಪಾಪಂ ಪ್ರತಿಹತಮಮಂಗಳಮದೆಂತೆನೆ:— ನೀಂ ಬೆಸಲೆಯಾಗಲೊಡನೆ ಮುಂದೆ ಮಾಯಾಶಿಶುವನಿಕ್ಕಿ ಪಲ್ಲಟಿಸಿ ನಿತ್ತ ಮೂಱುಮಕ್ಕಳುಮನೆತ್ತಿಕೊಂಡು ಪೋಗಿ ನೈಗಮದೇವಂ ತಾನೆ ಯಾಱಮರ್ದನೂಡಿ ನಡಪೆ ಮಾನವಾರುತಾಂದೋಳಿತಚಂದನಾರಾಮರಮ್ಯಪ್ರಸೂತಶಿಲಾತಳಾವರೋದಮಗ್ನಮಪ್ಪ

ಗಿರಿಕೂಟೋನ್ನತಮಪ್ಪ ಸೌಧತಳದೊಳ್ ವಿಶ್ವಂಭರಾಖಂಡದಂ
ತಿರೆ ನಿನ್ನಾತ್ಮಜರಿನ್ನು ಮೊರ್ವನದಟಂ ಚಾಣೂರದರ್ಪಾಪಹಂ ||
ಮುರಶೈಲಾಶನಿ ಕಂಸಕೇಳಿಮಥನಂ ಮಾದ್ಯಜ್ಜರಾಸಂಧಸಿಂ
ಧುರಸಿಂಹಂ ನಿನಗಾದಪಂ ಮಗನಿದಕ್ಕೇಕಕ್ಕ ನಿಮ್ಮುಬ್ಬೆಗಂ ||೩೬||

ವ|| ಈತನುಂ ತ್ರಿಖಂಡಮಂಡಳಾಧಿಪತಿಯಪ್ಪನೆಂದು ದೇವಕಿಯ ದುಃಖದಹನದ ಮೇಲೆ ದಯಾರಸಮುಮಂ ವಚನವಾರಿಯುಮನತಿಮುಕ್ತಕಂ ಪೊಯ್ದು ಪೋದನತ್ತಮಿತ್ತ ಕೆಲವಾನುಂ ವಾಸರಕ್ಕೆ—

ಒದವಿದ ಲತೆಗಂಕುರಗ
ರ್ಭದ ಚಿಹ್ನಂ ಮಾಡುಮಪ್ಪುದಿಂ ದೇವಕಿಗು
ರ್ಬಿದ ಗರ್ಭದ ಚಿಹ್ನಂ ಮಾ
ಡಿದುದಾ ಕಂಸಂಗೆ ಮಿೞ್ತು ಮಾಡುವ ತೆಱದಿಂ ||೩೭||

ಅಸುರರ ಮೊಗದವೊಲಸಿಯಳ
ಮಿಸುಪ ಕುಚದ್ವಯಮುಖಂ ಕಱಂಗಿದುದವಳೊ
ಳ್ವಸಿಱ ವಳಿರೇಖೆಗೆಟ್ಟುವು
ನೊಸಲಕ್ಷರರೇಖೆಯೊಡನೆ ಮಧುರಾಧಿಪನಾ ||೩೮||

ದಿಕ್ಕರಿವೊಲ್ ಕೃಷ್ಣಂ ಮುನ್
ದಿಕ್ಕೆ ನೆಲಕ್ಕಾರ್ದು ಬಿರ್ದ ಕಂಸಂ ಮಣ್ಣಂ
ಮುಕ್ಕಿದಪನೆಂದು ಪೇೞ್ದಪ
ಳಕ್ಕುಮೆ ವಸುದೇವನರಸಿ ಮಣ್ಣಂ ಮೆದ್ದಳ್ ||೩೯||

ತವಕದೆ ಕಂಸಂ ಕೆಯ್ಮೆ
ಡುವನಾದೊಡೆ ನುಂಗಲೆಂದು ಗುರುಗರ್ಭನಿಧಾ
ನವನೇೞ್ ಕಾವ ಕಾಳಾ
ಹಿವೊಲಿರ್ದುದು ರೋಮರಾಜಿ ರಾಜಾತ್ಮಜೆಯಾ ||೪೦||

ಸಿಂಧುಪರೀತಭೂತಳಮನೀೞ್ದು ಕೊಳಲ್ಕುರಚಕ್ರದಿಂ ಜರಾ
ಸಂಧನ ಕಂಠಮಂ ಕಡಿಯೆ ಕೇಶವನಿಟ್ಟಪನೆಂದು ತೋರ್ಪವೋಲ್ ||
ಗಂಧಗಜೇಂದ್ರಯಾನೆ ಕಡುಮೋಳದ ಕುಬ್ಜಕಿರಾತದಾನವ |
ಸ್ಕಂಧರಮಂ ಕರಂ ತಿರಿಪ ಕಂಕಣದಿಂದಿಡುವಳ್ ವಿನೋದದೊಳ್ ||೪೧||

ವ|| ಆ ಗರ್ಭಶಾಂತಿಕಕ್ಕೆ ಶಾಂತ್ಯುದಕಮಂ ತಳೆವಂತೆ—

ಅಲರ್ದಲಗೊರ್ಚಲಂತಲುಗೆ ಮಿಂಚು ಪಿಕಂ ನಲಿವಂತೆ ಚಾತಕಂ |
ಜಲಕಣಮಷ್ಟಿಯೊಳ್ ಕಳಕೆಗರ್ಚೆ ಕರಂ ಸೊಸೆಸೋರ್ವ ಭಂಗಿಯಿಂ ||

ಬಲವರೆ ಸೋನೆ ಗೊಂಚಲಿಸಿ ಕೆಂದಳಿರೊಳ್ಳಳಿವಿಂಡು ಪಾಯ್ದುದಂ ।
ಸಲಿಸೆ ಸುರೇಂದ್ರಚಾಪಲತೆ ಬಂದುದು ಕಾರೆಳವಾವಿನಂದದಿಂ ॥ ೪೨ ॥

ವ॥ ಆ ಮಳೆಗಾಲದೊಳಭಿಷೇಕದೊಳಭಿಮತಮಂ ದಾನದೊಳ್ ಧನಮಂ ಪೂಜೆಯೊಳ್ ಪೊತ್ತಂ ಕಳೆಯುತ್ತುಮಿರ್ದಾಪುಣ್ಯಸತಿಯ ಪುಣ್ಯದಂತೆ ಪುಣ್ಯಯುತಿಗಳಂ ಕೆಲವು ತಿಂಗಳ್ ತೀವೆ ಕಂಸಭಯದೆ ಗರ್ಭಂ ಕಲಂಕಿದಂತೆ ಬಸಿರ್ಮಸಗೆ ತನ್ನ ತನಯಂ ಭದ್ರಪದನಕ್ಕುಮೆಂಬುದಂ ಪೇಳ್ವಂತೆ ಭಾದ್ರಪದದೊಳ್ ಮುಳಿಯಿಸಿದರ್ಗೆ ವಿಳಯಕಾಳನಕ್ಕುಮೆಂಬುದನಱಿಪುವಂತೆ ಕಾಳದೊಳ್ ದುಷ್ಟಚತುಷ್ಟಯಕ್ಕಷ್ಟಮಚಂದ್ರಮನಕ್ಕುಮೆಂಬುದಂ ನಿವೇದಿಸುವಂತಷ್ಟಮಿಯೊಳರ್ಧಚಕ್ರವರ್ತಿಯಕ್ಕುಮೆಂಬುದಂ ಸೂಚಿಸುವಂತರ್ಧರಾತ್ರದೊಳ್

ಅಳಿಯುಂ ಪದ್ಮಿನಿ ವಾರ್ಧಿವೇಳೆ ವಿಷಮುಂ ಕಸ್ತೂರಿಯಿಂ ಪುಲ್ಲೆ ಕ ।
ಜ್ಜಳಮಂ ದೀಪಿಕೆ ಕಾಳರಾತ್ರಿ ತಮಮಂ ನೀಲಾಶ್ಮಮಂ ರೋಹಣ ॥
ಸ್ಥಳಿ ಭೂದೇವಿ ತಮಾಳಮಂ ಪಡೆವವೋಲ್ ನಾನಾಹಿತಾಂಕೂರಕಂ ।
ದಳನಂ ದೇವಕಿ ಲೀಲೆಯಿಂದೆ ಪಡೆದಳ್ ಕಂಸೋಷ್ಣನಂ ಕೃಷ್ಣನಂ ॥ ೪೩ ॥

ವ॥ ಆ ಪ್ರಸ್ತಾವದೊಳ್ ಕಂಸನಱಿಗುಮೆಂದು ಬದ್ದವೆಂದು ಒದ್ದವಣಂ ಬಾಜಿಸುವ ದೇವದುಂದುಭಿಧ್ವನಿಗಳೊಳ್ ಘನಾಘನಧ್ವನಿಗಳ್ ತಡಂಗಲಿಸೆ ದೇವಕಾಂತೆಯರ್ ನಿವಳಿಸುವ ಮಂಗಳದೀಪಮಂಜರೀಮರೀಚಿಗಳೊಳ್ಮಿಂಚಿನ ಗೊಂಚಲ್ಗಳೊಡಗಲಿಸೆ ಸೂಸುವ ಮುತ್ತಿನ ಸೇಸೆಗಳೊಳಾಲಿಕಲ್ಗಳ್ಕರೆಗಲಸಿ ಕೊಳ್ವ ಮಳೆಯೊಳಾನಂದಬಾಷ್ಪವರ್ಷಮಡಂಗಿ ಪೋಗೆ ಸಮಸ್ತತ್ರೈಲೋಕ್ಯಕ್ಕಮಧಿಕೋತ್ಸವಂ ಪುಟ್ಟೆ--

ನೊಡರ್ವಳಗಂ ಮುಸುಕಿದನಾ ।
ಗಡೆ ತನ್ನಯ ತನು ತಮಾಳರುಚಿಯಿಂದಂ ಮೇ ॥
ಲ್ಗಡೆಪಿತ್ತಾನುಮಮೇಳ್ಪಂ ।
ದೊಡೆ ಕಂಸಂ ಕಾಣ್ಗುಮೆಂಬ ತೆಱದಿಂ ಕೃಷ್ಣಂ ॥ ೪೪ ॥

ವ॥ ಅತಂ ಕಾರಣಪುರುಷನಪ್ಪ ಕಾರಣದಿಂ ಸಹಜಘನಸಂಹನನಾಗಿ ಸಾಮಾನ್ಯಶಿಶುವಿನಂತೆ ಕಲಲಚ್ಛಾಯನಾಗದೆ ಪರಿಣತಚ್ಛಾಯೆಯಿ ನಟ್ಟು

ನಿಲೆ ನೀಲಶಲಾಕೆಗೆ ಜೀವಂಬೊಯ್ದಂತಿರ್ದ ಕೃಷ್ಣಮೂರ್ತಿಯಂ ಕಣ್ದೀವಿ ಕಾಣಲ್ಪಡೆದು ಕುರುಡಂ ಕಣ್ಬಡೆದಂತಾಗಿ ನಿಧಾನವನೆತ್ತಿ ಕೊಳ್ವವರೋಲಿರಲುಮೆಯ್ಯೊಳ್ ಬೇಗಮೆತ್ತಿಕೊಂಡು ಕೆಯ್ಯಿಂ ಪಿಡಿವಂತೆ ಪದುಳಮಾಗಿ ಪಿಡಿದು ವಸುದೇವಂ ವಾಸುದೇವನಂ ಪೊರ್ವುಡಿಸಿ ಕಾಳಿಂದಿಯೊಳೋಲಾಡಲ್ ಕಲಿಸುವಂತೆ ಕಾಳದ ಕತ್ತಲೆಯೊಳ್ ತಳಂಗಳೊಳ್ ತಳೆದಂ । ತಳರ್ವಾಗಳ್ ಮುಕುಂದನ ಮೇಲೆ ನಾಗಂ ಸಹಜಸ್ನೇಹಸಂಭ್ರಮದಿನೆತ್ತಿಂದು ನೀಲವಸನಮಂ ಮುಸುಂಕಿಕೊಂಡೇಕಕುಂಡಲನೋಲೆಯು ಕೊಡೆವಿಡಿದು ತಾಳಧ್ವಜನಾಗಿ ತೋರ್ಪ ಪುರುಷೋತ್ತಮನ ಪುಣ್ಯಪ್ರೇರಣೆಯಿಂ ತನ್ನ ಮೇಲೆ ಕಾಲೂರ್ದಂಜಿದಂತೆ ಜೀಮೂತವ್ರಾತವಾಸಾರಮನುಡುಗಿ ಕಟ್ಟ ಕುಡುಮಿಂಚಿನ ಕೆಯ್ದೀವಿಗೆವಿಡಿದು ಮುಗಿಲ್ಗಳ್ ಮುಂದುರುವರಿಯೆ ಪರಿವ ಪೊನಲ್ಗಳ್ ಪಡಿಯರರಾಗಿ ಮಾರ್ಗಂಬಿಡಿದು ನಡೆಯಿಸಿ, ತಮ್ಮೊಡವೆಗೆ ತಾವೇ ಕಳ್ಳರಾಗಿ ಗಳಗಳಿಸಿ ಪೋಗಿ ಪೆರ್ವಾಗಿಲಂ ತಾಗೆ ಬಂದು ಬಿಯ್ಗವಿಕ್ಕಿ ಚಿಕ್ಕಟಂ ನುಸುಳಲ್ಬಾರದಂತಾಗಿ ಬಿಗಿಯೆ ಕೆತ್ತಿದ ಕವ್ಪನದ ಪಡಿಗಳಂ ಕಂಡವರುಮಿನ್ನೇವೆಮೆಂದುಮ್ಮಳಿಸಿ ಮುಮ್ಮಳಿಗೊಳುತ್ತುಮಿರ್ಪನ್ನೆಗಂ ಸ್ವರ್ಗಕಸರ ಸ್ಪೃಪಿಸಿಂ ಸಗ್ಗದ ಪಡಿಗಳ್ ತೆರೆವ ತೆರದಿನಾಶಕಟಘುರಟ್ಟನುಂಗುಷ್ಠಂ ಮುಟ್ಟಲೊಡನೆ ಕಿತ್ತು ಪಡಿಗಳ್ ತಮಗೆ ತಾವೆ ತೆರೆಯೆ ಬೆರಗಾಂತ ಬಾಗಿಲ್ಗಾಪಿನ ಜಾವದುಕ್ಕಡದ ಗರವಟ್ಟಗೆಯ ತಾಣಾಂತರದವರೆಲ್ಲಮೆರಡು ಕೆಯ್ಯನೆತ್ತಿ ಪುಂಡರೀಕಾಕ್ಷಂಗೆ ಪೊಡೆವಟ್ಟು ಮಾಟದ ಮಾನಸರಂತೆ ಮಿಳುಮಿಳನೆ ನೋಡುತ್ತಿರೆ ಮಾರಿಯ ಬಾಯಿಂ ಪೊರ್ಮಡುವಂತೆ ಮಧುರೆಯ ಬಾಗಿಲಂ ಪೊರಮಟ್ಟು ಬಟ್ಟೆಗಾಣದೆ ದಿಗ್ಭ್ರಮಿತರಾಗಿ ನಿಲಲುಂ ಸರಸರಿಸಿ ಪೋಗಲುಮಾರ್ಯದೆ ಕುಜುಕುಜುಮಿಟ್ಟುತ್ತುಮಿರ್ಪಿನಂ—

ಪೆಡೆವಣಿಯ ಫಣೆಗಳಂತಿರೆ
ಸೊಡರಂ ಪೊತ್ತಿರದು ಕೋಡು ಕೆಲದೇಂ ಮುಂದಂ ||
ನಡೆದುದು ಧವಳವೃಷಂ ಮಾ
ರ್ಗಡೆಯುಂತಿರೆ ನಾಲ್ಕುಕಾಲಫಣಿಭೀಷಣಮುಮಂ (?) || ೪೫ ||

ವ || ಅಜ್ವಲದುಜ್ಜ್ವಲದೀಪಕಳಿಕಾಂಕುರಿತವಿಷಾಣನಪ್ಪ ವೃಷಭನ ಬೆನ್ನನೆ ಪತ್ತಿ ಪೋಗೆ ಪೋಗೆ—

ಇದು ನೀಲಾಂಭೋದಜಾಳಂ ಪರಿವಪ್ಪದೊ ಮಹೀಭಾಗದೊಳ್ ವಾಮ [ನೋದ್ಯ |
ನ್ಮದಪೂರಂ ಧಾತ್ರಿಗೇೞ್ತಂದುದೊ ಕವಿದು ವಿಹಾಯೋಮೃಗಂ ಭೂಮಿಗೇನಿ||
ಕ್ಕಿದುದೋ ಕಸ್ತೂರಿಕಾಸ್ರೋತಮನೆನಗೆ ತೊಡಂಕಾಯ್ತು ಪೇೞೆಂಬಿ [ನಂ ಬಂ |
ದುದು ಭೋರೆಂದಂದು ಕಾಳಿಂದೀರಗತರಳತರಂಗಾಳಿ ಕಾಳಿಂದಿ ಮುಂದಂ ||

ಒಲೆಗೞ್ವೊಯ್ದು ಜಲಕ |
ಲ್ಲೋಲಂಗಳನಬ್ಧಿಯೆಂಬ ಬಾಸಿಗದತ್ತಲ್ ||
ಕಾಲಿಂದ ಮೊರೆವ ತುಂಬಿಯ |
ಮಾಲೆಯವೋಲ್ ಮೊರೆದು ಸರಿಯುತಿರ್ದತ್ತಾಗಳ್ ||೪೭||

ವ|| ಅದಂ ಕಂಡಮೋಘಪುಣ್ಯಪರಂಪರಾ ಎನುತ್ತು ಪೂರ್ವರುಮುಬ್ಬೆಗಂಬಡುತ್ತಿರ್ದವರೆ ಮುಂದಾ ಬಸವಂ ಪಸಲೆಯಂ ಪುಗುವಂತೆ ಜಗುನೆಯುಂ ಪೊಕ್ಕು ಪಾಯ್ದು ಪೋಗೆ—

ಬಾಲಕನ ಮಹಿಮೆಯಿಂದಂ
ಕಾಳಿಂದಿಯ ನೀರ ಮೇಲೆ ನಡೆಪ್ರಮ ಮುದದಿಂ
ನೀಲದ ಪೊಸನೆಲೆಗಟ್ಟಿನ
ಮೇಲೊಯ್ಯನೆ ನಡೆವ ತೆಱದೆ ಹರಿಕುಲತಿಲಕಂ ||೪೮||

ತರಳತರಂಗ ಮುಂಪೆ ತೆಱದಂತೆ ಪೊಳೆಪ್ಪಿಗಿಯಾಗ ಬೇಗದಿಂ
ಪರಿಯುಡುಗಿದ ಪೂರ್ಣಯಮುನಾನದಿಯುಂ ಪವನಾಭಿಗಾತದಿಂ |
ಪರಿವ ಪಯೋದಮಾಲೆ ಪರದೊಂದಡೆ ಸಿಂದಡಿಪಟ್ಟು ಪೋಪ ಖೇ
ಚರರೆನೆ ಪಾಯ್ದು ಪೋದರೊ ಹಲಾಯುಧನುಂ ವಸುದೇವಭೂಪನುಂ ||

ವ ಎಂಬಿನಮಂತಕ್ಕೆ ಪಾಯ್ದುದು ಮಹಾತೋಯಿಯ ತಡಿಯ ತುಱುಪಟ್ಟಿಯುಂ ತೊಳಲ್ ಗೋಪತಿ ಗೋಕುಲಮುಂ ತೊೞಲ್ವುದು ಜಿತಮೆನಿಸಿ ಬಸವನಪೃಷ್ಠಮನುಪ್ಪುದು ಮವರ ಪುಣ್ಯದೇವತಾಯತನದಂತೆ ಮುಂದೊಂದು ದೇವಾಯತನಮಿರ್ದುದದನವರ್ ಪೊಕ್ಕು ಪೋಗಿ ಸೋರ್ಬುಗಳಲ್ಲಿಗೆ ಮ

ತ್ತೊರ್ವಂ ದೀವಿಗೆವೆರಸು ತೇರ್ರೈಸಿ ಬರ್ಪುದಂ ಕಂಡು ತನ್ನ ಪಜ್ಜೆವಿಡಿದು ಬೆನ್ನಟ್ಟಿ ಬಂದ ಕಂಸನೆಂದೇ ಬಗೆದು ಭಯಂಗೊಂಡು ಮೆಯ್ಗರೆದಿರ್ಪಿನ ಮಾತನಾತುಱುವಟ್ಟಿಗೆಱೆಯನಪ್ಪ ನಂದನಾದಂ; ಅವನುಂ ತನ್ನ ತೇಱದಿ ನಾಗಳೆ ಪುಟ್ಟಿದೊಂದು ಪೆಣ್ಗೂಸಂ ಪಿಡಿದು ಬಂದು ದೇವತೆಗಿಂತೆಂದಂ:—

ಕಿತಕಂ ದೇವತೆಗೇಕೆ ಪೇೞ್ ಪರಸಿ ಗಂಡಂ ಬೇಡಿಕೊಂಡೆನ್ನ ಪೆಂ |
ಡತಿಗಿತ್ತೈ ಪುಱ್ಱತೊಂದು ಪೆಣ್ಣನಿದನೊಲ್ಲಳ್ನೀನೆ ಕೊಳ್ಳಾದ ದಾ ||
ವತಿಯಕ್ಕುಂ ತುಱುಗಾಱರೇಂ ಪಡಸಿ ಕೊಂಡುಂಡಪ್ಪರೇ ಬಳ್ಳಿತೊ |
ಳ್ಳಿತು ಪೆಣ್ಗೂಸಿದು ಕಾಯಲೋ ಕರೆಯಲೋ ಬೆನ್ನಟ್ಟಲೋ ಕಟ್ಟಲೋ ||

ವ|| ನಜ್ಜೆನೆವೆರ್ಪ ಕೋಣಂಗಿೞ್ದಂತಾದುದು; ನೀನುಂ ಪೆಣ್ಣಪ್ಪುದಱಿಂ ಪೆಣ್ಣನೀವೆಯಲ್ಲದೆ ಗಂಡಂ ಕರ್ದು ತಪ್ಪು; ನಿನ್ನ ಪೆಣ್ಣಂ ಕಳ್ಳ ನೀನೆ ಕೊಳ್ಳೆನ್ನ ಪೆಂಡತಿ ನೋಂತು ಪಸಿದುಂ ಪಾಱುಂಬಟ್ಟುಂ ಕೊಟ್ಟ ಪರಕೆಯುಂ ಮಗುಳೆ ಕುಡುಕುಡದಂದು ನಿನ್ನಸೀಮನೆಯೊಳಗೆ ದಿಟದ ದೇವತೆಯುಂತೆ ಮಲಗಿ ಮಲ್ಲಂತಿಗಿಱಿದು ಕುಳ್ಳಿರಲೀಯೆಂ; ವಿಷ್ಣುಗುಪ್ತಂ ಲಿಂಗದ ನೆತ್ತಿಯೊಳಕ್ಕಿದಂತೆ ಪಿರಿಯ ಕರಿಯ ಕಲ್ಲನೆತ್ತಿ ತಂದು ನಿನ್ನ ನೆತ್ತಿಯೊಳಕ್ಕಿ ತುಱುಕಾರ್ತಿಯುರನಾಳಗೊಂಡು ನುಣ್ಣನೆ ನುಂಗಿದುದೆಲ್ಲಮಂ ಮೂಗಿಂ ಬಾಯಿಂ ಕಾಱಿಸುವೆನೆಂದು ಮೀಸೆಯುಂ ಕಡಿದು ಕೂಸನೀಡಾಡಿ ನಂದಂ ಮಗಳ್ದು ಪೋಪಲ್ಲಿಯವರ್ಕಂಡಱಸುವ ಬಳ್ಳಿ ಕಾಲ್ತೊಡರ್ದುದೆಂದು ದೇವತೆಯ ಮುಂದೆ ಮಗನನಿರಿಸಿ ಮಗಳಂ ಕಳೆದುಕೊಂಡು ವಸುದೇವಂ ಕಾರ್ಯವಶಕ್ಕೆ ಕತ್ತೆಯ ಕಾಲ್ವಿಡಿದನೆಂಬಂತೆ ಕಾಲ್ವಿಡಿದೇಂ | ಕನಲ್ದುಪೋಗದೆ ಬಾ ಗಂಡುಗೂಸಂ ಕೊಟ್ಟಪೆನೆಂದು ಕರೆಯೆ; ತನಗಂಜಿ ದೇವತೆ ಕರೆದಳೆಗೆತ್ತು ಮತ್ತೆ ಎಂದು ನಂದನಾನಂದದಿಂ ಕಂಡಳಗೆ ಮಾಣಿಕಮುಂ ಕೊಳ್ವಂತೆ ಕಳೆದುಕೊಂಡು,

ಕಣ್ಬಡೆದ ಕುರುಡನಂತಿರೆ |
ಪಣ್ಬಡೆದೆಳವಕ್ಕಿಯುಂತೆ ಪುಣ್ಯದ ಫಲದಿಂ ||
ಪೆಣ್ಬಡೆದ ಸೂಳೆಯುಂತಿರೆ |
ಜಾಣ್ಬಡೆದೊಕ್ಕಲಿಗನಂತೆ ನಲಿದಂ ನಂದಂ ||೫೧||

ವ|| ಇಂತಾದೊಡೆ ನೀನೆ ದೇವತೆಯೆಂದು ಪೊಡೆವಟ್ಟು ಪೋಗಿ ಯ

ಶೋಧೆಗೆ ಕೊಟ್ಟನಿತ್ತಲಾಬಾಲಕಿಯುಂ ದೇವಕಿಯ ಮುಂದೆ ತಂದಿಕ್ಕೆ ತಂದಿರ್ವರುಂ ತಾಮುಱಿಯದಂತಿರೆ ಕಂಸಂ ತನ್ನ ತಂಗೆ ಬೆಸಲೆಯಾದುದನಱಿದಾಪ್ಪೈಗಿರುಳೆ ಬಂದನುಜೆಯ ಮುಂದಣ ತನುಜೆಯಂ ಕಂಡು ಕೊಲಲೊಲ್ಲದೆ ಇವಳೊರ್ವಳಣ್ಮಳಾಣ್ಮನೆತ್ತಾನುಮಪ್ಪೊನಾದೊಡೆಯಾತನೆನಗೆ ಮಾರಿಯಪ್ಪನೆಂದಾಕೆಯ ಮೂಗನಡಂಗೊತ್ತಿ ಪೋದನಾಕೆಯುಂ ತನ್ನಂ ತಾನಱಿದಿಂಬೞಿಕ್ಕೆ ಮೊಗಮಂ ನೋೞ್ಪರ ಮೊಗಕ್ಕೆ ನಾಣ್ಚಿ ವಿಂಧ್ಯಮಂ ಪೊಕ್ಕು ವಿಂಧ್ಯವಾಸನೆಯೆಂಬ ದೇವತೆಯಾದಳಿತ್ತಲಂದಾನಂದನಮಂದಿರದೊಳ್ ಮಹೋತ್ಸವಂ ಮಾಡಿ,

ಕುೞಿಯೊಳೆ ನಾಟಿಸಿ ನೀರಂ ।
ಗೞಗೞನೆಱೆವಂತೆ ಫಲಿತಲತೆಗಚ್ಯುತನಂ ॥
ಕುೞಿವೊಕ್ಕು ಕೊಂಡ ಜಸದೆಗೆ ।
ನೆೞಲೊಳ್ಗೋಪಿಯರೆ ಮಿಾಯಲೊಲವಿಂದೆಱೆದರ್ ॥೫೨॥

ಅರಿಸಿನದಂಚೆಯುನಿನಿಸೋ ।
ಸರಿಸಲುಮೀಯದೆ ಯಶೋದೆಯಿತ್ತಲ್ ಪೀತಾಂ ॥
ಬರನೆಂದು ಧರೆಗೆ ಪೇೞ್ವಂ ।
ತಿರೆ ಪೊಕ್ಕುೞೊಳಿಕ್ಕಿದಳ್ ಪಯೋಜೋದರನಂ ॥೫೩॥

ನಲಿದೊಡವುಟ್ಟಿದ ಮುಂಗೈ ।
ವಲಮೆಂಬೆಳಗೂಸು ಕೂಡೆ ಕಣ್ದೆಱೆದವೊಲಾ ॥
ಜಲಜಾಕ್ಷನ ಮುಂಗೆಯ್ಯೊಳೆ ।
ಜಲಜಲಿಸೆ ಯಶೋದೆ ಕಟ್ಟಿದಳ್ಕವಡಿಕೆಯುಂ ॥೫೪॥

ನಲಿನಿಯ ಬಿರಿಮುಗುಳೊಳಪ್ಪ ।
ಯ್ದಲಿಕಲಭಂ ಬೆಂಡುನೆಗೆದು ಬಂಡುಣ್ಬವೊಲಂ ॥
ದಲೆದಲವಲಿಸಿ ಯಶೋದೆಯ ।
ಮೊಲೆಯುಂಡಂ ನವತಮಾಲಕೃಷ್ಣಂ ಕೃಷ್ಣಂ ॥೫೫॥

ಮೃಗಗಂತಿರೆ ಮಗಮಗಿಸುವ ।
ಸುಗಂಧವರತೈಲತೃಣದ ಮೇಪಿನ ಸೊಡರ್ವ* ॥

ಕ್ಕುಗಳಿಂದೆ ಜೊಟ್ಟನಿಟ್ಟಳ್
ಮೊಗದೊಳ್ಕತ್ತುರಿಯ ತಿಲಕದಂತಿರೆ ಹರಿಯಾ ||೪೬||
ಪಿಡಿದಡಸಿ ಕಂಸನಿದಿರೊಡ |
ಮೊಡೆವಿನಮೊದೆದೊದೆದು ಗುದ್ದಿಗುದ್ದಿಯೆ ಕೊಲಲೆಂ ||
ದಡಿಹಡಿಸುವಂತಿರಿರ್ದುವು |
ಪಿಡಿಕಯಿಸಿದ ಕೆಯ್ಯುಮೊದೆವ ಕಾಲುಂ ಹರಿಯಾ ||೪೭||
ಅರಗಿಳಿಯುಂ ಮಾಣಿಕವಂ |
ಜಠರದೊಳಗಿರಿಸುವವೊಲಿರಿಸಿ ಮಣಿದೊಟ್ಟಿಲೊಳಾ ||
ಮರಕತವರ್ಣನನುತ್ಸವ |
ಭರದಿಂದೆ ಯಶೋದೆ ಪಾಡಿದಳ್ ಜೋಗುಳಮಂ ||೪೮||

ಜೋ! ನಳಿನಾಕ್ಷ ಜೋ! ಭುವನವಲ್ಲಭ ಜೋ! ನಯನಾಭಿರಾಮ ಜೋ |
ಜಾನಕಿಯಾಣ್ಮ ಜೋ! ಜನಮನೋಹರ ಜೋ! ಜಗದೀಶ ಕೃಷ್ಣ ಜೋ! ||
ಜೋ! ನರಸಿಂಹ ಬೇಡಜದಿರಾ ಮೊಲೆಯುಂ ಪಿಡಿ ಪೋಯಿಯೆಂದು ಚಂ |
ದ್ರಾನನೆ ತೊಟ್ಟಿಲಂ ತೊನೆದು ತೂಗುತುಮಾಡಿ ಯಶೋದೆ ಪಾಡಿದಳ್ ||

ಎಳವೆಯ ಮುದ್ದುಂ ರೂಪುಂ |
ಬಳೆಯಿಸೆ ಮೋಹನಮನವಗಮನದೊಳ್ ಮದನಂ ||
ಬಳೆದಂತೆ ಬಳೆದು ಕೃಷ್ಣಂ |
ಬಳೆದಂ ಗೋಪಿಯರ ತೋಳ್ಗಳೊಳಂ ತೊಟ್ಟಿಲೊಳಂ ||೫೦||
ಜೆಣ್ಣಂ ಪೊಸವೆಂಡಿರ ಕಡೆ |
ಗಣ್ಣಲಸದೆ ತೊಡರ್ದ ತಮ್ಮ ಕಡೆಗಳ ಕರ್ಪಿಂ ||
ಸುಣ್ಣನಿರೆ ಕರಿಯನೆಯ್ದಿಲ |
ಬಣ್ಣಂಬೊಯ್ದಂತೆ ಕರಿಯ ರೂಪಿನೊಳೆಸೆದಂ ||೫೧||
ಯುವತಿಯುರನೊಲಿಸಿದಂ ಶ್ರೈ |
ಶವದೊಳ್ ಕೇಶವನದೊಂದೆ ಪೊರ್ಗಣೆಯಪ್ಪ ||
ನ್ನೆವರಂ ನಿಂದುದು ಬಗೆ ಬೆದ |
ಱುವಿನಂ ನನೆಗಣೆಯೆ ತಾಗಿ ತನ್ನೆಲಿಸದೇ ||೫೧||

ವ|| ಮತ್ತಮತ್ತ ಮಧುರಾಪುರದೊಳ್;

ಪಗಲುಳ್ಕಂ ಬಿರ್ದುದುರ್ವೀರುಹವೊಳಱಿದುವಳ್ಕಾಡಿದತ್ತದ್ರಿಜಾಲಂ ।
ಪೊಗೆದತ್ತಾಕಾಶಮುಂ ಮೇದಿನಿ ಮೊಱಗಿದುದಾಕಸ್ಮಿಕಂ ಭಸ್ಮಮಾಯ್ತಾ ॥
ವಗ ವಹ್ನಿಭ್ರಾಂತಮೆದಾರ್ದುದು ಮರುಳಿದುಳೋರಂತಿರಿಕ್ಕಿತ್ತು ಬಾಷ್ಪಾಂ।
ಬುಗಳಂ ಭೋರೆಂದು ದೇವಪ್ರತಿಮೆಗಳ್ ಪರಿಶ್ರಾಂತನೇತ್ರಪ್ರತಾನಂ ॥

ಉಡಿದತ್ತುಗ್ರಾಸಿ ಬೆಂದತ್ತರಮನೆಯುರಿದತ್ತಾತಪತ್ರಂ ತದಶ್ವಂ ।
ಮಡಿದತ್ತಾವ್ರೊಲಿರ್ದತ್ತವನ ಕರಿಯುರುಳ್ದತ್ತು ಸಿಂಹಾಸನಂ ಗೋ ॥
ಳ್ಗೆಡೆದತ್ತಾಳಾನಮುಕ್ಕಿತ್ತೆಸೆವ ಕಸವರಂ ಕಂಸನಿಟ್ಟಂಬ ತಟ್ಟೋ ।
ಗುರ್ಡಿಸಿತ್ತೞ್ಗಿತ್ತು ಮಂಚಂ ನಡನಡನಡುಗಿತ್ತಾತನೇಱಿರ್ದ ಮಾಡಂ ॥ ೬೪ ॥

ಅೞ್ತುವು ಗೃಹದೇವತೆಗಳ್ ।
ಮೊೞ್ತುವು ಕಿವಿಯೋಲೆ ಬೞಿದೆ ಬಾಷ್ಪಾಂಜಲಿಗಳ್ ॥
ಬೀೞ್ತಂದುವು ಕಣ್ಗೞ್ಚುದುವೇ ।
ೞ್ತಂದುವು ಪೊಲ್ಲಗನಸು ಜೀವಂಜಸೆಯಾ ॥ ೬೫ ॥

ಪೇೞಲ್ಬಾರದು ಮನದೊಳ್ ।
ಪೊೞಲ್ಬಾರದು ಬರುಂಟೆ ಕೇಳ್ದವರಾರುಂ ॥
ಬಾೞಲ್ಬಾರದ ಕನಸಂ ।
ಬೀೞಲ್ಬಳೆವಂತೆ ಬಳೆಯೆ ಕಂಸಂ ಕಂಡಂ ॥ ೬೬ ॥

ವ॥ ಕಂಡೇವಯಿಸಿ ವರುಣನೆಂಬ ನೈಮಿತ್ತಿಕನಂ ಕರೆದು ಬೆಸಗೊಳ್ವುದುಮಾತಂ ಕಿವಿಗೆ ಮಾತಿಕ್ಕದ ಮುನ್ನಮೆ ಕಣ್ಬನಿಯನಿಕ್ಕಿ ದೇವಕಿಯ ಮಗನೊರ್ವಂ ಪೆಱವುೞಿದು ಬಳೆದಪನೆಂದು ಬಗೆಯೊಳ್ ಪಗೆಯನಿಕ್ಕಿ ಪೋಗೆ ಪೊಯ್ವಲ್ವಡೆಪಂ ತಾಗಿ ತನ್ನೊಳಿಂತೆಂದಂ:--

ನರನೆಚ್ಚಂಬುಂ ಕವಿಶೇ ।
ಖರದೇವಂ ಪೇೞ್ದ ಕಬ್ಬಮುಂ ಬಿದಿ ನೊಸಲೊಳ್ ॥
ಬರೆದಕ್ಕರಮುಂ ಪರಿಕಿಸೆ ।
ಪರಮತಪೋಧನರ ವಾಕ್ಯಮುಂ ತಪ್ಪುವುದೇ ॥ ೬೭ ॥

ಅಪ್ಪೊಂಗಮಾದೊಡಂ ಮ ।
ತ್ತಪ್ಪುದಮಂ ಕೞಿವುಪಾಯಮುಂಟೀಜಗದೊಳ್ ॥

ದೇವಂಗಂ ದೈತ್ಯಂಗಂ ।
ಸಾವಂ ತಪ್ಪಿಸುವುಪಾಯಮಾವುದುಮುಂಟೇ ॥೬೮॥

ವ॥ ಆಶೌಚಮುಂ ಗೋವಧೆಯುಮುೞಿದುದೆಂಬಂತೆಮಗೆ ಪಾಪಮುಂ ಪೈಶೂನ್ಯಮುಮುೞಿದುದಿಲ್ಲೆಂದುಮ್ಮಳಿಸಿ ಪಟ್ಟರೆ ಪೂರ್ವಭವದೆ ೞ್ಬರ್ ದೇವತೆಯರ್ ಬೇಱೆವೇಱೆ ಬಂದು

ಆರಂ ಬಾರಿಪ್ಪೆನಾರಂ ನಿಸಗೆಱಗಿಪೆನಾರಂ ಕೊಲಲ್ಕಾಯ್ವೆನಾರಂ ।
ಬೇರಿಂದಂ ಕೀೞ್ವೆನಾರಂ ತಿರಿದು ನೋಣ್ಪೆನಾರಂ ತಿನಲ್ಪೋಪೆನಾಟಂ ।
ದಾರಂ ಪೊಯ್ವೆಯ್ವೆನಾರಂ ಪಿಡಿದು ಪೊಸೆವೆನಾರಂ ಕರಂ ಪೋೞ್ವೆನಾರಂ
ನಾರಂ ಸೀೞ್ವಂತೆ ಸೀೞ್ವೆಂ ಬೆಸಸು ಬೆಸಸಲೇ ಕಂಸ ರಾಜಾವತಂಸಾ ॥

ವ॥ ನೀನುಮ್ಮಳಿಸುವಲ್ಲಿ ವರಮೇನೆನೆ ಕಂಸಂ ದೇವಕಿಯ ಮಗನೊರ್ವನೆಲ್ಲಿರ್ದಪನೆಂಬುದಂ ಭೇದಿಸಿ ಕೊಲ್ಲಿಮೆಂಬುದುಮವರವನಿರ್ದ ಭಂಗಿಯುಂ ವಿಭಂಗಬೋಧದಿನಱಿದು ರಾಕ್ಷಸಪ್ರಕೃತಿಯಪ್ಪ ದೇವತೆ ನಂದಗೋಪಿ ನಂದನನಂ ತೊಟ್ಟಿಲೊಳಿರಿಸಿ ನೀರಂ ತರಲ್ಪೋದ ಪೆಱಗೆ

ಪೆಱನೊಸಲಾಗೆ ನೆಕ್ಕ ನೊಸಲೊಳ್ಳಲೆಯಪ್ಪೊಡಲಾಗೆ ನಿಟ್ಟೊಡ ।
ಲ್ಕಿೞ್ದಲೆಯಾಗೆಯೊಪ್ಪುದಲೆ ತೋಳ್ ತನಗಾಗೆ ಪೊಲ್ಲದೋಳ್ ॥
ತುೞುಗೆನೆಗಣ್ಗಳಾಗೆ ಬಿಡುಗಣ್ಗಳೆ ತೆಳ್ವಸಿಱಾಗೆ ಪೊಳ್ವಸಿಱ್
ಸಱಿವೊಲೆಯಾಗೆ ಬಿರ್ದವೊಲೆ ಪೂತನಿಗೊಪ್ಪುವೊಲಾಗೆ ಬೇಗದಿಂ ॥೭೦॥

ವ॥ ಬಂದು ನೀರನಿೞಿಪಿ ಎತ್ತುವರಿಲ್ಲದೆ ಮಾಯದ ಮಗಳೇಂ ತಳ್ವದಳ್ನ ಹೋರಿ ಹಸಿದನೆ ಬಾಬಾಯೆಂದು ಪಾಪಿಯ ಕೂಸನೆತ್ತಿಕೊಳ್ವಂತೞುವ ಕೂಸನೆತ್ತಿಕೊಂಡು

ಮುನಿಸಿಂ ನಂಜೂಡಿ ತಾಯೂಡಿದ ಮೊಲೆಗಳನಾನಂಜೆನೆಂತಪ್ಪ ಸೀಳ್ವಾಂ ।
ಜನವರ್ಣಂ ಮುನ್ನೆ ಕೆನ್ನೆತ್ತರನೆ ಜಿಗುೞಿ ಪೀರ್ವಂದದಿಂ ಪೀರ್ದು ಹಾಹಾ॥
ಯೆನುತುಂ ಪುಯ್ಯಲ್ಲಿ ಬಾಯುಂ ಬಿಡದೆ [1]ಬಲ್ಕೂಕ[2]ಬಾಲಂಬೊಗಲ್ ಪೂ ।
ತಿನಿಯುಂ ಕಾಳಾಹಿಪೀರ್ವಂತಸುವನಸದಳಂ ಪೀರ್ದು ಕೊಂದಂ ಮುಕುಂದಂ

ವ॥ ಮತ್ತಮೊರ್ವಳತಿಪ್ರಚಂಡೆ ಚಾಂಡಾಳಪ್ರಕೃತಿಯಪ್ಪ ದೇವತೆ ಕಾಕಾಕೃತಿಯನಪ್ಪುಕೆಯ್ದು

---

ಪಾ. ಭೇ— 1. ನೆ. 2. ಬಿಲ್ಕೂಕ.

ಕಾಕಂ ಪಂಜರದೊಳಗಣ ।
ಕೋಕಿಳಮಂ ನೋಡಲೆಂದು ಬರ್ಪಂತಿರೆ ಬಂ ॥
ದಾಕೃಷ್ಣನ ಮಣಿದೊಟ್ಟಿಲ ।
ನೇಕಾಕಿಯ ಕಣ್ಣನಿಱಿವೆನೆಂದೆಱಗಲೊಡಂ ॥ ೭೦ ॥

ಅಡರ್ದು* ಕಮಂಡಲುಜಳಮಂ ।
ತುಡುಂಕೆ ಕಂಡೊಳಗನೆಸಡಿ ಕಾಗೆಯ ಮೂಗಂ ॥
ಪಿಡಿದುಱದಿಱಿಂಕಿ ಮುಱಿದವೊ ।
ಲೆಡೆಗೆಯ್ವಿಡಿದೆತ್ತಿ ಮುಱಿಯೆ ಮೂಗಂ ಬೇಗಂ ॥ ೭೧ ॥

ಪೂಡೆದಗ್ರಾಂಗುಳಿ ಪಕ್ಷದಿಂದುಡಿವಿನಂ ಪಕ್ಷದ್ವಯಂ ಕುತ್ತಿಕ ।
ಗ್ಗೊಣ್ಣಡೆವನ್ನಂ ನಖಚಂಚುವಿಂದೆಱಗಿ ಮತ್ತಂ ಪೊಯ್ಯದಪೆನ್ನಾಗವೊಂ ॥
ದೊಡಲಂದೊಂದಡಗಾಗೆ ಮೇಗೆ ಕರೆಯುತ್ತಾಕಾಗೆ ಬೀಱುತ್ತಿರ್ಪನಂ ।
ಗಿಡುಗಂ ಕೊಳ್ವವೊಲುರ್ವಿ ಕೊಂದುದು ಕರಂ ವಾಮೇತರಂ ಕೃಷ್ಣನಾ ॥

ವ॥ ಅಂತಾ ಕಾಗೆಯುಂತಕನ ಬೋನಕ್ಕೆರೆ[ಯಾಗೆ]ಮತ್ತೆ ಕೆಲವಾನುಂ ದಿವಸದೊಳ್

ಇಱಿದುದು ನೆಲನಂ ಹಸ್ತದ ।
ತೆಱದಿಂ ಮುಂದಲೆಯ ನಿಡಿಯ ಜಡೆ ನುಂಗರ್ಪಿಂ ॥
ಮಿಱುಗಿದುದು ಬಣ್ಣವಾನೆಯ ।
ಮಱಿಯಂತೆವೊಲಂಬೆಗಲಸಿ ನಡೆದಂ ಕೃಷ್ಣಂ ॥ ೭೩ ॥

ಮೊಳೆದಂತೆವೊಲೆಳೆಯ ಮುಗಿ ।
ಲೆಳಮುತ್ತುಗಳಂತೆ ಬಳೆವ ಕೃಷ್ಣಂಗೆ ತಳ ॥
ತ್ತಳಿಸಿ ಬೆಳಗಿದುವು ಪವಿಗಳ ।
ಮೊಳೆಗಳಿವೆನೆ ಮಂದಹಾಸಬಿಸವಲ್ಲರಿಯಾ ॥ ೭೪ ॥

ವ॥ ಅವಸ್ರಾಯದೊಳ್ ಮತ್ತೊರ್ವ ದೇವತೆ ಲೋಯಿಸರದ ಮೇಲೆ ಬಂಡಿ ಪರಿದಂತು ಮಾಱಿಪ್ಪೆನೆಂದಂಗಣದೊಳ್ ತೆಮಳ್ದಾಡುವ ಮಗನ ಮೇಲೆ ಶಕಟವಾಗಿ ಪರಿತರೆ ಪರಿವ ಬಂಡಿಯೊಳ್ಕಾಲುಗೋವ ಗೋವನೆನಿಸಿ

ಕುಣಿಕಿಲ್ವಾಲಿ ¹ನೊಗಂ ¹ಪ |
ಲ್ಗುಣಿಯುಚ್ಚೆನಿಸೊಂದನೊಂದು ತೆಱೆಯುದ ತೇಱದಿಂ ||
ಗಣಿಕೆಯ ಬಂಡಿಯನೊದೆವವೊ |
ಲಣಿಯುರವೊದೆದಂ ಪ್ರತಾಪಿ ಕೃಷ್ಣಕುಮಾರಂ ||೭೭||

ವ|| ಆರಥಮುಂ ಕಂಸನ ಮನೋರಥಮುಂ ಭಗ್ನಮಾಗೆ ಮತ್ತೊರ್ವ ದೇವತೆ ಕಿಶೋರವಾಗಿ ಕೇಶವಂಗೆ ಕೇಗಿರಿ ಕಿವಿಯಂ ಬಾಯುಮಂ ತೆಱೆದು ಕೊಂಡು

ಬೆದಱದೆ ಬಂದು ಬಾಳಕನ ಕೆಯ್ಯನೆ ಕಾಯ್ದು ಕಡಂಗಿ ಕರ್ಚೆ ಕೊ |
ವಿದ ಕುಱುಕೊಯ್ಯೆಯೊಲ್ ಮಸಗಿ ಪೋವವೊಲಾತನುಮೋಘೆ ನೂಂಕಿ ಕು
ತ್ತಿದೊಡದು ನೆತ್ತಿಯಿಂದೊಡೆದು ಮೂಡುವುದುಂ ತೊಳಗಿತ್ತು ಕೆಂದಳಂ |
ಕುದುರೆಗಮತ್ತವೊಂದು ಕಿವಿ ಮೂಡಿದುದೆಂಬಿನಮಂಬುಜಾಕ್ಷನಾ ||೭೮||

ವ|| ಅಂತಾಗೂಂಟನ ಬಾಯೊಳ್ಗೊಂಟಮುಂ ಬೆಟ್ಟಿದಂತಿರ್ದ ಕೆಯ್ಯನುರ್ಚಿ ಕೊಂಡು ಕೊಂಡದ ಕಿಚ್ಚಿನಂತಿರ್ದ ಕೋಪದೊಳಾದುಷ್ಟಾಶ್ವಮನಿಕ್ಕಿಯಶ್ವಮೇಧಮಂ ಮಾಡಿ ತುಱುಪಟ್ಟಿಯ ಪಾಲುಂ ಮೊಸಱುಂ ಬೆಣ್ಣೆಯುಮಂ ಸೂಱೆಗೊಂಡು ಸಹಪಾಂಸುಕ್ರೀಡಿತರಪ್ಪ ಗೋಪಕುಮಾರರ್ಗೆ ದಕ್ಷಿಣೆಗುಡುವಂತೆ ಕೊಟ್ಟು ಪೊರೆಯುತ್ತುಮಿರೆ

ಆಡುವ ಮಕ್ಕಳನೆಱೆಕೊಂ |
ಡೂಡಿಯುಮೊಳಗಿರ್ದ ಬೆಣ್ಣೆಯುಂ ಮತ್ತಮದಂ ||
ಬೇಡಿದಪಂ ಕಾಡಿದಪಂ |
ಬೇಡೆಂದು ಯಶೋದೆ ನಿನ್ನ ಮಗನಂ ಕರೆಯಾ ||೭೯||

ಸಲೆ ಕಾಯ್ದ ಪಾಲ್ ಬರ್ದುಂಕದು |
ನೆಲಹಿನ ಪಾಲುಂ ಬರ್ದುಂಕದೆಲೆ ಕಳವೀಕಂ ||
ದಲ ಪಾಲುಂ ಮುಂ ಬರ್ದುಕದು |
ಮೊಲೆಯೂಡ ಯಶೋದೆ ಕರೆದು ನಿನ್ನಯ ಮಗನಂ ||೮೦||

ಪಾ. ಭೇ — 1. ಮೊಗ.

ಕಱುಯುಲಣಮುಣ್ಮಿದಿದೊರ್ಗಡ |
ಮಿಱುಂಕಿ ತೊಡೆಯಿಂದೆ ಕಾಲನಾಕಳನಾತಂ ||
ಕಱುವವೊಲೆಲ್ಲರ ಬಾಯೊಳ್ |
ಕಱುದಸನೆಲೆ ಕರೆ ಯಶೋದೆ ನಿನ್ನಾತ್ಮಜನಂ ||೮೧||

ವ|| ಆರ್ಗೆ ಪುಟ್ಟಿಯುಮಾರ್ಗೆ ಮುದ್ದಾದನೆಂದು ಗೋಪಿಯರಿಕ್ಕುವ ರಕ್ಕ, ರಕ್ಕಸಕಾರಣಕ್ಕೆ ರಲಾಱದೆ ಯಶೋದೆ ಕರೆದು ಕಡೆವ ಕಂಭದೊಳ್ ಪಿಡಿದು ಕಟ್ಟಿದೊಡಾಕೆಜ್ಜೆನ ಕಂಭಮನಂಗಜಗಜಮಾಳಣಿಯುಂ ಮುಱಿವಂತೆ ಮುಱಿದು ಪೊಱಮಟ್ಟು ಪೋಪ ಕೃಷ್ಣನಂ ಕಂಡು ಕಡುನುಡಿದು ಜಡಿದು:—

ದಾವಿಯೊಳಡಸಿ ಯಶೋದಾ |
ದೇವಿಯು ಕಟ್ಟಿದುರ್ದುದರದೊರಲುಡೆಗೞ್ತಂ ||
ದೇವೇಱ್ವನೊ ದಾಮೋದರ |
ದೇವಂಗುಡೆವಣಿವೊಲಾಯ್ತು ಬಿಣ್ಪಿಂತಾಯ್ತೇ ||೮೨||

ವ|| ಆನೆಯುನೆತ್ತುವಂಗಾಡು ಜಿಕ್ಕಾಡೆಂಬಂತೆ ಗೋವರ್ಧನಾಚಲಮನೆತ್ತಿರ್ದಂಗುಲೂಖಲಮೆಂಬುದಾವಲೆಕ್ಕಮೆಂದಱವರೆಲ್ಲರುಮೊಂದೆಕೊರಲಿಂ ಪೊಗೞ್ದು ಪೇರೊರಳನೆೞೆದು ಪರಿವಾಡಿದಂ ಮತ್ತಮೊರ್ಮೆ ಮತ್ತಿಯ ಮರಂಗಳಾಗಿ ಮರುಳ್ದೇವತೆಗಳಾಡುತುಮಿರ್ದ ಕೃಷ್ಣನ ಕರಿಯ ಕುರುಳೆಂದು ನೀಲಮುಂ ಕತ್ತುರಿಯುಮಿಱುಂಕುವಂತಿಱುಂಕಲೊಡನೆ:—

ಅಮಿತಬಳಂ ಕಿೞ್ತಿಕ್ಕಿದ |
ನಮುಕಿಂ ಮಾಕರಿಸಿ ಕಂಭಯುಗಮುಂ ಪುರುಷೋ ||
ತ್ತಮನಾಕಂಸನ ಭುಜಯುಗ |
ಳಮನವಯವದಿಂದೆ ಕೀೞ್ವುದಂ ಗುಣಿಯಿಪವೊಲ್ ||೮೩||

ವ|| ಮತ್ತಮಾತನದಟುಂ ಪೇೞ್ವೊಡೆ—

ಆಡೆನಂ ಗೋಣ್ಮುಱಿಗೊಂಡು ಬೋಳದಲೆಯುಂ ಮುಂಗೆಯ್ಗಳಂ [ಮೂರಗೊಂ |
ಡಿಡುವಂ ಕೊಂಕಿಕೊಡಂಕೆಯುಂ ಮುಱಿವನುಳ್ಗುತ್ತಿಳ್ಗೆಯುಂ ಗಲ್ಲಮುಂ ||

ಮಿಡಿವಂ ಮಿಂಡರ ಮೀಸೆಯುಂ ಸೆಱೆದು ಮೂಗಿಟ್ಟೇಱುವಂ ಮಕ್ಕಳ |
ಱಿತ್ತೊಡೆ ಬಾಯ್ವಾಯನೆ ಪೊಯ್ವನೇಂ ಸಿತಗನೋ ಕಾಳಾಹಿಕೋಳಾಹಳಂ ||
ಇಡುವಂ ಗುರ್ದುವನುರ್ದುವಂ ಕೆಡಪುವಂ ಮೇಲಿಕ್ಕುವಂ ಕುಕ್ಕುವಂ |
ಒಡಿವಂ ಒಯ್ದು ಚಿವುಂಟುವಂ ಕಿಸಿಸುವಂ ಪಾಯ್ದೊತ್ತುವಂ ಕುತ್ತುವಂ ||
ಜಡಿವಂ ಜತ್ತುಕುಱಾಡುವಂ ಬಳಸುವಂ ಬೆನ್ನಟ್ಟುವಂ ಮುಟ್ಟುವಂ |
ಪಿಡಿವಂ ಮಕ್ಕಳನೇಂ ಕರಂ ವಿಕರಿಯೋ ಕೂಸಾಟದೊಳ್ ಕೇಶವಂ || ೮೫ ||

ವ|| ಅಂತಾತುಱುಪಟ್ಟಿಯ ಕಿಱುಮಕ್ಕಳಂ ಮಿಂಡಮಕ್ಕಳುಮನೊಂದೆ ಕೋಲೊಳ್ ತಂದು ಪುಯ್ಯಲಿಡಿಸುವ ಕೃಷ್ಣನಂ ತುಱುಕಾರ್ತಿಯರೆಲ್ಲರಱುತ್ತುಂ ಕರೆಯುತ್ತುಂ ಬಂದು ತಂತಮ್ಮ ಮಕ್ಕಳ ತರೆದ ಮೆಯ್ಯುಮಂ ಮುರಿದ ಕೆಯ್ಯುಮಂ ಪರಿದ ಕಿವಿಯುಮಂ ಒಡೆದ ಮೂಗುಮಂ ಅಡೆದ ನೆತ್ತಿಯ ಬುಗುಟುಮುಂಡೆಯುಮಂ ಯಶೋದೆಗೆ ತೋಱಿ ದೂಱೆ ಗೋಪಿಯಿಂತೆಂದಳ್ :—

ಏಗೆಯ್ವಂ ಕೊಂದೊಡಮೆನ
ಗಾಗಂ ಬಸಮಲ್ಲನೆನಗೆ ಕಿಚ್ಚಿಲ್ಲವೆ ತಾ ||
ನೇಗಂಡುರಿದಪನಱಿಯೆಂ |
ಪೋಗಿಂ ನೀಂ ಮೆಚ್ಚುಮೆಚ್ಚು ಕೆಯ್ಯಂ ಮುಗಿದಳ್ || ೮೬ ||

ವ|| ಎನೆ ಗೋಪಿಯದೂರ್ಱಲೇವೇಱಿಕ್ಕೆಂದು ದೂಱಿದೆವಲ್ಲಲೆ ತುಱುವತಿಗೆ ನೆರೆಯ ಪೋರದೆ ಬಂದೆವಲ್ಲೆವು, ನೋಡಿನ್ನು ನಿನ್ನಮಗನ ಕೇಡನೆಂದು ಪೋಗಿ ಮಕ್ಕಳೋಪಾದಿಯ ಮಗುವೆಂದೇ ಒಗೆದು ಸೆಳೆಯಂ ಕೊಂಡು ಕಿಱುಮುಗಿಲ ಬೆನ್ನಟ್ಟುವ ಕುಡುಮಿಂಚುಗಳಂತೆ ಗೋಪಿಯರೆಲ್ಲಮೆಲ್ಲನುಲಿದು ಮಲೆದು ಬೆನ್ನಟ್ಟೆ ಕೃಷ್ಣನುಂ ಕಿಱುನಗೆನಗುತ್ತುಂ ಕಿಱಿದೆಡೆಯ ನೋಡಿಯೋಡಲಾಱದಂತೆ ಮಗುಳ್ದು—

ಒಱಿಯಿಂ ಮಕ್ಕಳಸಿನ್ನೊಡ
ಸುಡಿದೊಡಮೆಂದಂತೆಯಾಗ ಕಂಜಾಕ್ಷಂ ಕಾ ||
ಲ್ವಿಡಿದೆತ್ತಿ ಕೆಡಪಿ ಕಾಲಿಂ
ಪಿಡಿದೆಱೆದೆಱೆದಳ್ಕಿಸಿ ಬಿಟ್ಟನಾಗೋಪಿಯರಂ || ೮೭ ||

ವ॥ ಮತ್ತಮೊರ್ವ ದೇವತಾವತಾರಮುಪ್ಪ

ತಾಳತರು ಪಣ್ಗಳಂ ಬೇ ।
ತಾಳಂ ಕೋಲ್ಗೊಂಡು ಕಱೆವವೊಲ್ಕಱೆದುದು ಗೋ ॥
ಪಾಳರ ತಲೆಯೊಡೆವಿನವಾ ।
ತಾಳಂ ಬಳೆಗಳೆದನೊಂದೆ ಪೊಯ್ಲಿಂ ಕೃಷ್ಣಂ ॥೮೮॥

ವ॥ ಇವಂ ಮನೆಯೊಳಿರ್ದೊಡೆಲ್ಲಿಲ್ಲದ ದೋಷಂ ದುರ್ಯಶಮುಮಂ ತಂದಪನೆಂದು ನಂದಗೋಪಂ ಗೋವಳರಂ ಪಸದನಂಗೊಳಿಸಿ ಗೋವಿಂದನಂ ಗೋಕುಳಮಂ ಕಾಯುವೇೞ್ದು ಕಾಡನೂಡಿ ಕಾಡೊಡೆಯಂಗೆಱಗಿ ಗೋಪಾಳವೃಂದದೊಡನೆ ವೃಂದಾವನಕ್ಕೆ ಕಳಿಪೆ ;

ಉರಗಾನೀಕಮನೆತ್ತಿ ತರ್ಪನಿದು ಬಲ್ನೇಱೆಂದು ತನ್ನಂದನುಂ
ದರಿಯೊಳ್ಪೋವೆನುತೋಡೆ ಕಾಡ ಪುಲಿಯುಂ ಜೆಕ್ಕೆಂದು ತರ್ಪಂ ಮಹಾ ॥
ಕರಿಯುಂ ಕೊರ್ವಿದ ದಂಷ್ಟ್ರಿಯೆಂದು ಪಿಡಿತರ್ಪಂ ನೋಡ ನಾಯೆಂದು ಕೇ ।
ಸರಿಯುಂ ಪೊಸದೊಳಕ್ಕಿ ತರ್ಪನಿದು ಬಾಲಕ್ರೀಡೆ ಗೋಪಾಳನಾ ॥೮೯॥

ವ॥ ಮತ್ತಮೊಂದು ದಿವಸಂ

ಬಸನಕ್ಕೆತ್ತಿದ ಬಾಲವೊತ್ತಿದ ರವಂ ಬಳ್ಕಿರ್ದ ಬೆಱ ಬಿಟ್ಟರ ।
ಕ್ಕಸಗಣ್ಬಾಯ್ದೆಱೆದಂತೆ ತೋರ್ಪ ಕಿವಿಗಳ್ಗೋವೃಂದಮಂ ಕೂಡಿ ಬೆ ॥
ರ್ಚಿಸೆ ಪದ್ದಳವಿಶಾಳದೀರ್ಘದಶನಂ ವ್ಯಾದಾನವಕ್ತ್ರಂ ಮಳೀ ।
ಮಸವರ್ಣಂ ಪರಿತಂದುದೊಂದು ನವದೂರ್ವಾಕರ್ದಭಂ ಗರ್ದಭಂ ॥೯೦॥

ಪೇಱ್ಕಿದಂತೆ ಬೆನ್ನೊ ।
ಳ್ತ್ರೆಱೆಯ ಪಣ್ ಕಱ್ತ್ತ ಕರ್ಚೆ ಬಿಟ್ಟುದು ಕೋಱಗ ॥
ಣ್ಗೇಱೆ ಪಿತೃಪತಿಗೆ ಪೆಣನಂ ।
ಪೇಱುವ ಪೆರ್ಗತ್ತೆಯಂತೆ ಖರಸಂಕುಳಮಂ ॥೯೧॥

ವ॥ ಅಂತು ಪಟ್ಟಗಳಂ ವಾಂಟೆ ಕೆಡಪುತ್ತುಂ ಕಡವಂಗಳಂ ಕರ್ಚೆ ಕೆಡಪುತ್ತುಂ ಬೆಗಡುಗೊಂಡೋಡುವ ಗುಂಡನುರುಳ್ವಾಯ್ದು ಕೆಡಪುತ್ತುಂ ತಾನೆ ತನ್ನ ಬೀರಕ್ಕೆೞ್ಱಱಿದ ಕಱ್ತ್ರಿಯಂತೆ ಬೆಬ್ಬಸಬೆಸೆದು ಬ್ರಹ್ಮನಂ ಕೂರಿಸಿದ ಕತ್ತೆಯುಂತಾರುಮಂ ಕೈಕೊಳ್ಳದಿದಱ ಬಾಯ್ಗೆ ಬ್ರಹ್ಮಾಂಡಮೊಯ್ದ

ದೆಂಬಂತೆ ಬಾಯಂ ತೆಱೆದು ಕೇಳ್ದರೆರ್ದೆ ತೆಱೆಪಿನವೊಳ್ಗಂ ಪೆಟ್ಟಿಯು ಪ್ರೊಟ್ಟೆಯುಂ ಕರ್ಜೆ ಸೀೞ್ಕೆಯು ಬಾಯೊಳಿೞ್ಬ್ವ ಕರುಳಂ ಕಪ್ಪೆಯು ನೇಣಂ ಕರ್ಜೆ ಪರಿವ ಕುದುರೆಯಂತೆ ಬೀದಿವರಿದು ಮಾಮುಸಕಂ ಮುಸಗಿ ತುಱುಪಳ್ಳಿಯೆಲ್ಲಮನೊಕ್ಕಲಿಕ್ಕಿಕೊಳ್ವ ಕೞ್ತೆಯು ಕೋಳಾಹಳ[1]ಕ್ಕಂತೆ ಕುಣಿವಂಗೆಱೆಯುಪ್ಪನಾದಂತೆ ಗೋವಳಗರ್ಾವಳಿಗೊಂಡು ಗೋವಳಗೋಲನೆತ್ತಿ ಕೊಂಡೊದಱೆ ಧೀರನದಿರದೆ ಬಪ್ಪುದಪ್ಪಿಯು ಬೇೞ್ಪುದವರೆಯುಲಿಟ್ಟಂಬಂತೆನ್ನ ಬೇೞ್ಪಾತಂಗುವಿಾತನೆಂದು ಕೞ್ತೆ ಮೇಲ್ವಾಯುಲೊಡನೆ:—

ಹರಿ ಹರ್ಯಕ್ಷನ ಬಾಯಂ ।
ತಿರೆ ಕೞ್ತೆಯು ತೆಱೆದ ಬಾಯನೊರಹಾಯ್ತೆ ನಗೆಂ ॥
ದೆರಡುಂ ಕೆಯ್ಯಂ ಪಿಡಿದಾ ।
ಸುರವಾಗಿರೆ ಸೀೞ್ದು ಬಿಸುಟನೆರಡುಂ ದೆಸೆಗಂ ॥ ೯೭ ॥

ವ॥ ಆಗಳ್ ಕೃಷ್ಣನ ಕೆಯ್ಯ ಕೋಲಿಂದುದಿರ್ದ ಪಲ್ಗಳಾ ಕೞ್ತೆಯು ನೆಗೞ್ತೆಯುಂ ಕೞ್ತೆಯೊಳ್ಳುೞ್ತೆ ಕವಡಿಕೆಯುಂ ಬಿತ್ತಿದಂತೆಸೆಯೆ ಮುರಾರಿಯ ವೀರವೃತ್ತಿ ದೆಸೆಗೆ ಬೆಸೆಯೆ ಮೂಗಿನ ಮೇಲೆ ಕೆಯ್ಯನಿಟ್ಟು ಜನಮೆಲ್ಲಂ ಚೋದ್ಯಂಬಡೆ ತಾಯುಂ ತಂದೆಯುಂ ಸಂತೋಷಂಬಡೆ;—

ನಿಯತಾಹಂಕೃತಿಪೂತನಾಪ್ರತಿಭಯಂ ಲೋಲೋತ್ಕಕಾಕಾಂತಕಂ ।
ಲಯಶಂಕಾಶಕಟಾಪಕಾರಿ ಖರತಾಚಕ್ರೀವಜೀವಾಪಹಂ ॥
ಭಯಲೋಭಾರ್ಜುನಭಂಜನಂ ನುತಯಶೋದಾಸಪ್ರಿಯಾತ್ಮೋದ್ಭವಂ ।
ಜಯಮಂ ತಾಳ್ದಿದುದಾತ್ತಸನ್ನಿಭಗುಣಂ ಶ್ರೀಗಂಧಗೋಪಾಳಕಂ ॥ ೯೮ ॥

—ಗದ್ಯ—

ಇದು ಮೃದುಪದಬಂಧಬಂಧುರ ಸರಸ್ವತೀಸೌಭಾಗ್ಯವ್ಯಂಗ್ಯಭಂಗಿನಿದಾನದೀಪವರ್ತಿ
ಚತುರ್ಭಾಷಾಕವಿಚಕ್ರವರ್ತಿ ನೇ ಮಿ ಚ ಂ ದ್ರ ಕೃತಮುಂ
ಶ್ರೀಮತ್ಪ್ರತಾಪಚಕ್ರವರ್ತಿ ವೀ ರ ಬ ಲ್ಲಾ ಳ ದೇ ವ ಪ್ರಸಾದಾ
ಸಾದಿತ ಮಹಾಪ್ರಧಾನಪದವೀವಿರಾಜಿತ ಸೆಜ್ಜೆವಳ್ಳ
ಪ ದ್ಮ ನಾ ಭ ದೇ ವ ಕಾರಿತಮುಮಪ್ಪ

ನೇ ಮಿ ನಾ ಥ ಪು ರಾ ಣ ದೊ ೞ್

ಹ ರಿ ಬಾ ಲ ಕ್ರೀ ಡಾ ವ ರ್ಣ ನಂ
ಸಪ್ತಮಾಶ್ವಾಸಂ ಸಮಾಪ್ತಂ

ಪಾ. ಭೇ.—1. ಕ್ಕಂಸೆಕುಣಿವಂಗೆ.

# ಅಷ್ಟಮಾಶ್ವಾಸಂ

ಶ್ರೀಯಂ ಪಡೆದಂ ವಿಬುಧ ।
ಗೀರ್ಯಲ್ಪಡೆದಂ ಪ್ರತಾಪಮಂ ಧಾರಿಣಿಯಂ ॥
ಕಾಯಲ್ಪಡೆದಂ ಪ್ರತಿಭೆಯ ।
ನಾಯಮನಱಿಯಲ್ ಯಶೋರ್ಥಿಮೂರ್ತಿ ಮುಕುಂದಂ ॥೧॥

ವ॥ ಆಗಂಡಗೋಪಾಳನ ಗೋಕುಳಕ್ಕೆ ಪುಲ್ಲಂ ನೀರುಮಂ ಸಲಿಸೆ ಬೆರ್ಚೆ ಬೆಸಕೆಯ್ಯಲೆಂದು

ನೀರಂ ನೀರಂಧ್ರಮೇಘಂ ಸುರಿಯೆ ಮೊರೆಯೆ ಭೀಮಾರುತಂ ಮಾರುತಂ [1]ಕೊ ।
ಳ್ಗರಂ[1]ಗಾರಂಬೊಲಾಯ್ತೆಂದಗಿಯೆ ಪಥಿಕರುಚ್ಚಾತಕಂ ಚಾತಕಂ ಕಾ ॥
ಸಾರಾಸಾರಾರ್ಥಿಗೋಲಂಗುಡಿಯೆ ನಲಿವೆನೋಜಂಬುವಂ ಜಂಬುವಂ ಸೋ
ಕೀರಂ ಕೀರಂ ಕರ್ದುಂಕುತ್ತಿರೆ ಕೆರಳಿಸಿದತ್ತೋವಿ ಕಾರು ವಿಕಾರಂ ॥೨॥

ಎಳಮಿಂಚಂ ತಳೆಯಿಕ್ಕಿ ಚಾದಗೆಗಳಂ ಬಿಟ್ಟೋಡಿ ಬಲ್ಗೆಚ್ಚಲಿ ।
ಟ್ಟಳಿಸೀಳಾಂಬುದದಿಂ ಬೞಲ್ದ ಗಗನಶ್ರೀ [2]ಧೇನುವಂ[2] ಕೋಮಳಾ ॥
ಮಳದೀರ್ಘಾಮೃತಧಾರೆಗಳ್ಸುರಿಯೆ ಭೋರ್ಭೋರೆಂಬಿನಂ ಶಕ್ರಚಾ ।
ಪಳತಾದಾಮುಕದಿಂದೆ ಕಟ್ಟಿ ಕಱೆದಂ ಕಾರೆಂಬ ಗೋಪಾಳಕಂ ॥೩॥

ವ॥ ಅಂತುಮಲ್ಲದೆ—

ಕಳಕೇಕಾರುತಿ ಪೋಲೆ ವೇಣುರುತಿಯಂ ಬೀಸುತ್ತೆ ಮಿಂಚೆಂಬ ಗೋ ।
ವಳಗೋಲಂ ಪೊಡೆಸೆಂಡುವೊಯ್ದು ಸಿಡಿಲಂ ಗೀರ್ವಾಣಬಾಣಾಸನ ॥
ಚ್ಛಳದಿಂ ಕತ್ತರಿವೀಲಿಯೊಂದು ಪಣೆಕಟ್ಟಂ ಕಟ್ಟಿಕೊಂಡಭ್ರಕಂ ।
ಬಳಸಂ ಗೋವನವುಂಕಿ ಬಂದೊದಱಿದಂ ಕಾರೆಂಬ ಗೋಪಾಳಕಂ ॥೪॥

---

ಪಾ. ಭೇ—1. ತೊಲ್ಗರಂ, ಕೊಲ್ಗರಂ. 2. ಧೇನುವಿಂ.

ವ|| ಅಂತು ಬಂದ ಕಾರ್ಗಾಲಮಂ ಕಂಡು ಮನಂಗೊಂಡು ಮತ್ತಮಾದೇವತೆಯರ್ ಭೇತಾಳನ ಪೆಣದಂತೆ ಬೆನ್ನ ಕೆಯ್ಯಂ ಬಿಡದೆ ಕೊಂದ ಕೊಲೆಯುಂ ತಲೆಪಮನುೞಿಯದುದಕಮೂರ್ಮಿಱದಿಂ ಕೆಟ್ಟುಂ ಕೆಡದಂತೆ ತನ್ಮಗುರ್ವಿನಗುರ್ವಣೆಯ ಕಾಕಾಪಿಕಾರದಿಂ ಸತ್ತುಂ ಸಾಯದೊಂದೆಡೆಱೆವಂದು ಪರಿವ ನೀರಂ ¹ಪರಿಯೆ¹ ಪೊಯ್ಯಲುಮುರಿಯನಿೞಿದೇರ್ಪಡಿಸಲುಂ ರಸಮುಂ ಸೋಯಿಸಲುಂ ನಮ್ಮಂ ನೋಯಿಸಲುಂ ಇನ್ನೊರ್ವಂ ಪುಟ್ಟುವನುಂಟಕ್ಕುಮೆಯ್ಯದೋರ್ವರೋರ್ವರಂ ಕೆಯ್ಯಂ ಪೊಯ್ದು ಕಹಕಹಾಟ್ಟಹಾಸದಿಂ ಕರುಳ್ ಪರಿಯೆ ನಕ್ಕು—

²ಆದಟಂ³ ಮಂಡೆಯುಮಾನಾ ।
ಱದ ತರುವಲಿ ನಮುಗಮುರಿಯುನಾದನಮಂ ಪೆ ||
ೞ್ದೊಡಾಭವನುಂ ಜವನುಂ ।
ಕದನದೊಳಾನಲ್ಕ ನೆರೆಯರೆಂಬನಿತಕ್ಕುಂ ||೫||

ವ|| ಆದೊಡಮಿನ್ನೊರ್ಮೆ ನಮ್ಮೊಳಪ್ಪುದು ಮಲ್ಲನಂತೆ ಮೆಯ್ವೊತ್ತಿರೆ ಧನುರ್ಧರನಂತೆ ದೂರದಿನೆಚ್ಚು ನೋಳ್ಪಮೆಂದು ಕೃಷ್ಣಂ ತುಱುಗಾಯಲೆಂದು ಪೊಲಕ್ಕೆ ಪೋದಲ್ಲಿ—

ಪಡೆದದೇವತೆಯರ್ಗೆ ।
ಕಡುಮುಳಿಸಿಂದುರಿದು ದಹನಶಿಖಿಗಳ ಪೊಗೆಯಂ ||
ಪಡೆವಂತೆ ಪತ್ತು ದೆಸೆಗಂ ।
ಗುಡಿಗಿೞಿದಂತಾಗೆ ನೀಳಮೇಘಾವಳಿಯಂ ||೬||

ಕಡಲೊಳ್ ಪಟ್ಟರ್ಣವಂ ಪುಟ್ಟರದಿರೆ ಬನದೊಳ್ ಬಂದ ಸಪ್ತಾರ್ಣವಂ ಮೇ ।
ಗೊಡೆವಿರ್ದಂತಾಗೆ ಮಿಂಚೆಂಬುರಿ ಮಿಗೆ ನಭಮಾಶಾಮುಖಶ್ರೇಣಿಯಂ ಗೋ ||
ೞಿಡುವಂತೋರಂದದಿಂದಂ ಮೊೞಗೆಮುಸುಱ ಮೇಘೌಘಮುಬ್ಬಾಕ್ಷನಂ ಬ
ಲ್ಸಿಡಿಲಿಂದಿಟ್ಟಾಲಿಕಲ್ಲಿಂದೆೞಗಿ ಕಱೆದುದಾಗೋಕುಲಂ ತೇಂಕುವನ್ನಂ ||೭||

ಪಾ. ಭೇ— 1. ಪಳಿಯೆ. 2. ಆದಟಂ.

॥ ತ್ರಿಪದಿ(?) ॥

ಮೊಱಗಿ ಮಿಂಚಿ ಮುಂಚಿ ಕೊಳ್ವ । ಮಱಿಗಳಂಬುರಾಶಿಯೊಳ್ ।
ಕಱಿಯ ನೀರನುಂಡು ಮೇಘ । ಮೊಱೞ್ ಕಾಱುವಂತುಟಾಯ್ತು ॥

ಪೊಡೆವ ಸಿಡಿಲ್ಗಳನೆಳೆಯೊಳ್ ।
ಕೆಡೆದೇಱಿಂಟಣುಕು ನೆಗೆದು ನುರ್ಗಪ್ಪಿನೆಗಂ ॥
ಪೊಡೆದಂ ಗೋವಳಗೋಲಿಂ ।
ಪೊಡೆಸೆಂಡಾಡುವವೊಲೇಂ ಬಲಸ್ಥನೊ ಕೃಷ್ಣಂ ॥೯॥

ಕರಗದ ಮುಗಿಲಂ ಪರೆಯದ ।
ಸುರಧನುವಂ ಮಿಂಚಿ ಕಿಡದ ಮಿಂಚಂ ಪೊಡೆದೋ ॥
ಸರಿಸದ ಸಿಡಿಲಂ ಸಮೆಯದ ।
ಸರಿವಱಿಯುಂ ಕಂಡು ಬೆಗಡುಗೊಂಡರ್ ಗೋವರ್ ॥೧೦॥

ವ॥ 'ಆಗಳಂಜೆಯಂ'ಜಲಿಯೆಂದು ಬೆಗಡುಗೊಂಡ ಗೋವಳಗರ ನೊಡಗೊಂಡು ದೊಮ್ಮಳಿಸಿ ಮಮ್ಮಱಗೊಳ್ವ ಗೋವ್ರುಗಳನಟ್ಟಿಕೊಂಡು ಕಿಱಿದಂತರದೊಳಿರ್ದ ಗೋವರ್ಧನಗಿರಿಯ ಮಱೆಗೆ ಪೋಗಿ ಅದೊಂದೆ ಸಱ ಯಪ್ಪುದಱಿಂ ಪಶುಶಿಶುಪ್ರವೇಶಕ್ಕಂ ತಕ್ಕ ಮಱಿಯುಂ ಕಾಣದೆ—

ಪರಲಂ ಬಾರ್ತೆಗೆ ಮಿಾಂಟುವಂತೆ ಚರಣಾಂಗುಷ್ಠಾಗ್ರದಿಂ ಮಿಾಂ [ಟಿ ಝು ।
ಲ್ಲರಿವೊಲ್ ಝಲ್ಲನೆ ಸೂಸಿ ನಿರ್ಝರಜಲಂ ಬಿಟ್ಟಿರ್ಪಿನಂ ಕಾವಿನಂ ॥
ತಿರೆ ಕೊಂಡೆತ್ತಿದ ಕೆಯ್ ಮುರಾರಿ ಕೊಡೆಯುಂ ಕ್ರೀಡಾರಸಕ್ಕೆತ್ತುವಂ ।
ತಿರೆ ಕಿಱುತ್ತಿದನೊಂದೆ ಕೆಯ್ಯೊಳ್ ಮಹಾಗೋವರ್ಧನಾದ್ರೀಂದ್ರಮಂ ॥

ಪೋಲೆ ಬಲಗೆಯ್ಯ ಗೋವಳ ।
ಗೋಲೊಡ್ಡಿಸುವ ವರ್ದ್ಧಮಾಗನವಯುವದಿಂ ಗೋ ।
ಪಾಲನೆಡಗೆಯ್ಯೊಳೆತ್ತಿದ ।
ಶೈಲಂ ಸೆಂಡಿನವೊಲಿರ್ದುದೇನಚ್ಚರಿಯೋ ॥೧೨॥

---

ಪಾ. ಭೇ—1. ಆಗಳಂಬಿಜಯಂ. 2. ವರ್ದ

ಹರಿ ಗಿರಿಯು ಪರಲ್ಮಿನುಗು |
ತ್ತಿರೆ ತಲೆಯಿಂ ತೆಗೆದು ಕಮಠನಂ ಕಮಠಂ ಪೊ ||
ತ್ತುರಗನನಾತನ ನಳತೋ |
ಳುರಗಂ ಪೋಲ್ತಳೆಯುನದ್ರಿ ಪೋಲ್ತಿರೆ ಪೋಲ್ತಂ ||೧೩||

ಕರಿಕಳಭಪತಿ ಬಯಲ್ದಾ |
ವರೆಯುಂ ಕಿೞ್ತೆತ್ತುವಂತೆ ಕಿೞ್ತೆತ್ತಿದನಾ ||
ಹರಿತರುಣಂ ಗೋವರ್ಧನ |
ಗಿರಿಯುಂ ಗೈರಿಕರಜೋವಿರಾಜಿತಧೈರ್ಯಂ ||೧೪||

ಶೈಳಮನೆತ್ತುವುದುಂ ಗೋ |
ಪಾಳಂ ಫಣಿಮಣಿಗಳಸೆಯೆ ಮಣ್ಮಣಿಸುವ ಪಾ ||
ತಾಳಾಹಿಪತತಿ ಪಾಪಿನ |
ಪೇಳಿಗೆಯುಂ ತೆಱೆದ ತೆಱದಿನೇಂ ತೋಱಿದುವೋ ||೧೫||

ಕೆಂಡದ ಮೞೆಗಳ್ತಂಡದೆ |
ಕೊಂಡಪುವೆನೆ ಪುಟ್ಟೆ ಪಾಱೆ ಕಿಡಿಗಳ್ ಕೃಷ್ಣಂ ||
ಕೊಂಡೆತ್ತಿದಗದ ಮೇಗಾ |
ಚಂಡಿಕೆಯುಮುರ್ಮಾಳಿದು ಕಲ್ಲ ಮೞೆಯುಂ ಕೞಿದರ್ ||೧೬||

ವ|| ಅಂತೆಣ್ಬರ್ ದೇವತೆಯರೇೞು ದಿವಸಮಾವರ್ತನಪರಿವರ್ತನಂ ಬಂದು ನಿರ್ವರ್ತಿಸಿದ ಸಂವರ್ತನಸಮಯಪರಿವರ್ತಿತಪುಷ್ಕಳಾವರ್ತಂಗಳಂತೆ ಕಗ್ಗನೆ ಕಸಿತು ನೆಗೆದ ನಿಜಜಳಧರಂಗಳ್ ನೀಳಮಹೀಧರಂಗಳೆ ವಿಪುಳಪಾಷಾಣಜಾಲಜರ್ಝರಂ ಕೞೆವಂತೆ ಕೞೆವ ಕಲ್ಲ ಮೞೆಗಳಂ ಪೆರ್ಮೞೆಗಳಂ ಗೋವರ್ಧನಂ ಗೋವರ್ಧನಗಿರಿಯನೆತ್ತುವಂತೆತ್ತಿ ಗೋಕುಳಮಂ ಕಾದುದಂ ಕಂಡು ಗೋವರುಂ ಸೀವರುಂ ಜಕ್ಕರುಂ ಚಕ್ಕುಳುಂ ಮಕ್ಕಳುಂ ಮುಱಿಗಳುಂ ಬೆಕ್ಕಸಂಬಟ್ಟವಂ ದೇವಂ ದಾನವನುಮಲ್ಲೆಂದು ಪೊಗೞ್ದು ಪುರುಷೋತ್ತಮನನೆವೆಯಿಕ್ಕದೆ ನೋಡಿ ಪರಮಾನಂದಾಮೃತಮನೊಂದೆ ಮೆಯ್ಯೊಳ್ ಪೀರ್ದ ನಂದನುಮಂ ಯಶೋದೆಯುಮಂ ದೇವನುಂ

---

ಪಾ. ಭೇ—1. ಪೊತ್ತಂ.

ದೇವಿಯುಮೆಂದು ಪೂಜಿಸಿ ಪೊಡೆವಟ್ಟು ಪೋಗೆ ನಾಡುಂ ಬೀಡುಂ ಜಾತ್ರೆ ವೋಗೆ ಕೇಳ್ದು ಕಂಸನಾಶಂಕೆಗೊಂಡು ಎನಗೆ ಬಂದ ಮಾರಿಯಾಗದೆ ಮಾಣದೆಂದು ಮನದೊಳೇವಯಿಸುತ್ತುಮಿರ್ದನ್ನೆಗಮಾದೇವತೆಗಳ್ ಪೊಱಿದ್ದೀಗುಲವ ದೇವತೆಗಳಂತೆ ಬಿನ್ನನಾಗಿರೆ ಬನ್ನಂಬೆತ್ತು ಬಂದು ನಿಂದಾಸಗೆ ಎಮ್ಮ ಪವಣಲ್ಲೆಂದು ಪೋಪುದುಂ ಸಲ್ಲ ಪೋದ ಸಾವಿನಂತಾಗಿ ತಲೆಯುಂ ತೂಗಿ:-

[1]ಮೊಱೆ[1]ಯೊಳ್ ಪುಗೊರ್ಡಲಿಗಳುಂ ।
ಕೊಳಲಾಱದೆ ಮುಕ್ಕುವೋದುವೆಂದೊಡೆ ಮುಂದಿಂ ॥
ಬಳೆದು ಮರನಾದ ಕಾಲಂ ।
ಕೊಳಲುಂ ಕಡಿಯಲ್ಕಮಾರ್ಪುದಾವುದುಮುಂಟೇ ॥೧೩॥

ವ॥ ತನಗಿಷ್ಟನಪ್ಪರಿಷ್ಟನೆಂಬ ದಾನವನ ನಡುವಣಕ್ಕರಮಿಲ್ಲದ ದಾನವನಂ ಪ್ರತ್ಯನೀಕದವನಕ್ಕೆಂದು ಬರಿಸಿ, " ಯಾವದಸ್ತಿ ಪ್ರತೀಕಾರಸ್ತಾವತ್ಕುರ್ಯಾತ್ ಪ್ರತಿಕ್ರಿಯಾಂ " ಎಂದೋದಿ ಪಿರಿಯೋಘಯುಮಂ ವ್ಯಾಧಿಯುಮಂ ಬಳೆಯದ ಮುನ್ನಮೆ [2]ಕಿಱಿದೆಂದು[2] ಉಡೆಗಣಿಸದೆ ಕಿಡಿಸುವುದು ಕಜ್ಜಮೆಂದು ಕೃಷ್ಣನ ಮೇಲೆ ಪೇಱಲೆಂದದರ್ನನ್ನೆಗಂ ಗೋಕುಲದೊಳ್

ಅಡೆಯುಂ ಕೋದೆತ್ತುತುಂ ಮಾದರ್ಸಿಗೆ ಪುಸಗುತುಂ ದರ್ಪದಿಂ ಛಾಯೆ [ಯೊಳ್ [3]ಕೊ
ಡಿಡುತುಂ ಪೋದರ್ಲ್ಲಿ ಪುನಸ್ತ್ರೀಣೆಗೆಱಗೆ ನೆಲಂ ತೀರ್ಣಶೃಂಗಾಗ್ರದಿಂ [[4]ಮಾ ॥
ದೊರ್ತಿಯುತ್ತುಂ ಪೊಯ್ದು ಪಿಂಡಂ ಕಲಿಕೆ ಕೆಱೆಯುತುಂ ಬೆರ್ದ ಬಲೂ [ಗಳ್ ಬಂ ।
ಗುಡೆ ಗಂಡಂ ಸೂಸುತುಂ ಬಂದುದು ಮದವಿದಳತ್ರಿಂಗಳಾಕ್ಷಂ [ಮಹೋಕ್ಷಂ ॥೧೪॥

ಅರಣಿಗೊಂಡು ಮುರಾರಿಯು
ನೀರದಸನ್ನಿಭನ ವಿಷಮುತರಪೀರರಸಾ

---

ಪಾ. ಭೇ.— 1. ಪೋಳ್. 2. ಕಿಱಿದೆಂದು. 3. ಕೊಂಡಮುತ್ತುಂ.
4. ಪೂಡೊಡ.

ಸಾರಕ್ಕೆದರಂ ನಡೆದತಿ
ವಾರಣವೃಷಮಿೞಿವ ಕೋಡನೇಂ ತೋಱಿದುದೋ ॥ ೧೯ ॥

ವ॥ ತೋಱಲೊಡನೆ,

ದಿಟ್ಟ ಪೊಱಪಾಯೆ ಗುಱುಗುಱು ।
ಗುಟ್ಟಿ ವೃಷಂ ಮಡಿದು ಕೆಡೆಯೆ ಗೋಣ್ಮುರಿಗೊಂಡಂ ॥
ತೊಟ್ಟಜೆಯಿಂದವೆ ಸುಟ್ಟಪ
ಬೊಟ್ಟಿಂದವೆ ಮೂಗನೂಱಿ ಬಿಟ್ಟಂ ಕೃಷ್ಣಂ ॥ ೨೦ ॥

ವ॥ ಅಂತು ಶಾಕ್ವರವರನಾಗಿ ಕೆಕ್ಕಳಿಸಿ ಕೆಳದಿಟ್ಟಕೊಂಡುಬಂದ ಕಂಸನಟ್ಟಿದರಿಷ್ಟನಂ ಅಧೀಸರಿಷ್ಟನಂ ಕೊಂದಂತೆ ಕೊಲ್ಲದೆ ಪಶುವೆಂದು ಬೇಸಿ ಪಶುಪಾಲನಪ್ಪ ಕಾರಣದಿಂ ಕರುಣಿಸಿ ಕಾದು ಸೋರ್ದುದ ಕಳೆದನದೆಲ್ಲಮಂ ಕೇಳ್ದು ಮೂಱುಂ ಲೋಕಮನಾಳ್ದನಿತು ಸಂತೋಷಂಬಟ್ಟು ನೋಡಲೆಂದಟ್ಟಿವಟ್ಟು ಗೋಮುಖಿಯೆಂಬ ನೋಂಪಿಯ ನೆವದಿಂ ದೇವಕಿಯುಂ ವಸುದೇವನುಂ ಬಲದೇವನುಂ ವಾಸುದೇವನುಮಿರ್ದ ತುಱುಪಟ್ಟಿಗೆ ಪರಿದಪ್ಪ ವಿಭವಂಬೆರಸು ಬಂದು ಸೌಖ್ಯದ ಸೀಮೆಗಾಣ್ಬಂತೆ ಕೃಷ್ಣನಂ ಕಂಡು ತೆಗೆದು ತಕ್ಕೈಸಿಕೊಂಡು:

ಕಡುದೊರೆದ ಮೊಲೆಯನಂಬಿರ ।
ಪಡಿತಂದುವು ಪಾಲ ಧಾರೆ ಪಲಕಾಲಮುಗ ॥
ಲ್ದೊಡವೆಯನಮೃತಕಳಶಾಳಿಗ
ಳೊಡರಿಸಿ ಶಶಿಕಾಂತಮೊಸರ್ವುದೊಂದಚ್ಚರಿಯೋ ॥ ೨೧ ॥

ವ॥ ದೇವಕಿ ¹ಕಡುಗಂದಿ¹ಯುಪ್ಪದೞಿಂ ತೊರೆದೆಚ್ಚು ಪಾಯ್ವ ಮೊಲೆವಾಲಿಂ ಮಗನಂ ಮಜ್ಜನಂಬುಗಿಸಿ ಮುಗುಳ್ನಗೆಯುಂ ಮುತ್ತುಮಂ ಬೆರಸೆ ಸೇಸೆಯನಿಕ್ಕಿ ಯಕ್ಷಕರ್ದಮದೊಳ್ಣುಸಿಕ್ಕಿ ಕರ್ಣಂಬಲಕ್ಕುಮೆಂದು ಸೊಡರಕ್ಕೆ ನೀಡುವಂತೆ ಗಾಳಿಸೋಂಕ²ದೆ³ ಸೂಡರಂತಿರ್ದ ಪೊನ್ನ ಸಿಪ್ಪಿನ ಕತ್ತರಿಯುಂ ಕೊಂಡು ಬೊಟ್ಟಿಸಿಟ್ಟು ಬೆಳೆಗೆ ಬಿನ್ನೈದುವುಂ ಮುಯ್ಗೆ ನೊಣ್ಗೆದುವುಮಪ್ಪ ದೇವಾಂಗಮನುಡಿಸಿ ಮಾಣಿಕದೊಡಿಗೆಯುಂ ತೊಡಿಸಿಯುಮ್ಪ

ಗ. ಶೋ - 1. ಕಸುಗಂದಿ 2. ಸುಗ. 3. ದೆ.

ತಾನ್ನಮನೂಡಿ ತನಯನ ಪಂತಿಯೊಳ್ ಗೋಪಕುಮಾರರ್ಗೆಯುಡಲುಂ ತುಡಲುಮುಣಲುಮಿತ್ತು ಯಶೋದೆ ಮೊದಲಾದ ಗೋಪಿಯರ್ಗೆಲ್ಲಂ ಪೊನ್ನ ರನ್ನದ ಬಾಯಿನಂಗಳಂ ಕೊಟ್ಟು ನೋಂಪಿಯ ನೋಂಪ ವಿಧಾನಮಿಂತುಟೆಂದು ತನ್ನ ಮಗನಿಗಾರ ಮಗನೀತಂ ಪೊಂಗಮಾದಿತ್ಯಂಗಂ ದೇವಂಗಂ ದೇವಿಗಂ ಪುಟ್ಟಿದಂತಿರ್ದಪನೆಂದು ತೊಡೆಯನೇಱಿಸಿಕೊಂಡು ನೋಡುವಾಗಳ್:—

ಉಡುಗಣದ ನಡುವೆ ಮೃಗಧರ
ನೆಡೆಗೊಂಡಿರ್ಪಂತೆ ಕಮಳನಯನಂ ಸಲೆ ತ
ನ್ನೊಡನಾಡುವ ಗೋವರ್ಕಳ
ನಡುವೆ ಕರಂ ತನ್ನ ಬೆಳಗೆ ಬೆಳಗಾಗಿರ್ದಂ ॥೭೨॥

ವ॥ ಅನ್ನೆಗಮತ್ತಾನಂದಗೋಪಂ ಗೋಪವೃದ್ಧಯರ್ವೆರಸು ವಸುದೇವಬಲದೇವರನೊಡಗೊಂಡು ಪೋಗಿ ಪಂಕಜಾಕ್ಷನುಮುನೌಂಕಿಂ ಗೊಂಕೆಯುಂ ನುಲಿದ ಕಾಗೆಯುಂ ಕೆನ್ನೆತ್ತರನುಂಡ ನೆಲನೆಲ್ಲಂ ಕೆಮ್ಮಣ್ಣ ನೆಲನಾಗಿ ಮಾಸಿಸಿದೊಡೆ ನೆತ್ತರ್ನಾಱುಮಾಗಿ ಪೆಸಂ ಪಡೆವುರ್ವಿಯುಮಂ, ದೇವಕೀಪುತ್ರಂ ಬಿರ್ದ ಪೂಸಿಯ ಸತ್ತ ನೆತ್ತರ ಪಲ್ಗಳಳಂ ಜಾದುಕಲ್ಲ ಕಣಿಯುಂದಮುಂ ಕಱಿದು ಮುಟ್ಟೆ ಬಾಣತಿಯ ಮೊಲೆವಾಲ್ ನಂಜಪ್ಪ ವಿಷವೃತ್ತಿಕೆಯೆಂಬಿವಂ ತಗುಳ್ದುಗುಳ್ದೊಡೆ ಕಾಗೆಗಳ್ ಪೊಱಮಟ್ಟು ಮಾಱುವ ಕಾಕಗರ್ಭಯೆಂಬ ನಾಮಮನಾಳ್ದ ಭೂಮಿಭಾಗಮುಮಂ, ಶಕಟಕಠಾರನ ಕಾಲ ಕೋಱಿಂ ನುರ್ಚುನೂಱಾಗಿ ಪಾಱಿ ಕೆಡೆದ ಕಠಿನಶಕಟದಿಶಾದಂಡಹತಿಯಿಂ ಪೃಥ್ವೀತಳಂ ಪಾತಾಳಕ್ಕೆ ತೂತುವೋಗೆ ಬಾಗಿ ನೋಡಿದರ್ಗೆ ಛಾಯಾಭಗಪತಿಯಂತೆ ಶಕಟಚ್ಛಾಯೆ ತೋಯೆ ತೋಱುವ ಶಕಟದ್ವಾರಮೆಂಬ ಬಿಲದ್ವಾರಮುಮಂ, ಯಮಳಾರ್ಜುನಭಂಜನಂ ಕಾಕೇಭಕುಂಜಂಗಳಂ ಕಿೞ್ತೀಡಾಡೆ ಕೂಪದನಿತು ಕುೞಿಯಾಗೆ ನೆಲದನಿತು ಮಣ್ಣ ನಡಕಿ ಪೊಯ್ದೊಡನಾಶಾಗರ್ತದಂತೆ ಪೂೞದರ್ಜುನಗರ್ತವೆಂಬ ನೆಗೞ್ತೆವಡೆದ ಗರ್ತಮುಮಂ ಮುಂಜಕೇಶಿ ಕೇಶಿಕಿಶೋರನ ಬಾಯುಂ ಸೀೞ್ದು ಸುರಿದ ರುಧಿರ

ಪಾ. ಭೆ.—1. ಪೆ.

ದಿಂ ಧರಣೀರೇಣು ಸಂಗುರಂಬಿರ್ದುದು ಪುಸಿಯೆಂದು ಪುಟ್ಟಿದ ಮೊಗಂಗಳ್ಕಲಿನಮೊಗದಂತೆ ಕುದುರೆಮೊಗಮಾಗೆ ತುರುಗಮುಖಿಯೆಂಬಾಖ್ಯಾನಮನಾಂತ ಭೂತಳಮುಮಂ, ಮುರಾರಿ ಮುರಖುರನಂ ಸನ್ನೆ ಸೀಳ್ದಾಜದ ಮುನಿಸಿಂದೊಗೆದಾಡಿ ಪರಪಿ ಧಾತುಸಿಂದೂರದಂತೆಸ್ರಕಜ್ಜಳಮೊಸೆಕಿತು ಜುಳ್ಯಿಯುತ್ತುಮಿರ್ದ ಧಾತ್ರಿಯಪ್ಪುದುಂ ಕಟ್ಟಿಗರೆವ ಕಟ್ಟಿಗಲ್ಲೆಂಬಂಕದ ಕಲ್ಲುಮಂ, ನಗಧರಂ ಕಿಟ್ಟಕ್ಕೆ ಮುಸ್ಸಿರ್ದವಲ್ಲದೊರ್ಗುಡಿಸಿ ಕಡೆದು ಗೋವರ್ಧನಮೆಂಬಭಿಧಾನಮುಂ ತಳೆದ ಗಿರಿಯುಮಂ ತೋರ್ಪುತ್ತುಂ ಬರ್ಪುದುಮವರ ಪೇಷೆಗೆ ಗೋಪಿಜನಪರಿವೃತೆಯಾಗಿ.—

ಕಡುಪಿಂದಾಕಾನನಂ ಕುಪ್ಪಳಿಸಿದಡೆಯಿದಾಪೂತಿನೀರಕ್ತಮಂ ಪೀ |
ರ್ದಡೆಯಾತೇರಯ್ವ ತೇರಂ ಪಂಪಿದೆಡೆಯಿದಾಮತ್ತಿಯಂ ಲೀಲೆಯಿಂ ಕೀ ||
ೞ್ತಡೆಯಾತಾಳಂ ಕುವಾರಂ ಕೆಡಪಿದೆಡೆಯಿದಾಗರ್ದಭಾಶ್ವಂಗಳಂ ಸೀ |
ೞ್ದಡೆಯೆಂದಾದೇವಕೀದೇವಿಗಮುಸಿತೆಡೆಯಂ ತೋರ್ಪುದಳ್ಗೋಪಿಯಾಗಳ್ ||

ನೀಂ ಬೆಸಗೊಳ್ವುದದೇನಾ
ನಂಬಿಯುನವಯುವಡ ಕೇಳ್ವುತೆಡೆಂ ಕೇಳ್ಡ್
ಯಂಬುಜಲೋಚನನೀಯದಿ
ನಂಬರಮೆತ್ತಿರ್ದ ಗಿರಿಯಿದಂಬುಜವದನೇ ||೨೩||

ವ|| ತೋರ್ಪ ತನ್ನ ಸುತನ ಶಕ್ತಿಗಂ ಸಾಹಸಕ್ಕಂ ವಿಸ್ಮಯಂಬಟ್ಟು ಮನದೊಳ್ಕಂಸಂ ಮುಸಿದಪನೆಂದೊಡೆ ಮುಸಿಯುಬೇಡಾ ಎಂದುಪ್ಪಂಸಿವಳಿಸಿ ತೂಪಿರ್ದು ಮಗನಂ ಬಿಟ್ಟು ಬರಲಾರದ ದೇವಕಿಯನಂತಾನು ಮೋದಿದುಕೊಂಡು—

ನಂದನವಿಕಸಿತಮುಖಮುಕ |
ರಂದಮನುಗುಳಿಸೆಯುಮಗಿವ ದೃಗ್ವೃಂದಮನಾ ||
ನಂದದೊಳಾನಕದುಂದುಭಿ |
ಮಂದುಭಿಯಂ ಪೊಯಿಸುತಂದು ಪೊಱಲಂ ಪೊಕ್ಕಂ ||೨೫||

ವ|| ಆಪ್ರಸ್ತಾವದೊಳಾಪೊಱಲ್ಗೆ ಕಾರಣಭೂತಮಪ್ಪ ಚೈತ್ಯಾಲಯದ ಮುಂದಣ ದೇವತಾಯತನಮಪ್ಪ ಬಿಲದ್ವಾರದೊಳ್—.

ಸುಜಲರುಚಿಗಳ್ ಜಯಶ್ರೀ |
ಸಚಿವಂಗಳ್ ಹರಿಯುದೊಂದು ಪುಣ್ಯೋದಯದಿಂ ||
ಶುಚಿನಾಗಶಯ್ಯೆಯುಂ ಶಾ |
ರ್ಙ್ಗಚಾಪಮುಂ ಪಾಂಚಜನ್ಯಮುಂ ಪುಟ್ಟುವುದುಂ ||೭೬||

ಸುರದುಂದುಭಿರವಮೆಸೆದುದು |
ಸುರತರುವಿಂ ಸುರಿದುದಲರ ಸರಿ ಸೂಸಿದುದಾ ||
ಸುರಮುಖಸರಸಿಜದಿನಕೋ
ಪುರುಷೋತ್ತಮಪುಣ್ಯಮೆಂಬ ನಾದಾಮೋದಂ ||೭೭||

ಭೂವಿವರದಸೊಗಸಿಂದಾ |
ಪಾವೆಸೆದುದು ಸಪ್ತಫಣಮಣಿಪ್ರಭೆಯಿಂ ಭೂ |
ದೇವಿ ಫಣಿರಾಜಸಂಭೋ |
ಗಾವಸ್ಥಿತೆ ಬೆಸಲೆಯಾದ ಪಾವಂದಿನೆಗಂ ||೭೮||

ಪಸರಿಸಿದಮೂರ್ಪಿದ್ದು
ದ್ರಸಿತಮನದು ತನಗೆ ತಾನೆ ಶಾರ್ಙ್ಗಂ ಸಿಂಗಂ |
ಮಸಕದಿನಯ್ವಾಯೆಂ ಗ
ರ್ಜಿಸುವವೊಲಯ್ವಾಯು ಶಂಖಮೆಸೆಂ ಗರ್ಜಿಸಿತೋ ||೭೯||

|| ಭುಜಂಗಪ್ರಯಾತವೃತ್ತಂ ||

ಅವಂ ಕಂಡು ಕಂಸಂ ಭಯಂಗೊಂಡು ಪ್ರೋತಂ |
ದವಂ ಮೂಲಚೈತ್ಯಾಲಯಕ್ಕಲ್ಲಿ ಪಾದಾ ||
ರವಿಂದಂಗಳೊಳ್ಮುಗ್ಗಿ ಯೋಗೀಶ್ವರನ್ನಿರ್ಗಂ |
ದವಾದೊಂದು ವೃತ್ತಾಂತಮಂ ಪೇಳ್ವಿಮೆಂದಂ ||೮೦||

ವ|| ಅವರಿಂತೆಂದರ್-ಇವು ಮೂರುಂ ಮಹಾರತ್ನಂಗಳ್ ಪರಮಪುರುಷಪುಣ್ಯಪ್ರೇರಣೆಯಿಂ ಪುಟ್ಟಿದುವಲ್ಲದುತ್ಪಾತಂಗಳಲ್ಲಂ. ಆವನಾನುಮೊರ್ವ ಮಹಾಭಾಗನೀನಾಗಶಯ್ಯೆಯನೇರುವನೀಶಾರ್ಙ್ಗಧರ್ಮವನೇರಿಸುವನೀಪಾಂಚಜನ್ಯಮಂ ಪೂರೈಸುವನಂತನರ್ಧಚಕ್ರವರ್ತಿಯಾಗಿ ಪೃಥ್ವೀರಾಜ್ಯಂಗೆಯ್ಗುಮೆನೆ ಕಂಸನಿದನೀಗಳೆ ನೋಳ್ಪೆನೆಂದಾನಾಗಶಯ್ಯೆ

ಯಿನೊಱೆದಂಗೆ ಪಾವಿನ ಪಾಸೆ ಪಸೆಯಾಗಲರಸಂ ತನ್ನ ಮಗಳನಿತ್ತಪೆನೆಂದು ಸಾಱಿಸೆ ಮಹಾಪ್ರಸಾದಮೆಂದು ಪೆರ್ಗಡೆಗಳ್ ಪೋಗಿ ಗೋಸಣೆಯುಂ ಮಾಡೆ;

ಪಾವೆಂದೊಡೆ ಪಡೆ ನಡುಗುವು ।
ದೇವೆಯೊ ಪಸೆಯಲ್ಲಿ ಪಾವು ಕೊಳ್ವಸಗೆಯನೋ ॥
ಪೋಪೋ ಪುಸಿಮುಮವೆ ನೋಪಲೊಳ್
ಸಾವುದಿವಂ ಸತ್ತು ಮದುವೆಯಪ್ಪರುಮೊಳರೆ ॥೩೧॥

ವ॥ ನಿಮ್ಮರಸನ ಕನ್ನೆ ವಿಷಕನ್ನಿಕೆಯಾವಾಕೆಗಂಜುವೆವಿಲ್ಲಿ ಸೂಲಮನೇಱ ಪಾಲ್ಗುಡುವರಿಲ್ಲೆಂದು ಪೀರರುಂ ಶೂರರುಮಪ್ಪ ರಾಜಪುತ್ರರ್ ಕಿವಿಯುಂ ಮುಚ್ಚಿಕೊಂಡು ಪೋದರಾಗೋಸಣೆಯಂ ಘೋಷದೊಳಿರ್ದ ಕೃಷ್ಣಂ ಕೇಳ್ದು—

ವಿಸಿಂ ಪಾಸುರಗನೆ ಬಿ।
ಲ್ಲಾನದು ಶೃಂಗಾಹಮೆ ಶಂಕಾಮೆಯಾಯ್ವಾಯದೆ ಪೋ ॥
ಗಾನೇಱುವೆನಾನೆತ್ತುವೆ ।
ನಾನೊತ್ತುವೆನೆಂದು ಪಿಡಿಸಿದಂ ಡಂಗುರಮಂ ॥೩೨॥

ವ। ಪಿಡಿಸಿ ಮನೆಗೆ ಪೋಗಿ ಗದೆ ಗಱಿವಱಿಯ ಪಾವಿನಂತೆ ಗೋಸಣೆಯ ಬಱಿಯನರಮನೆಗೆ ಪೋಪುದುಂ ಕಂಸಂ ಕಂಡಿದೆನ್ನ ಪಗೆಯುಂ ಬಗೆಯುಂ ಸಾಧ್ಯಮಾದುದು ನೋಂತರ ಪಗೆಯ ನೆಱಿಱದಂತೆ ಮಾಱಿಪ್ಪೆನೆಂದು ಚೈತ್ಯಾಲಯದ ಮುಂದೆ ಮಹಾಸ್ಥಾನಮಂ ಮಾಡಿ ವಸುದೇವಬಲದೇವಮಂಡಳಿಕಮಕುಟಬದ್ಧಸಾಮಂತಮಂತ್ರಿಸಮೇತನಾಗಿ ಕುಳ್ಳಿರ್ದು ಮಂತ್ರವಾದಿಗಳನವನಾಹ್ವಾನಂಮಾಡಲೊಡನೆ:—

ಮೊದಲೊಳ್ಕ್ಷಾಳಾಹಿಯುಂ ಕಾಱುವಪೊಲೊಗೆಯೆ ಧೂಮಾಳಿ ಫೂತ್ಕಾ
[ರದಿಂದಂ ।
ತಿವಿಯುಂ ಕೊಂಡೊತ್ತಿದಂತುಚ್ಚಳಿಸೆ ಬೞ ವಿಷಜ್ವಾಲೆ ವಕ್ತ್ರಂಗಳಿಂ ಪಾ

ಪಾ. ಭೇ — 1. ವೃದು ಭೀರಂ. 2. ಡೆತ್ತಿ.

ಱಿದ ಕೆಂಡಂ ನೆತ್ತಿಯೊಳ್ಬಿರ್ದವೊಲಿರೆ ಫಣಿ ಮಾಣಿಕ್ಯಸಂದೋಹದಿಂ ತಂ |
ದುದೊ ಕೋಪಾಟೋಪದಿಂ ವಾಸುಗಿಗೆ ವಿಷಯುಕ್ತರೂಪಮಂ ಲೀಲಿ
[ಪಾನಂ ||೩೩||

ವ ಅಕುಂಭೀನಸವಿಜೃಂಭಣಕ್ಕೆ ನೆರೆದ ನೆರವಿಯೆಲ್ಲಮೊಲ್ಲಮೊಲ್ಲನುಲಿದಾಗಳ್ ಕಂಸನೊಳಗೊಂಡು ನೋಡಿ ಗದಗಂಪಂ ಕೊಂಡು ಮಹಾಮಂತ್ರವಾದಿಗಳಪ್ಪ ಮುನಿಮುಖ್ಯರ ಮುಂತಗೊಂಡು ಪಂಚನಮಸ್ಕಾರಮಂ ಜಪಿಯಿಸುತ್ತುಮಿದನೇನುಮೆನೆಂದು ಬಂದ ಕಲಿಯಂ ಕರೆಯಿಮೆಂಬುದು ಮಹಾಮಾತಿಂ ಮುನ್ನಮೆ;

ಗರುಡಧ್ವಜನೇಱಿಪುದು |
ಮುರಿವುರಿನಂಜುರಿಯ ಮೇಲೆ ಸೀರ್ವೊಯ್ದವೊಲಾ ||
ಯುರಗಂಗಂ ನವಿಲಂ ಕಂ |
ಡುರುಗನ ತೇಜನಾಯ್ತು ನೆರವಿಗಾಯ್ತಿಚ್ಛೋದ್ಯಂ ||೩೪||

ಸೂಸ ಮುಗಮುಗಿಪ ಕಂಪಿನ
ವಾಸನೆ ಪಾಯ್ದೇಱಿದಂತದುರಗೇಂದ್ರನ ತ |
ನ್ನಾಸನರೆಪಿರಿದ ಜಾದಿಯ |
ಬಾಸಿಗಗೊಳ್ ಪಾಯ್ದು ತುಂಬಿಯಂತಿರೆ ಕೃಷ್ಣಂ ||೩೫||

ಮಂಡಳಿಸಿದ ಮುಕ್ತಾಫಲ |
ಪಾಂಡುರಫಣಿಪತಿಯ ಮೇಲೆ ಶರದದಹಿಮುಕ್ತ |
ನ್ಮಂಡಲದ ಮೇಲೆ ಚೆಲ್ವಂ
ಕೊಂಡೆಸೆವ ಕಳಂಕದಂತಿರೆಸೆದಂ ಕೃಷ್ಣಂ ||೩೬||

ಅಹಳಹಲೋಚನಂಗೆ ವಿ |
ರಾಜಿಸೆ ಜಯಲಕ್ಷ್ಮಿ ತನ್ನದೊಂದೊಲವಂ ಸೀ ||
ರಾಜಿಸುವಂತೆಸೆದುವು ಫಣಿ
ರಾಜನ ಬಿಡದೊಲೆವ ಪೆಡೆಯ ಮಣಿದೀಪಿಕೆಗಳ್ ||೩೭||

ಒಡೆವಂತಾಗಿರೆ ಭೂತಧಾತ್ರಿಯೆರ್ದೆ ಕಾಲ್ಮೇಲಾಗಿ ದಿಗ್ದಂತಿಗಳ್ |
ಕೆಡೆವಂತಾಗಿರೆ ಲೋಕಪಾಲಿವರಲ್ಲೆಂದಾರಯ್ವನಾಕಾಶದಿಂ ||

ಬಿತ್ತುವಂತಾಗಿರೆ ತಾರಕಾನಿಕರಮಂ ಬ್ರಹ್ಮಾಂಡಭಾಂಡಂ ಸಿಡಿ |
ಲ್ದೊಡೆವಂತಾಗಿರೆ ಪಾಂಚಜನ್ಯನಿನದಂ ಪರ್ವಿತ್ತು 'ದಿಕ್ಪೂರವಂ' ||೩೮||

ವ|| ಈ ಶಂಖಮನಿನ್ನುಂ ಪಿಡಿದೊಡೆ ಜಗಂ ಪಿಡಿಗಿ ಕಿಡುಗುಮೆಂದು ಕರುಣಿಸುವಂತೆ ಮುನಿವರ್ ಮನಮಿಲ್ಲದೆ ಶಾರ್ಙ್ಗಶಂಖಮನಿಳಿಪಿ ನಾಗಶಯ್ಯೆಯಿಂದಿಳಿದು ಪೋಪುದಂ ಕಂಡು ಕರೆದು ಕಂಸನಿಂತೆಂದಂ:—

ತೊದಳೇನೊ ಮೆಚ್ಚಿದೆಂ ಸಿ
ನ್ನದಟುಂಗೆಲೆ ಗೋಪ ತಪ್ಪದೀ ಬಸದಿಗೆ ನೀ ||
ನುದಯಕ್ಕೆ ಮುಂಚೆ ನಾಗ
ಹ್ರದದೊಳಗಣ ಸಾಸಿರೆಸಳ ತಾವರೆಯಲರಂ ||೩೯||

ವ|| ತಂದು ದೇವರ ಶ್ರೀಪಾದಪದ್ಮದೊಳ್ನೀಡಿಸಿದೊಡೆ ನಿನ್ನನಾನೆಯೋಲಯಿಸುವೆನೆಂಬುದುಮದರ್ಕೊಂದು ಕೆಯ್ಯನೆ ತಂದಪೆನೆಂದಾ ಕೆಯ್ಯೊಳ್ ಕೃಷ್ಣನಾಯಮುನಾನದಿಯ ನಾಗಹ್ರದಕ್ಕೆ ಪೋಪನದೆಂತಿರ್ದುದೆಂದೊಡೆ:—

ಉ. ಬಳೆದು ವಿಷಾಗ್ನಿಯಗ್ಗಳದೆಣೆಯೊಳ್ದುರ್ದರವಗ್ನಿಯಂತೆ ನೀ
ರೊಳಗುರಿವೇಳ್ಗೆ ಪರ್ವಿ ಬಡಬಾಗ್ನಿವೊಲಾಮುಘನಾದ್ರಿ ಪೀಡೆಗು |
ಮ್ಮಳಿಸಿ ಲಯಾಗ್ನಿ ಘೋರಗರಳಾಗ್ನಿಯನೀ ಭುವನತ್ರಯಂ ಭಯಂ |
ಗೊಳ್ ಕೆಳದಾಸುರಕ್ರುಗುಳ್ವ ವಾರ್ಧಿವೊಲಿರ್ದುದು ಕಾಳಿಯಹ್ರದಂ ||

ಮಿಗೆ ನಂಜು ತಾಗೆ ನೀರ್ಗಳ್
ಪ್ರಗಲೊಗೆದವೊಲೊಗೆಯೆ ಬುದ್ಬುದಾವಳಿ ಕಾಳೋ ||
ರಗನಿಶ್ವಾಸಾನಿಳನಿಂ
ಜಗುನೆಯ ಮಡು ತೆಕ್ಕತಕ್ಕನುಕರ್ತ್ರಿಕರ್ಗಂ ||೪೧||

ಕಾಳಿಯನ ವಿಷದ ಪೊಗೆ ಮಿಗೆ
ಕಾಳಿಂದಿ ಕಱಂಗಿ ಕೂಡಿ ಕಾಡಿಗೆಗೊಂಡೀ ||
ಭೂಲಲನೆಯ ಬಾಸೆವೊಲಾ
ಯ್ತಾಲೋಕಿಗೆ ಕಱಿಯದೊಱಿಯ ಪರಿದೆಡೆಯುಂಟೇ ||೪೨||

---

ಪಾ. ಭೇ.—1 ದಿಗ್ದ್ವಾರವಂ.

ಅನಿಲಂ ಮೋಗಜ ಪೋಗಲಣ್ಮನಿವನಿಂತೆಂದಾಡೊಡಂ ಶಂಖಚೂ |
ಳನನೇಂ ಕಾವನೆ ಸರ್ಪವೈರಿ ಸರವಂ ಕೊಂಡೊಂದು ಗುಳ್ಕಂದು ನುಂ ||
ಗನೆ ದಲ್ ಪೋೞಯನೆತ್ತಿ ಕಾತ್ತನೆ ಉಯೋಗ್ರಜ್ವಾಳೆಯುಂ ತಿಂಗು ತೇ |
ಗನೆ ಮಾಕಾಳಿಯನುಚ್ಚಿ ಮುಕ್ಕನೆ ವಿಯನ್ನಾಕಾಳಿಯುಂ ಕಾಳಿಯುಂ ||೪೩||

ವ|| ಎನಿಪ ದಂದಶೂಕನ ದಾಡೆಗಳನೊಸರ್ತ ವಿಷದ ಮಡುವಿನಂ ತಿರ್ದ ಜಗುನೆಯ ಮಡುವಂ ಕ್ರೀಡಾಸರೋವರಮಂ ಪುಗುವಂತೆ ಪೊಕ್ಕು ;

ಅಱಲೆ ಫಣಿ ಕಳಲೆ ಕೇಸರ ||
ವೆಱಲೆ ರುವನ್ಮಧುಪಮಾಳೆ ಹರಿ ತನ್ನಯ ಶ್ರೋ ||
ಕರ್ಣಜ ಕಮಳದಂತೆ ಜಗುನೆಯ |
ಸುೞಿಯೊಳ್ ಸೊಗಯಿಸುವ ಕಮಳದರಲಂ ಕೊಯ್ದಂ ||೪೪||

ವ|| ಕೊಯ್ದು ಗೋಪರ ಕೆಯ್ಯೊಳ್ಕೊಟ್ಟು ಮಗುಳೆ ಕಾಳಿಯಾನ್ವೇಷಣದಿಂ ಪೊಕ್ಕು:

ಕಾಳಿಂದಿಯ ಮಡುವಂ ಹರಿ |
ತೋಳಿಂ ತುಳ್ಕಾಡಿ ಮೊರೆದು ಮೇಲ್ವಾಯ್ದ ಮಹಾ ||
ಸ್ಥೂಳತರಂಗಾವಳಿಯುಂ |
ಕಾಳಿಯನೆಂದಡಸಿ ಪಿಡಿದು ಶೋಡೆದಂ ತಳದಿಂ ||೪೫||

ಅಡಗಿದ ಪಾವಂ ಜಗುನೆಯ
ಮಡುವಿನೊಳರಸುವನ ಕರನಖಾರುಣರುಚಿಗಳ್ ||
'ಗಡ' ಕಟ್ಟಲೆಯೊಳ್ ಪಲವುಂ
ಸೊಡರಂ ಕೊಂಡರಸುವಂತಿರೇಂ ತೊಳಗಿದುವೋ ||೪೬||

ಫಣರತ್ನಜ್ಯೋತಿಯಿಂ ಕಾಳಿಯನನಱಸಿ ಕಂಡೆಯ್ದಿ ಗೋಪಾಳಚೂಡಾ |
ಮಣಿ ಜೇವಂಬೆತ್ತ ಗಾರುತ್ಮತಮಣಿಯವೊಲಂಗಪ್ರಭಾಮಾಲೆ ದುರ್ವಾ ||
ಪಣಮಂ ಕಾಳಿಂದಿಯೊಳ್ ಪುಟ್ಟಿಸಿ ಪಿಡಿಯಲೊಡಂ ಕೃಷ್ಣನಂ ಕಾಳಿ
[ಯಾಂಗಂ |

ಪಾ. ಭೇ—1. ಕಡು.

ಪೆಣದತ್ತಾಪಾದಮಸ್ತಂ ಲತೆಯೊಳ್ ಬಿದಿರಂ ಪರ್ವುವಂತೊಂದಗುರ್ವಂ ॥
ಬಿಸುಸುಯ್ಯೋಕ್ಷಿಸೆ ನುಂಗುವಂತೆ ಮೊಗಮಂ ಪ್ರೋದ್ವೃತ್ತನಾಹಸ್ತದಿಂ ।
ಮುಸಕಂಗುಂದದೆ ಪೊಯ್ದು ಮುಂದಲೆಯನಂಗೋಪಾಂಗಮಂ ಕೂಡೆ ಒಂ ॥
ಜಿಸಿ ವ್ಯ ಜೇಜಿರಡೆಲ್ಲೆಸಲ್ಲಮುರಕತ್ತ್ವಾಟೋಪದಿಂ ತೆತ್ತು ಪ್ರ
ಷ್ಟಿಸಿದಂ ಪಂಕಜಲೋಚನಂಗೆ ವಿಜಯಶ್ರೀಕೇಳಿಯಂ ಕಾಳಿಯಂ ॥೪೮॥

ಮತ್ತಮಯೂರಗರ್ಜನೆಗೆ ಚಂದನಮಂ ಬಳಸಿರ್ದ ಪನ್ನಗಂ
ಸುತ್ತಿದುವಂತೆ ತನ್ನ ಗಳಗರ್ಜನೆಗಂಜಿ ನಿಜಾಂಗಯಷ್ಟಿಯಿಂ ।
ಸುತ್ತಿದಿರ್ದ ಪನ್ನಗನ ಗಂಟಲನೊತ್ತಿದನೊತ್ತಿದೊಂದು ಕೆ
ಯ್ಮತ್ತಮಗೊಂದು ಕಾಲಭುಜಗಂ ಪಿಡಿದಂತಿರೆ ಕಾಳಿಯಾಹಿಯಂ ॥೪೯॥

ವ॥ ಅಂತು ಕಾಳಿಯಂ ಗಾಳಿಯಂ ಗರಳಮುಮನೊಳಗಾಗಿ ಕಾಲ್ಕೆ ಕಾಳಿಂದಿಯ ಸೋರ್ಮುಡಿಯಂ ಪಿಡಿದು ತರ್ಪಂತೆ ಪಿಡಿದು ತಂದು ಗೋಪಾಲಬಾಲಕರ ಕೆಯ್ಯೊಳ್ಕೊಟ್ಟು ಕಂಸನಲ್ಲಿಗೆ ಕಮಳದೊಡನೆ ಕಳಿಪಿ ಕೃಷ್ಣಂ ಗೋಕುಳಕ್ಕೆ ಮಗುಳ್ದಾಗಳ್:

ಅಯನಯನಿಧಾನತೇಜೋ ।
ಮಯ ಕೆಂಡಮನೊಜಲೆ ಪತ್ತಲಾರ್ಕುಮೆ ಜಗತೀ ।
ಜಯಿಯೆನಿಪ ಕಂಸ ನುಂಗುವ
ಕುಯಕಂ ಕೊಳ್ಗುಮೆ ಪರಾಕ್ರಮೋನ್ನತ ನಿನ್ನಂ ॥೫೦॥

ವ॥ ಎಂದಶರೀರವಾಕ್ಯಮಂ ಕೇಳ್ದು ಪೂತನೆ ಮೊದಲಾಗಿ ಕಾಳಿಯಂಬರಂ ಮಾಡಿದಪಚಾರಮೆಲ್ಲಮುವನ ಮಾಟಮೆಂದು ನಿಶ್ಚೈಸಿ ಪಲವು ಮುನಿಸುಮನೊಂದೆಮುನಿಸುಮಾಡಿ ಮುನಿದು ಕಂಸಂ ಮಾಡುವುಪಾಂಸಮೆಲ್ಲಮನಱಿದುಮಿರ್ದನತ್ತ ಸಹಸ್ರಪತ್ರದೊಡನೆ ಕಾವ್ರುವೆರಸಿದ ಕಾಳಿಯನೆಯ್ದಿಲನಟ್ಟುವಂತೆ ನಾರಾಯಣನಟ್ಟಿದ ಪಾವುಮಂ ಪೂವುಮಂ ಕಂಸಂ ಕಂಡು ಪಾವಡರ್ದ ಪಂಗೆಯಂತೆ ಕಿಱಿದುಜೇಗಮಿರ್ದು ತನ್ನೊಳಿಂತೆಂದಂ;

ಬಲಯುತನಾದಂ ಬಗೆವಂ
ಕೊಲಲಾಱಂ ಕಾಳಿಯಂ ಗಡಿನ್ನಾರ್ಪವರಾರ್ ।

ಸಲೆ ಕೊಲಬಾರದ ಪಗೆಯಾಂ
ಗೆಲವಾರದದೆಂದುಮೆಂತುಮೆಂಬುದು ಪದನೇ ||೫೧||

ವ|| ಎಂದು ಮಂತ್ರಶಾಲೆಗೆ ಪೋಗಿ ಮಂತ್ರಿಗಳಂ ಒರಿಸಿ ಬೆಸಗೊಂಡವರಿಂತೆಂದರ್:—

ಪಗೆವಂ ಬಲ್ಲಿದನಾದನಾದ ಸಪ್ರಜ್ಞಸ್ತ್ರಿಕಾದಿಬಾ |
ಧೆಗಳಂ ಗೆಲ್ಪನವೇಕೆ ಮುಟ್ಟು ಮುಂಚಿಯಿನ್ನುಪೇಕ್ಷರ್ತಮ್ಮ ವೈ ||
ರಿಗಳಲ್ತಾರುಮನಿಕ್ಕೆ ಬಾರಿಸುವರಾರ್ ಕೇಳ್ಮಂತ್ರಮಂ ಮಲ್ಲಗಾ |
ಳಗಮಂ ಮಾಡಿಸಿ ಕೊಲ್ವುದುಳ್ಳಡರಿಯಂ ಕಂಸಾವನೀವಲ್ಲಭಾ ||೫೨||

ಜಗಮೆಲ್ಲಮರಿಯೆ ತಂಗೆಯು
ಮಗನನದೆಂತೀವೆಮೆಂಬೊಡನುಜರ್ತನುಜಾ
ದಿಗಳಲ್ಲದೆ ಭೂಪಾಳರ
ಪಗೆವರ್ಮತ್ತೊಂದು ದೇವದಿಂ ಬಂದಪರೇ ||೫೩||

ಮೊದಲೊಳ್ಮಲ್ಲನೆ ಮಲ್ಲರಿಂ ಮುರಿಸು ಮಲ್ಲರ್ ಸೋಲ್ತೊಡಾ
| ಬೇಗದೊಳ್ |
ಮದವದ್ದಂತಿಯಿನೊಕ್ಕಲಿಕ್ಕಿಸು ಮದೇಭವ್ರಾತಮಾಸೋಲ್ತೊಡೊ ||
ಟ್ಟಿದ ಕಿರ್ಕಿರ್ಪರ್ವೊಲಿರ್ದ ಖಳ್ಗಬಲಮಂ ಪೇಟ್ ಖಳ್ಗಗಳ್ ಸೋಲ್ತೊಡೋ
ವದೆ ನೀನಾತನ ಕಾದಿ ಕೊಲ್ ಪಗೆವನಂ ಕಾಲಾಂತಕಂ ಕೊಲ್ವವೋಲ್||

ವ|| ಎಂಬುದುಮಿದೇ ಮಂತ್ರಮೆಂದು ನಿಶ್ಚೈಸಿರ್ದಂ ಆ ಪ್ರಸ್ತಾವದೊಳ್ ಪಡಿಯರಂ ಪೊಡೆವಟ್ಟು ಮಹಾಮಾತ್ಯಂ ಬಾಗಿಲೊಳ್ಬಂದಿರ್ದಪನೆನೆ ಕಂಸಂ ಬರವೇೞ್ಪೆಂಬುದುಮರೋಹಕಂ ಬಂದು ಕಂಡು ಸಾಷ್ಟಾಂಗವೆರಗಿ ಮುಂದೆ ನಿಂದು:—

ಕರಿ ಕೊಳೆಯೊಳ್ಮಂಗೆ ಪುದು ಕಾಮ್ಪಿನೊಳಗ್ನಿಗೆ ದಾಯಿಗಂ ಸಹೋ |
ದರವಲಿಂ ಸಿಡಿಲ್ಗೆ ಮದದೊಳ್ಕಳ ಕಾಳಿಗೆ ಕಾಲತಕ್ಕನೊಳ್ ||
ಗುರು ಗರುಡಂಗೆ ಮಾರಿಗೊವಜಾ ಮುಳಿಸಿಂದೆನೆ ನಿನ್ನ ಗಂಧಸಿಂ |
ಧುರಪತಿಯುಗ್ಗದಗ್ಗಳಕೆಯುಗ್ಗಳಮಾದುದಳಾಧನಾಯಕಾ ||೫೫||

ಗಿರಿ ಪರಮಾಣುವಾಗೆ ಕಡಲೆಯ್ದೆ ಲಯಾನಳನೆಯ್ದೆ ಲೋಕಮಂ ।
ಧರಿಯಿಸಿ ನಿಂದ ವಾಯುಚಯಮೆಯ್ದೆ ವಿಹಾಯಸಮೆಯ್ದೆ ಕಾರಣಂ॥
ಕರಿಗುಱಿದಂತು ದಂತಿಗಳೊಳೀಬಲಮೀಮದಮೀಪ್ರತಾಪಮೀ ।
ಖರಸಹಸತ್ವಮೀಸ್ಥಿರಮಹೋದಯಮಕ್ಕುಮೆ ಕಂಸಭೂಪತೀ ॥೫೬॥

ವ॥ ಎಂದು ಬಿನ್ನವಿಸಿ ತನ್ನ ಮನದ ವಿಷಾದಮಂ ಕಳೆದ ನಿಷಾದಿಗೆ ಚಿತ್ರಮುಮನಂಗಚಿತ್ರಮುಮನಿತ್ತನ್ನ ಪಗೆಯುಂ ಒಗೆಯುಮೆಂದು ಸಾಧ್ಯಮಾವುದು; ಮಧುಸೂದನನಂ ಮುನ್ನಂ ಕೊಲ್ಲೆನಿನ್ನುಕೊಂದಪೆನೆಂದು ತೊಡೆಯುಂ ಪೊಯ್ದು ತಡೆಯದೆ ಚಾಣೂರಮಲ್ಲನಂ ಕರೆಯಲ್ಕಳಪಿ ವೀರಾವೇಶದಿಂ ಮೆಯ್ಯಱಿಯದೆ ಕಂಸನಿಂತೆಂದನೆಂದಾನುಮೊರ್ಮೆ ಗಂಡಗರ್ವದೆಸೆಯಿಂ ಕೈಟಭನೆಂಬ ದಾನವಂಗಾಂ ಪ್ರಾಣದಾನಂಗೆಯ್ದೊಡಾತಂ ವಿನೀತನಾಗಿ ನಿನಗೆ ಪರೋಪಕಾರಿಯ್ಯೆ ನಿನಗೀಭವದೊಳ್ಸಕೆಯ್ದಪ್ಪೆನಲ್ಲದೆ ಬೆಸದಿರ್ಪೆನಲ್ಲೆನೆನಗೆ ಬೆಸನೇನೆಂದೊಡಾನಾದಾನವನಳವಂ ಕಡುಪುಮಂ ಕಾಯ್ಪುಮಂಕಂಡೀರಕ್ಕಸನಾನೆಯಾಗಲ್ತಕ್ಕನೆಂದು ಬಗೆದು ನೋಡಿ ನೀನೆನಗೆ ಸಾಲಗ್ರಾಮಿಕಮಪ್ಪ ನಾಗನಾಗಿರೆಂದೊಡಾಗೆ ನಿಜಗಲಿಯಪ್ಪಜಿತನೆಂಬ ಗಜಮಾಂ ಪರಾಜಿತಂಮಾಡಿಯಜಿತಂಜಯನೆಂಬ ಪೆಸರುಮಂ ವಿಕಾಸಿಸಿ ತಾನೇಕಕುಸುಮಕಾಸಾರಸರಿತ್ಸರೋವರಂಗಳೊಳಪೊಕ್ಕು ಕುವಳಯಮನೆ ಕಿತ್ತು ಮಸ್ತಕಪಿಂಡದೊಳೊಟ್ಟಿಕೊಂಡು ಕುವಳಯಾಪೀಡನುಮೆಂಬ ಪೆಸರುಮಂ ಪಡೆದುದೆಂದದಱ ಪೂರ್ವಾಂತರಮಂ ತಿಳಿಪಿ ಮಾಮಂತನಂ ಕರೆದು ಕಿವಿಯೊಳ್ ನಾಳೆ ನೀನುಂ ನಿನ್ನಾನೆಯುಂ ಗೋಪುರದೊಳ್ ಕಟ್ಟಿಗೊಂಡಿರ್ದು ಪುರಮಂ ಪುಗುವ ನಂದನ ಮಗನಂ ಯಮಪುರಮಂ ಪುಗಿಸಿ ನೋಂತರ ಪಗೆಯನೆತ್ತಿಱಿದಂತೆ ಮಾಡೆಂದು ಕಳಿಪಿದನನ್ನೆಗಂ ಚಾಣೂರಂ ಬಂದು ಭುಜಾಸ್ಫಾಲನಪುರಸ್ಸರಂ ಬೆಸಸುಬೆಸಸನೆ ಕಂಸನಿಂತೆಂದಂ:—

ಮೆಚ್ಚುಂಟು ನಾಳೆ ನಿಮ್ಮೊಳ್
ಮುಟ್ಟಿರಿಸುವ ನಂದಸುತನ ಮೂಗಿಂ ಬಾಯಿಂ ।
ದುಚ್ಚಳಿಸೆ ರುಧಿರಮೆನಗಾ
ದಚ್ಚಿಗಮಂ ಮುಱಿವೊಡೊತ್ತಿ ಮುಱಿ ಚಾಣೂರಾ ॥೫೭॥

ವ|| ಎಂದ ಕಂಸಂಗೆ ಚಾಣೂರಮಲ್ಲಂ ಮುಳಿದು;

ಕ್ಷೋಣಿಪ ನೀವೀಮಾತಂ |
ಮಾಣಿಕ್ಕಟ ಕೀೞೆಯುಂ ಕಿವುಳ್ಚುವುದಕ್ಕೆ ||
ಚಾಣೂರನೇಕೆ ಮುಳಿದಾಂ |
ಪೂಣಿಸಿದೊಡೆ ಕೃಷ್ಣನೆಂಬ ಮಾನಸನೊಳನೇ ||೫೮||

ದೆಸೆಯುಂ ನುಂಗೆಂಬುದೇ ನಾಗಸಮನುಡುಗಿ ಕಟ್ಟೆಂಬುದೇ ಕರ್ಣನಂ ನೀಂ |
ಪೊಸದೀಡಾಡೆಂಬುದೇ ಕಾದಿಗಭದೊಡನೆ ಪೋರೆಂಬುದೇ ಕನ್ನನಯ್ಯೋ ||
ಪಸುವಂ ಕಾದುಂಬ ಪೊಲ್ಲಗಳ ಹಸುಳೆಯನಿಕ್ಕೆಂದು ಬಾೞರ್ಗೆ ಪೇೞ್ವೇ
ಬೆಸನಂ ಚಾಣೂರಮಲ್ಲಂಗೆನಗೆ ಬೆಸಸಲೇಂ ತಕ್ಕುದೇ ಕಂಸರಾಜಾ ||

ಭಾವಿಸೊಡಾಂ ಜಟ್ಟಿಯುವಂ |
ಗೋವಳನೊಂದಂಮ ದೇವ ಪೋರ್ದೊಡವನೆ ||
ನ್ನಾನೆಡೆಗೆ ವರ್ಪನೆನಗಂ
ದೇವಕಿಯ ಸುತಂಗಮಜಗಜಾಂತರಮಲ್ತೇ ||೬೦||

ವ|| ಅದೊಡಂ ದೇವರಭಿಪ್ರಾಯಮನಱಿದೆಂ; ಗೋಪಹರನಾನೆಗಿಕ್ಕುವುದು ತಕ್ಕುದಲ್ಲದೆ ತಗದೆನಲಾಗ; ನಾಳೆ ದೇವಕಿಯಕ್ಕೆಯನಸ್ಥಲದೊಳ್ ದೇವರ ಕಿವಿಗೆಯ್ದಿಸುವೆನಂತುಮಲ್ಲದೆ,

ತನು ತನಗೀಜಗತ್ರಯಮುಮಿಪ್ಪುದು ತಾಂ ಗಡ ಪೇೞದಲ್ಲದ
ಮ್ಮುನಿಸಿನರುಮೆಲ್ಲಮಲ್ಲಿರದೆ ಪೂತಸಿಯುಂ ಖರಕೇಶಿಯುಂ ಯಮಾ ||
ರ್ಜುನರನರಿಷ್ಟನಂ ಶಕಟನಂ ಪಟುಕಾಳಿಯನಂ ಕಡಂಗಿ ಕೃ |
ಷ್ಣನ ಬಸಿಱಿಂದನಾಂ ತೆಗೆಯದಿರ್ದೊಡೆ ನೀಂ ತೆಗೆಯೆನ್ನ ಜೋಳವಂ ||

ವ|| ಎಂದು ಚಾಣೂರಂ ಪೋಗೆ ಕಂಸಂ ಗೃಹಮಹತ್ತರನಂ ಕರೆದು ನಾಳೆ ಮಲ್ಲಗಾಳೆಗಮೆಂಬುದುಮವಂ ಮಹಾಪ್ರಸಾದಮೆಂದ'ಪ್ಪಡಮಂ' ಸಮೆಯೆ;

ಪಿಕಿರನ್ನಾನಾಪತಾಕಾಪಟಳಪಟುಪಟೀಪಕ್ಷಪಿಕ್ಷೇಪದಿಂ ಮೇ
ಚಕಿತಂ ರತ್ನಾವಳೀತೋರಣಕಿರಣಮರುಚ್ಚಾಪ ಚಾರಂಗಳಿಂ ಚಂ ||

---

ಪಾ. ಭೇ—1. ಬಂಡವು.

ದ್ರಕಿತಂಪುಷ್ಪೋಪಹಾರೋಜ್ಜ್ವಲಮುಕುಳಮಿಲತ್ಕೀರ್ಣಕರ್ಪೂರದಿಂ ತಾ।
ರಕಿತಂ ತಾನಾಗಿ ಪೋಲ್ತಿರ್ದುದು ವಿಮಳನಭೋರಂಗಮಂ ಮಲ್ಲರಂಗಂ॥
ಪಿರಿದುಂ ಪೊತ್ತಿರ್ಪನಿಂ ಕಟ್ಟಿದ ಪಡಿಯಿಗೆಗಳ ನಕ್ಷ್ಣಣನಕ್ಷತ್ರಮಾಳಾ ।
ಭರಮುಂ ಮುಂದಿರ್ದ ಕಂಭಂ ಕರಮೆಸೆ ಕಳಶಂ ಕುಂಭವಂತಾಗೆ ಬೇಗಂ॥
ಕರೆದತ್ತುತ್ಪಾತಮಂ ನಿರ್ಗತನಿಪುಳತರಾಸೂಕ್ಷ್ಮವಂತಂ ಗವಾಕ್ಷ
ಸ್ಫುರಿತಾಕ್ಷಂ ಪಕ್ಷಕೇತುಶುಭ್ರತಧವಳಕರೇಣೋತ್ತಮಾಂಗಂ ತವಂಗಂ ।

ವ ಆತವಂಗಮಂ ತೋರಣಮುಂಬಿಂ ಪಿಡೆಯಂ ಪೋಲೆ ಕೊಂಡ ಸ್ಫೋಟಿಕವುಂ, ಪೆತ್ತ ಕರವಾಳುಂ ಭಯಂಕರಾಕಾರಮಾಗೆ ಪೂಸಿದ ಸಿರಿಖಂಡದ ಕಂಪು ಸೂಡಿದ ಕೇದಗೆಯ ಸೊವಡುಂ ದೆಸೆದೆಸೆಗೆ ಸುಟ್ಟುರೆಗೆ ಗರುಡಧ್ವಜನೆಂಬ ಗಾರುಡನ ಬಾಯ್ಗೆ ವಧ್ಯಶಿಲೆಯನೇಱುವ ನಾಗಕುಮಾರನಂತೆ ವಿಷಮುಖನಪ್ಪ ಕಂಸಂ ಬಂದೇಱಲೊಡನೆ.

ಕೊನರಿಸೆ ಕೇಶಪಾಶರುಚಿ ಕಜ್ಜಳಿಯುಂ ಮಣಿಭೂಷಣಾಂಶುಗಳ್
ಘನಕುಚಕೋಕಮಂ ಬಿಸಿಲನಾಗಿಸೆ ಚಂದ್ರಿಕೆಯುಂ ತುಳುಂಕೆ ಲೋ ॥
ಚನವೊಡನೇಱೆ ನೂಪುರಝಣತ್ಕೃತಿ ನೆತ್ತರಪಾನಗೋಷ್ಠಿಗಾ ।
ತನ ಬೞಿಸಲ್ವ ಯೋಗಿನಿಯರಂತೆವೊಲೇಱಿದುದಂಗನಾಜನಂ ॥೬೪॥

ಪೊಳೆಯ ಪಱಿಂಚೆ ಮಿಂಚೆ ಮಣಿಮಂಗಳದೀಧಿತಿಯುಲ್ಕು ತಾರೆ ಬಾ ।
ಳ್ವೆಳಗನ ಬಂಬಲೊಳ್ಸೊಗಳ ನಾಯಕದಾಯಕವಂಡನಾಥಮಂ ॥
ಬೆಳಕಮಹಾಪ್ರಧಾನ ಮಹಿಪಾಳ ಕುಮಾರಕರೊಳ್ಗೊಂಡು ಬಾ
ಪಳಗೆಯನೇಱಿದರ್ಮಗಿಲನೇಱುವ ಶ್ರೇಚರರಾಜಲಂದದಿಂ ॥೬೫॥

ಅಸಿಪುಷ...........................
...ರ್ಗೆಡೆಯಿಲ್ಲದಂತು ಗಗನಂ ಬಂದಿರ್ದಸಿಂದ್ರಂ ಮಹಾ ॥
ಧ್ವನಿಯಿಂ ನಾರದನಾಕೆ ತನ್ನ ತನುವಂ ತೀವಿರ್ದ ಕಂಣಾಕೆ ಕೃ ।
ಷ್ಣನ ಚಾಣೂರನ ಮಲ್ಲಗಾಳಗವನಾಗಳ್ ನೋಡುವಾನಂದದಿಂ ॥೬೬॥

ವ ಅನ್ನೆಗಂ ನೆಲಕ್ಕಮಾಗಸಕ್ಕಂ ಕೀಲ್ಗೊಂಡಂತಪ್ಪ ದೀರ್ಘಾಕಾರಮುಮೊಱಂಟಾನೆಯನೊಂದು ಮಾಡಿದಂತಪ್ಪ ತೋರಮುಂ ಎರಡು ತೊಡೆಯುಂ ತೋಱೆ ತೆಮಳ್ಚಿ ಬಿಗಿದುಟ್ಟ ನೇತ್ರಾವಳಿಯ ಚಲ್ಲಣಮುಂ ತಲೆ

ಗೆ ಮೂದಲೆಯಾದ ಭೂರಿಭುಜಶಿಖರಂಗಳ್ ದಿಟ್ಟಿಯಾಗದಂತಿಟ್ಟ ಕಸ್ತೂರಿಯ
ಬೊಟ್ಟುಂ ನೆಱನಂ ತಕ್ಕೆಯ್ಸಲ್ಕೆಂತಪ್ಪ ತೋಳ್ಗಳುಂ ಪಿಡಿದ ಬೆಂಬೊಡೆ
ಯಂತಪ್ಪ ಮುಷ್ಟಿಯುಮುಂ ಪೆರ್ಗೆ ಸೆಱಗಿತ್ತುವಂತಪ್ಪ ಮುಷ್ಟಿಯುಮುಂ ಸ
ಯನುಜರ್ಗೆ ಸತ್ವಂತಪ್ಪ ತ್ರಿಕ್ರಿ ಪಿಂಜಿಂ ಮಾಡಿದಂತಪ್ಪ ಸುಣ್ಣಮುಂ ಸೇ
ರಿತಾಗಿ ಭೂರಿಸಿದ ಸಿರಿಖಂಡದ ತ್ರಿಪುಂಡ್ರಸಿಕ್ಕಿದ ವಿಜಯದಂಡೆಯುಮುಂ ಸೂ
ಕರ್ಾಸೆಯ ಕೆಯ್ಯ ಕರಿಯ ಪಿರಿಯ ಪಿಲ್ಲಣಿಗೆಯ ಮುಗುವರ್ಣವಾದು ತವಾಗೆ-
ಕಟಿನಂತಪ್ಪಂಗಮುಂ ಕಂಜದಿಸಿ ಬೆದಸಿನಂತಪ್ಪ ಪಾಂಗಗಳಂ ಮಾ |
ವಿಡೆ ಬಟ್ಟಿ ತುಂಬಿಬಿಗಳ್ ಕ್ಕಿವ ಮುಳಯುಜನೊಳ್ಗಳ್ ಸೀಳ್ವಳ ಕಂಜೊಳ್
ಕುಡೆ ಚೆಲ್ವಂ ಚಲ್ಲಣಂ ಚಂಡಿಕೆ ಪಿಳಿರೆ ಭುಜಾಸ್ಫಾಳನಂಗೆಯ್ಯುತ್ತುಂ ಬೊ
ಬ್ಬಿಡುತ್ತುಂ ಗಂಡೆ... ಬಂದಾ ಮದಗಜಗತಿಯಿಂದುರ್ಪಿ ಚಾಣೂರಮಲ್ಲಂ

ಮಲ್ಲರ್ ರಂಗಸ್ಥಳಗಳ್ |
ವಲ್ಲದೆ ಕವಿದತ್ತು ಕೆಪಿಯ ಕಸ್ತೂರಿ ಮದವೊದ
ಲಿಲ್ಲಗುವಂತಿರೆ ತನ್ನ್ಲ್ |
ಪಲ್ಲವಿಸೆ ಕರೀಂದ್ರಕಾಯಮುಂ ಬಲಕರಮುಂ ||೬೮||

ನಗವೊಂದೆ ಮೊಗಸಿ ಮುತ್ತುವ
ಮುಗಿಲಂತಿರೆ ಮಲ್ಲನಿಕ್ಕಿದಣ್ಪಿನ ಕಂಪಿಂ ||
ಪಗಿದಗಿದು ಮುಸುಱಿ ಮುತ್ತಿದು
ವಗಣಿತಮತಿಬಹಳಮದಮಧುವ್ರತಪಟಳಂ ||೬೯||

ಐರಾವಣದಯೆ ಪೆಗನೆ
ವಾರಣಗಣವಾಸೆಯಿಂದೆ ಬರ್ಪಂತಿರೆ ಚಾ ||
ಣೂರನ ಪೆಗನೆ ಮುಷ್ಟಿಕ |
ಧೀರೋದ್ಧತಮಪ್ಪರಸ್ಸ ಮಲ್ಲವರಂಬರ ||೭೦||

ವ|| ಬಂದು ಕಟಿತಟಮಂ ಬಳಸಿ ಕೊಂಡರ್ಪ ಜಾದುಗಾಱರಂತೆ
ಯುದ್ಧಳಮಂ ಬಳಸಿಕೊಂಡು ಕುಳ್ಳಿರಲೊಡನೆ:

---

ಪಾ. ಭೇ— 1. ಅಕ್ಷಳಮಂ.

ಎಡೆವಿಡದೆ ಮಲ್ಲಗಳನಂ ।
ಕುಡಿಮಿಂಚಿನ ತಟ್ಟು ಸುತ್ತಿದಂತಿರೆ ಬಾಳುಂ ॥
ಕಣಿತಳೆಯುಂ ಹಲಗೆಯುಮವು
ಕಿಡಿಗುಟ್ಟೆ ಪೞಂಚೆ ಸುತ್ತಿದರ್ಕರ್ರಾಳ್ಗಳ್ ॥೩೧॥

ಶರನಿಧಿಯ ತೆರೆಗಳುಂ ದಿ ।
ಕ್ಕರಿಕುಳಮುಂ ಬಳಸಿದಂತೆ ನೆಲನಂ ನೆಲೆಯೊಳ್ ॥
ತುರಗದಳಮುಂ ಮದೇಭೋ ।
ತ್ಕರಮುಂ ಬಳಸಿದುವು ಮಲ್ಲರಂಗಮನಾಗಳ್ ॥೩೨॥

ವ॥ ಅಂತು ಕಂಸಂ ಕೃಷ್ಣಂಗೆ ಕಡಿವಂದುದಂ ಕಂಡು ವಸುದೇವಂ ಬಲದೇವಂಬೆರಸು ಚಾತುರ್ದಂತಬಲಮುಂ ಕೂಡಿಕೊಂಡು ನಿಯುದ್ಧರಂಗದ ಕೆಲದೊಳ್ ಯುದ್ಧಸನ್ನದ್ಧರಾಗಿರ್ದರ್ಗಳುದ್ಧತನಾಗಿರ್ದ ಕಂಸಂ ಪಡಿಯಱನಂ ಕರೆದು ಕಿವಿಯೊಳ್ ಪಱರ್ವುದುಮಾತನಂತೆಗೆಯ್ವೆನೆಂದು ಪೋಗಿ ಯಶೋದೆಗೆಂದಂ—ನಿನ್ನ ಮಗನೆಲ್ಲಿಗಾದೊಡಂ ಕಾಳಿಗವೆಂದೊಡೆ ಪೂಣಿಗನಾಗಿ ಪರಿವರಿಯಪ್ಪನ ವ್ಯಸನಮುಂ ವ್ಯಸನಮುಳ್ಳೊಡೆ ಬಂದು ಚಾಣೂರಮಲ್ಲನೊಳ್ ಮಲ್ಲಪ್ರೋದ್ದರ್ ಪರ್ವಕ್ಕೆ ನೆರೆದರಸುಮಕ್ಕಳ ಕಣ್ಗೆ ಪರ್ವಮಂ ಮಾಱಿಕ್ಕೆಂದು ಕಂಸಮಹಾರಾಜಂ ಬೆಸಸಿಯಟ್ಟಿದಂ; ನೀವೆ ತಿವುರುಂ ತಿಳಕಮುಂ ಬೆರಸುತ್ಪೂರಿಸಿ ಕೊಂಡು ಬರ್ಕೆ ಕೊಳ್ಳಮಾತನೆಲ್ಲಿದನೆಂಬುದುಂ ಯಶೋದೆಗೆ ಮುಗುಳ್ನಗೆನಗುತಿಂತೆಂದಳ್ :—

ಎನ್ನ ಮಗನಾವ ತಿವುರಿಂ ।
ಮುನ್ನಿಕ್ಕಿದನೆಣ್ಣ ಶಕಟನಂ ಪೂತನಿಯುಂ ॥
ಪನ್ನಗನಂ ಯಮಳಾರ್ಜುನ ।
(?) ರನ್ನರಕಸನವನಿಸ್ಸಕನೇ ಚಾಣೂರಂ ॥೩೩॥

ವ॥ ನಿಜದಿಂ ಕೂರ್ಪುಳ್ಳನುಮಂ ಕತ್ತರಿವಾಣಿಯುಮಂ ಮಸೆಯಲೇಕೆ ಸಿಂಗವಾನೆಯುಂ ಮುನ್ನವಲ್ಲಿಗಾವಭ್ಯಾಸಮಂ ಮಾಡಿದುದು; ಮುರಾಂತಕನುಂ ಅಂತಕನುಂ ಕೊಲ್ವುದನಿನ್ನು ಕಲ್ತಪಗೆ ಕೇಳಿಮೆನ್ನ ಮಗಂ ನೀರೊಳ್ಪನಂ ಬಿಸಿಲೊಳ್ಪಡಂ ಬೆಂಕಿಯೊಳ್ಪೇೞಯುಂ ಜವನ ಕಯ್ಯೊಳ್ ಸಾಯಂ

ಪಸುಂ ಬೇಡಿಕೊಂಡಗೊಂಡು ಪೋಗಿಮೆಂಬಿನಿತರ್ಕೆಯುಂಬುಜೋದರಂ ಬಂದ ಬ್ಬ ಪಸಿದೆನೆಂಬುದುಂ ಯಶೋದೆಯಿಂತೆಂದಳ್:—

ಸಮೆದಂ ಮೊಸರುಂ ಬಾಳ್ಕೆಸ
ಉಮನಾಂ ಘನವಾಗಿ ತಂದೆನಿಕ್ಕಿದಪೆಂ ಲಂ॥
ಚಮುನೆನ್ನ ಮಲ್ಲ ಚಾಣೂ
ರಮಲ್ಲನಂ ಮುರಿದು ಬಂದು ಪಸಿವಂ ಮುರಿಯಾ ॥೭೪॥

ವ॥ ಅನಿತರ್ಕೆ ನಿನ್ನ ಪೊಡಪ್ಪುಂ ಪಸಿವುಂ ಕೂರಿತಕ್ಕುಮೆಂಬುದು ಮಕ್ಕಟಾ! ನಗ್ಗಮ ಕಾಳೆಗಮುಳ್ಳೆಡೆ ಕೂಟೀವುದೆಂದು ಪಡಿಯರ ನೀಬಂದೆನೆ ನಡೆಯಿಮೆಂದು ಮುಂದೆ ಕಳಿಪಿ ತಾನುಟಿಯೆ ತನ್ನೋಗೆಯು ಗೋಪರೆಲ್ಲರಂ ಮಲ್ಲವಸದನಂಗೊಳಿಸಿ ತಾಯ್ಗೆರಗಿ ಪೊಡೆವಟ್ಟನಂ ಯಶೋದೆ ಪೇರಶ್ರೀಗಾಣ್ಮನಾಗೆಂದು ಪರಸೆ ಪರಕೆಯನಾಂತು ಗೋವ ರೊತ್ತುವ ತಿತ್ತಿರಿಗಾಳೆಯ ತೂತ್ಕಾರಮುಮೂದುವ ಕೊಳಲ ಸರಮುಂ ಪಿಡಿವ ಕೊಂಬಿನ ನಿನದಮುಂ ಪೊಯ್ವಕ್ಕವದ್ದಳೆಯ ದನಿಯುಂ ಉದ್ದುವ ಜುಂಚೆಯ ರವಮುಂ ಬಾರಿಸ ಜೆಂಕರಮುಂ ರವಳಿಯುಂ ನೆರಪೆ ನಲವ ತಿಯ ಪುರಕ್ಕಾಗಿ ನರಕಮಥನಂ ಮಸಗಿ ಬರ್ಪನನ್ನೆಗಂ—ಕಂಸನಿಂ ಮುಂ ದೊಂದು ಕಾಲಮುಪಕ್ತತನಾದ ಮಧುವೆಂಬ ದಾನವನವನ ಬೆಸದಿನಸಗನಾಗಿ ಬಿಸರುಹೋದರನನಸಗವ್ರೊಯ್ಲಿನುಯ್ವನೆಂದು ಬಂದೊಗೆಯುತ್ತು ಮಿರ್ಪ ಮಡಿವಳನ ಮುಂದಣ ಮಡಿಯುಮಂ ತನ್ನೊಡನೆಯ ಗೋವಳಗರುಟ್ಟ ಮೈಲಗೆಯುಮಂ ಮಧುಸೂದನಂ ಕಂಡು ಸಮಿಾಪಕ್ಕೆ ವಂದು

ಒಗೆದೊಗೆದು ಮುರಿದು ಜಗುನೆಯೊ
ಳಗಲೊಗೆದುಂ ಪಿಂಡುತಿರ್ಪ ರಜಕನನ್ನೀಸೀ ।
ತಿಗಳನು ಡಲೀವುದೆಮಗೆನೆ ।
ಜಗಳಂ ಜಕ್ಕುಲಿಸಿದಂತೆ ನಕ್ಕಂ ರಜಕಂ ॥೭೫॥

ವ॥ ನಕ್ಕು ರಜಕಂ ನೀಂತಿಗಳಂ ಕಂಸದೇವನುಡುಗುಮೆಂದಾತನ ಬೀಟುಡೆಯುವರುಮುಡುಗುಮಲ್ಲದೆಡೆಯ ಕಡೆಯ ಬಡವರ್ತುಡಬಾರದೆನೆ ಮುಕುಂದನಿನನಂದಮಕ್ಕುಮೆಂದು ಮತ್ತಂ ಕೇಳ್ ಬೇಡ:—

ಅಣ್ಣಱಿಯದರಸರುಡುವೀ
ಬಣ್ಣಂಗಳನುಡಲೆ ಬಯಸಿದಣ್ಣನ ನೊಸಲೊಳ್ ||
ಕಣ್ಣುಂಟೆ ತೋಱು ನೊಸಲೊಳ್ |
ಕಣ್ಣುಳ್ಳನುವಮಾಱನಾರ್ಪೊಡುಡುವನೆ ತೊವಲಂ ||೩೬||

ವ|| ಎನೆ ವನಮಾಳ ಮಾಳಾಪ್ರಪಂಚಂ ಬೇಡ ಬಿಡುಬಿಡೆಂದು ರಣರಂಗಾರ್ಥಿಯಾಗ ರಂಗಕಾಱನ ಕೆಯ್ಯ ಸೀಱೆಯ ಸೆಱೆಯುಲನುಗೆಯ್ಯಲೊಡನೆ

ಕಟ್ಟಣ್ಮಕಾಱಸಿವಸಿ |
ನ್ನುಟ್ಟಲ್ಲದೆ ಮಾಣನುಡಿಸುವೆಂ ಗಡಮಿವನಾ ||
ನುಟ್ಟಪೆನೆಂಬನ ಮುನ್ನ |
ಳ್ಳುಟ್ಟುದುಮಂ ಸುಲಿದು ದೇಸಯಂ ಕಾಸೆಯುಮಂ ||೩೭||

ವ|| ಇವಂ ಮುಟ್ಟದೊಡೆ ಕಂಸದೇವನಾಣೆಯೆನೆ ನೀಂ ಕುಡದೊಡೆ ಕಂಸದೇವನಾಣೆಯೆಂದಸಿತಾಂಬರಂಗಂ ಬರನೆ ರಜಕನಂಬರಂಬರಂ ತುಂಬುರಕೊಳ್ಳಿಯಂತೆ ಸಿಡಿದಿಂತಪ್ಪ ಸಿತಗನನೆಲ್ಲಿಯುಂ ಕಾಣೆನಾಣೆಗೆ ಮಾಱಾಣೆಯಿಟ್ಟಪಂ ನಾಯ ಬಾಯ ಸೀಱೆಯಪ್ಪೊಡೆ ಸೀಱೆಯತ್ತ ಸಾರೆಂದು ಮುಂದೀಡಾಡಿ

ಉಡುವೊಡುಡು ಪೇೞ್ವನರಸರ |
ಮಡಿವರ್ಗಮಿವುಟ್ಟು ಕೊಳ್ವ ಕಲಿಗಳ ಕಾಲಂ ||
ಪಿಡಿದಡಸಿ ಕಂಸದೇವನ |
ಮಡಿವಳನೊಗೆದಾಱೆ ಪರಪಲಿಂ ಕಲ್ತಪನೇ ||೩೮||

ವ|| ಎನೆ ಕೃಷ್ಣಂ ಕಿಱುಮುಸಿಸುಮುಸಿದು

ಇದು ಸತ್ಯವೆಱಗೆವ ಕೆಯ್ಯ
ವುದು ತೋಱಿದಸಗನೆರಡು ಕೆಯ್ಯಂ ಮುಱಿದಿ
ಕ್ಕಿದನೂರ ಸೀಱೆಗಸಗಂ
ತದೆವಡೆದನೆಸಿಪ್ಪ ನಾಡ ನುಡಿ ಪರಿಪಿಸೆಗಂ ||೩೯||

ವ|| ಮುಱಿದಿಕ್ಕಿ ಸುಬ್ಬರಸೂಱೆಯೊಳಗೆ ಮಡಿವರ್ಗಮಂ ಗೋ

ವರ್ಕಳ್ಗೆ ಸೂೞಿಗೊಟ್ಟು ಸಗಪ್ರೊೞಿಯುಂ ಪ್ರಯ್ಯಲಿಡಿಸೆ ಪ್ರೊೞಲಂ ಪುಯ್ಯಲಿಡಿಸಲೆಂದು ಪುರುಷೋತ್ತಮನಾಪುರದ ಗೋಪುರವಂ ತಾಗೆವರೆ ತೊಟ್ಟನೆ ಕಟ್ಟಿದಿರೊಳ್ —

ಮುಗಿಲಂ ಮುಟ್ಟಿದ ಕಾಳಕಾಯ ಬಲದಿಂದರ್ಕಂಗೆ ಕೋಡಿಟ್ಟ ಕೋ
ಡುಗಳಂ ಬೆಟ್ಟಿಗ ಬೀೞಲಂತಲೆವ ಕೆಯ್ಯಂ ಪೃಥ್ವಿಪಾತಾಳಮಂ ।
ಪುಗೆ ಗಾತ್ರಪ್ರಸರಮಿಟ್ಟು ಮೆಟ್ಟುವಳವಿಂ ಸಪ್ತಾರ್ಣಯಂ ಸೂಸುವ
ಜರ್ಗಳಿಂದೇಂ ಕೆದಱುತ್ತೆ ಬಂದುದೊ ಮದಸ್ತಂಬೇರಮಂ ಬೀರಮಂ ॥

ಕಕುಭಂ ಮುಂಗಾಲ್ ಕಕುದ್ಮತ್ಪ್ರತಿವಿಷಮವಿಷಾಣಂ ರದಂ ಪೂತ[ನಾತುಂ ।
ಗಕುಚಂ ಕುಂಭಸ್ಥಳಂ ಕಿಚ್ಚುವನಿಧರವೊಡಲ್ಗಾಳಿಯಂ ಸ್ಥೂಳಹಸ್ತಂ ।
ಶಕಟಂ ಪೃಷ್ಠಪ್ರದಂ ಸಂಹರಿಸರಪರಿ ಕೋಪಾಗ್ನಿ ಕಣ್ಣುಗ್ರವಿದ್ವೇ
ಷಿಕಪ್ರೊರ್ಮೆಯ್ಯಾಗೆ ಮತ್ತಂ ಹರಿಗೆ ಮುನಿದು ಒರ್ವಂತೆ ಬಂದತ್ತಿ[ಭೇಂದ್ರಂ ॥ ೮೧॥

ಜಗಳದಿಭಮಾಡುವಂತೆವೊ
ಲುಗೆ ನೆತ್ತರ್ಕುತ್ತಿ ಕೆಡಪೆ ಮದದಾನೆಗಳಂ ॥
ಮೊಗಮಿಕ್ಕಿಯಾನೆಯಿಱುಪೆಗೆ ।
ಮೊಗಮಿಕ್ಕಿದ ತೆಱದಿಸಿರ್ದುದೇಂ ಕರಿ ಪಿರಿದೋ ॥ ೮೨॥

ಅಂಗಕ್ಕೆಯ್ದುದು ಗಗನಂ ।
ತುಂಗರವಕ್ಕೆಯ್ದುದಿಙ್ಮುಖಗನಿಕರಂ ಧೀಂ ॥
ಕಿಂಗೆಯ್ದುದು ಧಾರಿಣಿ ಮುಳ್
ಸಿಂಗೆಯ್ದುದು ಮೂಱು ಲೋಕಮಾಮದಗಜದಾ ॥ ೮೩॥

ವ॥ ಅಕ್ಕೈಟಭನೆಂಬ ಕಟ್ಟಾನೆ ಮುನ್ನಮೆ ತಾಂ ರಕ್ಕಸನಪ್ಪುದಱಿಂ ಮಾನಿಸರನೆ ಕಡಿಗೊಂಬುಗೊಂಡುಮೆಂತಾಂ ಮೆಚ್ಚಿದ ಕೊಲೆಗಡಿಯನಾಗಿ ಬಿಟ್ಟ ಕಣ್ಣುಂ ಬಿಗಿದ ಮೊಗಮುಂ ಮಸದ ಮುಸಿಸುಂ ಮೆಯ್ಯ ಮುಱುಕಮುಂ ಪ್ರತಿಮಾನದ ಪೊಣುಮಣಲೊಳಡಸಿದಾನೆಯಡಂಗುಂ ಕೋಡ ಕಯ್ಯ ಪ್ರೊಂತಿಮಣಿಯ ನೆತ್ತರನೊಂದು ಸಿಮಿಪಮುಂ ಕುಂ

ದಿಸದ ಕ್ರೋಧನಿಯೆಂಬುದ್ಯಾನೆಯ ಮದದೊಳ್ ಮದಕ್ಕೆ ವಂದ ಕೀನಾಶನಂತೆ ಮಾನುಸಕಂ ಮಸಗಿ ಬರೆ ಮುಂದೆ ಪರಿತಪ್ಪ ಪರಿಕಾಱರ್ ರಾಮಕೃಷ್ಣರಂ ತೊಲಗು ತೊಲಗೆನೆ ಗೋವರೇಕಣ್ಣ ಕಣ್ಣ ತಲೆಯೊಳ್ ತೊಲಗುವಂತಾಗಿ ಕಟ್ಟಾನೆಗೆ ಕಿಟ್ಟಳವಾದುದೇ ಮಾನೆಯುನಾದುರ್ವಪ್ಪುದನಾರ್ಪಡೆ ರೆನೆ ಪರಿಕಾಱರೊಳೊರ್ವರ್ ಕೊರ್ವಿದ ಗೋವಳಿಗರ ಗರವಂ ಕಳೆದಾನೆ ತಾನೆ ತೊಲಗಿಸಿದಪ್ಪುದು ನಮ್ಮೊಜ್ಜೆಗಮೇಕೆಂಬನಿತು ಜೇಗೆಯುಂ ಅಱಬುಂ ದೃಷ್ಟಿವಿಷಮುಂ ಪಿಷ್ಟಿಯ ಮುಱುಮುಂ ಮುಷ್ಟಿಯುಮಪ್ಪ ಮದದಾನೆಯೊಳ್ ಕೃಷ್ಣಂ ಕೆಯ್ಯಿಕ್ಕಿ ಕರಿಯ ಕೆಯ್ಯುಂ ತನ್ನ ಕೆಯ್ಯ ಪವಣುಂ ತ್ರಾಣಮುಮಂ ಪಡಿಯಿಟ್ಟು ನೋಳ್ಪಂತೆ ಪಿಡಿದು ಪೊಣರ್ದು ಬಣಿವಾವಿನಂತೆ ಪೆಸೆಗ ಕೆಯ್ಯ ಕಾಲ ಕೊಂಬಿನ ಕುಂಭಸ್ಥಳದೆಡೆಗಳೊಳ್ ಬೆಸ್ಗೊಡೆದ ಬಟ್ಟೆ ನಂತೆ ನುಣ್ಚಿ ನುಸುಳ್ದು ನೆರೆದು ನೋಳ್ಪರ ಕಣ್ಗಾಳ್ಚಿ ತನ್ನ ಮನಮಾಱ್ಕೆ ವಿನೋದಕ್ಕಾನೆಯೊಳೊಡಕೊಂಡಲಿಕ್ಕಿ ಲಕ್ಕಿ ತೇಜದಿಂ ಚಾಣೂರಮಲ್ಲನೊಳ್ ಮಲ್ಲಿಕ್ಕುವುದಕ್ಕೆ ಶ್ರಮಮಂ ಮಾಡುವಂತೆ ಗಜಮಲ್ಲನೊಳ್ ಪ್ರತಿಮಲ್ಲಂ ಮಲ್ಲವೋರ್ದು ಸಿಂಹನಾದದಿನಾರ್ದು--

ಬತ್ತಿದೊಡೊತ್ತಿ ಪತ್ತಿದೊಡೆ ಪತ್ತಿ ಪೊರಳ್ದೊಡೆ ಪೊರಳ್ದು ಕಾ
ಯ್ದೆತ್ತಿದೊಡೆತ್ತಿ ಕುತ್ತಿದೊಡೆ ಕುತ್ತಿದ ಕೊಂಬನೆ ಕೊಂಕಿ ಕುತ್ತಿ ಕೂ ||
ಗತ್ತಿಗೆಯುಂ ಕನಲ್ದುಱುಕಿಯಿನುರ್ಚುವಪ್ಪೊಲ್ ಮೋದದಿಂದಮುಚ್ಚಿ ಮು |
ನ್ನೆತ್ತಿ ಪಿಸುಳ್ದು ಯಾತ್ರನುಗೆ ಮತ್ತಿಭಮಂ ಹರಿ ಪೊಯ್ದುರುಳ್ಚಿದಂ ||

ವ|| ಕಮ್ಮಾಱನಂಬು ಕಮ್ಮಾಱಂಗೆಂಬಂತೆ ಬಟ್ಟ ಉತ್ತರಬಾಳಂತೆ ತನ್ನ ಕೊಂಬೆ ತನಗೆ ಘಾತುಕವಾಗೆ ಸೊವಡಿಂಗಮುಗ್ಗಿಸಿ ತುಂಬಿವೆರಸು ಕುಂಕಿ ಬಂಕಿ ಬಿದ್ರ್ದು ಕುವಳಯಾಪೀಡನಂ ಕುವಳಯಾಪೀಡನಂ ಮಾಡಿ

ಮತ್ತಗಜೇಂದ್ರದೊಳ್ ಪೊಣರ್ದು ಪೋಗೆ ಮದಂಬೊರೆದಂಗ [ಯಷ್ಟಿಯೊಳ್ |
ಕತ್ತುರಿಯುಣ್ಪಿನಂತೆಸೆಯೆ ನೆತ್ತಿಯ ಸೆಂದುರಮುಂ ಲಲಾಟದೊಳ್ ||
ಪತ್ತಿ ಲಲಾಮದಂತಮರೆ ಕುಂಭಿಯ ಕೊಂಬರುಣಾಂಕಮಂಕುಳೊಳ್
ಕುತ್ತಿದ ಪೊನ್ನ ಪಿಲ್ಲಣಿಗೆಯಂತಿರೆ ಕೈಟಭಮಲ್ಲನೊಪ್ಪಿದಂ ||೧೫||

ವ॥ ಆಗಜಮಲ್ಲನೊಳ್ಪೋರ್ತರ್ಗೊಂಡುದೆ ಮಲ್ಲಸಂಗರಂಗೆಯ್ದಂ ತಾಗೆಗೆಲ್ಲಂ ಜೀವವಿರ್ದಂದದೊಳಾದ್ವಿಪದ ಪಿಂಗಾಲಂ ಪಿಡಿದು ಪಂದಿಯನೆತ್ತಿ ವಂತೆತ್ತಿದುಕೊಂಡು ಬಂದು ಸುತ್ತುಂ ಲೋಕಮುಂ ಮೊಂದೆಡೆಗೆ ನಂದಂ ತಿರ್ದ ಮಲ್ಲಗಜದ ನಡುವಿತ್ತಂದಿಡೆ ತವಗದ ಮೇಲಿರ್ದ ಕಂಸಂಗೆ ಹಾಸ್ಯ ಗರ್ಭಮಪ್ಪ ಗಂಡಗರ್ವದಿಂ ಕೃಷ್ಣನಿಂತೆಂದಂ:—

ಅವಧರಿಸು ದೇವ ನಿನ್ನಂ
ತೆವ್ರೊಲಾಮೆಯ್ಯೆಯುವರಸರಾರಿರ್ದರಿದಂ ||
ನವನವದಾವಸ್ಥಿತಮಿ
ನ್ನವು ಮದಗಜಮೊಳವೆ ಕಾಡೊಳಂ ಕಂಜದೊಳಂ ||೮೬||

ಬಳವದ್ದಂತಿಯನಿಂತುಪೇಕ್ಷಿಸುವರೇ ಬಿದ್ದಿರ್ದದೀದಂತಿ ಭೂ |
ತಳದೊಳ್ ತೋರ್ಪವನೆಂದು ತಂದೆಸಿದನಾಂ ದೇವರ್ಗಿದೆನ್ನೋಲಗಂ ||
ಗಳಮೋ ಗಾಳಿಯೊ ಸರ್ಪಮೊಗ್ರಮದಮೊ ಕಾಪಾಗ್ನಿಯೋ ಕೂಟಪಾ
ಕಳನೋ ತೋರ್ಪ್ಪುಸು ವೈದ್ಯರಂ ಕರೆದೆಲ್ ಕಂಸಾವನೀಪಾಳಕಾ ||೮೭||

ವ॥ ಈದಂತವೆತ್ತಿತರ್ಪಲ್ಲಿ ಕೆಯ್ಗೆ ಬಾಯಿಗೆ ಬಂದುದಿದಂ ದೇವರ ವಧಾರಿಸಿ ಭಂಡಾರದೊಳರಿಸುವುದೆಂದೆಳಪೆತ್ತಿಯುಮೀಡಾಡುವ ಸ್ಪೈಂಡಿಕೇ ಯನಂತೆ ಮುಂದೀಡಾಡುವನಿತಕ್ಕೆ ಕರಿಯ ಕೆಯ್ಯುಂ ಕಾಲುಮಂ ಒಡಿವಸು ವಂ ಕಳೆಯೆ ಕಾಳಿಯುಮುಥನನಕ್ಕಟಾ ಸತ್ತುದೀಯಾನೆಯಾನೆಯನಟ್ಟದೆಗೆ ದಂತಿದೀರ್ಘಚಾಣೂರಮುಷ್ಟಿಕಾದಿಗಳಪ್ಪ ಮಲ್ಲರಿಂದಮೆತ್ತಿದೀಡಾಡಿಂ ಪೊ ರ್ತಕ್ಕೆಪ್ರೊತ್ತುವಳೆವಸರೆನೆ ಮಲ್ಲರೆಲ್ಲರ ಮೊಗಮೊಯ್ಯನಾದುದಿನಿಸಂ ಕಂಸಂ ಗಂಡಗರ್ವದೊಡನೆ ವಿಗುರ್ವಣೆಯುನೆ ತನಗೆ ತಾನೆ ಕಾಮರ್ಗಿಬಂತೆ ಕರಗಿ ಪೋಗೆ -

ಗಜಮದಪಿಲುಪ್ತನಿಜಗುರು
ಭುಜಯುಗದೊಳ್ 'ಪೊಯ್ದು' ಮಧುಪಮಾಳಾಯುಗದಿಂ

---

ಪಾ. 1 ಪಾಯ್ಸು.

ವಿಜಯೋತ್ಸುಕನಾಗಿ ಚತು
ರ್ಭುಜನಾದವೊಲಿರ್ದನುಪನಿಯುದ್ಧಂ ಕೃಷ್ಣಂ ||೮೮||

ವ|| ಇವರ್ಗನುವೋವಯಿಸಿ ಕಂಸಂ ಕುಂಜಮುಂ ಬೀಸುವುದುಂ ।

ಎಲೆಯುತ್ತಿತ್ತಲಿದಿರ್ಚಿದಿರ್ಚು ಕಡಿಕೆಯ್ಯ ನೀಂ ಬೇಗವಣ್ಮೆಣ್ಮೆ ಮ ।
ಯ್ಗಲಿಯಾಗಾಗು ಕೊಲಲ್ಕೆ ನಿನ್ನ ಜವನಂ ಸುತ್ತಿತ್ತು ಮುತ್ತಿತ್ತು ಪೆ ||
ಣ್ಗಲೆಯೇನೀಗುವೆ ಪೋಗಲುಣ್ಣದುರಿದೈ ಮಣ್ಣಾಗಲೆಂದೆನ್ನ ತೋ ।
ಳ್ವಲೆಯೊಳ್ ಸಿಲ್ಕಿದೆಯೆಂದೆ ಸತ್ತೆಯೆನುತುಂ ಚಾಣೂರನೊಟ್ಟೈಸಿದಂ ||

ವ|| ಉರಲಿಸಿ ಮುಕುಂದಂ ಮುಗುಳ್ನಗೆನಗುತ್ತುಮಟ್ಟಿ ತಿಂಬ ದೈವ
ಕ್ಕೆ ಪಾಳಂಬಟ್ಟೆಯೆಂದೇಱಿಂಟುಗೊಂಡು ಸಪರಿದಿಂದಪ್ಪಳಿಸಲೊಡನೆ

ಮುಳಿವನ್ನಂ ಮೋದಿ ಮಾರ್ಮಲ್ಲರ ಗುರುಭುಜಮುಂ ಶೇಷನಂ ಧಾತ್ರಿ
[ಮುಂದ
ಣ್ಗಿಜಪನ್ನಂ ಪೊಯ್ದು ಪಾಯ್ದಪ್ಪಳಿಸಿ ಶಿಖರಿಶೃಂಗಂಗಳಂ ಮುಟ್ಟರಂ ಬೇ ||
ಡೆಗಿಂ ನೀವೆಂಬವೊಲ್ ಡೊಕ್ಕರಿಸಿ ದಿಗಿಭಹಸ್ತಂಗಳಂ ಮೂಜಗಂ ಬ ।
ಳ್ಕೆ ಪರ್ವಿತ್ತುರ್ವಿ ವೈಕುಂಠನ ವಿಜಯಭುಜಾಸ್ಫಾಳನಾಭೀಳನಾದಂ ||

ಉಭಯವ್ಯೂಹಭವನ್ಮಹಾಕಳಕಳಂ ದೌವಾರಿಕೋದ್ಘುಷ್ಟ ಮ ।
ಲ್ಲಭುಜಾಸ್ಫಾಳನನಿಸ್ವನಂ ನೃಪಸಭಾಕೋಲಾಹಳಂ ದೇವದುಂ ||
ದುಭಿನಾದಂ ಮೊಳಗಲ್ಲಿ ಮಲ್ಲವಱೆಯೊಂದಿಂದೊಳ್ಮೆಕ್ಕಕ್ಕಯಿಂ ।
ನಭಮಂ ದಿಕ್ಕುಮನೊಕ್ಕಲಿಕ್ಕಿ ಪೊಣರ್ದರ್ ಚಾಣೂರಚಕ್ರಾಯುಧರ್ ||

ತಳಗಳಕೊಳ್ ಛಟಚ್ಛಟನೆ ಮಲ್ಲರ ತೋಳ್ಗಳ ಕೋಳ್ಕರಂ ಘಳಲ್ ।
ಘಳಲೆನೆ ಥಟ್ಟುಪೊಟ್ಟೆನೆ ಘನೋರುಯುಗಂಗಳ ಕೋಳ್ಕರಂಗಳಂ ||
ಬಳಸುವ ಬೇಡಿಕೊಳ್ಳ ಪಿಡಿಪೀವ ಮುರುಳ್ಚುವ ನುಣ್ಬುವಾಸೆಯೊಳ್ ।
ಸೆಳೆವೆಡೆ ಸಾವಂ ಪೊಣರ್ವಳವಿಯೊಪ್ಪಿದುದಿರ್ವರ ಹಸ್ತಯುದ್ಧದೊಳ್ ||

ಉತ್ತಮಸತ್ವದಿಂ ಪಿಡಿದು ಚಾಣೂರನಂ ನೆಲಕಿಕ್ಕಿ ಕೃಷ್ಣನಾ ।
ಳ್ದತ್ತಿದೊಡೊತ್ತಿ ಧಾತ್ರಿ ರಸೆಗರ್ದದು ರಕ್ಕಸನೊಯ್ದು ಧಾತ್ರಿಯಂ ।
ಕೆತ್ತಿದನಾತನುಂ ಹರಿಯ ಗೋವನಿಱಿಂಕಿ ತದಂಘ್ರಿಘಾತದಿಂ ।
ದತ್ತ ಪತಂಗವೊಂದು ಶಕಟಂ ಮುಳಿದಾಶಕಟಂಬೊಲಿರ್ದನಂ ||೯೩||

ಓರೊರ್ವರನಕ್ಷಡದಿಂ |
ದೂರಂ ಪೊಱಗಿಕ್ಕಿ ಪೋರ್ದು ಪಾದಾಹತಿಯಿಂ
ಭೂರೇಣುವಾಗೆ ಹರಿಚಾ |
ಣೂರರ್ಮತ್ತೊಂದು ಮಲ್ಲಗಳನಂ ಸಮೆದರ್ ||೯೪||

ಬೆದಱಿದ ಬೆಱಗಿಂ ಬೆಸ್ಕೆ
ಕ್ಕಿದ ಕೃಷ್ಣಂ ಮೊಗದೆಗೊಂಡು ಮೊಗದೊಳ್ಮಿಸ್ಸಿ ||
ಕ್ಕಿದ ಚಾಣೂರನನಾರ್ದೆ
ತ್ತಿದನವಸಿಯನೆತ್ತುವಂತಿರಾದಿವರಾಹಂ ||೯೫||

ಕೆಡೆದಪೋರ್ದರ್ ಪೊರಳ್ದುರ್ಗೆ ಪಿಡಿದಾರ್ದೊರ್ತ್ತಿದರ್ಮತ್ತಮು
[ದರ್ |
ನಿಡುಕೆಯ್ಯಂ ಪೆಱಡಿದನೀರ್ಡಿದರೆಱಿದು ನೆಲಕ್ಕಿಕ್ಕಿದರೂರ್ಂಕಿದಪೋರ್ ||
ಗಡಿಯಾದಪನ್ತಿ ಗಾಯಂಗೊಳಲೆ ಪಿಡುಕದಾರಯ್ದರಾರಯ್ದು ಗಾಯ |
ಕ್ಕೆಡೆಗೊಟ್ಟು ಕರ್ಟಟ್ಟುಕೊಂಡಪೊರ್ಳದುಬಿಡಿಸಿದರ್ ಕೃಷ್ಣ ಚಾಣೂರಮಲ್ಲರ್

ಪಿಡಿವಡೆ ಕೃಷ್ಣನ ತೋಳ್ಗಳಂ
ತೊಡೆಯುಂ ದೊಡ್ಡಿದುಪಿದೆನ್ನ ಮುಷ್ಟಿಗೆ ಪವಣೆಂ ||
ದಡಪಡಿಸಿ ನಳಿನನಾಭನ
ನಡುವಂ ಮುಱಿಯಲ್ಕೆ ನೋಡಿದಂ ಚಾಣೂರಂ ||೯೬||

ಮರನಂ ಕಿತ್ತು ಮುರಾರಿಯಾನೆ ಕಿಱಲ್ಮೆಂಗೆಯ್ದು ರೋಮಂಗಳಂ |
ಕರಮಂ ಕೊಟ್ಟುಟವನಾತ್ರಸಿಲ್ಲ ಪಿಡಿಯಲ್ತ್ತಾಳಿಯುಗ್ರಾಹಕಂ ||
ಧರೆಯುಂ ಬೆಂಬಲದೊತ್ತಿ ಪತ್ತ ಗಿರಿಯುಂ ಮುಸ್ಕೊತ್ತಿ ಪೊತ್ತಾಮಹೀ
ಧರನಂತಿಂತು ತಳರ್ಚಲಾನನೆ ಕರಂ ಚಾಣೂರನೇಂ ಶಕ್ತನೋ ||೯೭||

ವ|| ಅಂತು ಮುನ್ನ ಮಾಡಿದ ಸಾಹಸಂಗಳಂ ಮಾಣ್ಪಂತೆ ಮುಂಗೆ
ಯ್ವಲದೊಳ್ 'ಕೆದಕಿ' ನೋಡಿಯುವನರಿಯುನುಂ ಪರಿಯುನುಮಪ್ಪುದನಱಿದು
ನರರುಂ ದೇವರ್ಕಳುಂ ನೋಡಿದಪರಿಳಯೊಳಂ ಬಾನೊಳಂ ನೂಂಕೆ
[ನುಗ್ಗಾ

ಗಿರೆ ನೋಟ್ಪರ್ ನಾಳೆಯುಂ ನೋಡಿದಪರೆ ನೆರೆ ನೋಟಕ್ಕೆಂದು ಚಾಣೂರ [ನಂ ನೋ
ಟ್ಪರ ನೇತ್ರಾನಂದಮಂ ನಂದಿಸುವುದುಚಿತಮಲ್ತೆಂ ಪ್ರೊಡರ್ದೆಂ ವಿನೋದ
ಕ್ಕರಿಗಾತ್ಮಪ್ರಾಣಮಂ ತೋಱದ ಹರಿ ಹರಿಗೊಟ್ಟಂತು ಬಲ್ಲೊಂದು ಜಾವಂ|

ವ|| ಇವನನೆನಿತೆನಿತಂ ಕೊಂಡಾಡುವೆನೆಂದು ವಿಶ್ವಂಭರಂ ಭರಂಗೆ
ಯ್ಯಲೊಡನೆ—

ದಾರುಣದೊಳ್ ಸಿಷ್ಟುರಟಾ
ಣೂರಭುಜಾದಂಡಪೃಷ್ಟದೊಳ್ ಪುಟ್ಟಿದುದಾ |
ನಾರಾಯಣನು ಭುಜಾ
ವಾರಣೆಯೊಳ್ ಶಕ್ತಿರೂಪತೇಜೋಜ್ವಲನಂ ೧೦೦||

ವ|| ಅಂತು ಜಳಧಂದೊಳಶನಿ ಪುಟ್ಟುವಂತೆ ಜಳಧರಶ್ಯಾಮನೊಳ್
ಸರ್ವಶಕ್ತಿ ಪುಟ್ಟೆ

ಎಳವಿ ಮುಳಿಸಿಕ್ಕೆ ಕಳಲುಂ
ಕೆಳಗುಂ ತರಹರಿಸಿಕೊಳಲುಮಿಕ್ಕದ ಕೆಯ್ಯಂ |
ಕೆಟಲುಮಣಮಾಱದಸುರಂ
ನೆಟಿಬೊಳ್ಪೊಣರ್ವಂತೆ ಪೋರ್ದು ಕಟಿಯೆ ಬಲ್ಲಂ ೧೦೧|

ಪೋರ್ಕುಟಿಯೊಡವಡೆ ಹರಿಯುಂ
ಮಾರ್ಕೊಳ್ಳದೆ ತೆಗೆದ ಕೆಯ್ಯ ಬಟಿಯುನೆ ಬಂದಂ ||
ಸೊರ್ಕಿದಿಭಪತ್ತಿಯು ಕೆಯ್ಯೊಳ್ |
ಸಿಕ್ಕ ತೂಗಲ್ಪಿಯಿಂದದಿಂ ಚಾಣೂರಂ ||೧೦೨

ಹೂಣಿಸಿದದ ಕತ್ತುರಿಯುಂ
ಕಾಣಿಸೆ ಕತ್ತುರಿಯುನಡುವಣಳರೋಮದವೋಲ್ ||
ಚಾಣೂರಸಿರ್ದನೆನೆ ಸ
ಪ್ರಾಣದೊಳೇನವನಿಗಾಱನೋ ಪುರಮಥನಂ ||೧೦೩||

ಪೊರೆದು ಪೊರಲ್ವವಪ್ಪಳಿಸ ತೇಂಕುವ ತೇಂಕರ ಸುಯ್ವ ಸುಯ್ವದೆ |
ರ್ದರೆ ಜಡಿವ ಜವಂಗಿತುವನೂರ್ವಿಡಿಯಪ್ಪ ಬೆಮತುರ್ ಮಲ್ಲರಂ |

ಪಾ—1. ಜೆದಕ.

ಗುರುಗುಣರೇಣುವಂ ತೊಡೆವ ಮೆಯ್ಬ್ಬುಮರೇಱದ ಭಂಗಿ ಕರ್ಗ್ಗ ಚಾ
ಣೂರನ(ಱು)ಸೋಲಮುಂ ಹರಿಯ ಗೆಲ್ಲಮುಮೇಂ ಪಿಸುಣಾಡುತಿರ್ದುದೋ!||

ಡೊಕ್ಕರಮಿಕ್ಕಿ ತಾಯೆನಿಸಿ ಕರ್ಚೆ ಬೆರಲ್ಗೊನೆಯುಂ ಧರಾತಲ |
ಕ್ಕಿಕ್ಕಿ ಮುಱುಳ್ಚ್ಚ ಸ್ಯೈಕಟಿ ಕಟ್ಟಲೆಗಳ್ಕ ಸಡಿಲ್ಚಿ ಕಂದರ ||
ಕ್ಕಿಕ್ಕಿದ ಬಾಪು ಕತ್ತರಿಗೆ ಬಾಯ್ವಿಡೆ ಕಾಯ್ದು ಪೊರಳ್ದು ಪೋಗೆ ಗಾ |
ಯಕ್ಕೊಳಗಾದೊಡಂ ಮುೞಿಯಲೊಲ್ಲದೆ ಬಿಟ್ಟಱಗಂಡಿವಿಟ್ಟವೋಲ್ ||

ವ|| ಆದಂ ಕಂಡು ಕಂಸಂ ಪಂದಿಗೆಱಗಿದ ನಾಯುಂ ಪೆಕ್ಕಳಸುವಂತೆ ತೊಡೆಯನಪ್ಪಳಿಸಿ ದುಲ್ಲಹಮಲ್ಲದೊಳ್ ಘುಟಶೂರಚಾಣೂರವಿಕ್ರಮದಿಂ ಸಮಕರ್ತರಿಯನೆನ್ನಯ್ಯಂ ಕೊಂಡನೆಂದು ಪಡಿಗಯಿಸಲೊಡನೆ ಸಿಗ್ಗಾಗಿ ಬೇಗಮಾಗಿ ಮನಂಗೆಯ್ದು ಮುನಿದು

ಹರಿ ಹೊಂಗಿ...ವಿಟಮಿಡುಕದೆ |
ದುರದೊಳ್ ತಾಂ ಕೂಡೆ ಶಕ್ತಿಯುಂ ಪೂರಿಸೆ ಸೈ ||
ತೆರೆಯುಂ ಮೇಲ್ವಾಯ್ದುಲಗಿನ |
ಗರುಡಸನಪ್ಪಿದವೊಲಪ್ಪಲಾಚಾಣೂರಂ ||೧೦೬||

ಚಳಕಿ ಚಳಮಾಗೆ ಪಾರಂ |
ಸೆಳವೆಳವಂ ಪಟ್ಟ ಸಂಡಿ ಪುಟಪಟ್ಟರೆ ಕೆ ||
ಚ್ಚಳುರ್ವರಿಲೋಹದವೊಲ್ ಕಂ |
ತಳಲೋಹಂ ಕರಗಿ ಕೊರಗಿದಂ ಚಾಣೂರಂ ||೧೦೭||

ಒಡೆಮುದು ಮುಷ್ಟಿಯುಂ ಪಿಡಿದ ಕೆಯ್ಯ ತಳಂ ಕಡುಸೋಂಕು [ಸೋಂಕಿ ಮೆ |
ಯ್ಯಡಗಡಗಾಯ್ತು ಡೊಕ್ಕರಿಸೆ ಕಂಸನ ಮಲ್ಲನ ಕಕ್ಷವಕ್ಷದೆ ||
ಲ್ವಿಡಿದುವು ಪೊಯ್ಯುತುಂ ತುಡಿಕಿ ತುಟ್ಟಿಸಿ ಕತ್ತರಿವಾಣೆಯಲ್ಲಿ ಕೆ |
ಯ್ದುಡುಕಿದವೊಲ್ ಬೆಲ್ಬಿಱಿದುಮಾಹರಿ ಪೂರಿಸೆ ಮೆಯ್ಯ ಶಕ್ತಿಯುಂ

ಮಸಗದೊಡೆ ತನ್ನ ನೆಲೆಯುಂ |
ಮಿಸುಕದೆ ಮುನ್ನಿರ್ದ ತೆಱದಿನಿರ್ದುದೆ ಕಡೆಯೊಳ್ ||

ಮುಸುಗಿದೊಡೋವೋವೇಕ |
ಗ್ರಸನಂಗೊಳ್ಳದೆ ಮಹಾಬ್ಧಿ ಮಾಱುಂ ಜಗಮಂ ||೧೦೯||
ನೆಲನುಂ ಜಲನಿಧಿಯುಂ ಸಲೆ |
ತಲೆವತ್ತುವ ತೆಱದಿನಿರ್ದು ಕಡೆಯೊಳ್ ನೆಲನಂ ||
ಜಲಧಿ ಕಿಡಿಪಂತೆ ಕಿಡಿಸಿದ |
ನಲಸದೆ ಚಾಣೂರಮಲ್ಲನಂ ಮುರಮಥನಂ ||೧೧೦||

ಬಿನ್ನಾಣಂ ಬಿನ್ನನಾಯ್ತೆನ್ನಳವಳವಱದತ್ತೆನ್ನ ಬಲ್ಪೆಯ್ದೆ ಮೆಲ್ಪಾ |
ಯ್ತೆನ್ನಣ್ಮಂತಣ್ಮಿತಾಯ್ತಂ ನಿಮಗೆಮಗಿದುದೆನ್ನೋಜೆ ಕಟ್ಟೋಜೆಯಾಯ್ತಾ
ನಿನ್ನೇವೆಂ ಸಾವೆನೆಂಬಂತಿರೆ ಬೞಲಿಸಿ ಚಾಣೂರನಂ ಭೂತಳಕ್ಕಂ |
ಬನ್ನಕ್ಕಂ ತಂದು ತಂದಂ ರಿಪುನೃಪನ ಮನಕ್ಕಂದು ಕುಂದಂ ಮುಕುಂದಂ||

ವ || ಅಗಳ್ದುಮುಷ್ಟಿಕಂ ಮುಷ್ಟಿಗೊಂಡು ಮುಸಿದು ಮೇಲ್ವಾಯಲೊಡನೆ;

ಎರಡುಂ ಕೆಯ್ಯಂ ಕೊಂಡಿ |
ರ್ದರುಮಂ ಜೊಂಬೆಗಳನಾಡಿಪವನವೊಲವನೀ ||
ರ್ದರ ತಲೆಯುಂ ತಾಟಿಸಿದಂ |
ಬಿರಿವಿನೆಗಂ ತಾಳ ಕಾಯ್ಗಳಂ ತಾಟಿಪವೋಲ್ ||೧೧೨||

ವ|| ಅಂತು ತಾಟಿಸಿ ಮಲ್ಲರಂಗದೊಳ್ ಪೂವಲಿಗೆದಱದಂತೆ ಮಸ್ತಿಷ್ಕಮೆತ್ತಲುಂ ಸೂಸೆ ಕುಂಕುಮರಸದಿಂ ಜೇಕೊರ್ಗೞಿವಿಯನೊತ್ತಿದಂತೆ ಮೂಗಿಂ ಬಾಯಿಂ ಬಿಸಿನೆತ್ತರುಚ್ಚಳಿಸಿ ಸೂಸೆ ಬಿಸುಬಿಸುವೊಯ್ದು ಚಾಣೂರನ ಮುಷ್ಟಿಕನ ಪೆಣದ ಪೋಣರ ನಿಪ್ಪುರಿಗೂಡೆ ಕಂಡು ಕೆಳದುರ್ ಧೀರೋದ್ಧತದುಂದುಭಿಧ್ವಾನಮಹೀಧರದುರ್ಧರಮಹಾಕಾಳಪ್ರಳಯಕಾಳಕೋಳಾಹಳತಾಳಜಂಘುತಳಪ್ರಹಾರಿ ವಜ್ರಮುಷ್ಟಿ ಮೊದಲಾಗೆ ಪೂಸಿದ ಸಿಂಧುರಮುಂ ಬೀಸುವ ಬಾಲಗಚ್ಚೆಯುಂ ಬೆರಸು;

ತೆರ್ಕೆಯೊಳುಲಿದೆಯ್ತಂದು ಪೊ
ಣರ್ಕೆಗೆ ಮೇಲ್ವಾಯೆ ಮುಸುಱ ಮಲ್ಲಸಹಸ್ರಂ ||

*

ಮರ್ಕಡೆ ಕಟಕಂ ಮುತ್ತಿದ |
ಳುರ್ಕೆಯ ನೀಳಾಚಲಂಬೊಲಿರ್ದಂ ಕೃಷ್ಣಂ ||೧೧೩||

ವ|| ಅಂತು ಮುಂತಣ ಶೂಲಮನೇಱುವಂತೇಱಿದ ಮಲ್ಲರ ಮೆಯ್ಗಳೆಲ್ಲಂ ಮುಱಿದು ನುರ್ಗುನುರ್ಗಾಗೆ ಮಲ್ಲಲಂಘನಂಗೆಯ್ದು ;

ಭ್ರಮರಿಗುಡೆ ಕೃಷ್ಣನಾಸಂ |
ಭ್ರಮದಿಂ ಮುತ್ತಿರ್ದ ಮಲ್ಲರೆಂಟುಂ ದೆಸೆಗುಂ ಗಂ ||
ಡಮರಿಸಿದ ಮದಸ್ತಂಬೇ |
ರಮದಿಡುದಿರ್ವಂತಿರುದಿರ್ದು ಪಱಿವಱಿಯಾದರ್ ||೧೧೪||

ಗುರುಭಂಡದ್ವಯದೊಳ್ ತಿರಿ |
ತರೆಯಲ್ ಪತ್ತಿರ್ದ ಮಲ್ಲರುಲ್ಲಸಿತಾಕ್ಷಂ ||
ಹರಿಚಕ್ರಂದೊಳಲಿಯುನನು
ಕರಿಸಿರ್ದಂ ಬಹಳಬಾಹುಜಾಳನ ಗತಿಯೊಳ್ ||೧೧೫||

ಮಲ್ಲರ ಮಸ್ತಕಂ ಕಮಳ.................... |
..................................................||
....................................|
.................................... ||೧೧೬||

ವ|| ಮತ್ತಂ ಬಿಡಿದ ಮಲ್ಲರನಾನೆ ಮೆಟ್ಟಿದುದೆ ಸಂಡೆಂಬಂದಾವೆಡೆಯುಂ ಪಿಡಿದೊಡಂ ಪಿಡಿದೆಡೆಯೆ ಗಾಯಮಾಗೆ ಬಳೆಯ ಪೆ..ನಾನೆ ಮೆಟ್ಟಿದಂತೆಲುವೆಲ್ಲಂ ನುರ್ಗುನುರ್ಗಾಗೆ ಮೆಯ್ಯ ತೊವಲಾಗೆ ಸಡಿಯಾಡುಗಳಂ ತಿವದವಲ ಬೇರಂಗಳನೀಡಾಡುವಂತೀಡಾಡಿದ ಚಾಣೂರಮಥನನ ಮೇಲೆ ಯುಗಸ್ತ್ಯನ ಮೇಲೆ ಕವಿದ ಕಡಲಂತೆ ಕವಿವ ಕಂಸನ ಚಾತುರ್ಬಲಮುಂ ಬಲದೇವನುಂ ವಸುದೇವನುಂ ಕಂಡು ತಮ್ಮ ಬಲಮುಂ ಕೈವೀಸೆ ಪೆಣಮಯಂ ಮಾಡೆ ನೆತ್ತರುಗಡಲಂ ಪರಿಯಿಸಿ ಕಟ್ಟೇವವುಂ ಕಡುಮುಳಿಸು ಅಳವಿಗಱಿಯೆ ಸಿಗ್ಗಾಗಿ ಸ್ಥಿರಿಸಲಾಱದೆ ಅಭಿನವನಾರಸಿಂಹಾಡಂಬರಮಗುರ್ವುಮದ್ಭುತಮುಮಾಗೆ—

ಮಾಡದ ಕಂಭಮಂ ಮಲಗಿನೊಳ್ಪರಿಪಾಯ್ದು ನೆಲಕ್ಕೆ ಬಾಳನ ।
ಲ್ಲಾಡೆ ನೆಗಪ್ಪಿಕೊಂಡು ತೊಡೆಗಾನರಸಿಂಹನವೊಂಕಿ ಕಂಭದಿಂ ॥
ಮಾಡಿದ ಕಾಳರಕ್ಕಸನನಿಕ್ಕುವವೋಲ್ ನಖದಿಂ ಕರುಳ್ಗಳಂ ।
ತೋಡಿ ಪಿಸುಳ್ದು ಸೀಳ್ದು ಬಿಸುಟಂ ಕಲಿಕಂಸನನಬ್ಜಲೋಚನಂ ॥೧೧೭॥

ವ॥ ಅಂತು ಸೀಳ್ದಿಡಾಡೆಗೆಯ್ದುಮದಂ ಕೈಕೊಳ್ಳದೆ ಕೋಟಿನಾರ್ದು ಮುರಿದೆರ್ದು ಖೇಟಕದಿಂ ಕರುಳಂ ತಕ್ಕೈಸಿ ಕತ್ತಿಗೆಯನೆತ್ತಿ ಮೇಲ್ವಾಯ್ದು ಪೊಯ್ದು ಕಂಸನ ಕಲಿತನಕ್ಕೆ ಕೌತುಕಂಬಟ್ಟು ಕಡಿತಲೆಯನೆಡದ ಕೆಯ್ಯೊಳ್ಪಿಡಿದು ತಳಗೆಲೆಯನೊರಸುವಂತೊರಸಿ ಬಿಸುಟು,

ಕೆಡೆಕೆಡೆಯೆಂದರಮಗನೊದೆ ।
ದೆಡಗಾಲೊಳ್ ತೊಡರ್ದು ಕರುಳೊಳೇಸಿರ್ದಂ ಕ ॥
ರ್ದಡಿಗಂ ಗೋವಳಸಿಕ್ಕಿದ ।
ತೊಡರೊಳ್ ಮಿಗೆ ಕೋದೆಯ್ವ ಪಾಪೆಯ ತೆಱದಿಂ ॥೧೧೮॥

ಕ್ಷಿತಿಗೊರ್ವನೆ ದುರ್ಜನನೊಂ ।
ದತಿವೇಗದೆ ಸತ್ತು ಮಾಡುವುಪಕಾರಮನ ॥
ಪ್ರತಿಮರ್ ಸಜ್ಜನರಾಚಂ ।
ದ್ರತಾರಕಂ ಬರ್ದು ಮಾಡಲೇನಾರ್ತಪರೇ ॥೧೧೯॥

ವ॥ ಅಂತು ಮಲ್ಲಾಮಲ್ಲಿಯಾಗಿ ಪೊಣರ್ದ ಮಲ್ಲರಂ ಮೇಲ್ವಾಯ್ದು ಕಂಸನನುಮಂ ಕೃಷ್ಣನೊಂದೆ ಕೆಯ್ಯೊಳ್ ಕೆಯ್ಕಾಸನಿಕ್ಕುವಂತಿಕ್ಕಲೊಡನೆ,

ಅನಿಮೇಷಾಂಬೋಧಮುಕ್ತಂ ಸುರಿದುದಲರನಟ್ಟೆಱು ಬಾನ್ವಟ್ಟೆಯುಂ ಕೃ।
ಷ್ಣನ ಮೇಗೋರಂತೆ ಭೃಂಗವ್ಯತಿಕೃತ ಸುಮನೋರೇಣುಗಿರ್ವಾಣ [ಬಾಣಾ ॥
ಸನರವ್ಯಂ ಚೈತ್ರತೂರ್ಯಸ್ತನಿತಮುಖರಿತಂ ಪಾಕರಂದಾದ್ರ್ರಧಾರಾ ।
ತನುಬಂಧೂಕೇಂದ್ರಗೋಪಂ ವಿಚಕಿಳಕಾಳಮೇಘೋಪಳಾಸಾರಸಾರಂ

ಮಧುಮಾಯಾಮಥನಂ ಸಮುದ್ಧೃತಮಹಾಗೋತ್ರಂ ಗುಣೋದ್ಧಾಮಧ|
ರ್ಮಧರಾಕಂಟಕಕೈಟಭಾಪಹರಣಂ ವಾಚಾಳಚಾಣೂರವಾ ||
ರಿಧಿಸಂಶೋಷಣಬಾಡಬಾಗ್ನಿ ಕಲಿಕಂಸಧ್ವಂಸಕಂ ತಾಳ್ದಿದಂ |
ಕದನಕ್ರೀಡೆಯನಾಡಿ ನಿತ್ಯಜಯಮಂ ಶ್ರೀ ವೀರನಾರಾಯಣಂ || ೧೨೧||

||ಗದ್ಯಂ||

ಇದು ಮೃದುಪದಬಂಧಬಂಧುರಸರಸ್ವತೀಸೌಭಾಗ್ಯವ್ಯಂಗಭಂಗಿಸಿದಾನದಿನದೀಪವರ್ತಿ
ಚತುರ್ಭಾಷಾಕವಿಚಕ್ರವರ್ತಿ ನೇಮಿಚಂದ್ರ ಕೃತಮುಂ
ಶ್ರೀಮತ್ಪ್ರತಾಪಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾದಿತ
ಮಹಾಪ್ರಧಾನ ಸಜ್ಜೆವಳ್ಳ ಪದ್ಮನಾಭದೇವ ಕಾರಿತಮುಮಪ್ಪ

## ನೇಮಿನಾಥ ಪುರಾಣದೊಳ್

ಶ್ರೀ ವೀರನಾರಾಯಣ ಪ್ರತಾಪವರ್ಣನಂ
ಅಷ್ಟಮಾಶ್ವಾಸಂ ಸಮಾಪ್ತಂ.

ನೇಮಿನಾಥಪುರಾಣಂ ಸಂಪೂರ್ಣಂ.†

† ಮೂರು ಪ್ರತಿಗಳಲ್ಲಿಯೂ ಈ ಗ್ರಂಥವು ಇಲ್ಲಿಯವರೆಗೆ ಇರುವುದು.

ಮಾಡದ ಕಂಭಮಂ ಮಲಗಿನೊಳ್ಪರಿಪಾಯ್ದು ನೆಲಕ್ಕೆ ಬಾಳನ ।
ಲ್ಲಾಡೆ ನೆಗಪ್ಪಿಕೊಂಡು ತೊಡೆಗಾನರಸಿಂಹನವುಂಕಿ ಕಂಭದಿಂ ॥
ಮಾಡಿದ ಕಾಳರಕ್ಕಸನನಿಕ್ಕುವವೋಲ್ ನಖದಿಂ ಕರುಳ್ಗಳಂ ।
ತೋಡಿ ಪಿಸುಳ್ದು ಸೀಳ್ದು ಬಿಸುಟಂ ಕಲಿಕಂಸನನಬ್ಜಲೋಚನಂ ॥೧೧೭॥

ವ॥ ಅಂತು ಸೀಳ್ದಿಡಾಡೆಗೆಯ್ದುಮದಂ ಕೈಕೊಳ್ಳದೆ ಕೋಟಿನಾದುರ್ ಮುರಿದೆದುರ್ ಖೇಟಕದಿಂ ಕರುಳಂ ತಕ್ಕೈರ್ಸಿ ಕತ್ತಿಗೆಯನೆತ್ತಿ ಮೇಲ್ವಾಯ್ದು ಪೊಯ್ದು ಕಂಸನ ಕಲಿತನಕ್ಕೆ ಕೌತುಕಂಬಟ್ಟು ಕಡಿತಲೆಯನೆಡದ ಕೈಯ್ಯೊಳ್ಪಿಡಿದು ತಱಗೆಲೆಯನೊರಸುವಂತೊರಸಿ ಬಿಸುಟು,

ಕಡೆಕಡೆಯೊಂದರಮುಗನೊದೆ ।
ದೆಡಗಾಲೊಳ್ ತೊಡರ್ದು ಕರುಳ್ಗಳೆಸಿರ್ದಂ ಕ ॥
ರ್ದಡಿಗಂ ಗೋವಳಸಿಕ್ಕಿದ ।
ತೊಡರೊಳ್ ಮಿಗೆ ಕೋದೆೞ್ವ ಪಾಪೆಯ ತೆಱದಿಂ ॥೧೧೮॥

ಕ್ಷಿತಿಗೊರ್ವನೆ ದುರ್ಜನನೊಂ ।
ದತಿವೇಗದೆ ಸತ್ತು ಮಾಡುವುಪಕಾರಮನ ।
ಪ್ರತಿಮರ್ ಸಜ್ಜನರಾಚಂ ।
ದ್ರತಾರಕಂ ಬರ್ದು ಮಾಡಲೇನಾರ್ತಪರೇ ॥೧೧೯॥

ವ॥ ಅಂತು ವಲ್ಲಮಲ್ಲಿಯಾಗ ಪೊಣರ್ದಮಲ್ಲರಂ ಮೇಲ್ವಾಯ್ದು ಕಂಸನುಮಂ ಕೃಷ್ಣನೊಂದೆ ಕಯ್ಯೊಳ್ ಕಯ್ದು ಕೂಸನಿಕ್ಕುವಂತಿಕ್ಕಲೊಡನೆ,

ಅನಿಮೇಷಾಂಬೋಧಮುಕ್ತಂ ಸುರಿದುದಲರನಟ್ಟೆಱು ಬಾನ್ವಟ್ಟೆಯುಂ ಕೃ।
ಷ್ಣನ ಮೇಗೋರಂತೆ ಭೃಂಗವ್ಯತಿಕೃತ ಸುಮನೋರೇಣುಗಿರ್ವಾಣ [ಬಾಣಾ ॥
ಸನರವ್ಯಂ ಚೈತ್ರತೂರ್ಯಸ್ತನಿತಮುಖರಿತಂ ಮಾಕರಂದಾದ್ರಧಾರಾ ।
ತನುಬಂಧೋಕೇಂದ್ರಗೋಪಂ ವಿಚಕಿಳಕುಳಮೇಘೋಪಳಾಸಾರಸಾರಂ

ಮಧುಮಾಯಾಮಥನಂ ಸಮುದ್ಧೃತಮಹಾಗೋತ್ರಂ ಗುಣೋದ್ದಾಮಧ
ರ್ಮಧರಾಕಂಟಕಕೈಟಭಾಪಹರಣಂ ವಾಚಾಳಚಾಣೂರವಾ ||
ರಿಧಸಂಶೋಷಣಬಾಡಬಾಗ್ನಿ ಕಲಿಕಂಸಧ್ವಂಸಕಂ ತಾಳ್ದಿದಂ |
ಕದನಕ್ರೀಡೆಯನಾಡಿ ನಿತ್ಯಜಯಮಂ ಶ್ರೀ ವೀರನಾರಾಯಣಂ || ೧೨೧||

||ಗದ್ಯಂ||

ಇದುಮೃದುಪದಬಂಧಬಂಧುರಸರಸ್ವತೀಸೌಭಾಗ್ಯಪ್ಪಂಗಭಂಗಿಸಿದಾನದಿನದೀಪವರ್ತಿ
ಚತುರ್ಭಾಷಾಕವಿಚಕ್ರವರ್ತಿ ನೇಮಿಚಂದ್ರ ಕೃತಮುಂ
ಶ್ರೀಮತ್ಪ್ರತಾಪಚಕ್ರವರ್ತಿ ವೀರಬಲ್ಲಾಳದೇವ ಪ್ರಸಾದಾಸಾಧಿತ
ಮಹಾಪ್ರದಾನ ಸೆಜ್ಜೆವಳ್ಳ ಪದ್ಮನಾಭದೇವ ಕಾರಿತಮುಮಪ್ಪ

## ನೇಮಿನಾಥ ಪುರಾಣದೊಳ್

ಶ್ರೀ ವೀರನಾರಾಯಣ ಪ್ರತಾಪವರ್ಣನಂ
ಅಷ್ಟಮಾಶ್ವಾಸಂ ಸಮಾಪ್ತಂ.

ನೇಮಿನಾಥಪುರಾಣಂ ಸಂಪೂರ್ಣಂ. †

† ಮೂರು ಪ್ರತಿಗಳಲ್ಲಿಯೂ ಈ ಗ್ರಂಥವು ಇಲ್ಲಿಯವರೆಗೆ ಇರುವುದು.